# ಜಾಗತಿಕ ಬಿಕ್ಕಟ್ಟು
# ಮತ್ತು
# ಶಾಂತಿ ಮಾರ್ಗ

**For further information please visit:**

**www.alislam.org**
**www.ahmadiyyamuslimjamaat.in**
**www.mta.tv**
**Noor-ul-Islam Toll free Assistance:**
**1800 3010 2131**
**www.ahmadiyyamuslimjamaat.in/feedback**

# ಜಾಗತಿಕ ಬಿಕ್ಕಟ್ಟು
# ಮತ್ತು
# ಶಾಂತಿ ಮಾರ್ಗ

ಭಾಷಣಗಳು ಮತ್ತು ಪತ್ರಗಳ ಸಂಕಲನ

**ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**
**ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ**
**ಸರ್ವೋನ್ನತ ನಾಯಕ (ಇಮಾಮ್)**
**ಮತ್ತು ಪಂಚಮ ಖಲೀಫ**

ಇಸ್ಲಾಮ್ ಇಂಟರ್‌ನೇಷನಲ್ ಪಬ್ಲಿಕೇಷನ್ಸ್ ಲಿಮಿಟೆಡ್

# JAAGATHIKA BIKKATTU
# MATTHU
# SHANTHI MARGA

Kannada Translation of

## WORLD CRISIS
## AND
## THE PATHWAY TO PEACE

A Compilation of Speeches and Letters of :

**Hazrat Mirza Masroor Ahmad**

Imam and the Head of the Worldwide Ahmadiyya Muslim Jama'at,

Khalifatul Masih V


Translated by : M. Ubeidullah, BA, LLB

Revised by : Muhammad Yusuf, B.com

Assisted by : Rashied Ahmad Siddeeque
Moulavi Inamullah

Published by : Noor-ul-Islam Department,
Sadr Anjuman Ahmadiyya,
Qadian - 143516 (Punjab)

First Edition : August 2015 (1000 Copies)
Second Edition : 2018 (5000 Copies)


Copyright © Islam International Publications Ltd.


Printed at : Fazl-e-Umar Printing Press Qadian

# ವಿಷಯಾನುಕ್ರಮಣಿಕೆ

## ವಿಷಯ


ಲೇಖಕರ ಪರಿಚಯ.................................................................. 9

ಪ್ರಕಾಶಕರ ನುಡಿ.................................................................. 11


## ಭಾಷಣಗಳು


ಜಾಗತಿಕ ಬಿಕ್ಕಟ್ಟು ಬಗ್ಗೆ ಇಸ್ಲಾಮಿನ ದೃಷ್ಟಿಕೋನ .................................... 17

ದೇಶಭಕ್ತಿ ಮತ್ತು ದೇಶಪ್ರೇಮದ ಬಗ್ಗೆ ಇಸ್ಲಾಮ್ ಧರ್ಮದ
ಉಪದೇಶಗಳು.................................................................... 35

ಅಣ್ವಾಯುಧ ಯುದ್ಧದ ವಿನಾಶಕರ ಪರಿಣಾಮಗಳು
ಮತ್ತು ಪರಿಪೂರ್ಣವಾದ ನ್ಯಾಯಪಾಲನೆಯ ತುರ್ತು ಆವಶ್ಯಕತೆ............ 49

ಶಾಂತಿಗಿರುವ ಮಾರ್ಗ– ದೇಶಗಳ ಮಧ್ಯೆ
ನ್ಯಾಯಪೂರ್ಣ ಸಂಬಂಧ ಸ್ಥಾಪನೆ.................................................... 69

ಶಾಂತಿಯ ಕೀಲಿಕೈ – ಜಾಗತಿಕ ಐಕ್ಯ .................................................. 99

ಮುಸ್ಲಿಮರು ಪಾಶ್ಚಿಮಾತ್ಯ ಸಮಾಜಗಳೊಂದಿಗೆ
ಭಾವೈಕ್ಯ ಹೊಂದಲು ಸಾಧ್ಯವೇ?........................................................ 117

ಇಸ್ಲಾಮ್– ಶಾಂತಿ ಮತ್ತು ಕರುಣೆಯ ಧರ್ಮ...................................... 133

ಜಾಗತಿಕ ಶಾಂತಿ ಈ ಕಾಲಘಟ್ಟದ ಆವಶ್ಯಕತೆ.......................................... 149

ಜಾಗತಿಕ ಶಾಂತಿ ಮತ್ತು ಸುರಕ್ಷೆ –
ನಮ್ಮ ಕಾಲದಲ್ಲಿ ಗಂಭೀರವಾಗಿ ಪರಿಗಣಿಸಬೇಕಾದ ವಿಷಯಗಳಾಗಿವೆ..... 163

ಜಾಗತಿಕ ಅಸ್ತವ್ಯಸ್ತತೆಯ ಕಾಲದಲ್ಲಿ ಶಾಂತಿ
ಸ್ಥಾಪನೆಗಿರುವ ಕೀಲಿಗೈಗಳು............................................................ 179

## ಜಾಗತಿಕ ರಾಷ್ಟ್ರ ನಾಯಕರಿಗೆ ಪತ್ರಗಳು


ಪೋಪ್ ಬೆನೆಡಿಕ್ಟ್ XVI ರಿಗೆ ಪತ್ರ........ 195

ಇಸ್ರಾಯೇಲ್ ಪ್ರಧಾನ ಮಂತ್ರಿಗೆ ಪತ್ರ........ 201

ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಅಧ್ಯಕ್ಷರಿಗೆ ಪತ್ರ........ 207

ಯು.ಎಸ್.ಎ. ಅಧ್ಯಕ್ಷರಿಗೆ ಪತ್ರ........ 213

ಕೆನಡದ ಪ್ರಧಾನ ಮಂತ್ರಿಗೆ ಪತ್ರ........ 219

ಸೌದಿ ಅರೇಬಿಯಾದ ದೊರೆಗೆ ಪತ್ರ........ 225

ಚೀನದ ಪ್ರಧಾನ ಮಂತ್ರಿಗೆ ಪತ್ರ........ 231

ಯುನೈಟೆಡ್ ಕಿಂಗ್‌ಡಮ್ ಪ್ರಧಾನ ಮಂತ್ರಿಗೆ ಪತ್ರ........ 237

ಜರ್ಮನಿಯ ಪ್ರಧಾನ ಮಂತ್ರಿಗೆ ಪತ್ರ........ 243

ಫ್ರಾನ್ಸಿನ ಅಧ್ಯಕ್ಷರಿಗೆ ಪತ್ರ........ 249

ಬ್ರಿಟಿಷ್ ಮಹಾರಾಣಿಗೆ ಪತ್ರ........ 255

ಇರಾನಿನ ಸರ್ವೋನ್ನತ ನಾಯಕರಿಗೆ ಪತ್ರ........ 261

ರಶ್ಯದ ಅಧ್ಯಕ್ಷರಿಗೆ ಪತ್ರ........ 267



ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್

ಖಲೀಫತುಲ್ ಮಸೀಹ್ V

(ಪಂಚಮ ಖ಼ಲೀಫ)

## ಲೇಖಕರ ಪರಿಚಯ

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ (ಅವರಿಗೆ ಅಲ್ಲಾಹನು ಸರ್ವ ಸಹಾಯಗಳನ್ನು ದಯಪಾಲಿಸಲಿ.) ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ನಾಯಕ (ಇಮಾಮ್). ಅವರು ವಾಗ್ದತ್ತ ಮಹ್‌ದೀ ಮಸೀಹ್ ಹಾಗೂ ಧರ್ಮೋದ್ಧಾರಕರಾಗಿ ಆಗಮಿಸಿದ ಹಝ್ರತ್ ಮಿರ್ಝಾ ಗ್ಹುಲಾಮ್ ಅಹ್ಮದ್(ಅ) ಅವರ ಪಂಚಮ ಖ಼ಲೀಫರೂ ಆಗಿದ್ದಾರೆ.

ಹಝ್ರತ್ ಖ಼ಲೀಫರು ರಬ್‌ವದಲ್ಲಿ 1950 ಸೆಪ್ಟಂಬರ್ ದಿನಾಂಕ 15ರಂದು ಮಿರ್ಝಾ ಮನ್‌ಸೂರ್ ಅಹ್ಮದ್ ಮತ್ತು ನಾಸಿರ ಬೇಗಮ್ ದಂಪತಿಯ ಪುತ್ರರಾಗಿ ಜನಿಸಿದರು. ಪಾಕಿಸ್ತಾನದ ಫೈಸಲಾಬಾದ್ ಎಗ್ರಿಕಲ್ಚರಲ್ ಯುನಿವರ್ಸಿಟಿಯಲ್ಲಿ ಎಗ್ರಿಕಲ್ಚರಲ್ ಇಕೋನಮಿಕ್ಸ್‌ನಲ್ಲಿ ಸ್ನಾತಕೋತ್ತರ ಬಿರುದು ಗಳಿಸಿದ ಹಝ್ರತ್ ಖ಼ಲೀಫರು ತನ್ನ ಜೀವಿತವನ್ನು 1977ರಲ್ಲಿ ಇಸ್ಲಾಮಿನ ಸೇವೆಗೋಸ್ಕರ ಅರ್ಪಿಸಿದರು. ಅವರನ್ನು ಆಫ್ರಿಕದ ಘಾನ ದೇಶಕ್ಕೆ ಕಳುಹಿಸಲಾಯಿತು. ಅಲ್ಲಿ ಅವರು ವಿವಿಧ ಅಹ್ಮದಿಯಾ ಮುಸ್ಲಿಮ್ ವಿದ್ಯಾ ಸಂಸ್ಥೆಗಳಲ್ಲಿ ಪ್ರಿನ್ಸಿಪಲ್ ಆಗಿ ಅನೇಕ ವರ್ಷಗಳ ಕಾಲ ಕಾರ್ಯ ನಿರ್ವಹಿಸಿದರು. ಸಲಾಗ ಎಂಬಲ್ಲಿ ಅಹ್ಮದಿಯಾ ಸೆಕಂಡರಿ ಸ್ಕೂಲನ್ನು ಹೊಸದಾಗಿ ಸ್ಥಾಪಿಸಿದ ಅವರು ಅಲ್ಲಿ ಎರಡು ವರ್ಷ ಪ್ರಾಂಶುಪಾಲರಾಗಿದ್ದರು.

ಪಾಕಿಸ್ತಾನಕ್ಕೆ ಮರಳಿದ ನಂತರ ಅವರು ಪಾಕಿಸ್ತಾನದ ಅಹ್ಮದಿಯಾ ಜಮಾಅತಿನ ಕೇಂದ್ರದಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದರು. ಒಂದು ಫಲಕದಿಂದ ಪವಿತ್ರ ಖುರಆನಿನ ವಚನಗಳನ್ನು ಅಳಿಸಿ ಹಾಕಿದರೆಂಬ ಸಂಪೂರ್ಣ ಸುಳ್ಳು ಆರೋಪದ ಮೇರೆಗೆ ಬಂಧಿಸಲ್ಪಟ್ಟ ಅವರು 1999ರಲ್ಲಿ ಸ್ವಲ್ಪ ಕಾಲ ದೇವ ಮಾರ್ಗದ ಸೆರೆಯಾಳಾಗಿದ್ದರು.

2003 ಎಪ್ರಿಲ್ ದಿನಾಂಕ 22ರಂದು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಇಮಾಮರೂ ಖ಼ಲೀಫರೂ ಆಗಿ ಚುನಾಯಿಸಲ್ಪಟ್ಟ ಅವರು ಜೀವಾವಧಿ ತನಕ ಆ ಸ್ಥಾನದಲ್ಲಿ ಶೋಭಿಸುವರು. ಅವರು ಇನ್ನೂರಕ್ಕಿಂತಲೂ ಹೆಚ್ಚು ದೇಶಗಳಲ್ಲಿರುವ ಕೋಟಿಗಟ್ಟಲೆ ಅಹ್ಮದೀ ಮುಸ್ಲಿಮರ ಆಧ್ಯಾತ್ಮಿಕ ನೇತಾರರೂ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ಆಡಳಿತಾಧಿಕಾರಿಯೂ ಆಗಿರುವರು.

ಹಝ್ರತ್ ಖ಼ಲೀಫರು ಇಸ್ಲಾಮಿನ ಶಾಂತಿ ಸಂದೇಶವನ್ನು ಸಂಪರ್ಕ ಮಾಧ್ಯಮಗಳ ಮೂಲಕ ಲೋಕದಾದ್ಯಂತ ಹರಡಲು ವಿಶಾಲ ಅಭಿಯಾನವನ್ನು ತಾವು ಖ಼ಲೀಫರಾದ ಮೊದಲುಗೊಂಡು ಕೈಗೊಂಡಿದ್ದಾರೆ. ಅವರ ನೇತೃತ್ವದಲ್ಲಿ ವಿವಿಧ ದೇಶಗಳ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಘಟಕಗಳು ಇಸ್ಲಾಮಿನ ನೈಜ ಶಾಂತಿ ಸಂದೇಶವನ್ನು ತಮ್ಮ ತಮ್ಮ ದೇಶಗಳಲ್ಲಿ ಹರಡಲು ನಿರಂತರವಾಗಿ ಪ್ರಯತ್ನಿಸುತ್ತಿವೆ. ಅಹ್ಮದೀ ಮುಸ್ಲಿಮರು ಶಾಂತಿ ಸಂದೇಶವನ್ನು ಒಳಗೊಂಡ ಕರಪತ್ರಗಳನ್ನು ಲೋಕದ ವಿವಿಧ ಪ್ರದೇಶಗಳಲ್ಲಿ ಕೋಟಿಗಟ್ಟಲೆ ಸಂಖ್ಯೆಯಲ್ಲಿ ಮುಸ್ಲಿಮರಿಗೆ ಮತ್ತು ಮುಸ್ಲಿಮೇತರರಿಗೆ ತಲಪಿಸುತ್ತಾ ಇದ್ದಾರೆ. ವಿವಿಧ ಧರ್ಮಗಳ ವಿದ್ವಾಂಸರನ್ನು ಒಗ್ಗೂಡಿಸಿ ವಿಚಾರ ಸಂಕಿರಣಗಳನ್ನು ನಡೆಸುತ್ತಿದ್ದಾರೆ ಮತ್ತು ಪವಿತ್ರ ಖುರ್‌ಆನಿನ ಭವ್ಯ ಸಂದೇಶವನ್ನು ಪ್ರಚಾರಗೊಳಿಸುವ ಪ್ರದರ್ಶನಗಳನ್ನು

ಏರ್ಪಡಿಸುತ್ತಿದ್ದಾರೆ. ಈ ಅಭಿಯಾನಗಳು ಜಗತ್ತಿನಾದ್ಯಂತ ಸಂಪರ್ಕ ಮಾಧ್ಯಮಗಳ ಮೂಲಕ ಪ್ರಚಾರಗೊಂಡಿವೆ ಮತ್ತು ಇಸ್ಲಾಮ್ ಧರ್ಮ ಶಾಂತಿ, ದೇಶಭಕ್ತಿ ಮತ್ತು ಮಾನವ ಸೇವೆಯನ್ನು ಪ್ರತಿಪಾದಿಸುತ್ತಿದೆ ಎಂಬುದನ್ನು ಸ್ಪಷ್ಟಪಡಿಸುತ್ತಿವೆ.

2004 ರಲ್ಲಿ ಹಝ್ರತ್ ಖ಼ಲೀಫರು ವಾರ್ಷಿಕ ಶಾಂತಿ ವಿಚಾರ ಸಂಕಿರಣವನ್ನು ಏರ್ಪಡಿಸಲು ಪ್ರಾರಂಭಿಸಿದರು. ಈ ವಿಚಾರ ಸಂಕಿರಣಕ್ಕೆ ಸಮಾಜದ ಎಲ್ಲ ಶ್ರೇಣಿಯ ಅತಿಥಿಗಳು ಆಗಮಿಸುತ್ತಾರೆ ಮತ್ತು ಶಾಂತಿ ಹಾಗೂ ಸೌಹಾರ್ದ ಸ್ಥಾಪಿಸುವ ಬಗ್ಗೆ ವಿಚಾರ ವಿನಿಮಯ ನಡೆಸುತ್ತಾರೆ. ಪ್ರತಿವರ್ಷದ ವಿಚಾರ ಸಂಕಿರಣದಲ್ಲಿ ಸಚಿವರು, ಪಾರ್ಲಿಮೆಂಟ್ ಸದಸ್ಯರು, ಧಾರ್ಮಿಕ ನಾಯಕರು ಮತ್ತು ಇತರ ಗಣ್ಯರು ಭಾಗವಹಿಸುತ್ತಾರೆ.

ಹಝ್ರತ್ ಖ಼ಲೀಫರು ಲೋಕದ ವಿವಿಧ ದೇಶಗಳಿಗೆ ಭೇಟಿ ನೀಡಿ ಮಾನವ ಸೇವೆಯ ಕಾರ್ಯಗಳನ್ನು ಕೈಗೊಳ್ಳುತ್ತಿದ್ದಾರೆ. ಹಝ್ರತ್ ಖ಼ಲೀಫರ ಮಾರ್ಗದರ್ಶನದಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಅನೇಕ ವಿದ್ಯಾ ಸಂಸ್ಥೆಗಳನ್ನೂ ಆಸ್ಪತ್ರೆಗಳನ್ನೂ ನಿರ್ಮಿಸಿ ಅತ್ಯುತ್ತಮ ಶೈಕ್ಷಣಿಕ ಮತ್ತು ವೈದ್ಯಕೀಯ ಸೇವೆಯನ್ನು ಲೋಕದ ವಿವಿಧ ಅಭಿವೃದ್ಧಿ ಹೊಂದದ ಪ್ರದೇಶಗಳಿಗೆ ತಲಪಿಸುತ್ತಾ ಇದೆ.

ಹಝ್ರತ್ ಖ಼ಲೀಫರು ಸಮಾಜದ ಎಲ್ಲ ಹಂತಗಳಲ್ಲೂ ಶಾಂತಿಯನ್ನು ಸ್ಥಾಪಿಸಲು ಬಯಸುತ್ತಾರೆ. ಅವರು ಅಹ್ಮದೀ ಮುಸ್ಲಿಮರಿಗೆ ಯಾವಾಗಲೂ ನೀಡುವ ಉಪದೇಶ ಆತ್ಮ ಪರಿಶುದ್ಧಿಗೋಸ್ಕರ ಜಿಹಾದ್ (ಕಠಿಣ ಪರಿಶ್ರಮ) ಕೈಗೊಳ್ಳಬೇಕೆಂದಾಗಿದೆ. ನೈಜ ಮತ್ತು ದೊಡ್ಡ ಜಿಹಾದ್ ಇದೇ ಆಗಿದೆ. ಹೀಗೆ ಮಾಡಿದರೆ ಅಹ್ಮದೀ ಮುಸ್ಲಿಮ್ ವೈಯಕ್ತಿಕವಾಗಿ ಶಾಂತಿಯನ್ನು ಪಡೆಯುವನು ಮತ್ತು ಶಾಂತಿ ಸ್ಥಾಪಿಸಲು ಅನ್ಯರಿಗೆ ನೆರವಾಗುವನು ಎಂದು ಹಝ್ರತ್ ಖ಼ಲೀಫರು ಉಪದೇಶಿಸುತ್ತಾರೆ.

ಹಝ್ರತ್ ಖ಼ಲೀಫರು ಅಹ್ಮದಿಯೇತರರಿಗೂ ಇದೇ ಸಂದೇಶ ನೀಡುತ್ತಾರೆ. ಆಸ್ಟ್ರೇಲಿಯಾದ ಮೆಲ್‌ಬರ್ನ್‌ನಲ್ಲಿ ಒಂದು ಸಮಾರಂಭದಲ್ಲಿ ಒಬ್ಬ ಮುಸ್ಲಿಮೇತರ ಅತಿಥಿ, ಶಾಂತಿ ಸ್ಥಾಪನೆ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರವಾಗಿ ಅವರು ಹೀಗೆ ಹೇಳಿದರು: "ಸ್ವತಃ ನಿಮ್ಮಲ್ಲಿ ಶಾಂತಿ ಇದ್ದರೆ ನೀವು ಶಾಂತಿಯನ್ನು ಹೊರಹೊಮ್ಮುವಿರಿ. ನಮ್ಮಲ್ಲಿ ಪ್ರತಿಯೊಬ್ಬನು ಶಾಂತಿಯನ್ನು ಹೊಂದಿದ್ದರೆ ನಾವು ಇತರರಿಗೆ ಶಾಂತಿಯನ್ನು ಪ್ರಸಾರ ಮಾಡುವೆವು."

ವೈಯಕ್ತಿಕ ಮತ್ತು ಸಾಮೂಹಿಕ ಹಂತದಲ್ಲಿ ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರ್‍ರಾಷ್ಟ್ರೀಯ ವೇದಿಕೆಗಳಲ್ಲಿ ಹಝ್ರತ್ ಖ಼ಲೀಫರು ಇಸ್ಲಾಮಿನ ಅಧ್ಯಾಪನಗಳನ್ನು ಅನುಸರಿಸಿ ಶಾಂತಿ ಸ್ಥಾಪಿಸುವ ವಿಧಾನಗಳನ್ನು ಉಪದೇಶಿಸಲು ಕಠಿಣ ಪರಿಶ್ರಮ ನಡೆಸುತ್ತಿದ್ದಾರೆ.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಈಗ ಲಂಡನಿನಲ್ಲಿ ನೆಲೆಸಿದ್ದಾರೆ. ಅಹ್ಮದೀ ಮುಸ್ಲಿಮರ ಆಧ್ಯಾತ್ಮಿಕ ನಾಯಕರಾದ ಹಝ್ರತ್ ಖ಼ಲೀಫರು ಇಸ್ಲಾಮ್ ಧರ್ಮದ ಶಾಂತಿ ಮತ್ತು ಸಹಾನುಭೂತಿಯ ಮನಮುಟ್ಟುವ ಸಂದೇಶಗಳನ್ನು ನೀಡುತ್ತಿರುತ್ತಾರೆ.

# ಪ್ರಕಾಶಕರ ನುಡಿ

ಲೋಕ ಈಗ ಬಹಳ ಸಂಕಷ್ಟಮಯ ಸ್ಥಿತಿಯಲ್ಲಿದೆ. ಜಾಗತಿಕ ಆರ್ಥಿಕ ಬಿಕ್ಕಟ್ಟು ಹೊಸ ಮತ್ತು ತೀವ್ರ ಅಪಾಯಕರ ಪರಿಸ್ಥಿತಿಗಳನ್ನು ಪ್ರತಿ ವಾರ ಪ್ರಕಟಿಸುತ್ತಿದೆ. ಈಗಿನ ಪರಿಸ್ಥಿತಿ ದ್ವಿತೀಯ ಲೋಕ ಮಹಾಯುದ್ಧವು ಆರಂಭವಾಗುವ ಮುಂಚಿನ ಲೋಕದ ಸ್ಥಿತಿಗೆ ಸಮಾನವಾಗಿದೆ ಎಂದು ಆರ್ಥಿಕ ತಜ್ಞರು ಹೇಳುತ್ತಾ ಇದ್ದಾರೆ. ಭಯಾನಕವಾದ ತೃತೀಯ ಮಹಾಯುದ್ಧದ ಕಡೆಗೆ ಲೋಕವು ವೇಗದಿಂದ ಸಾಗುತ್ತಿರುವುದಾಗಿ ಭಾಸವಾಗುತ್ತಿದೆ. ಘಟನೆಗಳು ಹತೋಟಿಗೆ ಮೀರಿಹೋಗುತ್ತಿವೆ ಎಂಬ ಭಾವನೆ ಸಾರ್ವತ್ರಿಕವಾಗಿದೆ. ತಮ್ಮ ಭಾವನೆಗಳಿಗೆ ಸ್ಪಂದಿಸಿ ಶುಭ ಪ್ರತೀಕ್ಷೆಯನ್ನು ನೀಡಿ ಶಾಂತಿಯ ಕಡೆಗೆ ಒಯ್ಯುಬಹುದಾದ ಒಬ್ಬ ಮಾರ್ಗದರ್ಶಕನನ್ನು ಜನರು ಪ್ರತೀಕ್ಷಿಸುತ್ತಿದ್ದಾರೆ. ಅಣ್ವಸ್ತ್ರ ಯುದ್ಧ ಎಷ್ಟು ವಿನಾಶಕಾರವಾಗುವುದೆಂದರೆ, ಅದರ ಬಗ್ಗೆ ಯೋಚಿಸಲು ಕೂಡ ಯಾರೂ ಧೈರ್ಯಪಡಲಾರರು.

ಈ ಪುಸ್ತಕದಲ್ಲಿ ನಾವು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ನೇತಾರರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ (ಪಂಚಮ ಖಲೀಫ) ಅವರು ವಿವಿಧ ಸಂದರ್ಭಗಳಲ್ಲಿ ನೀಡಿದ ಮಾರ್ಗದರ್ಶನಗಳನ್ನು ಸಂಗ್ರಹಿಸಿ ನೀಡುತ್ತಿದ್ದೇವೆ. ಕಳೆದ ಕೆಲವು ವರ್ಷಗಳಲ್ಲಿ ಸಂಭವಿಸಿದ ಘಟನೆಗಳ ಸಂದರ್ಭದಲ್ಲಿ ಅವರು ನಿರ್ಭಯವಾಗಿ ಲೋಕ ಎತ್ತ ಕಡೆಗೆ ಸಾಗುತ್ತಿದೆ ಎಂಬುದರ ಬಗ್ಗೆ ವಿಶದೀಕರಿಸುತ್ತಿದ್ದಾರೆ. ಇದು ಜನರನ್ನು ಭಯ ಭೀತರನ್ನಾಗಿ ಮಾಡಲಿಕ್ಕೋಸ್ಕರ ಅಲ್ಲ. ಲೋಕವು ಈ ಸ್ಥಿತಿಗೆ ಹೇಗೆ ತಲಪಿತು ಎಂಬುದರ ಬಗ್ಗೆ ಯೋಚಿಸಲು ಮತ್ತು ಅಪಾಯಗಳನ್ನು ನಿವಾರಿಸಿ ಶಾಂತಿ ಮತ್ತು ಭದ್ರತೆಯನ್ನು ಜಾಗತಿಕ ಗ್ರಾಮವಾಗಿ ಪರಿಣಮಿಸಿರುವ ಲೋಕಕ್ಕೆ ನೀಡಲಿಕ್ಕೋಸ್ಕರವಾಗಿದೆ. ಲೋಕದಲ್ಲಿ ಶಾಂತಿಸ್ಥಾಪನೆಗಿರುವ ಏಕಮಾತ್ರ ಮಾರ್ಗ ನಮ್ರತೆ ಮತ್ತು ನ್ಯಾಯಪಾಲನೆ ಅವಲಂಬಿಸಿ ವಿನಯದಿಂದ ದೇವನಿಗೆ ಶರಣಾಗುವುದಾಗಿದೆ. ಮನುಷ್ಯನು ಮಾನವೀಯತೆಯನ್ನು ಬೆಳಸಿಕೊಳ್ಳಬೇಕು. ಶಕ್ತಿಶಾಲಿಗಳು ಬಲಹೀನರನ್ನು ಗೌರವದಿಂದ ಕಾಣಬೇಕು ಮತ್ತು ನ್ಯಾಯಪಾಲನೆ ಮಾಡಬೇಕು. ಬಲಹೀನರೂ ಬಡವರೂ ಕೃತಜ್ಞತೆಯನ್ನು ತೋರಿಸಬೇಕು. ಸತ್ಯ ಮತ್ತು ಸಾತ್ವಿಕತೆಯನ್ನು ಎಲ್ಲರೂ ಹೊಂದಿ ದೇವನ ಕಡೆಗೆ ವಿನಯದಿಂದಲೂ ಪ್ರಾಮಾಣಿಕತೆಯಿಂದಲೂ ಬಾಗಬೇಕು.

ಹಝ್ರತ್ ಖಲೀಫರು ಪದೇ ಪದೇ ಲೋಕದ ರಾಷ್ಟ್ರನಾಯಕರಿಗೆ ಉಪದೇಶಿಸಿರುವುದೇನೆಂದರೆ, ಲೋಕವನ್ನು ವಿನಾಶದ ಅಂಚಿನಿಂದ ರಕ್ಷಿಸಲು ಇರುವ ಏಕ ಮಾರ್ಗ ಪರಸ್ಪರ ಸಂಬಂಧಗಳಲ್ಲಿ ನ್ಯಾಯವನ್ನು ಪಾಲಿಸಬೇಕು ಎಂಬುದಾಗಿದೆ. ಎರಡು ದೇಶಗಳ ಮಧ್ಯೆ ಹಗೆತನವಿದ್ದರೂ ನ್ಯಾಯಬದ್ದವಾಗಿಯೇ ಪರಸ್ಪರ ವ್ಯವಹಾರ ನಡೆಸಬೇಕು. ಏಕೆಂದರೆ ಮುಂದೆ ಸಂಭವಿಸಬಹುದಾದ ದ್ವೇಷಾಸೂಯೆಗಳನ್ನು ನಿವಾರಿಸಿ ಸ್ಥಿರವಾದ ಶಾಂತಿ ಸಂಬಂಧಗಳಿಗೆ ಇದು ಅತ್ಯಾವಶ್ಯಕವಾಗಿದೆ.

ಹಝ್ರತ್ ಖಲೀಫರು ಲೋಕದ ವಿವಿಧ ಕಡೆಗಳಿಗೆ ಭೇಟಿ ನೀಡಿ ಮಹಾಶಕ್ತಿ ದೇಶಗಳಲ್ಲಿ ಆಡಳಿತ ನಡೆಸುವವರನ್ನು ಸಂಬೋಧಿಸಿ ಭಾಷಣ ಮಾಡಿರುವರು. ಅಮೇರಿಕದ ವಾಶಿಂಗ್‌ಟನ್ ಡಿ.ಸಿ.ಯ ಕೆಪಿಟೋಲ್ ಹಿಲ್‌ನಲ್ಲೂ ಲಂಡನಿನ ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲೂ ಜರ್ಮನಿಯ ಮಿಲಿಟರಿ ಹೆಡ್ ಕ್ವಾರ್ಟರ್ಸ್‌ನಲ್ಲೂ ಬ್ರಸ್ಸೆಲ್ಸ್‌ನ

ಯುರೋಪಿಯನ್ ಪಾರ್ಲಿಮೆಂಟ್‌ನಲ್ಲೂ ನ್ಯೂಝಿಲೇಂಡಿನ ನ್ಯಾಶನಲ್ ಪಾರ್ಲಿಮೆಂಟ್‌ನಲ್ಲೂ ಭಾಷಣ ಮಾಡಿರುವರು. ಅಮೇರಿಕದ ಪ್ರಮುಖ ಕಾಂಗ್ರೆಸ್ ಸದಸ್ಯರು, ಬ್ರಿಟಿಷ್ ಪಾರ್ಲಿಮೆಂಟ್ ಸದಸ್ಯರು, ರಾಯಭಾರಿಗಳು, ಎನ್.ಜಿ.ಓ. ಪ್ರಮುಖರು, ಧಾರ್ಮಿಕ ನಾಯಕರು, ಪ್ರೊಫೆಸರರು, ಧೋರಣೆ ಸಲಹೆಗಾರರು, ಪತ್ರಕರ್ತರು ಈ ಭಾಷಣಗಳನ್ನು ಆಲಿಸಿದ್ದರು. ಹಝ್ರತ್ ಖ಼ಲೀಫರು ಅವರೆಲ್ಲರೊಂದಿಗೆ ಸ್ಪಷ್ಟವಾಗಿ ಹೀಗೆ ಹೇಳಿದರು: ಎಲ್ಲ ಜನಾಂಗಗಳನ್ನು ಸಮಾನತೆಯಿಂದ ಕಂಡು ಅವರೊಂದಿಗೆ ಭೇದಭಾವನೆಯಿಲ್ಲದೆ ವರ್ತಿಸಿದರೆ ಮಾತ್ರ ನ್ಯಾಯ ಪಾಲನೆಯ ಅವಶ್ಯಕತೆಗಳು ಈಡೇರುವುವು. ಅನ್ಯಾಯಕರವೂ ಮಾನವೀಯ ಸಹಾನುಭೂತಿ ಇಲ್ಲದಿರುವಂತಹದೂ ಆಗಿರುವ ಆರ್ಥಿಕ ಮತ್ತು ರಾಜಕೀಯ ಧೋರಣೆಗಳು ಲೋಕದ ವಿವಿಧ ಜನಾಂಗಗಳ ಮಧ್ಯೆ ಸಂಘರ್ಷ ಉಂಟುಮಾಡುತ್ತಿವೆ. ಅದರ ಸಹಜ ಪ್ರತಿಕ್ರಿಯೆಯಾಗಿ ಜಾಗತಿಕ ಬಿಕ್ಕಟ್ಟು ತಲೆದೋರಿದೆ.

ಹಝ್ರತ್ ಖ಼ಲೀಫರು ಜಾಗತಿಕ ನಾಯಕರಿಗೆ ಬರೆದ ಪತ್ರಗಳಲ್ಲಿ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನದ ಉಪದೇಶವನ್ನು ವಿಶಿಷ್ಟವಾಗಿ ಪ್ರಸ್ತಾಪಿಸಿದರು:

**"ಒಂದು ಜನತೆ ನಿಮ್ಮನ್ನು ಪವಿತ್ರ ಮಸೀದಿಯಿಂದ ತಡೆಗಟ್ಟಿ (ನಿಮ್ಮೊಡನೆ) ತೋರಿಸಿದ ವಿರೋಧವು ಅವರೊಡನೆ ಅನ್ಯಾಯದಿಂದ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. ಸತ್ಕರ್ಮಗಳಲ್ಲಿ ಮತ್ತು ಅಲ್ಲಾಹನ ಆಜ್ಞೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರಲ್ಲಿ ನೀವು ಪರಸ್ಪರ ಸಹಕರಿಸಿರಿ. ಆದರೆ ಪಾಪಕರ್ಮ ಮತ್ತು ಅನ್ಯಾಯವೆಸಗುವುದರಲ್ಲಿ ನೀವು ಅನ್ಯೋನ್ಯ ಸಹಕರಿಸಬಾರದು. ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ಖಂಡಿತವಾಗಿಯೂ ಅಲ್ಲಾಹನು ಕಠಿಣವಾಗಿ ಶಿಕ್ಷಿಸುವವನಾಗಿದ್ದಾನೆ." (5:3)**

ಅಮೇರಿಕದ ಅಧ್ಯಕ್ಷ ಒಬಾಮರಿಗೆ ಹಝ್ರತ್ ಖ಼ಲೀಫರು ಹೀಗೆ ಬರೆದರು:

"ನಮಗೆಲ್ಲರಿಗೂ ತಿಳಿದಿರುವಂತೆ ಎರಡನೆಯ ಜಾಗತಿಕ ಮಹಾ ಯುದ್ಧವು ಪ್ರಾರಂಭವಾಗಲು ಕಾರಣ ಲೀಗ್ ಆಫ್ ನೇಶನ್ಸ್ ತನ್ನ ಸ್ಥಾಪನೆಯ ಉದ್ದೇಶವನ್ನು ತಲುಪಲು ವಿಫಲವಾದುದು ಮತ್ತು 1932ರಲ್ಲಿ ಆರಂಭವಾದ ಆರ್ಥಿಕ ಮುಗ್ಗಟ್ಟು ಆಗಿದೆ. ಈಗ ಪ್ರಸಿದ್ಧ ಅರ್ಥಶಾಸ್ತ್ರಜ್ಞರು ಈಗಿನ ಆರ್ಥಿಕ ಬಿಕ್ಕಟ್ಟು 1932ರ ಆರ್ಥಿಕ ಮುಗ್ಗಟ್ಟಿಗೆ ಹಲವಾರು ವಿಷಯಗಳಲ್ಲಿ ಸಮಾನತೆ ಹೊಂದಿವೆ ಎಂದು ಹೇಳುತ್ತಾರೆ. ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳು ಚಿಕ್ಕ ದೇಶಗಳ ಮಧ್ಯೆ ಯುದ್ಧ ಪ್ರಾರಂಭವಾಗಲು ಕಾರಣಗಳಾಗಿವೆ ಎಂದು ನಾವು ನೋಡುತ್ತೇವೆ. ಆಂತರಿಕ ಕ್ಷೋಭೆ ಮತ್ತು ಅತೃಪ್ತಿ ಈ ದೇಶಗಳಲ್ಲಿ ವರ್ಧಿಸುತ್ತಾ ಇವೆ. ಈ ಕಾರಣಗಳಿಂದ ಕೆಲವು ಶಕ್ತಿಗಳು ಅಧಿಕಾರಕ್ಕೆ

ಬರುವುವು. ಅಂತಹ ಶಕ್ತಿಗಳು ನಮ್ಮನ್ನು ಜಾಗತಿಕ ಮಹಾಯುದ್ಧಕ್ಕೆ ಕೊಂಡೊಯ್ಯುವುವು. ಚಿಕ್ಕ ದೇಶಗಳಲ್ಲಿ ಸಂಘರ್ಷಗಳು ರಾಜಕೀಯವಾಗಿ ಅಥವಾ ರಾಜ ತಂತ್ರಗಳ ಮೂಲಕ ಪರಿಹರಿಸಲ್ಪಡದಿದ್ದರೆ ಲೋಕದಲ್ಲಿ ದೇಶಗಳು ಒಗ್ಗೂಡಿದ ಹೊಸ ಗುಂಪುಗಳು ಸ್ಥಾಪಿಸಲ್ಪಡುವುವು. ಇದು ಮೂರನೆಯ ಜಾಗತಿಕ ಮಹಾಯುದ್ಧವು ಪ್ರಾರಂಭವಾಗುವುದಕ್ಕೆ ಮುನ್ನುಡಿಯಾಗುವುದು. ಈಗ ನಾವು ಲೋಕವನ್ನು ಆರ್ಥಿಕ ಅಭಿವೃದ್ಧಿಗೊಯ್ಯುವ ಬಗ್ಗೆ ನಮ್ಮ ಚಿಂತೆಯನ್ನು ಕೇಂದ್ರೀಕರಿಸುವುದಕ್ಕೆ ಬದಲಾಗಿ ಲೋಕವನ್ನು ನಾಶದಿಂದ ರಕ್ಷಿಸುವ ಬಗ್ಗೆ ಕೂಡಲೆ ನಮ್ಮ ಪ್ರಯತ್ನಗಳನ್ನು ವೃದ್ಧಿಗೊಳಿಸಲು ತೊಡಗುವುದು ಅತ್ಯಾವಶ್ಯಕವಾಗಿದೆ. ಮಾನವರು ತಮ್ಮ ಸೃಷ್ಟಿಕರ್ತನಾದ ಏಕದೇವನನ್ನು ಗುರುತಿಸುವುದು ಅತ್ಯಾವಶ್ಯಕವಾಗಿದೆ. ಹೀಗೆ ಮಾಡಿದರೆ ಮಾತ್ರ ಮಾನವತೆಯ ರಕ್ಷೆ ಖಾತರಿಗೊಳಿಸಲ್ಪಡುವುದು. ಇಲ್ಲದಿದ್ದರೆ ಲೋಕವು ವೇಗವಾಗಿ ಸ್ವಯಂನಾಶದ ಕಡೆಗೆ ಸಾಗುತ್ತಾ ಹೋಗುವುದು."

ರಶ್ಯದ ಅಧ್ಯಕ್ಷ ಪುಟಿನ್‌ರಿಗೆ ಹಝ್ರತ್ ಖ಼ಲೀಫರು ಹೀಗೆ ಬರೆದರು:

"ಸಿರಿಯಾದಲ್ಲಿ ತಲೆದೋರಿರುವ ಗಂಭೀರ ಪರಿಸ್ಥಿತಿಯ ಕಾರಣ ಮತ್ತು ಜಾಗತಿಕ ನಾಯಕರನ್ನು ಯುದ್ಧಕ್ಷೇತ್ರಕ್ಕೆ ತೆರಳದೆ ಸಮಾಲೋಚನೆಗೆ ಕರೆಯಲು ನೀವು ಮಾಡಿದ ಪ್ರಯತ್ನಗಳನ್ನು ಪ್ರಶಂಸಿಸಲು ಈ ಪತ್ರ ಬರೆಯುತ್ತಿದ್ದೇನೆ. ಸಿರಿಯಾದ ಮೇಲೆ ಆಕ್ರಮಣದಿಂದ ಆ ಪ್ರದೇಶದಲ್ಲಿ ಮಾತ್ರವಲ್ಲ, ಜಾಗತಿಕವಾಗಿ ಯುದ್ಧವು ಸ್ಫೋಟಿಸಬಹುದಾಗಿತ್ತು. ನೀವು ಇತ್ತೀಚೆಗೆ ಒಂದು ಹಿರಿಯ ಪಾಶ್ಚಿಮಾತ್ಯ ಪತ್ರಿಕೆಯಲ್ಲಿ ಬರೆದ ಲೇಖನವನ್ನು ಓದಿ ನನಗೆ ಸಂತೋಷವಾಯಿತು. ನೀವು ಆ ಲೇಖನದಲ್ಲಿ ಸಿರಿಯಾದ ಮೇಲೆ ಆಕ್ರಮಣ ಮಾಡುವುದು ಅಪಾಯಕರವೆಂದೂ ಅದರಿಂದ ಯುದ್ಧವು ವ್ಯಾಪಿಸುವುದೆಂದೂ ಬರೆದಿರುವಿರಿ. ನಿಮ್ಮ ದೃಢ ನಿಲುವಿನ ಕಾರಣದಿಂದ ಮಹಾಶಕ್ತಿ ರಾಷ್ಟ್ರಗಳು ಆಕ್ರಮಣ ಮನೋಭಾವವನ್ನು ತ್ಯಜಿಸಿ ರಾಜಿ ಸಂಧಾನಗಳಿಗೆ ಮುಂದಾಗಿವೆ ಮತ್ತು ರಾಜಕೀಯ ವಿಧಾನಗಳಿಂದ ಸಮಸ್ಯೆಗಳನ್ನು ಬಗೆಹರಿಸಲು ಸಮ್ಮತಿಸಿವೆ. ನಿಶ್ಚಯವಾಗಿಯೂ ಲೋಕವು ಬೃಹತ್ತಾದ ವಿನಾಶದಿಂದ ಈ ಮೂಲಕ ರಕ್ಷಿಸಲ್ಪಟ್ಟಿದೆ ಎಂದು ನಾನು ನಂಬುತ್ತೇನೆ. ದೇಶಗಳು ಸ್ವತಂತ್ರ ವಾಗಿ ತೀರ್ಮಾನಗಳನ್ನು ಕೈಗೊಂಡು ಸ್ವಂತ ಇಷ್ಟ ಪ್ರಕಾರ ಕ್ರಮಗಳನ್ನು ಕೈಗೊಂಡರೆ, ಸಂಯುಕ್ತ ರಾಷ್ಟ್ರ ಸಂಘವು ಲೀಗ್ ಆಫ್ ನೇಶನ್ಸ್‌ನ ಹಾಗೆಯೇ ನಿಷ್ಕ್ರಿಯವಾಗುವುದು ಎಂಬ ನಿಮ್ಮ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ."

ಸಿರಿಯಾ ಮತ್ತು ಇರಾನಿನ ವಿಷಮ ಪರಿಸ್ಥಿತಿಗಳು 2013ರ ಕೊನೆಯ ಭಾಗದಲ್ಲಿ ಬಹಳ ಮಟ್ಟಿಗೆ ಸುಧಾರಣೆಗೊಂಡಿವೆ. ಬ್ರಿಟಿಷ್ ಪಾರ್ಲಿಮೆಂಟ್ ಸಿರಿಯಾದ ವಿರುದ್ಧ

ಸೈನಿಕ ಕಾರ್ಯಾಚರಣೆಯ ವಿರುದ್ಧ ಮತ ನೀಡಿತು. ಸಿರಿಯಾದ ರಾಸಾಯನಿಕ ಆಯುಧಗಳ ನಿರ್ವಹಣೆಯ ಬಗ್ಗೆ ರಶ್ಯಾ ಮತ್ತು ಯುನೈಟೆಡ್ ಸ್ಟೇಟ್ಸ್ ಒಮ್ಮತದಿಂದ ಯೋಜನೆಗಳನ್ನು ರೂಪಿಸಿದವು. ಯುನೈಟೆಡ್ ಸ್ಟೇಟ್ಸ್ ಸಿರಿಯಾವನ್ನು ಆಕ್ರಮಿಸುವುದರಿಂದ ಹಿಂದೆ ಸರಿಯಿತು. ಇರಾನಿನೊಂದಿಗೆ ಅಣು ಕಾರ್ಯಕ್ರಮಗಳ ಬಗ್ಗೆ ಪರಸ್ಪರ ಅಂಗೀಕರಿಸುವ ಸಂಧಾನಗಳಲ್ಲಿ ಲೋಕದ ಮಹಾಶಕ್ತಿಗಳು ಭಾಗವಹಿಸಿದವು. ಹಝ್ರತ್ ಖಲೀಫರು ಲೋಕದೊಂದಿಗೆ ಆಗ್ರಹಪಡಿಸಿದ ಹಾಗೆ ಸ್ವಾಗತಾರ್ಹ ಬದಲಾವಣೆಗಳು ಸಂಭವಿಸಿದವು. ಹೀಗಿದ್ದರೂ ಸುರಕ್ಷಿತ ಮತ್ತು ಶಾಶ್ವತ ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ನಾವು ಇನ್ನಷ್ಟು ಹೆಚ್ಚಿಗೆ ಪ್ರಯತ್ನ ಮಾಡಬೇಕಾಗಿದೆ.

ನಾವು ಈ ಪುಸ್ತಕದಲ್ಲಿ ಸಂಗ್ರಹಿಸಿದ ಮಾರ್ಗದರ್ಶನಗಳು ಇಂದಿನ ಅಪಾಯಕರ ಸನ್ನಿವೇಶಗಳಲ್ಲಿ ಮಾನವರಿಗೆ ಮಾರ್ಗದರ್ಶಕವಾಗಲಿ ಎಂದೂ ಜನರು ನ್ಯಾಯಪಾಲನೆ ಮಾಡುತ್ತಾ ವಿನಯದಿಂದ ದೇವನ ಕಡೆಗೆ ಬಾಗುವವರಾಗಲಿ ಎಂದೂ ಶಾಶ್ವತವಾಗಿ ಶಾಂತಿಯು ಸ್ಥಾಪಿತವಾಗಲಿ ಎಂದೂ ಪ್ರಾರ್ಥಿಸುತ್ತೇವೆ.

# ಭಾಷಣಗಳು




# ಜಾಗತಿಕ ಬಿಕ್ಕಟ್ಟು ಬಗ್ಗೆ ಇಸ್ಲಾಮಿನ ದೃಷ್ಟಿಕೋನ

ದಿ ಬ್ರಿಟಿಷ್ ಪಾರ್ಲಿಮೆಂಟ್, ದಿ ಹೌಸ್ ಆಫ್ ಕಾಮನ್ಸ್
ಲಂಡನ್, ಯು.ಕೆ., 2008






Hadrat Mirza Masroor Ahmad, Khalifatul-Masih V[aba] delivering the keynote address at the House of Commons








Official tour of the House of Commons, courtesy of Justine Greening MP




Seated: Lord Avebury (Liberal Democrats Spokesman for Foreign Affairs), Rt. Hon. Hazel Blears MP (Secretary of State for Communities and Local Government); Hadrat Mirza Masroor Ahmad, Khalifatul-Masih V[aba]; Justine Greening MP (Shadow Treasury Minister); Gillian Merron MP (Foreign Office Minister); Councillor Louise Hyams (the Lord Mayor of Westminster). Standing: Jeremy Hunt MP (Shadow Culture Minister); Rafiq Hayat (National Amir AMA UK); Virendra Sharma MP, Rt. Hon. Malcolm Wicks MP (Former Minister at Department for Business, Enterprise and Regulatory Reform); Rob Marris MP, Simon Hughes MP (President of the Liberal Democrats Party); Martin Linton MP; Alan Keen MP.

# ಮುನ್ನುಡಿ

2008 ಅಕ್ಟೋಬರ್ ದಿನಾಂಕ 22ರಂದು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋನ್ನತ ನೇತಾರ (ಇಮಾಮ್) ಮತ್ತು ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಹೌಸ್ ಆಫ್ ಕಾಮನ್ಸ್ (ಬ್ರಿಟಿಷ್ ಪಾರ್ಲಿಮೆಂಟ್)ನಲ್ಲಿ ಮಾಡಿದ ಚಾರಿತ್ರಿಕ ಭಾಷಣ.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಕೇಂದ್ರ, ಲಂಡನಿನ ಪುಟ್ನಿಯಲ್ಲಿದೆ. ಅಲ್ಲಿನ ಪಾರ್ಲಿಮೆಂಟ್ ಸದಸ್ಯೆ ಜಸ್ಟಿನ್ ಗ್ರೀನ್, ಅಹ್ಮದಿಯಾ ಖಿಲಾಫತ್ ಶತವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ಪಾರ್ಲಿಮೆಂಟ್ ಹೌಸಿನಲ್ಲಿ ಒಂದು ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು.

ಈ ಸಮಾರಂಭದಲ್ಲಿ ಪಾರ್ಲಿಮೆಂಟ್ ಸದಸ್ಯರಾದ ಗಿಲಿಯನ್ ಮೆರ್ರೋನ್, ಹೇಝುಲ್ ಬ್ಲಿಯರ್ಸ್, ಎಲನ್ ಕೀನ್, ಡೊಮಿನಿಕ್ ಗ್ರೀವ್, ಸೈಮನ್ ಹ್ಯೂಸ್, ಲಾರ್ಡ್ ಆವ್‌ಬರಿ ಮತ್ತು ಇತರ ಅನೇಕ ಪ್ರಮುಖ ರಾಜಕಾರಣಿಗಳೂ ಉದ್ಯೋಗಸ್ತರೂ ಪತ್ರಿಕೆಗಳ ಪ್ರತಿನಿಧಿಗಳೂ ಭಾಗವಹಿಸಿದ್ದರು.

# ಜಾಗತಿಕ ಬಿಕ್ಕಟ್ಟು ಬಗ್ಗೆ ಇಸ್ಲಾಮಿನ ದೃಷ್ಟಿಕೋನ

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್–ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ.

ಬ್ರಿಟಿಷ್ ಪಾರ್ಲಿಮೆಂಟಿನ ಸನ್ಮಾನ್ಯ ಸದಸ್ಯರು ಮತ್ತು ಇತರ ಅತಿಥಿಗಳಿಗೆ ನಾನು ಮೊತ್ತ ಮೊದಲು ಕೃತಜ್ಞತೆ ಅರ್ಪಿಸುತ್ತೇನೆ. ಒಂದು ಧಾರ್ಮಿಕ ಸಂಸ್ಥೆಯ ನಾಯಕನಿಗೆ ನಿಮ್ಮನ್ನು ಸಂಬೋಧಿಸಿ ಮಾತನಾಡಲು ನೀವು ಅನುಮತಿಸಿರುವಿರಿ. ಅಹ್ಮದಿಯಾ ಖಿಲಾಫತ್ ಶತವಾರ್ಷಿಕದ ಈ ಸಂದರ್ಭದಲ್ಲಿ ತನ್ನ ಚುನಾವಣಾ ಕ್ಷೇತ್ರದಲ್ಲಿರುವ ಒಂದು ಚಿಕ್ಕ ಸಮುದಾಯಕ್ಕೋಸ್ಕರ ನಮ್ಮ ಪ್ರಥಮ ಮಸ್‌ಜಿದ್ ಇರುವ ಪ್ರದೇಶದ ಪಾರ್ಲಿಮೆಂಟ್ ಸದಸ್ಯೆಯಾದ ಸನ್ಮಾನ್ಯ ಜಸ್ಟಿನ್ ಗ್ರೀನಿಂಗ್‌ರವರು ಈ ಸಮಾರಂಭವನ್ನು ವ್ಯವಸ್ಥೆ ಮಾಡಲು ಬಹಳ ಪರಿಶ್ರಮಪಟ್ಟಿರುವರು. ಅವರಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ. ಆಕೆಯ ಈ ಪ್ರವೃತ್ತಿ ಆಕೆಯ ಘನತೆ, ಆಕೆಯ ತಿಳಿ ಹೃದಯ ಮತ್ತು ತನ್ನ ಚುನಾವಣೆಯ ಕ್ಷೇತ್ರದಲ್ಲಿ ಇರುವ ಪ್ರತಿಯೊಂದು ಸಮುದಾಯದ ಸದಸ್ಯರ ಬಗ್ಗೆ ಆಕೆಗಿರುವ ಕಾಳಜಿಯನ್ನು ಸೂಚಿಸುತ್ತದೆ.

ಅಹ್ಮದಿಯಾ ಸಂಘಟನೆ ಜನರ ದೃಷ್ಟಿಯಲ್ಲಿ ಚಿಕ್ಕದಾಗಿದ್ದರೂ ಅದು ಇಸ್ಲಾಮ್ ಧರ್ಮದ ಪತಾಕೆಯನ್ನು ಎತ್ತಿಹಿಡಿಯುವ ಮತ್ತು ಇಸ್ಲಾಮಿನ ಸತ್ಯಾಂಶಭರಿತ ಉಪದೇಶಗಳನ್ನು ಪ್ರತಿನಿಧೀಕರಿಸುವ ಜನರನ್ನು ಒಳಗೊಂಡ ಸಮುದಾಯವಾಗಿದೆ. ಗ್ರೇಟ್ ಬ್ರಿಟನ್‌ನಲ್ಲಿ (ಎಂದರೆ ಇಂಗ್ಲೆಂಡ್, ಸ್ಕಾಟ್‌ಲೇಂಡ್, ವೇಲ್ಸ್ ಮತ್ತು ಉತ್ತರ ಅಯರ್‌ಲೇಂಡನ್ನೊಳಗೊಂಡ ಪ್ರದೇಶದಲ್ಲಿ) ವಾಸಿಸುವ ಪ್ರತಿಯೊಬ್ಬ ಅಹ್ಮದೀ ತಾನು

ವಾಸಿಸುವ ದೇಶಕ್ಕೆ ಅತ್ಯಂತ ನಿಷ್ಠಾವಂತನೂ ಅದನ್ನು ಪ್ರೀತಿಸುವವನೂ ಆಗಿದ್ದಾನೆ. ಇದು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉಪದೇಶಗಳಿಗನುಸಾರವಾಗಿದೆ. ದೇಶಪ್ರೇಮವು ಸತ್ಯವಿಶ್ವಾಸದ ಅವಿಭಾಜ್ಯ ಅಂಶವಾಗಿದೆ ಎಂದು ಹಝ್ರತ್ ಪೈಗಂಬರರು(ಸ) ಹೇಳಿದ್ದರು. ಇಸ್ಲಾಮಿನ ಉಪದೇಶಗಳನ್ನು ವಿಶದೀಕರಿಸಿ ಅದರ ಅನುಷ್ಠಾನದ ಬಗ್ಗೆ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು ಒತ್ತಿ ಹೇಳಿರುವರು. ನಾವು ಅವರನ್ನು ವಾಗ್ದತ್ತ ಮಸೀಹರೆಂದೂ ಈ ಯುಗದ ಧರ್ಮೋದ್ಧಾರಕರೆಂದೂ ನಂಬುತ್ತೇವೆ.

ನಮ್ಮ ಜಮಾಅತಿನ ಸ್ಥಾಪಕರು ತನ್ನ ವಾದವನ್ನು ಪ್ರಕಟಿಸುತ್ತಾ ಹೀಗೆ ಹೇಳಿದರು: ಸರ್ವಶಕ್ತನಾದ ದೇವನು ನನ್ನ ಮೇಲೆ ಎರಡು ಜವಾಬ್ದಾರಿಗಳನ್ನು ಹೊರಿಸಿರುವನು. ದೇವನ ಹಕ್ಕುಗಳನ್ನು ಈಡೇರಿಸುವುದು ಮೊದಲನೆಯ ಜವಾಬ್ದಾರಿಯಾಗಿದೆ. ದೇವನ ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸುವುದು ಎರಡನೆಯ ಜವಾಬ್ದಾರಿಯಾಗಿದೆ. ಇದು ಅತ್ಯಂತ ಕಷ್ಟಕರವೂ ಸೂಕ್ಷ್ಮವೂ ಆಗಿರುವ ಹೊಣೆಗಾರಿಕೆಯಾಗಿದೆ.

ಖಿಲಾಫತ್ ಬಗ್ಗೆ ನೀವು ಆತಂಕಗೊಂಡು ಚರಿತ್ರೆಯು ಪುನರಾವರ್ತಿಸುವ ಕಾಲವು ಬರುವುದೋ ಎಂದು ಭಯಪಡಬಹುದು. ಈ ರೀತಿಯ ನಾಯಕತ್ವದ ಕಾರಣದಿಂದ ಯುದ್ಧಗಳು ಪ್ರಾರಂಭವಾಗಬಹುದೆಂದು ನೀವು ಶಂಕಿಸಬಹುದು.

ನಾನು ನಿಮಗೆ ಖಾತರಿ ನೀಡುತ್ತೇನೆ. ಈ ರೀತಿಯ ಆಕ್ಷೇಪಗಳನ್ನು ಇಸ್ಲಾಮಿನ ವಿರುದ್ಧ ಮಾಡಲಾಗುತ್ತಿದೆಯಾದರೂ ದೇವನಿಚ್ಛಿಸುವುದಾದರೆ, ಅಹ್ಮದಿಯಾ ಖಿಲಾಫತ್ ಯಾವಾಗಲೂ ಶಾಂತಿ ಮತ್ತು ಸೌಹಾರ್ದ ಭಾವನೆಯ ಪತಾಕೆಯನ್ನು ಜಗತ್ತಿನಾದ್ಯಂತ ಹಾರಿಸುವ ವ್ಯವಸ್ಥೆಯಾಗಿ ಯಾವಾಗಲೂ ಪ್ರಸಿದ್ಧಿ ಪಡೆಯುವುದು ಮತ್ತು ಅಹ್ಮದಿಯಾ ಜಮಾಅತಿನ ಸದಸ್ಯರು ತಾವು ವಾಸಿಸುವ ದೇಶಕ್ಕೆ ಯಾವಾಗಲೂ ನಿಷ್ಠರಾಗಿ ಇರುವರು.

ಅಹ್ಮದಿಯಾ ಖಿಲಾಫತ್ ಸ್ಥಾಪಿತವಾಗಿರುವುದು ಮಸೀಹ್ ಮತ್ತು ಮಹ್‌ದೀ ಪ್ರಾರಂಭಿಸಿದ ಕೆಲಸವನ್ನು ಶಾಶ್ವತವಾಗಿ ಮುಂದುವರಿಸಲಿಕ್ಕಾಗಿದೆ. ಆದುದರಿಂದ ಅಹ್ಮದಿಯಾ ಖಿಲಾಫತ್ ಬಗ್ಗೆ ಭಯಪಡಲು ಖಂಡಿತವಾಗಿಯೂ ಯಾವುದೇ ಕಾರಣವಿಲ್ಲ. ಈ ಖಿಲಾಫತ್ ಅಹ್ಮದಿಯಾ ಜಮಾಅತಿನ ಸದಸ್ಯರಿಗೆ ಅವರ ಸ್ಥಾಪಕರು ಆಗಮಿಸಿದ ಉದ್ದೇಶವನ್ನು ಸೂಚಿಸಿ ಎರಡು ಜವಾಬ್ದಾರಿಗಳನ್ನು ಈಡೇರಿಸುವ ಬಗ್ಗೆ ಅವರ ಗಮನ ಸೆಳೆಯುತ್ತದೆ. ಅದರ ಫಲಸ್ವರೂಪವಾಗಿ ಜಗತ್ತಿನಲ್ಲಿ ಶಾಂತಿ ಮತ್ತು ಸೌಹಾರ್ದವನ್ನು ಸ್ಥಾಪಿಸಲು ಅದು ಪ್ರಯತ್ನಶೀಲವಾಗಿದೆ.

ಸಮಯದ ಕೊರತೆಯ ಕಾರಣದಿಂದ ನಾನು ಮುಖ್ಯ ವಿಷಯದ ಬಗ್ಗೆ ಸಂಕ್ಷಿಪ್ತವಾಗಿ ಪ್ರಸ್ತಾಪಿಸುತ್ತೇನೆ. ದಾಟಿಹೋದ ಕೆಲವು ಶತಮಾನಗಳನ್ನು ನಾವು ನಿಷ್ಪಕ್ಷವಾಗಿ ಪರಿಶೀಲಿಸುವುದಾದರೆ, ಆ ಕಾಲಾವಧಿಯಲ್ಲಿ ನಡೆದ ಯುದ್ಧಗಳು ವಾಸ್ತವದಲ್ಲಿ ಧಾರ್ಮಿಕ ಯುದ್ಧಗಳಾಗಿರಲಿಲ್ಲ. ಅವುಗಳು ಭೌಗೋಳಿಕವೂ ರಾಜಕೀಯವೂ ಆದ ಕಾರಣಗಳಿಂದ ನಡೆದವುಗಳಾಗಿವೆ. ಈಗಿನ ಕಾಲದಲ್ಲಿ ಸಹ ಸಂಘರ್ಷಗಳು ಮತ್ತು ಯುದ್ಧಗಳು ವಿವಿಧ ಜನಾಂಗಗಳ ಮಧ್ಯೆ ನಡೆಯುತ್ತಿರುವುದನ್ನು ನಾವು ನೋಡುವುದಾದರೆ, ಅವು ರಾಜಕೀಯ, ಪ್ರಾದೇಶಿಕ ಮತ್ತು ಆರ್ಥಿಕ

ಹಿತಾಸಕ್ತಿಗಳಿಗೋಸ್ಕರವಾಗಿವೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬಲ್ಲೆವು.

ಇಂದಿನ ಕಾಲದಲ್ಲಿ ವಿವಿಧ ವಿಷಯಗಳು ಸಾಗುತ್ತಿರುವ ದಿಶೆಗಳನ್ನು ಪರಿಶೀಲಿಸುವುದಾದರೆ, ವಿವಿಧ ದೇಶಗಳ ರಾಜಕೀಯ ಮತ್ತು ಆರ್ಥಿಕ ಚಲನೆಗಳು ಅವುಗಳನ್ನು ಜಾಗತಿಕ ಯುದ್ಧಕ್ಕೆ ಒಯ್ಯಬಹುದೆಂದು ನಾನು ಭಯಪಡುತ್ತೇನೆ. ಬಡದೇಶಗಳು ಮಾತ್ರವಲ್ಲ, ಶ್ರೀಮಂತ ದೇಶಗಳು ಸಹ ಇದರಿಂದ ಬಾಧಿಸಲ್ಪಟ್ಟಿವೆ. ಆದುದರಿಂದ ಮಹಾನ್ ಶಕ್ತಿಯುತ ದೇಶಗಳು ಮಾನವರನ್ನು ವಿಪತ್ತಿನ ಅಂಚಿನಿಂದ ರಕ್ಷಿಸಲು ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳಬೇಕಾದುದು ಅವರ ಕರ್ತವ್ಯವಾಗಿದೆ.

ಬ್ರಿಟನ್ ಸಹ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳ ಮೇಲೆ ಪ್ರಭಾವ ಬೀರಲು ಶಕ್ತವಾದ ಮತ್ತು ಪ್ರಭಾವ ಬೀರುತ್ತಿರುವ ಒಂದು ಮಹಾನ್ ಶಕ್ತಿಯುತ ದೇಶವಾಗಿದೆ. ನೀವು ಬಯಸುವುದಾದರೆ, ನೀವು ನೀತಿ ಮತ್ತು ನ್ಯಾಯದ ಆವಶ್ಯಕತೆಗಳನ್ನು ಈಡೇರಿಸಿ ಲೋಕಕ್ಕೆ ಮಾರ್ಗದರ್ಶನ ನೀಡಬಹುದಾಗಿದೆ.

ನಾವು ಬ್ರಿಟನಿನ ಇತ್ತೀಚೆಗಿನ ಭೂತಕಾಲದ ಚರಿತ್ರೆಯನ್ನು ನೋಡುವುದಾದರೆ, ಬ್ರಿಟನ್ ಹಲವಾರು ದೇಶಗಳನ್ನು ತನ್ನ ಅಧೀನಕ್ಕೊಳಪಡಿಸಿ ಆಳುತ್ತಿತ್ತು. ಅದು ನ್ಯಾಯ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಉನ್ನತಮಟ್ಟವನ್ನು, ವಿಶಿಷ್ಟವಾಗಿ ಭಾರತ–ಪಾಕಿಸ್ತಾನದ ಉಪ ಭೂಖಂಡದಲ್ಲಿ ಸ್ಥಾಪಿಸಿ ಅದನ್ನು ತನ್ನ ಕೊಡುಗೆಯಾಗಿ ನೀಡಿತು. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಇದಕ್ಕೆ ಸಾಕ್ಷಿಯಾಯಿತು. ಬ್ರಿಟಿಷ್ ಸರಕಾರದ ನ್ಯಾಯನಿಷ್ಠೆ ಮತ್ತು ಧಾರ್ಮಿಕ ಸ್ವಾತಂತ್ರ್ಯ ನೀಡುವಿಕೆ ಬಗ್ಗೆ ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೊಗಳಿರುವರು. ವಿಕ್ಟೋರಿಯಾ ಮಹಾರಾಣಿಯ ವಜ್ರ ಜೂಬಿಲಿ ಮಹೋತ್ಸವದ ಸಂದರ್ಭದಲ್ಲಿ ಅಹ್ಮದಿಯಾ ಜಮಾಅತಿನ ಸ್ಥಾಪಕರು ಅವರಿಗೆ ಶುಭಾಶಯಗಳನ್ನು ಕೋರಿ ಇಸ್ಲಾಮಿನ ಸಂದೇಶವನ್ನು ತಲುಪಿಸಿದರಲ್ಲದೆ ಅವರ ಸರಕಾರ ಹಿಂದೂಸ್ತಾನದಲ್ಲಿ ನೀತಿ ಮತ್ತು ನ್ಯಾಯವನ್ನು ಉತ್ತಮ ರೀತಿಯಲ್ಲಿ ಪರಿಪಾಲಿಸುತ್ತಿರುವುದರಿಂದ ಅವರ ಸರಕಾರವನ್ನು ದೇವನು ಔದಾರ್ಯಪೂರ್ಣವಾಗಿ ಅನುಗ್ರಹಿಸಲಿ ಎಂದು ವಿಶಿಷ್ಟವಾಗಿ ಸೃಷ್ಟಿಕರ್ತನನ್ನು ಪ್ರಾರ್ಥಿಸಿದರು. ಆದುದರಿಂದ ನಮ್ಮ ಜಮಾಅತಿನ ಚರಿತ್ರೆ ತೋರಿಸಿಕೊಡುವುದೇನೆಂದರೆ, ಬ್ರಿಟನ್ ತನ್ನ ನ್ಯಾಯನಿಷ್ಠೆಯನ್ನು ಪ್ರಕಟಿಸಿದಾಗಲೆಲ್ಲಾ ನಾವು ಅದಕ್ಕಾಗಿ ಕೃತಜ್ಞತೆ ಸೂಚಿಸಿದೆವು. ಇನ್ನು ಮುಂದೆ ಸಹ ನ್ಯಾಯನಿಷ್ಠೆಯು ಬ್ರಿಟಿಷ್ ಸರಕಾರದ ಸ್ಥಿರವಾದ ಹೆಗ್ಗುರುತಾಗುವುದೆಂದು ನಾವು ಪ್ರತೀಕ್ಷಿಸುತ್ತೇವೆ. ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿ ಮಾತ್ರವಲ್ಲ, ಇತರ ಎಲ್ಲ ವಿಷಯಗಳಿಗೆ ಸಂಬಂಧಿಸಿಯೂ ನೀವು ನಿಮ್ಮ ಹಿಂದಿನ ಉತ್ತಮ ಗುಣಗಳನ್ನು ಎಂದೂ ಮರೆತು ಬಿಡಲಾರಿರೆಂದು ನಾವು ಆಶಿಸುತ್ತೇವೆ.

ಇಂದು ಲೋಕದಲ್ಲಿ ಬಹಳ ಕ್ಷೋಭೆಗಳು ಮತ್ತು ಪ್ರಕ್ಷುಬ್ಧತೆಯ ಪರಿಸ್ಥಿತಿಗಳು ತಲೆದೋರಿವೆ. ಕೆಲವು ಪ್ರದೇಶಗಳಲ್ಲಿ ಚಿಕ್ಕಮಟ್ಟ ಯುದ್ಧಗಳು ಪ್ರಾರಂಭವಾಗುತ್ತಿವೆ. ಕೆಲವು ಪ್ರದೇಶಗಳಲ್ಲಿ ಮಹಾನ್ ಲೋಕಶಕ್ತಿಗಳು ಶಾಂತಿ ಸ್ಥಾಪನೆಗೋಸ್ಕರ ಪ್ರಯತ್ನಿಸುವುದಾಗಿ ಹೇಳಿಕೊಳ್ಳುತ್ತಿವೆ. ನ್ಯಾಯದಾನದ ಆವಶ್ಯಕತೆಗಳು ಈಡೇರಿಸಲ್ಪಡದಿದ್ದರೆ ಸ್ಥಳೀಯ ಸಂಘರ್ಷಗಳು ಮತ್ತು ಸ್ಥಳೀಯ ಯುದ್ಧಗಳ ಜ್ವಾಲೆಗಳು ಬಡಿದೆಬ್ಬಿಸಲ್ಪಟ್ಟು ಲೋಕವನ್ನೆಲ್ಲ

ಆವರಿಸಲು ಸಾಧ್ಯತೆಗಳಿವೆ. ಆದುದರಿಂದ ನೀವು ಲೋಕವನ್ನು ಸರ್ವನಾಶದಿಂದ ಸಂರಕ್ಷಿಸಲು ಕಾರ್ಯೋನ್ಮುಖರಾಗಬೇಕೆಂದು ನಾನು ವಿನೀತನಾಗಿ ನಿಮ್ಮನ್ನು ಕೋರುತ್ತೇನೆ.

ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಇಸ್ಲಾಮ್ ನೀಡುವ ಉಪದೇಶಗಳೇನೆಂದು ನಾನು ಸಂಕ್ಷಿಪ್ತವಾಗಿ ವಿವರಿಸುವೆನು; ಅಥವಾ ಈ ಉಪದೇಶಗಳ ಬೆಳಕಿನಲ್ಲಿ ಲೋಕದಲ್ಲಿ ಶಾಂತಿಯನ್ನು ಹೇಗೆ ಸ್ಥಾಪಿಸಬಹುದೆಂದು ನಾನು ಪ್ರಸ್ತಾಪಿಸುವೆನು. ಈ ಉಪದೇಶಗಳನ್ನು ಯಾರಿಗೆ ಪ್ರಥಮವಾಗಿ ನೀಡಲಾಯಿತೋ ಅವರು, ಎಂದರೆ ಮುಸ್ಲಿಮರು ಈ ಉಪದೇಶಗಳನ್ನು ಕೃತಿಗಿಳಿಸಲು ಕಾರ್ಯತತ್ಪರರಾಗುವ ಸಾಮರ್ಥ್ಯ ಗಳಿಸಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಎಲ್ಲ ದೇಶಗಳು, ಮಹಾನ್ ಲೋಕ ಶಕ್ತಿಗಳು ಈ ಉಪದೇಶಗಳನ್ನು ಕಾರ್ಯಗತಗೊಳಿಸಬೇಕೆಂದು ನಾನು ಆಶಿಸುತ್ತೇನೆ.

ಈ ಕಾಲಘಟ್ಟದಲ್ಲಿ ಮತ್ತು ಈ ಯುಗದಲ್ಲಿ ವಿಶ್ವವು ಒಂದು ಜಾಗತಿಕ ಗ್ರಾಮವಾಗಿ ಕುಗ್ಗಿಹೋಗಿದೆ. ಈ ಸ್ಥಿತಿಯನ್ನು ಹಿಂದೆ ಊಹಿಸಲು ಕೂಡ ಸಾಧ್ಯವಿರಲಿಲ್ಲ. ಇಂತಹ ಒಂದು ಕಾಲದಲ್ಲಿ ನಾವು ಮಾನವರೆಂಬ ನೆಲೆಯಲ್ಲಿ ನಮ್ಮ ಹೊಣೆಗಾರಿಕೆಗಳನ್ನು ಮನವರಿಕೆ ಮಾಡಿಕೊಂಡು ಮಾನವರ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುವ ಕಡೆಗೆ ಗಮನಹರಿಸಬೇಕು. ಹೀಗೆ ಮಾಡುವುದು ಲೋಕದಲ್ಲಿ ಶಾಂತಿ ಸ್ಥಾಪನೆಗೆ ಸಹಾಯಕವಾಗಿದೆ. ಈ ಪ್ರಯತ್ನವು ನೀತಿಪಾಲನೆ ಮತ್ತು ನ್ಯಾಯದಾನದ ಆವಶ್ಯಕತೆಗಳನ್ನು ಈಡೇರಿಸುವ ತಳಹದಿಯ ಮೇಲೆ ಸ್ಪಷ್ಟವಾಗಿ ಸ್ಥಾಪಿತವಾಗಿರಬೇಕು.

ಲೋಕದಲ್ಲಿ ಇಂದು ಭುಗಿಲೆದ್ದಿರುವ ಸಮಸ್ಯೆಗಳಲ್ಲಿ ಒಂದು, ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಧರ್ಮದ ಕಾರಣದಿಂದ ತಲೆದೋರಿದೆ. ಕೆಲವು ಮುಸ್ಲಿಮ್ ಗುಂಪುಗಳು ನ್ಯಾಯರಹಿತ ಆಕ್ರಮಣಗಳ ಮೂಲಕ ಮತ್ತು ಆತ್ಮಹತ್ಯಾ ಬಾಂಬರ್‌ಗಳ ಮೂಲಕ ಧರ್ಮದ ಹೆಸರಿನಲ್ಲಿ ಮುಸ್ಲಿಮೇತರರನ್ನು ಹಾನಿಗೊಳಪಡಿಸುತ್ತಾರೆ ಮತ್ತು ಕೊಲ್ಲುತ್ತಾರೆ. ಸೈನಿಕರು ಮತ್ತು ನಿಷ್ಕಳಂಕ ನಾಗರಿಕರು ಅವರ ಆಕ್ರಮಣಗಳಿಗೆ ಬಲಿಯಾಗುತ್ತಾರೆ. ಅವರು ನಿರಪರಾಧಿಗಳಾದ ಮುಸ್ಲಿಮರನ್ನೂ ಮಕ್ಕಳನ್ನೂ ಸಹ ತಮ್ಮ ಬಲಿಪಶುಗಳನ್ನಾಗಿ ಮಾಡುತ್ತಾರೆ. ಈ ಕ್ರೂರ ಕೃತ್ಯಗಳನ್ನು ಇಸ್ಲಾಮ್ ಧರ್ಮ ಸಂಪೂರ್ಣವಾಗಿ ನಿಷಿದ್ಧಗೊಳಿಸುತ್ತದೆ.

ಕೆಲವು ಮುಸ್ಲಿಮರ ಈ ಭೀಭತ್ಸ್ಯ ಕೃತ್ಯಗಳ ಕಾರಣದಿಂದ ಮುಸ್ಲಿಮೇತರ ದೇಶಗಳಲ್ಲಿ ಮುಸ್ಲಿಮರ ಬಗ್ಗೆ ಸಂಪೂರ್ಣವಾಗಿ ತಪ್ಪು ಅಭಿಪ್ರಾಯಗಳು ರೂಪಿಸಲ್ಪಟ್ಟಿವೆ. ಈ ಕಾರಣದಿಂದ ಅಂತಹ ದೇಶಗಳ ಸಮಾಜದ ಕೆಲವು ವಿಭಾಗಗಳು ಇಸ್ಲಾಮ್ ಧರ್ಮದ ವಿರುದ್ಧ ಬಹಿರಂಗವಾಗಿ ಅಭಿಪ್ರಾಯಗಳನ್ನು ಪ್ರಕಟಿಸುತ್ತಿವೆ. ಬೇರೆ ಕೆಲವರು ಬಹಿರಂಗವಾಗಿ ಇಸ್ಲಾಮನ್ನು ದೂಷಿಸದಿದ್ದರೂ ಅವರ ಹೃದಯಗಳಲ್ಲಿ ಇಸ್ಲಾಮಿನ ಕುರಿತು ಒಳ್ಳೆಯ ಅಭಿಪ್ರಾಯವಿರುವುದಿಲ್ಲ. ಈ ಕಾರಣದಿಂದ ಪಾಶ್ಚಿಮಾತ್ಯ ಮತ್ತು ಮುಸ್ಲಿಮೇತರ ದೇಶಗಳ ಜನರ ಹೃದಯಗಳಲ್ಲಿ ಮುಸ್ಲಿಮರ ಬಗ್ಗೆ ಅಪನಂಬಿಕೆಗಳು ತಲೆದೋರಿವೆ. ಕೆಲವು ಮುಸ್ಲಿಮ್ ಗುಂಪುಗಳ ಕೃತ್ಯಗಳ ಕಾರಣದಿಂದ ಮುಸ್ಲಿಮೇತರರ

ಪ್ರತಿಕ್ರಿಯೆಗಳು ಮುಸ್ಲಿಮರಿಗೆ ಹೆಚ್ಚು ಹೆಚ್ಚು ಹಾನಿಕರವಾಗಿ ಮುಂದುವರಿಯುತ್ತಿವೆಯೇ ಹೊರತು ಅದರಲ್ಲಿ ಉತ್ತಮ ಬದಲಾವಣೆ ಕಂಡುಬರುವುದಿಲ್ಲ.

ಮುಸ್ಲಿಮೇತರ ತಪ್ಪು ಪ್ರತಿಕ್ರಿಯೆಯ ಮೊದಲ ಉದಾಹರಣೆ ಹಝ್ರತ್ ಪೈಗಂಬರರ(ಸ) ಸ್ವಭಾವ ಗುಣದ ಬಗ್ಗೆ ಮತ್ತು ಮುಸ್ಲಿಮರ ಪವಿತ್ರ ಗ್ರಂಥವಾದ ಪವಿತ್ರ ಖುರ್‌ಆನಿನ ಬಗ್ಗೆ ಮಾಡಿದ ದೋಷಾರೋಪಣೆಗಳಾಗಿವೆ. ಈ ಬಗ್ಗೆ ಬ್ರಿಟಿಷ್ ರಾಜಕಾರಣಿಗಳು, ಅವರು ಯಾವ ಪಕ್ಷಕ್ಕೆ ಸೇರಿದವರಾದರೂ ಕೈಗೊಂಡ ನಿಲುವು ಬೇರೆ ಕೆಲವು ದೇಶಗಳ ರಾಜಕಾರಣಿಗಳ ಮತ್ತು ಬುದ್ಧಿಜೀವಿಗಳ ನಿಲುವಿನ ಹಾಗೆ ಆಗಿರಲಿಲ್ಲ. ಆದುದರಿಂದ ಆ ಬಗ್ಗೆ ನಾನು ನಿಮಗೆ ಕೃತಜ್ಞತೆ ಸೂಚಿಸುತ್ತೇನೆ. ಅನ್ಯರ ಭಾವನೆಗಳನ್ನು ನೋಯಿಸುವುದರಿಂದ ಸಿಗುವ ಪ್ರಯೋಜನವಾದರೂ ಏನು? ಅದರಿಂದ ಹಗೆತನ ಮತ್ತು ದ್ವೇಷವು ಹೆಚ್ಚಾಗುತ್ತದೆಯಲ್ಲದೆ ಬೇರೆ ಯಾವ ಪ್ರಯೋಜನವೂ ಇಲ್ಲ. ಈ ದ್ವೇಷಭಾವನೆಯು ಕೆಲವು ಉಗ್ರವಾದಿ ಮುಸ್ಲಿಮರನ್ನು ಅನಿಸ್ಲಾಮಿಕ ಕೃತ್ಯಗಳನ್ನು ಮಾಡಲು ಪ್ರೇರೇಪಣೆ ನೀಡುತ್ತದೆ. ಅದರ ಫಲಸ್ವರೂಪವಾಗಿ ಹಲವು ಮುಸ್ಲಿಮೇತರರು ಇಸ್ಲಾಮ್ ಬಗ್ಗೆ ತಮ್ಮ ವಿರೋಧವನ್ನು ಇನ್ನಷ್ಟು ಹೆಚ್ಚಿಗೆ ಸೂಚಿಸಲು ಸಂದರ್ಭ ಸಿಗುತ್ತದೆ.

ಹೀಗಿದ್ದರೂ ಹಝ್ರತ್ ಪೈಗಂಬರರನ್ನು(ಸ) ಹೃತ್ಪೂರ್ವಕವಾಗಿ ಪ್ರೀತಿಸುವವರಾದ, ಆದರೆ ಉಗ್ರವಾದಿಗಳಲ್ಲದ ಮುಸ್ಲಿಮರು ಇಂತಹ ದೋಷಾರೋಪಣೆಗಳಿಂದ ತೀವ್ರವಾಗಿ ನೋವನ್ನು ಅನುಭವಿಸುತ್ತಿದ್ದಾರೆ. ಇವರಲ್ಲಿ ಅಹ್ಮದೀ ಮುಸ್ಲಿಮರು ಮುಂಚೂಣಿಯಲ್ಲಿದ್ದಾರೆ. ನಮ್ಮ ಏಕಮಾತ್ರ ಮತ್ತು ಮುಖ್ಯ ಉದ್ದೇಶ ಲಕ್ಷ್ಯ ಹಝ್ರತ್ ಪೈಗಂಬರರ(ಸ) ಪರಿಪೂರ್ಣ ಸ್ವಭಾವಗುಣವನ್ನು ಮತ್ತು ಅದರೊಂದಿಗೆ ಇಸ್ಲಾಮಿನ ಸುಂದರ ಉಪದೇಶಗಳನ್ನು ಲೋಕದ ಮುಂದಿರಿಸುವುದಾಗಿದೆ.

ಎಲ್ಲ ಪ್ರವಾದಿಗಳನ್ನು ಗೌರವಿಸಿ ಆದರಭಾವದಿಂದ ಕಾಣುವ ಮತ್ತು ಅವರೆಲ್ಲರೂ ದೇವನ ಸಂದೇಶವಾಹಕರೆಂದು ನಂಬುವ ನಾವು ಅವರ ಪೈಕಿ ಯಾರೊಬ್ಬರ ವಿರುದ್ಧವೂ ಅಪಮಾನಕರವಾಗಿ ಆಕ್ಷೇಪಿಸಲಾರೆವು. ಆದರೆ ನಮ್ಮ ಪ್ರಿಯ ಪ್ರವಾದಿಯ ಬಗ್ಗೆ ಆಧಾರರಹಿತ, ಸುಳ್ಳು ದೋಷಾರೋಪಗಳನ್ನು ಆಲಿಸುವಾಗ ನಾವು ಬಹಳ ಹೆಚ್ಚು ದುಃಖಿತರಾಗುತ್ತೇವೆ.

ಲೋಕವು ವಿವಿಧ ಬಣಗಳಾಗಿ ವಿಭಾಗಿಸಲ್ಪಟ್ಟು ತೀವ್ರವಾದಗಳು ಹೆಚ್ಚುಗೊಳ್ಳುತ್ತಿರುವ ಹಾಗೂ ಸಾಂಪತ್ತಿಕ ಮತ್ತು ಆರ್ಥಿಕ ಸ್ಥಿತಿಗಳು ಹದೆಗೆಡುತ್ತಿರುವ ಇಂದಿನ ಕಾಲದಲ್ಲಿ ಎಲ್ಲ ವಿಧ ದ್ವೇಷ, ಹಗೆತನವನ್ನು ಕೊನೆಗೊಳಿಸಿ ಶಾಂತಿಸ್ಥಾಪನೆಗೆ ತೊಡಗಬೇಕಾದುದು ಅತ್ಯಗತ್ಯ. ಎಲ್ಲ ಮನೋಭಾವನೆಗಳನ್ನು ಗೌರವಿಸಿ ಪರಸ್ಪರ ಆದರಿಸುವುದರಿಂದ ಮಾತ್ರ ಇದು ಸಾಧ್ಯವಾಗುವುದು. ಯಥೋಚಿತವಾಗಿಯೂ ಪ್ರಾಮಾಣಿಕವಾಗಿಯೂ ಹೀಗೆ ಮಾಡದಿದ್ದರೆ ಅನಿಯಂತ್ರಿತ ವಿಷಮ ಪರಿಸ್ಥಿತಿಗಳು ಉಂಟಾಗುವುವು. ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಪಾಶ್ಚಾತ್ಯ ದೇಶಗಳು ಔದಾರ್ಯಪೂರ್ವಕವಾಗಿ ಬಡ ಅಥವಾ ಅಭಿವೃದ್ಧಿಶೀಲ ದೇಶಗಳ ಜನರಿಗೆ (ಅವರ ಪೈಕಿ ಮುಸ್ಲಿಮರು ಸಹ ಸೇರುತ್ತಾರೆ) ಆಶ್ರಯ ಪಡೆಯಲು ಅನುಮತಿಸಿರುವುದು

ಮೆಚ್ಚಿಕೆಯ ಕಾರ್ಯವಾಗಿದೆ.

ಈ ಜನರ ಮನೋಭಾವನೆಗಳನ್ನೂ ಧಾರ್ಮಿಕ ಅನುಷ್ಠಾನಗಳನ್ನೂ ಗೌರವಿಸಬೇಕೆಂದು ನಿಜವಾದ ನ್ಯಾಯವು ಅಗತ್ಯಪಡಿಸುತ್ತದೆ. ಈ ರೀತಿಯಿಂದ ಜನರಿಗೆ ಮನಃಶಾಂತಿ ಸಿದ್ಧಿಸುವುದು. ಒಬ್ಬ ವ್ಯಕ್ತಿಯ ಮನಃಶಾಂತಿ ಕದಡಿದರೆ ಸಮಾಜದ ಮನಃಶಾಂತಿ ಬಾಧಿಸಲ್ಪಡುತ್ತದೆ ಎಂಬುದನ್ನು ನಾವು ನೆನಪಿಡಬೇಕು.

ನಾನು ಇದರ ಮೊದಲು ಹೇಳಿದ ಹಾಗೆ ಬ್ರಿಟಿಷ್ ರಾಜಕಾರಣಿಗಳು ಮತ್ತು ಪಾರ್ಲಿಮೆಂಟ್ ಸದಸ್ಯರು ನ್ಯಾಯಬದ್ಧವಾಗಿ ವರ್ತಿಸಿ ಅನ್ಯರ ಹಾಗೆ ನಿಂದಿಸದುದಕ್ಕೆ ನಾನು ನಿಮಗೆ ಕೃತಜ್ಞನಾಗಿದ್ದೇನೆ. ಇದು ಪವಿತ್ರ ಖುರ್‌ಆನ್ ನಮಗೆ ನೀಡಿದ ಉಪದೇಶಗಳಿಗೆ ಅನುಸಾರವಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"**ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ**." (ಅಧ್ಯಾಯ 2 ವಚನ 257)

ಈ ಆಜ್ಞೆಯು ಇಸ್ಲಾಮನ್ನು ಖಡ್ಗಬಲದಿಂದ ಹಬ್ಬಿಸಲಾಯಿತೆಂಬ ಆರೋಪವನ್ನು ನಿರಾಕರಿಸುತ್ತದೆ. ಮಾತ್ರವಲ್ಲ, ವಿಶ್ವಾಸವೆಂಬುದು ಮನುಷ್ಯ ಮತ್ತು ದೇವನ ಮಧ್ಯೆ ಇರುವ ಒಂದು ವಿಷಯವಾಗಿದೆ, ಆದ್ದರಿಂದ ಅದರಲ್ಲಿ ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡಬಾರದೆಂದು ಮುಸ್ಲಿಮರಿಗೆ ಉಪದೇಶಿಸುತ್ತದೆ.

ಪ್ರತಿಯೊಬ್ಬನು ತನ್ನ ನಂಬಿಕೆಗನುಸಾರವಾಗಿ ಜೀವಿಸಲು ಮತ್ತು ತನ್ನ ಧಾರ್ಮಿಕ ಅನುಷ್ಠಾನ ಕ್ರಿಯೆಗಳನ್ನು ಮಾಡಲು ಇಸ್ಲಾಮ್ ಅನುಮತಿಸುತ್ತದೆ. ಆದರೆ ಧರ್ಮದ ಹೆಸರಿನಲ್ಲಿ ಮಾಡುವ ಯಾವುದಾದರೂ ಅನುಷ್ಠಾನವು ಅನ್ಯರಿಗೆ ಹಾನಿಯನ್ನುಂಟುಮಾಡುವುದೂ ದೇಶದ ಕಾನೂನುಕಾಯಿದೆಗಳಿಗೆ ವಿರುದ್ಧವೂ ಆಗಿದ್ದರೆ ಸರಕಾರದ ನಿಯಮ ಪಾಲನೆಯ ಅಧಿಕಾರಿಗಳು ಅದರಲ್ಲಿ ಹಸ್ತಕ್ಷೇಪಮಾಡಿ ತಡೆಯಬೇಕು. ಒಂದು ಕ್ರೂರ ಕೃತ್ಯವು ಯಾವುದಾದರೂ ಧರ್ಮದವರಲ್ಲಿ ಆಚರಿಸಲ್ಪಡುತ್ತಿದ್ದರೆ ಅದು ಯಾವುದೇ ದೈವಿಕ ಪ್ರವಾದಿಯ ಉಪದೇಶದ ಭಾಗವಾಗಿರಲಾರದು.

ಇದು ದೇಶೀಯವಾಗಿಯೂ ಜಾಗತಿಕವಾಗಿಯೂ ಶಾಂತಿಯನ್ನು ಸ್ಥಾಪಿಸಬಹುದಾದ ಮೂಲಭೂತ ಸಿದ್ಧಾಂತವಾಗಿದೆ.

ಇಸ್ಲಾಂ ಹೀಗೆಯೂ ಉಪದೇಶಿಸುತ್ತದೆ:

ನೀವು ನಿಮ್ಮ ಧರ್ಮವನ್ನು ಬದಲಾಯಿಸಿದಾಗ ನೀವಿದ್ದ ಸಮಾಜ ಅಥವಾ ಅದರ ಗುಂಪುಗಳು ಅಥವಾ ಸರಕಾರ ಹಸ್ತಕ್ಷೇಪ ನಡೆಸಿ ನಿಮ್ಮ ಧಾರ್ಮಿಕ ಆಚರಣೆಗಳಿಗೆ ಭಂಗವನ್ನುಂಟುಮಾಡುವುದಾದರೆ ಮತ್ತು ಅನಂತರ ಪರಿಸ್ಥಿತಿಗಳು ಬದಲಾವಣೆಹೊಂದಿ ನಿಮಗೆ ಅನುಕೂಲವಾದ ಸ್ಥಿತಿ ಉಂಟಾದರೆ ನೀವು ನಿಮ್ಮನ್ನು ಹಿಂಸಿಸಿದವರ ವಿರುದ್ಧ ಯಾವುದೇ ದ್ವೇಷವನ್ನು ಹೊಂದಬಾರದು. ನೀವು ಸೇಡು ತೀರಿಸಿಕೊಳ್ಳುವ ಬಗ್ಗೆ ಯೋಚಿಸಬಾರದು. ನೀವು ನ್ಯಾಯ ಮತ್ತು ಸಮಾನತೆಯನ್ನು ಸ್ಥಾಪಿಸಬೇಕು. ಪವಿತ್ರ ಖುರ್‌ಆನ್ ಈ ಬಗ್ಗೆ ಹೀಗೆ ಹೇಳಿದೆ:

"**ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರ ಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ,**

**ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. ಸದಾ ನ್ಯಾಯಯುತವಾಗಿ ನೀವು ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾಗಿದೆ. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ."** (5 : 9)

ಇದು ಸಮಾಜದಲ್ಲಿ ಶಾಂತಿ ಸ್ಥಾಪಿಸಲು ಸಹಾಯಕವಾದ ಉಪದೇಶವಾಗಿದೆ. ಇಲ್ಲಿ ನಿಮ್ಮ ಶತ್ರುಗಳೊಂದಿಗೆ ವರ್ತಿಸುವಾಗ ಕೂಡ ನ್ಯಾಯಬದ್ಧತೆಯನ್ನು ಕೈಬಿಡಬಾರದೆಂದು ಉಪದೇಶಿಸಲಾಗಿದೆ.

ಇಸ್ಲಾಮಿನ ಈ ಉಪದೇಶವನ್ನು ಮುಸ್ಲಿಮರು ಅನುಸರಿಸುತ್ತಿದ್ದರೆಂದೂ ನ್ಯಾಯಬದ್ಧವಾಗಿ ವರ್ತಿಸುತ್ತಿದ್ದರೆಂದೂ ಇಸ್ಲಾಮಿನ ಆರಂಭಕಾಲದ ಚರಿತ್ರೆಯು ಸಾಕ್ಷ್ಯ ನೀಡುತ್ತದೆ. ನಾನು ಈ ಬಗ್ಗೆ ಹೆಚ್ಚು ಉದಾಹರಣೆಗಳನ್ನು ಈಗ ನೀಡಲಾರೆನು. ಮಕ್ಕವನ್ನು ಜಯಿಸಿದ ನಂತರ ಹಝ್ರತ್ ಪೈಗಂಬರರು(ಸ) ತನ್ನನ್ನೂ ತನ್ನ ಅನುಯಾಯಿಗಳನ್ನೂ ದೌರ್ಜನ್ಯಗಳಿಗೀಡುಮಾಡಿದವರ ವಿರುದ್ಧ ಯಾವುದೇ ಸೇಡು ತೀರಿಸಲಿಲ್ಲ. ಅವರನ್ನೆಲ್ಲ ಕ್ಷಮಿಸಿ ಅವರು ತಮ್ಮ ಧರ್ಮದಲ್ಲಿ ಮುಂದುವರಿಯಲು ಹಝ್ರತ್ ಪೈಗಂಬರರು(ಸ) ಅನುಮತಿ ನೀಡಿದರೆಂದು ಚರಿತ್ರೆ ಸಾಕ್ಷ್ಯ ನೀಡಿದೆ. ಈಗ ಸಹ ಧಾರ್ಮಿಕ ಉಗ್ರಗಾಮಿಗಳ ವಿರುದ್ಧ ಮಾಡುವ ಯುದ್ಧಗಳಲ್ಲೂ ಇತರ ಯುದ್ಧಗಳಲ್ಲೂ ಶತ್ರುಗಳ ವಿರುದ್ಧ ನ್ಯಾಯಬದ್ಧವಾಗಿ ವರ್ತಿಸಿದರೆ ಮಾತ್ರ ಶಾಂತಿ ಸ್ಥಾಪಿಸಲ್ಪಡಲು ಸಾಧ್ಯವಾಗುವುದು. ಅಂತಹ ಶಾಂತಿಯು ದೀರ್ಘಕಾಲ ಬಾಳುವುದು.

ಕಳೆದ ಶತಮಾನದಲ್ಲಿ ಎರಡು ಜಾಗತಿಕ ಮಹಾಯುದ್ಧಗಳು ನಡೆದವು. ಈ ಯುದ್ಧಗಳಿಗೆ ಕಾರಣಗಳು ಯಾವುವು ಎಂದು ಪರಿಶೀಲಿಸಲು ನಾವು ತಳಸ್ಪರ್ಶಿಯಾಗಿ ನೋಡಿದರೆ ಒಂದು ಮೂಲ ಕಾರಣವು ಸ್ಪಷ್ಟವಾಗಿ ಗೋಚರಿಸುತ್ತದೆ. ಅದೇನೆಂದರೆ, ಮೊತ್ತಮೊದಲಾಗಿ ನ್ಯಾಯಬದ್ಧವಾಗಿ ಯಾರೂ ನಡೆದುಕೊಳ್ಳಲಿಲ್ಲ. ಅದರ ಪ್ರತಿಕ್ರಿಯೆಯಾಗಿ, ನಂದಿಸಲಾಗಿದೆ ಎಂದು ಭಾವಿಸಲಾದ ಅಗ್ನಿಕುಂಡದಿಂದ ಕೆಂಡಗಳು ಮೆಲ್ಲಮೆಲ್ಲನೆ ಉರಿಯತೊಡಗಿದುವು. ಅದರ ಜ್ವಾಲೆಗಳು ಲೋಕದಾದ್ಯಂತ ಎರಡನೆಯ ಸಲವೂ ಆವರಿಸಿತು.

ಇಂದು ಅಶಾಂತ ಪರಿಸ್ಥಿತಿಯು ವರ್ಧಿಸುತ್ತಾ ಇದೆ. ಯುದ್ಧಗಳು ಮತ್ತು ಶಾಂತಿಸ್ಥಾಪನೆಯ ಪ್ರಯತ್ನಗಳು ಇನ್ನೊಂದು ಜಾಗತಿಕ ಮಹಾಯುದ್ಧಕ್ಕೆ ನಾಂದಿಯಾಗುತ್ತಿವೆ. ಇದಲ್ಲದೆ ಇಂದಿನ ಆರ್ಥಿಕ ಮುಗ್ಗಟ್ಟು ಮತ್ತು ಸಾಮಾಜಿಕ ಸಮಸ್ಯೆಗಳು ಈ ಪರಿಸ್ಥಿತಿಯನ್ನು ಇನ್ನಷ್ಟು ಕೆಡಿಸಲು ಸಹಾಯಕವಾಗುವುವು.

ಪವಿತ್ರ ಖುರ್‌ಆನ್ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಕೆಲವು ಅಮೂಲ್ಯ ತತ್ವಗಳನ್ನು ಉಪದೇಶಿಸಿದೆ. ದುರಾಶೆಯು ದ್ವೇಷವನ್ನು ವರ್ಧಿಸುತ್ತದೆ ಎಂಬುದು ಒಂದು ಸತ್ಯವಾಗಿದೆ. ಅದು ಕೆಲವು ಸಾರಿ ಅನ್ಯ ದೇಶಗಳ ಭೂಮಿಯ ಸ್ವಾಧೀನಪಡಿಸುವಿಕೆ, ಅನ್ಯರ ನೈಸರ್ಗಿಕ ಸಂಪತ್ತಿನ ಕೊಳ್ಳೆಹೊಡೆಯುವಿಕೆ ಮತ್ತು ಅನ್ಯರ ಮೇಲೆ ತಮ್ಮ ಶ್ರೇಷ್ಠತೆಯನ್ನು ಸ್ಥಾಪಿಸಲು ಮಾಡುವ ಆಕ್ರಮಣದ ಮೂಲಕ ಪ್ರಕಟವಾಗುತ್ತದೆ. ಇದು ಕ್ರೂರ ಹಿಂಸಾಚಾರಗಳಿಗೆ ಕಾರಣವಾಗುತ್ತದೆ. ನಿಷ್ಕರುಣ ನಿರಂಕುಶಾಧಿಪತಿಗಳು ಜನರ

ಹಕ್ಕುಗಳನ್ನು ಅಪಹರಿಸಿ ತಮ್ಮ ಶ್ರೇಷ್ಠತೆಯನ್ನು ತಮ್ಮ ಸ್ವಾರ್ಥದ ಗಳಿಕೆಯ ಮಾರ್ಗದಲ್ಲಿ ಪ್ರಕಟಿಸುತ್ತಾ ಕ್ರೂರ ಹಿಂಸಾಚಾರಗಳನ್ನು ನಡೆಸುತ್ತಾರೆ. ಅದೇ ರೀತಿ ಅನ್ಯ ದೇಶವನ್ನು ಆಕ್ರಮಣ ಮಾಡುವ ಶಕ್ತಿಗಳು ಕ್ರೂರ ಹಿಂಸಾಚಾರಗಳನ್ನು ನಡೆಸುತ್ತವೆ. ಕೆಲವು ಸಾರಿ ಹಿಂಸಾಚಾರಕ್ಕೆ ಗುರಿಯಾದವರ ಆರ್ತನಾದಗಳು ಹೊರ ಲೋಕಕ್ಕೆ ಕೇಳಿಸುತ್ತವೆ.

ಹಝ್ರತ್ ಪೈಗಂಬರರು(ಸ) ನಮಗೊಂದು ಅಮೂಲ್ಯ ತತ್ವವನ್ನು ಕಲಿಸಿಕೊಟ್ಟಿದ್ದಾರೆ. ದೌರ್ಜನ್ಯಗಾರನಿಗೂ ದೌರ್ಜನ್ಯಕ್ಕೆ ಗುರಿಯಾದವನಿಗೂ ನೆರವು ನೀಡಬೇಕೆಂದು ಅವರು ಉಪದೇಶಿಸಿದ್ದಾರೆ.

ಹಝ್ರತ್ ಪೈಗಂಬರರ(ಸ) ಶಿಷ್ಯರು ವಿಚಾರಿಸಿದರು: "ದೌರ್ಜನ್ಯಕ್ಕೆ ಗುರಿಯಾದವನಿಗೆ ನೆರವು ನೀಡುವ ವಿಷಯ ನಮಗೆ ಅರ್ಥವಾಗುತ್ತದೆ. ಆದರೆ ದೌರ್ಜನ್ಯಗಾರನಿಗೆ ನೆರವನ್ನು ನೀಡುವುದು ಹೇಗೆ?" ಪೈಗಂಬರರು(ಸ) ಹೇಳಿದರು: "ದೌರ್ಜನ್ಯಗಾರನ ಕೈಗಳನ್ನು ದೌರ್ಜನ್ಯದಿಂದ ತಡೆಯುವ ಮೂಲಕ ನೀವು ಅವನಿಗೆ ನೆರವು ನೀಡಬಹುದು. ಹೀಗೆ ಅವನನ್ನು ದೇವನ ಶಿಕ್ಷೆಯಿಂದ ರಕ್ಷಿಸಬಹುದು. ಆದುದರಿಂದ ಅವನ ಮೇಲೆ ದಯೆದೋರಿ ರಕ್ಷಿಸಲು ಪ್ರಯತ್ನಿಸಬೇಕು."

ಈ ತತ್ವವನ್ನು ಸಮಾಜದ ಅತ್ಯಂತ ಕೆಳ ಶ್ರೇಣಿಯಿಂದ ಪ್ರಾರಂಭಿಸಿ ಜಾಗತಿಕ ಮಟ್ಟದಲ್ಲೂ ವಿಸ್ತರಿಸಬಹುದಾಗಿದೆ.

ಇದಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

> "**ಸತ್ಯವಿಶ್ವಾಸಿಗಳ ಎರಡು ಗುಂಪುಗಳು ಪರಸ್ಪರ ಹೋರಾಟಕ್ಕಿಳಿದರೆ, ನೀವು ಅವರ ಮಧ್ಯೆ ಸಂಧಾನವೇರ್ಪಡಿಸಿರಿ. ಆ ಬಳಿಕ ಅವರಲ್ಲಿ ಒಂದು ಗುಂಪು ಇನ್ನೊಂದು ಗುಂಪಿನ ಮೇಲೆ ಆಕ್ರಮಣವೆಸಗಿದರೆ, ಅಲ್ಲಾಹನ ಆಜ್ಞೆಯ ಕಡೆಗೆ ಅವರು ಮರಳುವ ತನಕ ಅವರ ವಿರುದ್ಧ ಹೋರಾಡಿರಿ. ಅನಂತರ, ಆ ಗುಂಪು ಮರಳಿದರೆ ಅವರ ಮಧ್ಯೆ ನ್ಯಾಯಯುತವಾಗಿ ಸಂಧಾನ ಮಾಡಿಸಿರಿ ಹಾಗೂ ನ್ಯಾಯೋಚಿತವಾಗಿ ವರ್ತಿಸಿರಿ. ನಿಶ್ಚಯವಾಗಿಯೂ ಅಲ್ಲಾಹನು ನ್ಯಾಯವಂತರನ್ನು ಪ್ರೀತಿಸುತ್ತಾನೆ.**" (49:10)

ಇದು ಮುಸ್ಲಿಮರಿಗೆ ನೀಡಲಾದ ಉಪದೇಶವಾಗಿದ್ದರೂ ಇದರ ತತ್ವವನ್ನು ಪಾಲಿಸುವುದಾದರೆ ಜಾಗತಿಕ ಶಾಂತಿಗೆ ಅಸ್ತಿಭಾರ ಹಾಕಬಹುದಾಗಿದೆ.

ಶಾಂತಿಸ್ಥಾಪನೆಗೆ ಅತ್ಯಾವಶ್ಯಕವಾದುದು ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸುವುದಾಗಿದೆ ಎಂದು ನಾನು ನನ್ನ ಭಾಷಣದ ಪ್ರಾರಂಭದಲ್ಲಿಯೇ ವಿವರಿಸಿದ್ದೇನೆ. ನ್ಯಾಯಬದ್ಧವಾಗಿ ಶಾಂತಿಗೆ ಮಾಡಿದ ಪ್ರಯತ್ನಗಳು ನಿಷ್ಫಲವಾದರೆ ಎಲ್ಲರೂ ಒಗ್ಗೂಡಿ ಅತಿಕ್ರಮಣಗಾರನ ವಿರುದ್ಧ ಹೋರಾಡಬೇಕು ಮತ್ತು ಅವನು ಶಾಂತಿ ಸಂಧಾನಕ್ಕೆ ಸಿದ್ಧನಾಗುವ ತನಕ ಹೋರಾಟವನ್ನು ಮುಂದುವರಿಸಬೇಕು. ಅತಿಕ್ರಮಣಗಾರನು ಶಾಂತಿ ಸಂಧಾನ ನಡೆಸಲು ಸಿದ್ಧನಾದರೆ ಅವನ ವಿರುದ್ಧ ಸೇಡು ತೀರಿಸಬಾರದು. ಅವನ ಮೇಲೆ ಪ್ರತಿಬಂಧಗಳನ್ನು ಹೊರಿಸಬಾರದು. ಅತಿಕ್ರಮಣಗಾರನ ಮೇಲೆ ದೃಷ್ಟಿಯಿರಿಸಬೇಕು. ಆದರೆ ಅದರೊಂದಿಗೆ, ಅವನ ಜೊತೆ ಸಂಬಂಧ ಸುಧಾರಣೆಗೆ ಪ್ರಯತ್ನಿಸುತ್ತಾ ಇರಬೇಕು.

ಇಂದು ವಿಶ್ವದ ಕೆಲವು ದೇಶಗಳಲ್ಲಿರುವ ಅಶಾಂತಿಯನ್ನು ಕೊನೆಗೊಳಿಸಲು – ಕೆಲವು ಮುಸ್ಲಿಮ್ ದೇಶಗಳು ದುರದೃಷ್ಟಕರವಾಗಿ ಈ ಬಗೆಯ ಅಶಾಂತಿಯನ್ನು ಹೊಂದಿದ ಮುಖ್ಯ ದೇಶಗಳಾಗಿವೆ – ಈ ತತ್ವವನ್ನು ವೀಟೋ ಅಧಿಕಾರವನ್ನು ಹೊಂದಿದ ಪ್ರಮುಖ ದೇಶಗಳು ವಿಶ್ಲೇಷಿಸಬೇಕು ಮತ್ತು ನ್ಯಾಯೋಚಿತವಾಗಿ ದೇಶಗಳು ವರ್ತಿಸಿವೆಯೋ ಎಂಬುದನ್ನು ಪರಿಶೀಲಿಸಬೇಕು. ಸಹಾಯವು ಆವಶ್ಯಕವಾದಾಗ ಶಕ್ತಿಯುತ ದೇಶಗಳ ಕಡೆಗೆ ಸಹಾಯಕ್ಕಾಗಿ ಕೈಗಳನ್ನು ಚಾಚಲಾಗುತ್ತದೆ.

ನಾನು ಇದರ ಮೊದಲು ಹೇಳಿದಂತೆ, ಬ್ರಿಟಿಷ್ ಸರಕಾರದ ಚರಿತ್ರೆ ಯಾವಾಗಲೂ ನ್ಯಾಯವನ್ನು ಎತ್ತಿಹಿಡಿದ ವಾಸ್ತವಿಕಾಂಶವನ್ನು ಒಳಗೊಂಡಿದೆ ಮತ್ತು ನಾವು ಅದಕ್ಕೆ ಸಾಕ್ಷಿಗಳಾಗಿದ್ದೇವೆ. ಇದು ನಾನು ವಿವರಿಸಿದ ಕೆಲವು ವಿಷಯಗಳಿಗೆ ನಿಮ್ಮ ಗಮನ ಹರಿಸಲು ನನ್ನನ್ನು ಪ್ರೋತ್ಸಾಹಿಸಿದೆ.

ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ನಮಗೆ ಕಲಿಸಲಾದ ಇನ್ನೊಂದು ತತ್ವ, ಅನ್ಯರ ಸಂಪತ್ತನ್ನು ಅಸೂಯೆಯಿಂದ ನೋಡಬಾರದು ಎಂದಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**"ಅವರ ಪೈಕಿ ನಾವು ಇಹಲೋಕ ಜೀವನದ ವೈಭವಗಳನ್ನು ನೀಡಿ ಸುಖಸೌಕರ್ಯಗಳನ್ನು ಅನುಭವಿಸುವಂತೆ ಮಾಡಿದುದನ್ನು ನೀನು ಕಣ್ಣೆತ್ತಿ ನೋಡಬೇಡ. ಆ ಮೂಲಕ ಅವರನ್ನು ಪರೀಕ್ಷಿಸಲಿಕ್ಕೋಸ್ಕರ (ನಾವು ಅದನ್ನು ನೀಡಿದ್ದೇವೆ**). (20:132)

ಅನ್ಯರ ಸಂಪತ್ತಿನ ಬಗ್ಗೆ ದುರಾಶೆ ಮತ್ತು ಅದರ ಬಗ್ಗೆ ಅಸೂಯೆ ಲೋಕದಲ್ಲಿ ಅಶಾಂತಿ ವರ್ಧಿಸಲು ಕಾರಣವಾಗಿದೆ. ವ್ಯಕ್ತಿಗಳಿಗೆ ಸಂಬಂಧಿಸಿ ಹೇಳುವುದಾದರೆ, ಅನ್ಯರಿಗೆ ಸಮಾನರಾಗಿ ಜೀವಿಸುವ ಹಂಬಲವು ತೃಪ್ತಿಗೊಳ್ಳದ ದುರಾಶೆಯನ್ನು ಉಂಟುಮಾಡಿ ಸಾಮಾಜಿಕ ಶಾಂತಿಯನ್ನು ಕೆಡಿಸಿದೆ. ದೇಶೀಯ ನೆಲೆಯಲ್ಲಿ ಲಾಲಸೆಭರಿತ ಸ್ಪರ್ಧೆಯು ಜಾಗತಿಕ ಶಾಂತಿಯ ನಾಶಕ್ಕೆ ಹೇತುವಾಗಿದೆ. ಅನ್ಯರ ಸಂಪತ್ತಿನ ಬಗ್ಗೆ ಆಶೆಯು ಅಸೂಯೆಯನ್ನೂ ದುರಾಶೆಯನ್ನೂ ವರ್ಧಿಸುವುದೆಂದೂ ಅದು ನಷ್ಟಕ್ಕೆ ಮೂಲ ಕಾರಣವಾಗುವುದೆಂದೂ ಚರಿತ್ರೆಯು ಸಾಬೀತುಗೊಳಿಸುತ್ತದೆ. ಪ್ರತಿಯೊಬ್ಬ ವಿವೇಕಶಾಲಿ ಇದನ್ನು ಮನವರಿಕೆ ಮಾಡಿಕೊಳ್ಳಬಲ್ಲನು.

ಇದೇ ಕಾರಣದಿಂದ ಸರ್ವಶಕ್ತನಾದ ದೇವನು ಹೇಳಿರುವನೇನೆಂದರೆ, ನೀವು ನಿಮ್ಮ ಸ್ವಂತ ಸಂಪತ್ತನ್ನು ಸಂರಕ್ಷಿಸಬೇಕು ಮತ್ತು ಅದರಿಂದ ಲಾಭ ಪಡೆಯಲು ಪ್ರಯತ್ನಿಸಬೇಕು.

ಅನ್ಯದೇಶದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಮಾಡುವ ಪ್ರಯತ್ನವು ಆ ಭೂಮಿಯ ನೈಸರ್ಗಿಕ ಸಂಪತ್ತಿನಿಂದ ಲಾಭಪಡೆದುಕೊಳ್ಳಲಿಕ್ಕಾಗಿದೆ. ವಿವಿಧ ದೇಶಗಳು ಗುಂಪುಗೂಡುವುದು ಮತ್ತು ಪವರ್ ಬ್ಲಾಕ್‌ಗಳನ್ನು (ಶಕ್ತರಾಷ್ಟ್ರಗಳ ಒಕ್ಕೂಟವನ್ನು) ಸ್ಥಾಪಿಸುವುದು ಬೇರೆ ಕೆಲವು ದೇಶಗಳ ನೈಸರ್ಗಿಕ ಸಂಪತ್ತನ್ನು ಸಂಪಾದಿಸಲಿಕ್ಕಾಗಿದೆ. ಕೆಲವು ಶಕ್ತಿಶಾಲಿ ದೇಶಗಳಿಗೆ ಸಲಹೆಗಾರರಾಗಿ ಕೆಲಸ ಮಾಡಿದ್ದ ಅನೇಕ ಲೇಖಕರು ಅನ್ಯ ದೇಶಗಳ ಸಂಪತ್ತಿನ ನಿಯಂತ್ರಣ ಪಡೆಯಲು ಶಕ್ತಿಶಾಲಿ ದೇಶಗಳು ಮಾಡುವ

ಪ್ರಯತ್ನಗಳ ಬಗ್ಗೆ ಸವಿಸ್ತಾರವಾಗಿ ವಿವರಿಸುವ ಗ್ರಂಥಗಳನ್ನು ಬರೆದಿದ್ದಾರೆ. ಈ ಲೇಖಕರು ಎಷ್ಟರಮಟ್ಟಿಗೆ ಸತ್ಯಾಂಶಗಳನ್ನು ಪ್ರಕಟಿಸಿರುವರು ಎಂಬುದರ ಬಗ್ಗೆ ಲೇಖಕರಿಗೆ ಮಾತ್ರ ಗೊತ್ತು. ದೇವನು ಚೆನ್ನಾಗಿ ಈ ಬಗ್ಗೆ ತಿಳಿದಿರುವನು. ಆದರೆ ಅವರ ಈ ಪುಸ್ತಕಗಳನ್ನು ಓದುವಾಗ ಬಡದೇಶಗಳ ನಿಷ್ಠರಾದ ಪ್ರಜೆಗಳ ಹೃದಯದಲ್ಲಿ ತೀವ್ರ ಸಂತಾಪ ಉಂಟಾಗುತ್ತದೆ. ಭಯೋತ್ಪಾದನೆಯ ವರ್ಧನೆ ಮತ್ತು ಸಾಮೂಹಿಕ ವಿನಾಶದ ಆಯುಧಗಳ ಸ್ಪರ್ಧೆಗೆ ಈ ಪರಿಸ್ಥಿತಿಯು ಪ್ರಧಾನ ಕಾರಣವಾಗಿದೆ.

ಇಂದು ಲೋಕವು ತನ್ನನ್ನು ಹಿಂದಿನ ಕಾಲಕ್ಕಿಂತ ಹೆಚ್ಚು ಬುದ್ಧಿಶಾಲಿ, ಪ್ರಜ್ಞೆಯುಳ್ಳ ಮತ್ತು ವಿದ್ಯಾಭ್ಯಾಸ ಗಳಿಸಿದುದಾಗಿ ಭಾವಿಸಿಕೊಳ್ಳುತ್ತದೆ. ಬಡದೇಶಗಳಲ್ಲಿ ಸಹ ವಿದ್ಯಾಭ್ಯಾಸದ ವಿವಿಧ ಕ್ಷೇತ್ರಗಳಲ್ಲಿ ಪ್ರವೀಣರಾಗಿರುವ ಬುದ್ಧಿಶಾಲಿಗಳಿದ್ದಾರೆ. ಅತ್ಯಂತ ಹೆಚ್ಚು ಬುದ್ಧಿಶಾಲಿಗಳು ವಿಶ್ವದ ವಿವಿಧ ಸಂಶೋಧನಾಲಯಗಳಲ್ಲಿ ಒಗ್ಗೂಡಿ ಕೆಲಸ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಾವು ಹೀಗೆ ಊಹಿಸಬಹುದು: ಇಂತಹ ಬುದ್ಧಿಶಾಲಿ ಜನರು ಒಟ್ಟಿಗೆ ಸೇರಿ ತಪ್ಪು ರೀತಿಯಲ್ಲಿ ಚಿಂತಿಸುವುದನ್ನು ಕೊನೆಗೊಳಿಸಲು ಮತ್ತು ಹಿಂದೆ ನಡೆದ ತಪ್ಪುಗಳ ಮೂಲಕ ಉಂಟಾದ ಹಗೆತನ ಮತ್ತು ಅದರಿಂದ ಸಂಭವಿಸಿದ ಭಯಾನಕ ಯುದ್ಧಗಳನ್ನು ಕೊನೆಗೊಳಿಸಲು ಯತ್ನಿಸುವರು. ದೇವನು ನೀಡಿದ ಬುದ್ಧಿಶಕ್ತಿ ಮತ್ತು ವೈಜ್ಞಾನಿಕ ಪ್ರಗತಿಯನ್ನು ಮಾನವರ ಏಳಿಗೆಗಾಗಿ ವಿನಿಯೋಗಿಸಬೇಕು ಮತ್ತು ಒಬ್ಬರು ಇನ್ನೊಬ್ಬರು ಹೊಂದಿದ ಸಂಪನ್ಮೂಲಗಳಿಂದ ಅನುಮತಿಸಲಾದ ಉಪಕ್ರಮಗಳ ಮೂಲಕ ಲಾಭಗಳಿಸಲು ಪ್ರಯತ್ನಿಸಬೇಕು.

ಪ್ರತಿಯೊಂದು ದೇಶಕ್ಕೆ ದೇವನು ನೈಸರ್ಗಿಕ ಸಂಪತ್ತನ್ನು ದಯಪಾಲಿಸಿರುವನು. ಪ್ರತಿಯೊಂದು ದೇಶ ತನಗೆ ಲಭಿಸಿರುವ ನೈಸರ್ಗಿಕ ಸಂಪತ್ತನ್ನು ತನ್ನ ಉಪಯೋಗಕ್ಕೆ ಬಳಸಿ ಲೋಕವನ್ನು ಶಾಂತಿಧಾಮವನ್ನಾಗಿ ಮಾಡಿಕೊಳ್ಳಬಹುದು. ದೇವನು ಅನೇಕ ದೇಶಗಳಿಗೆ ವಿವಿಧ ಬೆಳೆಗಳನ್ನು ಬೆಳೆಸಲು ಸಹಾಯಕವಾದ ಅತ್ಯುತ್ತಮ ಹವಾಗುಣಗಳನ್ನೂ ಉತ್ತಮ ಪರಿಸರವನ್ನೂ ದಯಪಾಲಿಸಿದ್ದಾನೆ. ಆಧುನಿಕ ತಂತ್ರಜ್ಞಾನವನ್ನು ಕೃಷಿಗಾಗಿ ಸರಿಯಾದ ಯೋಜನೆಗಳನ್ನು ರೂಪಿಸಿ ಬಳಸುವುದಾದರೆ ದೇಶಗಳ ಆರ್ಥಿಕ ಸ್ಥಿತಿಯು ಬಲಿಷ್ಠಗೊಂಡು ಲೋಕದಿಂದ ಹಸಿವು ಅಳಿಸಿಹೋಗಬಹುದಾಗಿದೆ.

ವಿವಿಧ ಅದಿರುಗಳ ಸಂಪತ್ತನ್ನು ಹೊಂದಿದ ದೇಶಗಳು ತಮ್ಮ ಉತ್ಪಾದನೆಗಳನ್ನು ಅಭಿವೃದ್ಧಿಗೊಳಿಸಲು ಮತ್ತು ನ್ಯಾಯಬೆಲೆಗೆ ಮುಕ್ತವಾಗಿ ಮಾರಾಟಮಾಡಲು ಅನುಮತಿಸಬೇಕು. ಒಂದು ದೇಶವು ಇನ್ನೊಂದರ ಸಂಪನ್ಮೂಲಗಳಿಂದ ಲಾಭ ಪಡೆಯಲು ಪ್ರಯತ್ನಿಸಬೇಕು. ಇದು ಸರಿಯಾದ ಮಾರ್ಗವಾಗಿದೆ. ಇದನ್ನು ಸರ್ವಶಕ್ತನಾದ ದೇವನು ಮೆಚ್ಚುತ್ತಾನೆ.

ಸರ್ವಶಕ್ತನಾದ ದೇವನು ತನ್ನ ಸಂದೇಶವಾಹಕರನ್ನು ಜನರ ಬಳಿಗೆ ಕಳುಹಿಸುತ್ತಾನೆ. ಜನರು ದೇವನ ಸಾಮೀಪ್ಯಗಳಿಸುವ ಮಾರ್ಗವನ್ನು ಅವರು ಹೇಳಿಕೊಡುತ್ತಾರೆ. ಅದೇ ಸಂದರ್ಭದಲ್ಲಿ ಧಾರ್ಮಿಕ ವಿಷಯಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ ಎಂದು ದೇವನು ಹೇಳುತ್ತಾನೆ. ನಮ್ಮ ನಂಬಿಕೆ ಪ್ರಕಾರ ಶಿಕ್ಷೆ ಮತ್ತು

ರಕ್ಷೆಯು ಮರಣಾನಂತರ ಸಹ ದೊರಕಲಿದೆ. ಆದರೆ ದೇವನು ರೂಪಿಸಿದ ವ್ಯವಸ್ಥೆ ಪ್ರಕಾರ ಇಹಲೋಕದಲ್ಲಿ ತನ್ನ ಸೃಷ್ಟಿಗಳಿಗೆ ದೌರ್ಜನ್ಯ ಮಾಡಿದರೆ ಮತ್ತು ನ್ಯಾಯವನ್ನೂ ನೀತಿಯನ್ನೂ ಕಡೆಗಣಿಸಿದರೆ ಅದರ ಪರಿಣಾಮವು ದೇವನು ರೂಪಿಸಿದ ನೈಸರ್ಗಿಕ ನಿಯಮಗಳ ಪ್ರಕಾರ ಇಹಲೋಕದಲ್ಲಿ ಸಹ ಕಾಣಿಸುವುದು. ಅಂತಹ ಅನ್ಯಾಯಗಳಿಗೆ ತೀವ್ರವಾದ ಶಿಕ್ಷೆ ದೊರೆತದ್ದು ಕಂಡುಬಂದಿದೆ.

ಲೋಕವನ್ನು ಜಯಿಸಲು ಇರುವ ಸರಿಯಾದ ಮಾರ್ಗವೇನೆಂದರೆ, ಬಡದೇಶಗಳಿಗೆ ಅರ್ಹವಾದ ಸ್ಥಾನವನ್ನು ನೀಡುವುದಾಗಿದೆ.

ಇಂದಿನ ಕಾಲದಲ್ಲಿ ಚರ್ಚೆಯ ಮುಖ್ಯ ವಿಷಯ ಆರ್ಥಿಕ ಮುಗ್ಗಟ್ಟಾಗಿದೆ. ಇದನ್ನು "ಸಾಲ ನೀಡುವಿಕೆಯ ವಿನಾಶ"ವೆಂದು ಕರೆಯಲಾಗಿದೆ. ವಿಚಿತ್ರವೆಂದು ತೋರಬಹುದಾದರೂ ಇದು ಒಂದು ವಾಸ್ತವಿಕಾಂಶದ ಬಗ್ಗೆ ಸಾಕ್ಷ್ಯನೀಡುತ್ತದೆ. ಪವಿತ್ರ ಖುರ್‌ಆನ್ ನಮಗೆ ಮಾರ್ಗದರ್ಶನ ನೀಡುವುದೇನೆಂದರೆ, ನೀವು ಬಡ್ಡಿ ವ್ಯವಹಾರವನ್ನು ಮಾಡಬೇಡಿರಿ. ಅದು ಮನೆಯ, ದೇಶದ ಮತ್ತು ಜಾಗತಿಕ ಶಾಂತಿಗೆ ಅಪಾಯಕರವಾದ ಶಾಪವಾಗಿದೆ. ನಮಗೆ ಹೀಗೆ ಎಚ್ಚರಿಕೆ ನೀಡಲಾಗಿದೆ: ಯಾರು ಬಡ್ಡಿ ವ್ಯವಹಾರ ಮಾಡುತ್ತಾನೋ ಅವನು ಶೈತಾನನಿಂದ ಭ್ರಾಂತನನ್ನಾಗಿ ಮಾಡಲ್ಪಟ್ಟವನಾಗಿದ್ದಾನೆ. ಮುಸ್ಲಿಮರಾದ ನಮಗೆ ಎಚ್ಚರಿಕೆ ನೀಡಲಾಗಿದೆ: ಇಂತಹ ಸ್ಥಿತಿಯು ತಲೆದೋರದಿರಲು ಬಡ್ಡಿ ವ್ಯವಹಾರವನ್ನು ನಿಲ್ಲಿಸಿರಿ. ನೀವು ಬಡ್ಡಿಯ ಮೂಲಕ ಪಡೆಯುವ ಹಣ ನಿಮ್ಮ ಸಂಪತ್ತನ್ನು ವರ್ಧಿಸಲಾರದು. ಮೇಲಿಂದ ಮೇಲೆ ನೋಡಿದರೆ ವರ್ಧಿಸಿದಂತೆ ತೋರಬಹುದು. ಅನಿವಾರ್ಯವಾಗಿ ಬಡ್ಡಿ ವ್ಯವಹಾರದ ನಿಜವಾದ ಪರಿಣಾಮಗಳು ಹೊರಬರದೆ ಇರಲಾರವು. ನಾವು ಬಡ್ಡಿಯ ವ್ಯಾಪಾರ ಮಾಡಬಾರದೆಂದೂ ಹಾಗೆ ಮಾಡಿದರೆ ಅದು ದೇವನ ವಿರುದ್ಧ ನಡೆಸುವ ಹೋರಾಟದ ಹಾಗೆ ಎಂದೂ ಎಚ್ಚರಿಸಲಾಗಿದೆ.

ಇದು ಇಂದಿನ ಆರ್ಥಿಕ ಮುಗ್ಗಟ್ಟಿನಿಂದ ಸ್ಪಷ್ಟವಾಗುತ್ತದೆ. ಕೆಲವರು ಭೂಸ್ವತ್ತನ್ನು ಖರೀದಿಸಲು ಬಡ್ಡಿಗೆ ಹಣಪಡೆದರು. ಆದರೆ ಆ ಸ್ವತ್ತಿನ ಮಾಲಿಕರಾಗುವ ಮೊದಲು ಅವರು ಸಾಲದ ಹೊರೆಯಿಂದ ಮುಕ್ತರಾಗದೆ ಮೃತರಾದರು. ಈಗ ಕೆಲವು ಸರಕಾರಗಳು ಸಾಲದ ಹೊರೆಯಿಂದ ಬಳಲಿ ಹುಚ್ಚು ಹಿಡಿದಂತೆ ಆಗಿವೆ. ದೊಡ್ಡ ದೊಡ್ಡ ವ್ಯಾಪಾರ ಸಂಸ್ಥೆಗಳು ದಿವಾಳಿ ಆಗಿವೆ. ಕೆಲವು ಬ್ಯಾಂಕ್‌ಗಳು ಮತ್ತು ಆರ್ಥಿಕ ವ್ಯವಹಾರ ನಡೆಸುವ ಸಂಸ್ಥೆಗಳು ಮುಚ್ಚಲ್ಪಟ್ಟಿವೆ. ಸರಕಾರದ ಆರ್ಥಿಕ ನೆರವಿನ ಮೂಲಕ ಕೆಲವು ರಕ್ಷಿಸಲ್ಪಟ್ಟಿವೆ. ಈ ಪರಿಸ್ಥಿತಿ ಎಲ್ಲ ದೇಶಗಳಲ್ಲೂ ಇದೆ. ಬಡ ಅಥವಾ ಶ್ರೀಮಂತ ದೇಶ ಎಂಬ ವ್ಯತ್ಯಾಸವಿಲ್ಲದೆ ಹೀಗೆ ಸಂಭವಿಸಿದೆ. ಈ ವಿಷಮ ಪರಿಸ್ಥಿತಿ ಬಗ್ಗೆ ನಿಮಗೆ ನನಗಿಂತ ಹೆಚ್ಚಿನ ಅರಿವಿದೆ. ಬ್ಯಾಂಕ್‌ಗಳಲ್ಲಿರಿಸಲಾದ ಠೇವಣಿ ನಷ್ಟವಾಗಿದೆ. ಠೇವಣಿದಾರರನ್ನು ಹೇಗೆ ರಕ್ಷಿಸುವುದು ಎಂಬುದರ ಬಗ್ಗೆ ಸರಕಾರಗಳು ನಿರ್ಧರಿಸಬೇಕಾಗಿದೆ. ಆದರೆ ಈಗ ಕುಟುಂಬಗಳ, ವ್ಯಾಪಾರಿಗಳ, ಸರಕಾರದ ಮುಖ್ಯಸ್ಥರ ಮಾನಸಿಕ ಶಾಂತಿಯು ಹೆಚ್ಚಿನ ದೇಶಗಳಲ್ಲಿ ನಾಶವಾಗಿದೆ.

ಈ ಪರಿಸ್ಥಿತಿ ನಮಗೆ ಮುಂಚಿತವಾಗಿ ಎಚ್ಚರಿಕೆ ನೀಡಲಾದ ಒಂದು ಪರಿಣಾಮದ

ಕಡೆಗೆ ಲೋಕವು ಸಾಗುತ್ತಿದೆ ಎಂಬುದನ್ನು ಯೋಚಿಸಲು ನಮ್ಮನ್ನು ನಿರ್ಬಂಧಿಸುವುದಿಲ್ಲವೇ? ಈಗಿನ ಪರಿಸ್ಥಿತಿಯ ಮುಂದಿನ ಪರಿಣಾಮಗಳೇನೆಂದು ದೇವನು ಮಾತ್ರ ಬಲ್ಲನು.

ಸರ್ವಶಕ್ತನಾದ ದೇವನು ಹೇಳಿರುವನು: ಭ್ರಷ್ಟಾಚಾರರಹಿತ ವ್ಯಾಪಾರವು ನಡೆಯುತ್ತಿದ್ದು ನೈಸರ್ಗಿಕ ಸಂಪನ್ಮೂಲಗಳನ್ನು ಸರಿಯಾದ ರೀತಿಯಲ್ಲಿ ವಿನಿಯೋಗಿಸಿದರೆ ಮಾತ್ರ ಲೋಕದಲ್ಲಿ ಶಾಂತಿಯು ಸ್ಥಾಪಿತವಾಗುವುದು. ಅಂತಹ ಶಾಂತಿಯ ಕಡೆಗೆ ಬನ್ನಿರಿ.

ನಮ್ಮ ಧರ್ಮದ ಉಪದೇಶಗಳ ಈ ಸಂಕ್ಷಿಪ್ತ ವಿವರಣೆಯನ್ನು ನಿಮಗೊಂದು ವಿಷಯವನ್ನು ನೆನಪಿಸಿ ಮುಕ್ತಾಯಗೊಳಿಸುತ್ತೇನೆ.

ದೇವನ ಕಡೆಗೆ ತಿರುಗುವ ಮೂಲಕ ಮಾತ್ರ ಸತ್ಯವಾಗಿಯೂ ಲೋಕದಲ್ಲಿ ಶಾಂತಿಯು ಸ್ಥಾಪಿತವಾಗುವುದು. ಲೋಕವು ಈ ಸತ್ಯಾಂಶವನ್ನು ಮನವರಿಕೆ ಮಾಡಿಕೊಳ್ಳುವ ಭಾಗ್ಯವನ್ನು ದೇವನು ದಯಪಾಲಿಸಲಿ. ಆಗ ಮಾತ್ರ ಲೋಕದ ಜನರು ಅನ್ಯರ ಹಕ್ಕುಗಳನ್ನು ಸಂದಾಯ ಮಾಡುವರು.

ನೀವು ಇಲ್ಲಿಗೆ ಬಂದು ನನ್ನ ಭಾಷಣವನ್ನು ಆಲಿಸಿದುದಕ್ಕಾಗಿ ನಾನು ನಿಮಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

**ನಿಮಗೆಲ್ಲರಿಗೂ ಬಹಳ ಕೃತಜ್ಞತೆಗಳು.**





# ದೇಶಭಕ್ತಿ ಮತ್ತು ದೇಶಪ್ರೇಮದ ಬಗ್ಗೆ ಇಸ್ಲಾಮ್ ಧರ್ಮದ ಉಪದೇಶಗಳು

ಮಿಲಿಟರಿ ಹೆಡ್‌ಕ್ವಾರ್ಟರ್ಸ್
ಕೋಬ್ಲೆನ್ಝ್, ಜರ್ಮನಿ, 2012





Brigadier General Alois Bach of
the German Federal Army
with Hadrat Khalifatul-Masih V[aba]




Hadrat Khalifatul-Masih V[aba] addressing
the German Federal Army





1.



2.



3.



4.

1. Colonel Ulrich, 2. Brigadier General Bach, 3. Colonel Trautvetter, and 4. Colonel I.G. Janke, meeting Hadrat Mirza Masroor Ahmad, Khalifatul-Masih V$^{aba}$



# ದೇಶಭಕ್ತಿ ಮತ್ತು ದೇಶಪ್ರೇಮದ ಬಗ್ಗೆ ಇಸ್ಲಾಮ್ ಧರ್ಮದ ಉಪದೇಶಗಳು

**ಜರ್ಮನಿಯ ಕೋಬ್ಲೆನ್ಸ್‌ನಲ್ಲಿರುವ ಮಿಲಿಟರಿ ಹೆಡ್‌ಕ್ವಾರ್ಟರ್ಸ್‌ನಲ್ಲಿ 2012ರಲ್ಲಿ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ನೇತಾರ (ಇಮಾಮ್) ಮತ್ತು ಪಂಚಮ ಖಲೀಫ ಮಾಡಿದ ಭಾಷಣ.**

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್ – ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ.

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ – ಅಲ್ಲಾಹನ ಶಾಂತಿ ಮತ್ತು ಅನುಗ್ರಹಗಳು ನಿಮ್ಮೆಲ್ಲರ ಮೇಲೆ ಸುರಿಸಲ್ಪಡಲಿ.

ನೀವೆಲ್ಲರೂ ನನ್ನನ್ನು ಆಮಂತ್ರಿಸಿ ನಿಮ್ಮನ್ನು ಸಂಬೋಧಿಸಿ ಮಾತನಾಡಲು ನನಗೆ ಸಂದರ್ಭ ನೀಡಿರುವುದಕ್ಕೋಸ್ಕರ ನಾನು ನಿಮಗೆಲ್ಲರಿಗೂ ಮೊತ್ತ ಮೊದಲಾಗಿ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ನಾಯಕನೆಂಬ ನೆಲೆಯಲ್ಲಿ ನಾನು ಇಸ್ಲಾಮ್ ಧರ್ಮದ ತತ್ವಗಳ ಬಗ್ಗೆ ನಿಮಗೆ ವಿವರಿಸಲು ಬಯಸುತ್ತೇನೆ. ಈ ವಿಶಾಲವಾದ ವಿಷಯವನ್ನು ಒಂದೇ ಸಂದರ್ಭದಲ್ಲಿ, ದೊರೆತ ಸೀಮಿತ ಸಮಯಾವಕಾಶದಲ್ಲಿ  ವಿಶದವಾಗಿ ಎಲ್ಲವನ್ನೂ ವಿವರಿಸಲು ಸಾಧ್ಯವಾಗದು. ಆದ್ದರಿಂದ ಕೇವಲ ಒಂದು ಅಂಶಕ್ಕೆ ಸಂಬಂಧಿಸಿ ಇಸ್ಲಾಮಿಕ ತತ್ವಗಳನ್ನು ನಿರೂಪಿಸುವೆನು.

ಇಸ್ಲಾಮ್ ಧರ್ಮದ ಯಾವ ತತ್ವದ ಬಗ್ಗೆ ವಿಶದೀಕರಿಸಬೇಕೆಂದು ನಾನು ಯೋಚಿಸುತ್ತಿದ್ದಾಗ, ಜರ್ಮನಿಯ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ನ್ಯಾಷನಲ್ ಪ್ರೆಸಿಡೆಂಟರಾದ ಅಬ್ದುಲ್ಲಾ ವಾಗಿಸ್‌ಹೌಸರ್ ಅವರು, ದೇಶಭಕ್ತಿ ಮತ್ತು ದೇಶಪ್ರೇಮದ ಬಗ್ಗೆ ಇಸ್ಲಾಮಿಕ ತತ್ವಗಳನ್ನು ವಿವರಿಸಲು ನನ್ನೊಂದಿಗೆ ಅಪೇಕ್ಷಿಸಿದರು. ನಾನು ಮಾತನಾಡಬೇಕಾದ ವಿಷಯದ ಬಗ್ಗೆ ನಿರ್ಧರಿಸಲು ನನಗೆ ಅವರ ಅಪೇಕ್ಷೆ ಸಹಾಯ ಮಾಡಿತು. ನಾನು ಈ ವಿಷಯಕ್ಕೆ ಸಂಬಂಧಿಸಿ ಇಸ್ಲಾಮಿನ ಉಪದೇಶಗಳನ್ನು ಸಂಕ್ಷಿಪ್ತವಾಗಿ ವಿವರಿಸುವೆನು.

ದೇಶಭಕ್ತಿ ಮತ್ತು ದೇಶಪ್ರೇಮ ಎಂದು ಹೇಳುವುದು ಸುಲಭವಾಗಿದೆ.

ವಾಸ್ತವದಲ್ಲಿ ಈ ಶಬ್ದಗಳಲ್ಲಿ ವಿಶಾಲ ,ಸುಂದರ ತಳಸ್ಪರ್ಶಿ ಅರ್ಥಗಳು ಇವೆ. ಈ ಪದಗಳು ಏನನ್ನು ಸೂಚಿಸುತ್ತವೆ ಎಂಬುದನ್ನು ಪೂರ್ಣವಾಗಿ ಮನವರಿಕೆ ಮಾಡಿಕೊಳ್ಳುವುದು ಮತ್ತು ಅವು ನಮ್ಮಿಂದ ಏನನ್ನು ಬಯಸುತ್ತವೆ ಎಂದು ಸಂಪೂರ್ಣವಾಗಿ ತಿಳಿದುಕೊಳ್ಳುವುದು ಬಹಳ ಕಷ್ಟಕರವೇ ಆಗಿದೆ. ಹೀಗಿದ್ದರೂ ನನಗೆ ದೊರೆತಿರುವ ಸಮಯಾವಕಾಶದಲ್ಲಿ ಇಸ್ಲಾಮ್ ಧರ್ಮ ದೇಶಭಕ್ತಿ ಮತ್ತು ದೇಶಪ್ರೇಮದ ಬಗ್ಗೆ ಉಪದೇಶಿರುವುದನ್ನು ವಿವರಿಸಲು ಪ್ರಯತ್ನಿಸುವೆನು.

ಮೊದಲನೆಯದಾಗಿ, ಇಸ್ಲಾಮ್ ಉಪದೇಶಿಸುವ ಮೂಲ ತತ್ವವೇನೆಂದರೆ, ಮನುಷ್ಯನ ಮಾತು ಮತ್ತು ಕೃತಿ ಇಬ್ಬಗೆಯದಾಗಿರಬಾರದು, ಕಾಪಟ್ಯಭಾವ ಹೊಂದಿರಬಾರದು. ನಿಜವಾದ ದೇಶಭಕ್ತಿ ಪ್ರಾಮಾಣಿಕವಾದ ಸಂಬಂಧವನ್ನು ಮತ್ತು ಸತ್ಯಸಂಧತೆಯನ್ನು ಆವಶ್ಯಪಡುತ್ತದೆ. ಮನುಷ್ಯನು ಹೊರಗೆ ಪ್ರಕಟಿಸುವ ಅಭಿಪ್ರಾಯ ಅವನ ಒಳಗೆ ಸಹ ಅದೇ ರೀತಿ ಇರಬೇಕು. ದೇಶಭಕ್ತಿಗೆ ಸಂಬಂಧಿಸಿ ಈ ತತ್ವಗಳು ಬಹಳ ಮುಖ್ಯವಾಗಿವೆ. ಆದುದರಿಂದ ಒಂದು ದೇಶದ ನಾಗರಿಕನಾಗಿರುವವನು ತನ್ನ ದೇಶದೊಂದಿಗೆ ನೈಜ ಪ್ರೇಮ ಮತ್ತು ನಿಷ್ಠೆ ಹೊಂದುವುದು ಅತ್ಯವಶ್ಯಕವಾಗಿದೆ. ಒಬ್ಬನು ಜನ್ಮತಃ ನಾಗರಿಕತೆ ಗಳಿಸಿದವನಾಗಿದ್ದರೂ ವಲಸೆ ಬಂದ ಕಾರಣದಿಂದ ಅಥವಾ ಬೇರೆ ಯಾವುದೇ ಕಾರಣದಿಂದ ಇನ್ನೊಂದು ದೇಶದ ನಾಗರಿಕನಾದರೂ ಅವನು ತಾನು ನಾಗರಿಕನಾಗಿರುವ ದೇಶಕ್ಕೆ ನಿಷ್ಠಾವಂತನಾಗಿರಬೇಕೆಂದು ಇಸ್ಲಾಮ್ ಅಗತ್ಯಪಡಿಸುತ್ತದೆ.

ದೇಶಭಕ್ತಿ ಅತ್ಯಂತ ಶ್ರೇಷ್ಠ ಗುಣವಾಗಿದೆ. ಇದನ್ನು ಅತ್ಯಂತ ಸಮರ್ಪಕವಾಗಿ ಪ್ರಕಟಿಸಿದವರು ದೇವನು ನೇಮಿಸಿದ ಪ್ರವಾದಿಗಳಾಗಿದ್ದಾರೆ. ಅವರು ದೇವನೊಂದಿಗೆ ಹೊಂದಿದ್ದ ನಿಕಟ ಸಂಬಂಧ ಮತ್ತು ಪ್ರೇಮ ಎಷ್ಟು ಶಕ್ತಿಯುತವಾಗಿತ್ತೆಂದರೆ, ಎಲ್ಲ ವಿಷಯಗಳ ಬಗ್ಗೆ ದೇವನು ನೀಡಿದ ಆಜ್ಞೆಗಳನ್ನು ಪರಿಪೂರ್ಣ ನಿಷ್ಠೆಯಿಂದ ಪಾಲಿಸಲು ಕಠಿಣ ಪರಿಶ್ರಮ ಮಾಡುತ್ತಿದ್ದರು. ಅವರ ವರ್ತನೆ ಅವರಿಗೆ ದೇವನ ಬಗ್ಗೆ ಇದ್ದ ನಿಷ್ಠೆ ಮತ್ತು ಅದರ ಉನ್ನತ ಮಟ್ಟವನ್ನು ಪ್ರತಿಬಿಂಬಿಸುತ್ತಿದ್ದವು. ಆದುದರಿಂದ ಪ್ರವಾದಿಗಳು ಪ್ರಕಟಿಸಿದ ಮಾದರಿಯನ್ನು ನಾವು ಅವಲಂಬಿಸಬೇಕು. ಆದಾಗ್ಯೂ ಇದರ ಬಗ್ಗೆ ಹೆಚ್ಚಿನ ವಿವರಣೆ ನೀಡುವ ಮೊದಲು ದೇಶಪ್ರೇಮ ಮತ್ತು ದೇಶನಿಷ್ಠೆ ಎಂದರೇನೆಂದು ಮನವರಿಕೆ ಮಾಡಿಕೊಳ್ಳುವುದು ಆವಶ್ಯಕವಾಗಿದೆ.

ಇಸ್ಲಾಮ್ ಧರ್ಮದ ಪ್ರಕಾರ ದೇಶನಿಷ್ಠೆಯ ನಿಜವಾದ ಅರ್ಥ, ಪ್ರಜೆಯು ತನ್ನ ಕರ್ತವ್ಯಗಳನ್ನೂ ಪ್ರತಿಜ್ಞೆಗಳನ್ನೂ ನಿಸ್ಸಂದಿಗ್ಧವಾಗಿ ಎಲ್ಲ ಸಂದರ್ಭಗಳಲ್ಲೂ ಕಷ್ಟಗಳನ್ನು ಪರಿಗಣಿಸದೆ ಈಡೇರಿಸಬೇಕೆಂದಾಗಿದೆ. ಇಸ್ಲಾಮ್ ಆವಶ್ಯಪಡುವ ವಿಧೇಯತೆಯ ನಿಜವಾದ ಮಟ್ಟ ಇದೇ ಆಗಿದೆ. ಪವಿತ್ರ ಖುರ್‌ಆನ್ ವಿವಿಧ ಸಂದರ್ಭಗಳಲ್ಲಿ ಮುಸ್ಲಿಮರು ತಮ್ಮ ಪ್ರತಿಜ್ಞೆಗಳನ್ನೂ ಒಪ್ಪಂದಗಳನ್ನೂ ಈಡೇರಿಸಬೇಕೆಂದೂ ಅವರು ತಮ್ಮ ಹೊಣೆಗಾರಿಕೆಗಳ ಬಗ್ಗೆ ಪ್ರಶ್ನಿಸಲ್ಪಡುವರೆಂದೂ ಹೇಳಿದೆ. ಮುಸ್ಲಿಮರು ದೇವನಿಗೆ ಸಂಬಂಧಿಸಿದ ತಮ್ಮ ಕರ್ತವ್ಯಗಳನ್ನೂ ಪ್ರತಿಜ್ಞೆಗಳನ್ನೂ ಈಡೇರಿಸಬೇಕೆಂದೂ

ಉಪದೇಶಿಸಲಾಗಿದೆ.

ಈ ವಿಷಯಕ್ಕೆ ಸಂಬಂಧಿಸಿ ಒಂದು ಸಂದೇಹ ಜನರಲ್ಲಿ ತಲೆದೋರಬಹುದಾಗಿದೆ. ಅದು ಹೀಗೆ: ಮುಸ್ಲಿಮರ ನಂಬಿಕೆ ಪ್ರಕಾರ ಅವರ ದೇವನು ಮತ್ತು ಅವರ ಧರ್ಮ ಅವರಿಗೆ ಎಲ್ಲವುಗಳಿಗಿಂತ ಮುಖ್ಯವಾಗಿವೆ. ಹಾಗೆ, ದೇವನಿಗೆ ಸಂಬಂಧಿಸಿದ ಅವರ ನಿಷ್ಠೆ ಇತರ ಎಲ್ಲವುಗಳಿಗಿಂತ ಆದ್ಯತೆಗಳಿಸಿರುವುದು. ಆದುದರಿಂದ ಅವರು ಇತರ ಎಲ್ಲ ಪ್ರತಿಜ್ಞೆಗ್ಗಳ ಈಡೇರಿಕೆಗಳಿಗಿಂತ ದೇವನಿಗೆ ಸಂಬಂಧಿಸಿದ ತಮ್ಮ ಪ್ರತಿಜ್ಞೆಗಳಿಗೆ ಆದ್ಯತೆ ನೀಡುವರು. ಈ ಕಾರಣದಿಂದ ಒಬ್ಬ ಮುಸ್ಲಿಮನಿಗೆ ತನ್ನ ದೇಶದ ಬಗ್ಗೆ ಇರುವ ನಿಷ್ಠೆ ಮತ್ತು ದೇಶದ ನಿಯಮಗಳ ಪಾಲನೆ ಅವನ ದೃಷ್ಟಿಯಲ್ಲಿ ದ್ವಿತೀಯ ಸ್ಥಾನದಲ್ಲಿರುವುದು. ಹಾಗೆ ಕೆಲವು ಸಂದರ್ಭಗಳಲ್ಲಿ ಅವನು ತನ್ನ ದೇಶನಿಷ್ಠೆಯನ್ನು ಬಲಿಯರ್ಪಿಸಲು ಸಿದ್ಧನಾಗಬಹುದು.

ಈ ಸಂದೇಹ ನಿವಾರಣೆಗೆ ಸಂಬಂಧಿಸಿ ನಾನು ಮೊತ್ತ ಮೊದಲು ಹಝ್‌ರತ್ ಮುಹಮ್ಮದ್ ಪೈಗಂಬರರು[ಸ] ಸ್ವತಃ ಕಲಿಸಿದುದನ್ನು ಹೇಳಲು ಬಯಸುತ್ತೇನೆ. ಹಝ್‌ರತ್ ಪೈಗಂಬರರು[ಸ] ಹೀಗೆ ಹೇಳಿದರು: "ದೇಶಪ್ರೇಮವು ಸತ್ಯವಿಶ್ವಾಸದ ಅವಿಭಾಜ್ಯ ಭಾಗವಾಗಿದೆ." ಇದರಿಂದ ತಿಳಿಯುವುದೇನೆಂದರೆ, ಪ್ರಾಮಾಣಿಕವಾದ ದೇಶಭಕ್ತಿಯನ್ನು ಇಸ್ಲಾಮ್ ಧರ್ಮ ಮುಸ್ಲಿಮರಿಂದ ಆವಶ್ಯಪಡುತ್ತದೆ. ಸೃಷ್ಟಿಕರ್ತನಾದ ದೇವನನ್ನು ಪ್ರೀತಿಸುವವನು ತನ್ನ ದೇಶವನ್ನೂ ಪ್ರೀತಿಸಬೇಕು. ಆದುದರಿಂದ ಮುಸ್ಲಿಮನು ದೇವನನ್ನು ಪ್ರೀತಿಸುವುದರಲ್ಲೂ ಅದರ ಜೊತೆಗೆ ದೇಶವನ್ನು ಪ್ರೀತಿಸುವುದರಲ್ಲೂ ಯಾವುದೇ ವೈರುಧ್ಯವಿರುವುದಿಲ್ಲ, ದೇಶ ಪ್ರೇಮವನ್ನು ಇಸ್ಲಾಮ್ ಧರ್ಮದ ಒಂದು ಭಾಗವನ್ನಾಗಿ ಮಾಡಿರುವುದರಿಂದ ಮುಸ್ಲಿಮನು ತನ್ನ ದೇಶ ಪ್ರೇಮವನ್ನು ಉನ್ನತ ಮಟ್ಟಕ್ಕೆ ಏರಿಸುವುದಕ್ಕೋಸ್ಕರ ಕಠಿಣ ಪರಿಶ್ರಮ ಪಡಬೇಕು. ಏಕೆಂದರೆ ಇದು ದೇವನ ಸಾಮೀಪ್ಯಗಳಿಸುವ ಮಾರ್ಗವೂ ಆಗಿದೆ. ಆದುದರಿಂದ ಒಬ್ಬ ನೈಜ ಮುಸ್ಲಿಮನು ದೇವನ ಬಗ್ಗೆ ಹೊಂದಿರುವ ಪ್ರೀತಿ ಮತ್ತು ನಿಷ್ಠೆಯು ಅವನನ್ನು ತನ್ನ ದೇಶಕ್ಕೆ ಪ್ರೀತಿ ಮತ್ತು ನಿಷ್ಠೆ ಪ್ರದರ್ಶಿಸುವುದಕ್ಕೆ ಅಡ್ಡಿಯಾಗುವುದು ಅಸಾಧ್ಯವೇ ಆಗಿದೆ. ದುರದೃಷ್ಟಕರವಾಗಿ, ಕೆಲವು ದೇಶಗಳಲ್ಲಿ ಧಾರ್ಮಿಕ ಹಕ್ಕುಗಳಲ್ಲಿ ಹಸ್ತಕ್ಷೇಪ ಮಾಡಲಾಗಿದೆ ಅಥವಾ ಅವುಗಳನ್ನು ಸಂಪೂರ್ಣವಾಗಿ ಕಸಿಯಲಾಗಿದೆ. ಈ ಕಾರಣಗಳಿಂದ ಇನ್ನೊಂದು ಪ್ರಶ್ನೆ ಉದ್ಭವಿಸುತ್ತದೆ. ಒಂದು ದೇಶದ ಸರಕಾರದಿಂದ ಹಿಂಸಾಚಾರಗಳಿಗೆ ಗುರಿಯಾಗುವ ಜನರು ಆ ದೇಶಕ್ಕೆ ತಮ್ಮ ಪ್ರೀತಿ ಮತ್ತು ನಿಷ್ಠೆಯನ್ನು ಮುಂದುವರಿಸಲು ಸಾಧ್ಯವೇ? ನಾನು ದುಃಖದಿಂದ ನಿಮಗೆ ತಿಳಿಸಲು ಬಯಸುತ್ತೇನೆ. ಪಾಕಿಸ್ತಾನದಲ್ಲಿ ಇದೇ ಪರಿಸ್ಥಿತಿ ಇದೆ. ಅಲ್ಲಿನ ಸರಕಾರ ನಮ್ಮ ಸಂಘಟನೆಯ ವಿರುದ್ಧ ನಿಯಮಗಳನ್ನು ಜಾರಿಗೊಳಿಸಿದೆ. ಪಾಕಿಸ್ತಾನದಲ್ಲಿರುವ ಅಹ್ಮದೀ ಮುಸ್ಲಿಮರನ್ನು "ಮುಸ್ಲಿಮೇತರರು" ಎಂದು ನಿಯಮಗಳ ಮೂಲಕ ಘೋಷಿಸಲಾಗಿದೆ. ಪಾಕಿಸ್ತಾನದಲ್ಲಿ ಅಹ್ಮದೀ ಮುಸ್ಲಿಮರು ತಮ್ಮನ್ನು ಮುಸ್ಲಿಮರೆಂದು ಹೇಳುವುದು ನಿಷಿದ್ಧಗೊಳಿಸಲಾಗಿದೆ. ಮುಸ್ಲಿಮರ ಹಾಗೆ ಪ್ರಾರ್ಥಿಸುವುದು ಮತ್ತು

ಇಸ್ಲಾಮ್ ಆದೇಶಿಸುವ ಇತರ ಕರ್ಮಗಳನ್ನು ಮಾಡಿ ತಮ್ಮನ್ನು ಮುಸ್ಲಿಮರೆಂದು ಪ್ರಕಟಿಸುವುದನ್ನು ತಡೆಯಲಾಗಿದೆ. ಪಾಕಿಸ್ತಾನದಲ್ಲಿ ಸರಕಾರವೇ ಅಹ್ಮದೀ ಮುಸ್ಲಿಮರ ಆರಾಧನೆಯ ಮೂಲಭೂತ ಹಕ್ಕನ್ನು ಕಸಿದುಕೊಂಡಿದೆ.

ಮೇಲೆ ವಿವರಿಸಿದ ಪರಿಸ್ಥಿತಿಯಲ್ಲಿ ಅಹ್ಮದೀ ಮುಸ್ಲಿಮರು ದೇಶದ ಕಾನೂನು ಕಾಯಿದೆಗಳನ್ನು ಪಾಲಿಸುವರೇನು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅವರು ತಮ್ಮ ದೇಶಕ್ಕೆ ಹೇಗೆ ತಾನೆ ನಿಷ್ಠರಾಗುವರು? ಇಲ್ಲಿ ನಾನು ಒಂದು ವಿಷಯವನ್ನು ವಿಶದೀಕರಿಸಲು ಬಯಸುತ್ತೇನೆ. ಇಂತಹ ಅತ್ಯಂತ ತೀವ್ರ ಪರಿಸ್ಥಿತಿಗಳಲ್ಲಿ ದೇಶದ ವಿಶಿಷ್ಟ ನಿಯಮ ಮತ್ತು ದೇಶಭಕ್ತಿ ಹಾಗೂ ನಿಷ್ಠೆ ಎರಡು ವಿಭಿನ್ನ ವಿಷಯಗಳಾಗುತ್ತವೆ. ಅಹ್ಮದೀ ಮುಸ್ಲಿಮರಾದ ನಮ್ಮ ನಂಬಿಕೆ ಪ್ರಕಾರ, ಧರ್ಮವು ಪ್ರತಿಯೊಬ್ಬನ ವೈಯಕ್ತಿಕ ವಿಷಯವಾಗಿದೆ. ಅವನು ತನಗಿಷ್ಟವಿರುವ ಧರ್ಮವನ್ನು ಅವಲಂಬಿಸಬಹುದು. ಧರ್ಮದ ವಿಷಯದಲ್ಲಿ ಬಲಾತ್ಕಾರವಿರಬಾರದು. ಆದುದರಿಂದ ಒಂದು ನಿಯಮವು ಮನುಷ್ಯನ ಈ ವೈಯಕ್ತಿಕ ಹಕ್ಕಿನ ಮೇಲೆ ಹಸ್ತಕ್ಷೇಪ ನಡೆಸಿದರೆ ಅದು ಅತ್ಯಂತ ದೊಡ್ಡ ಕ್ರೌರ್ಯವೂ ಹಿಂಸಾಚಾರವೂ ಆಗುತ್ತದೆ. ಈ ರೀತಿ ಸರಕಾರದಿಂದ ಪ್ರಾಯೋಜಿತವಾದ ಹಿಂಸಾಚಾರಗಳು ಹಿಂದೆ ಹೋದ ಅನೇಕ ಶತಮಾನಗಳಲ್ಲಿ ಸಂಭವಿಸಿದ್ದು, ಅದನ್ನು ಅನೇಕರು ಖಂಡಿಸಿರುತ್ತಾರೆ.

ನಾವು ಯುರೋಪಿನ ಚರಿತ್ರೆಯನ್ನು ವೀಕ್ಷಿಸುವುದಾದರೆ, ಈ ಭೂಖಂಡದ ಜನರು ಧಾರ್ಮಿಕ ಹಿಂಸಾಚಾರಗಳಿಗೆ ಈಡಾಗಿದ್ದರೆಂದು ತಿಳಿಯುತ್ತದೆ. ಇದರ ಪರಿಣಾಮವಾಗಿ ಸಾವಿರಗಟ್ಟಲೆ ಜನರು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ವಲಸೆ ಹೋಗಬೇಕಾಯಿತು. ಎಲ್ಲ ನಿಷ್ಪಕ್ಷಪಾತ ಚರಿತ್ರೆಗಾರರು, ಸರಕಾರಗಳು ಮತ್ತು ಜನರು ಇದನ್ನು ಅತ್ಯಂತ ಕ್ರೂರ ಹಿಂಸಾಚಾರವೆಂದು ಗಣಿಸಿರುವರು. ಇಂತಹ ಪರಿಸ್ಥಿತಿ ತಲೆದೋರಿದರೆ ಇಸ್ಲಾಮ್ ಹೀಗೆ ವರ್ತಿಸಬೇಕೆಂದು ಉಪದೇಶಿಸಿಸುತ್ತದೆ: ಹಿಂಸಾಚಾರ ಮಿತಿಮೀರಿದಾಗ ಮತ್ತು ಸಹಿಸಲು ಅಸಾಧ್ಯವಾದಾಗ ಹಿಂಸೆಗೆ ಗುರಿಯಾದವರು ತಾವು ವಾಸಿಸುತ್ತಿರುವ ಪ್ರದೇಶವನ್ನು ಅಥವಾ ದೇಶವನ್ನು ಬಿಟ್ಟು ಧರ್ಮವನ್ನು ಶಾಂತಿಯಿಂದ ಆಚರಿಸಲು ಸಾಧ್ಯವಿರುವಲ್ಲಿಗೆ ವಲಸೆ ಹೋಗಬೇಕು. ಈ ಮೇಲಿನ ಮಾರ್ಗದರ್ಶನದೊಂದಿಗೆ ಇಸ್ಲಾಮ್ ಹೀಗೆ ಸಹ ಉಪದೇಶಿಸುತ್ತದೆ: ಯಾವನೇ ವ್ಯಕ್ತಿ ನಿಯಮವನ್ನು ತನ್ನ ಕೈಗೆ ತೆಗೆದುಕೊಳ್ಳಬಾರದು ಮತ್ತು ದೇಶದ ವಿರುದ್ಧ ಗೂಢ ಪಿತೂರಿಗಳಲ್ಲಿ ಭಾಗವಹಿಸಬಾರದು. ಇದು ಇಸ್ಲಾಮ್ ಧರ್ಮ ವಿಧಿಸುವ ಸ್ಪಷ್ಟ ನಿಸ್ಸಂದಿಗ್ಧ ಆದೇಶವಾಗಿದೆ.

ಕಠಿಣ ಹಿಂಸಾಚಾರಗಳಿಗೆ ಈಡಾಗಿದ್ದರೂ ಮಿಲಿಯಗಟ್ಟಲೆ ಅಹ್ಮದೀ ಮುಸ್ಲಿಮರು ಈಗ ಸಹ ಪಾಕಿಸ್ತಾನದಲ್ಲಿ ವಾಸಿಸುತ್ತಿದ್ದಾರೆ. ಅವರು ಸ್ಥಿರವಾಗಿ ತಾರತಮತೆಗೂ ದೌರ್ಜನ್ಯಗಳಿಗೂ ಜೀವಿತದ ಎಲ್ಲ ಕ್ಷೇತ್ರಗಳಲ್ಲೂ ಗುರಿಯಾಗಿದ್ದರೂ, ಅವರು ತಮ್ಮ ದೇಶಕ್ಕೆ ಪರಿಪೂರ್ಣವಾಗಿ ನಿಷ್ಠರಾಗಿರುವರು ಮತ್ತು ಸತ್ಯಸಂಧರಾದ ದೇಶಭಕ್ತರಾಗಿರುವರು. ಅಹ್ಮದೀ ಮುಸ್ಲಿಮರು ಯಾವ ಕ್ಷೇತ್ರದಲ್ಲಿ

ಕಾರ್ಯನಿರತರಾಗಿದ್ದರೂ ಅವರು ಎಲ್ಲಿ ವಾಸಿಸುತ್ತಿದ್ದರೂ ಅವರು ಯಾವಾಗಲೂ ತಮ್ಮ ದೇಶದ ಪ್ರಗತಿಗೋಸ್ಕರ ನಿರಂತರವಾಗಿ ಪ್ರಯತ್ನಿಸುತ್ತಾ ಇರುತ್ತಾರೆ. ಅಹ್ಮದಿಯಾ ಜಮಾಅತಿನ ವಿರೋಧಿಗಳು ದಶಕಗಳಷ್ಟು ಕಾಲ ಪ್ರಯತ್ನಿಸುತ್ತಾ ಇದ್ದುದು ಅಹ್ಮದಿಯರು ಪಾಕಿಸ್ತಾನಕ್ಕೆ ನಿಷ್ಠರಾಗಿಲ್ಲ ಎಂಬ ತಮ್ಮ ಸುಳ್ಳು ಅಪಾದನೆಯನ್ನು ಸಾಬೀತುಗೊಳಿಸಲಿಕ್ಕಾಗಿದೆ. ಆದರೆ ಅವರಿಗೆ ತಮ್ಮ ಆಪಾದನೆಗೆ ಸಾಕ್ಷ್ಯಗಳನ್ನು ಒದಗಿಸಲು ಎಂದೂ ಸಾಧ್ಯವಾಗಲಿಲ್ಲ. ಸತ್ಯದಲ್ಲಿ, ಪಾಕಿಸ್ತಾನಕ್ಕೋಸ್ಕರ ಬಲಿದಾನಗಳನ್ನು ಅರ್ಪಿಸುವ ಅವಶ್ಯಕತೆ ಉಂಟಾದಾಗಲೆಲ್ಲ ಅಹ್ಮದಿಯರು ಯಾವಾಗಲೂ ಮುಂಚೂಣಿಯಲ್ಲಿದ್ದರು ಮತ್ತು ತಮ್ಮ ದೇಶಕೋಸ್ಕರ ಬಲಿ ಅರ್ಪಿಸಲು ಸಿದ್ಧರಾಗಿದ್ದರು.

ಪಾಕಿಸ್ತಾನದಲ್ಲಿ ಅಹ್ಮದೀ ಮುಸ್ಲಿಮರು ಸರಕಾರದ ನಿಯಮಗಳ ದೌರ್ಜನ್ಯಗಳಿಗೆ ಗುರಿಯಾಗಿದ್ದರೂ ಅಹ್ಮದೀ ಮುಸ್ಲಿಮರೇ ಬೇರೆ ಎಲ್ಲರಿಗಿಂತಲೂ ಉತ್ತಮ ರೀತಿಯಲ್ಲಿ ದೇಶದ ನಿಯಮಗಳನ್ನು ಪಾಲಿಸುವವರಾಗಿದ್ದಾರೆ. ಇದಕ್ಕೆ ಕಾರಣ ಅವರು ನೈಜ ಇಸ್ಲಾಮ್ ಧರ್ಮವನ್ನು ಅನುಸರಿಸುವ ನೈಜ ಮುಸ್ಲಿಮರಾಗಿದ್ದಾರೆ.

ಪವಿತ್ರ ಖುರ್‌ಆನ್ ದೇಶದ ನಿಷ್ಠೆಗೆ ಸಂಬಂಧಿಸಿ ನೀಡಿರುವ ಇನ್ನೊಂದು ಉಪದೇಶವೇನೆಂದರೆ, ಜನರು ತಮ್ಮನ್ನು ಅಸಭ್ಯ, ಅನಿಷ್ಟಕರ ಮತ್ತು ಎಲ್ಲ ರೀತಿಯ ವಿದ್ರೋಹ ಕೃತ್ಯಗಳಿಂದ ದೂರವಿರಿಸಬೇಕು. ಇಸ್ಲಾಮ್ ಧರ್ಮದ ಸುಂದರವೂ ವೈಶಿಷ್ಟ್ಯಪೂರ್ಣವೂ ಆಗಿರುವ ನಿಲುವೇನೆಂದರೆ, ಕೊನೆಯ ಅಪಾಯಕಾರಿ ಸನ್ನಿವೇಶಗಳಿಗೆ ತಲುಪುವಂತಹ ಕೃತ್ಯಗಳನ್ನು ಅದು ಪ್ರಥಮ ಹೆಜ್ಜೆಯಲ್ಲಿಯೇ ತಡೆಗಟ್ಟುತ್ತದೆ. ಆದುದರಿಂದ ಇಸ್ಲಾಮಿನ ಮಾರ್ಗದರ್ಶನವನ್ನು ಸರಿಯಾದ ರೀತಿಯಲ್ಲಿ ಅನುಸರಿಸುವುದಾದರೆ ಯಾವುದೇ ಸನ್ನಿವೇಶವು ಅಪಾಯಕಾರಿ ಹಂತವನ್ನು ತಲುಪುವ ಮೊದಲೇ ಅದಕ್ಕೆ ಪರಿಹಾರ ಕಂಡುಕೊಳ್ಳಬಹುದಾಗಿದೆ.

ಉದಾಹರಣೆಗೆ, ದೇಶಕ್ಕೆ ಬಹಳ ಹಾನಿಯನ್ನು ಉಂಟುಮಾಡುವ ಒಂದು ವಿಷಯ ವ್ಯಕ್ತಿಗಳ ಅರ್ಥಿಕ ಲಾಭದ ಲಾಲಸೆಯಾಗಿದೆ. ಜನರು ಲೌಕಿಕ ಲಾಭದ ದುರಾಸೆಗಳಿಂದ ಪೀಡಿತರಾಗುತ್ತಾರೆ ಮತ್ತು ಅದು ಅನಿಯಂತ್ರಿತವಾಗಿ ಮುಂದುವರಿಯುತ್ತದೆ. ಅಂತಹ ದುರಾಸೆಗಳು ಅವರನ್ನು ದೇಶಕ್ಕೆ ಹಾನಿಕರವಾಗಿ ವರ್ತಿಸುವಂತೆ ಮಾಡುತ್ತದೆ. ಕೊನೆಗೆ ಅದು ದೇಶವನ್ನು ವಂಚಿಸುವುದಕ್ಕೆ ಕಾರಣವಾಗುತ್ತದೆ. ಇದನ್ನು ಅರಬಿ ಭಾಷೆಯಲ್ಲಿ "ಬಘಾ" ಎಂದು ಹೇಳುತ್ತಾರೆ. ದೇಶಕ್ಕೆ ಹಾನಿಯುಂಟು ಮಾಡುವ ವಿದ್ರೋಹಕರ ಕೃತ್ಯಗಳು "ಬಘಾ" ಆಗಿವೆ. ಕೆಟ್ಟ ಕೆಲಸಮಾಡುವವರನ್ನೂ ಇತರರಿಗೆ ಹಾನಿಯನ್ನುಂಟು ಮಾಡುವವರನ್ನೂ ಈ ಪದ ಸೂಚಿಸುತ್ತದೆ. ವಿಶ್ವಾಸದ್ರೋಹದ ಮೂಲಕ ಅನ್ಯಾಯದಿಂದ ಸಂಪತ್ತುಗಳಿಸುವುದು ಸಹ ಇದರಲ್ಲಿ ಸೇರುತ್ತದೆ. ಅತಿರೇಕದಿಂದ ವರ್ತಿಸಿ ಹಾನಿಯನ್ನುಂಟು ಮಾಡುವವರು ಇವರಾಗಿದ್ದಾರೆ. ಈ ರೀತಿ ವರ್ತಿಸುವವರು ದೇಶಕ್ಕೆ ನಿಷ್ಠಾವಂತರಾಗಲಾರರೆಂದು ಇಸ್ಲಾಮ್ ಉಪದೇಶಿಸುತ್ತದೆ. ಏಕೆಂದರೆ ದೇಶನಿಷ್ಠೆಯು ಉನ್ನತ ನೈತಿಕ ಗುಣಗಳೊಂದಿಗೆ

ಹಾಸುಹೊಕ್ಕಾಗಿರುತ್ತದೆ. ಉನ್ನತ ನೈತಿಕ ಗುಣಗಳಿಲ್ಲದಿದ್ದರೆ ದೇಶನಿಷ್ಠೆಯು ಉಂಟಾಗಲಾರದು. ದೇಶನಿಷ್ಠೆ ಇಲ್ಲದಿದ್ದರೆ ಉನ್ನತ ನೈತಿಕ ಗುಣಗಳೂ ಉಂಟಾಗಲಾರವು. ಬೇರೆ ಬೇರೆ ಗುಂಪಿನ ಜನರು ಉನ್ನತ ನೈತಿಕ ಗುಣಗಳ ಬಗ್ಗೆ ವಿವಿಧ ಅಭಿಪ್ರಾಯಗಳನ್ನು ಹೊಂದಿರಬಹುದೆಂಬುದು ಸತ್ಯವಾಗಿದೆ. ಆದರೆ ಇಸ್ಲಾಮ್ ಧರ್ಮವು ದೇವನ ಪ್ರೀತಿ ಗಳಿಸುವ ಏಕಮಾತ್ರ ಉದ್ದೇಶ ಲಕ್ಷ್ಯವನ್ನು ಹೊಂದಿದೆ. ಆದುದರಿಂದ ಮುಸ್ಲಿಮರು ಅಲ್ಲಾಹನ ಸಂಪ್ರೀತಿಗಳಿಸುವ ರೀತಿಯಲ್ಲಿ ಯಾವಾಗಲೂ ವರ್ತಿಸಬೇಕೆಂದು ಉಪದೇಶಿಸಲಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ದೇಶದ ವಿರುದ್ದ ಅಥವಾ ಸರಕಾರದ ವಿರುದ್ದ ಮಾಡುವ ಎಲ್ಲ ರೀತಿಯ ವಿದ್ರೋಹಕರ ಕೃತ್ಯಗಳನ್ನು ದೇವನು ನಿಷಿದ್ಧಗೊಳಿಸಿದ್ದಾನೆ. ದೇಶದ ವಿರುದ್ಧ ವಿದ್ರೋಹ ಮಾಡುವುದು ದೇಶದಲ್ಲಿ ಗಲಭೆದೊಂಬಿಗಳನ್ನು ಹುಟ್ಟು ಹಾಕುತ್ತದೆ ಮತ್ತು ಶಾಂತಿಯನ್ನು ಕೆಡಿಸಿ ದೇಶದ ಭದ್ರತೆಗೆ ಅಪಾಯ ಉಂಟುಮಾಡುತ್ತದೆ. ಒಂದು ದೇಶದಲ್ಲಿ ಆಂತರಿಕ ಗಲಭೆಗಳು ಮತ್ತು ವಿದ್ರೋಹಕರ ಕೃತ್ಯಗಳು ನಡೆಯುವಾಗ ಬಾಹ್ಯ ಶತ್ರುಗಳು ಧೈರ್ಯಗೊಂಡು ಆ ದೇಶದಲ್ಲಿ ಹಸ್ತಕ್ಷೇಪ ನಡೆಸಲು ಮುಂದಾಗುತ್ತಾರೆ. ಆದುದರಿಂದ ತನ್ನ ದೇಶದ ವಿರುದ್ದ ಮಾಡುವ ವಿದ್ರೋಹಗಳ ಕಾರಣದಿಂದ ಅತ್ಯಂತ ತೀವ್ರ ಅಪಾಯಕರ ಪರಿಣಾಮಗಳು ತಲೆದೋರಬಹುದು. ಎಲ್ಲ ವಿಧಗಳ ಹಾನಿಕಾರಕ ಕೃತ್ಯಗಳು "ಬಘಾ" ಶಬ್ದದಲ್ಲಿ ಸೇರಿವೆ. ಅದನ್ನು ನಾನು ವಿಶದೀಕರಿಸಿದ್ದೇನೆ. ಒಟ್ಟಾರೆ ಹೇಳುವುದಾದರೆ, ಒಂದು ದೇಶದ ಬಗ್ಗೆ ನಿಷ್ಠೆ ಮತ್ತು ಭಕ್ತಿ ತೋರಿಸಬೇಕಾದುದು ಸಹನೆದೋರುವುದರ ಮೂಲಕ, ನೈತಿಕ ಗುಣಗಳನ್ನು ಅವಲಂಬಿಸುವ ಮೂಲಕ ಮತ್ತು ದೇಶದ ನಿಯಮಗಳನ್ನು ಅನುಸರಿಸುವ ಮೂಲಕವಾಗಿದೆ.

ಸಾಮಾನ್ಯವಾಗಿ ಹೇಳುವುದಾದರೆ, ಇಂದಿನ ಕಾಲದಲ್ಲಿ ಬಹುತೇಕ ದೇಶಗಳು ಪ್ರಜಾಪ್ರಭುತ್ವವನ್ನು ಹೊಂದಿವೆ. ಆದುದರಿಂದ ಒಬ್ಬ ವ್ಯಕ್ತಿ ಅಥವಾ ಗುಂಪು ಸರಕಾರವನ್ನು ಬದಲಾಯಿಸಲು ಬಯಸುವುದಾದರೆ ಪ್ರಜಾಪ್ರಭುತ್ವ ವಿಧಾನವನ್ನು ಬಳಸಿ ಹಾಗೆ ಮಾಡಬಹುದು. ಅವರು ಚುನಾವಣೆ ಮೂಲಕ ತಮ್ಮ ಅಭಿಪ್ರಾಯವನ್ನು ಪ್ರಕಟಿಸಬೇಕು. ಚುನಾವಣೆಯಲ್ಲಿ ಮತದಾನ ಮಾಡುವಾಗ ಸ್ವಾರ್ಥ ಉದ್ದೇಶವನ್ನು ಹೊಂದದೆ ದೇಶದ ಹಿತವನ್ನು ಪರಿಗಣಿಸಬೇಕೆಂದು ಇಸ್ಲಾಮ್ ಹೇಳುತ್ತದೆ. ಯಾವ ಉಮೇದುದಾರನಿಂದ ಅಥವಾ ಯಾವ ಪಕ್ಷದಿಂದ ತನಗೆ ಪ್ರಯೋಜನ ಸಿಗುವುದು ಎಂದು ಪರಿಗಣಿಸದೆ ಯಾವ ವ್ಯಕ್ತಿಯಿಂದ ಅಥವಾ ಯಾವ ಪಕ್ಷದಿಂದ ದೇಶಕ್ಕೆ ಪ್ರಯೋಜನ ಸಿಗುವುದು ಎಂಬುದನ್ನು ಪರಿಗಣಿಸಿ ಮತದಾನ ಮಾಡಬೇಕು. ಸರಕಾರದ ನಿರ್ಮಾಣಕ್ಕೆ ನೀಡುವ ಮತಗಳು ಒಂದು ವಿಶ್ವಸ್ತ ನಿಧಿಯಾಗಿದೆ. ಅದನ್ನು ಅರ್ಹರಾದವರಿಗೆ ಮಾತ್ರ ನೀಡಬೇಕಾಗಿದೆ. ನೈಜ ಇಸ್ಲಾಮ್ ಇದನ್ನೇ ಉಪದೇಶಿಸುತ್ತದೆ. ಇದೇ ನಿಜವಾದ ದೇಶನಿಷ್ಠೆ ಮತ್ತು ದೇಶಭಕ್ತಿಯಾಗಿದೆ.

ಪವಿತ್ರ ಖುರ್‌ಆನ್ ಅಧ್ಯಾಯ 4 ವಚನ 59ರಲ್ಲಿ ಅಲ್ಲಾಹನು

ಹೇಳಿರುವುದೇನೆಂದರೆ, ಜನರು ವಿಶ್ವಸ್ತನಿಧಿಗಳನ್ನು ಅದಕ್ಕೆ ಅರ್ಹರಾದವರಿಗೆ ನೀಡಬೇಕೆಂದೂ ಅಧಿಕಾರಿಗಳು ತೀರ್ಪು ನೀಡುವಾಗ ನ್ಯಾಯಯುತವಾಗಿಯೂ ಪ್ರಾಮಾಣಿಕತೆಯಿಂದಲೂ ತೀರ್ಪು ನೀಡಬೇಕೆಂದೂ ಆಗಿದೆ. ದೇಶಕ್ಕೆ ನಿಷ್ಠರಾದ ದೇಶಭಕ್ತರು ಮತದಾನದ ಮೂಲಕ ಅಧಿಕಾರ ನೀಡುವಾಗ ಅರ್ಹರಾದವರಿಗೆ ಅಧಿಕಾರ ನೀಡಿದರೆ ದೇಶವು ಪ್ರಗತಿ ಹೊಂದಿ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸೇರುವುದು.

ಲೋಕದ ಅನೇಕ ದೇಶಗಳಲ್ಲಿ ಸರಕಾರದ ವಿರುದ್ಧ ಜನರು ಮುಷ್ಕರಗಳಲ್ಲೂ ಪ್ರತಿಭಟನೆ ಪ್ರಕಟನೆಗಳಲ್ಲೂ ಭಾಗವಹಿಸುವುದು ಕಾಣುತ್ತದೆ. ತೃತೀಯ ದೇಶಗಳಲ್ಲಿ ಪ್ರತಿಭಟನೆ ನಡೆಸುವ ಪ್ರದರ್ಶನಕಾರರು ಸರಕಾರಿ ಆಸ್ತಿಗಳನ್ನೂ ಜನರ ಆಸ್ತಿಗಳನ್ನೂ ಧ್ವಂಸಗೊಳಿಸುತ್ತಾರೆ. ಇಂತಹ ಕೃತ್ಯಗಳಿಗೆ ದೇಶನಿಷ್ಠೆಯೊಂದಿಗೆ ಯಾವ ಸಂಬಂಧವೂ ಇರುವುದಿಲ್ಲ. ಮುಷ್ಕರಗಳನ್ನೂ ಪ್ರತಿಭಟನೆ ಪ್ರದರ್ಶನಗಳನ್ನೂ ಶಾಂತಿಯುತವಾಗಿ ನಡೆಸಿದರೂ ಅದರ ಪರಿಣಾಮ ಹಾನಿಕರವೇ ಆಗಿರುತ್ತದೆ. ಶಾಂತಿಯುತ ಮುಷ್ಕರಗಳಿಂದಲೂ ಹೆಚ್ಚಿನ ಸಂದರ್ಭಗಳಲ್ಲಿ ಮಿಲಿಯಗಟ್ಟಲೆ ಹಣದ ಆರ್ಥಿಕ ನಷ್ಟವುಂಟಾಗುತ್ತದೆ. ಯಾವ ಸಂದರ್ಭದಲ್ಲೂ ಇಂತಹ ಪ್ರತಿಭಟನೆಗಳನ್ನು ದೇಶಕ್ಕೆ ನಿಷ್ಠೆ ಎಂದು ಪರಿಗಣಿಸಲಾಗದು. ಅಹ್ಮದಿಯಾ ಜಮಾಅತಿನ ಸ್ಥಾಪಕರು ಒಂದು ಸುವರ್ಣ ತತ್ವವನ್ನು ಪ್ರತಿಪಾದಿಸಿದ್ದಾರೆ. ನಾವು ಎಲ್ಲ ಸಂದರ್ಭಗಳಲ್ಲೂ ಅಲ್ಲಾಹನಿಗೆ, ಅವನ ಸಂದೇಶವಾಹಕರಿಗೆ ಮತ್ತು ದೇಶವನ್ನು ಆಳುವವರಿಗೆ ವಿಧೇಯರಾಗಬೇಕೆಂಬುದೇ ಆ ತತ್ವವಾಗಿದೆ. ಇದು ಪವಿತ್ರ ಖುರ್‌ಆನ್ ಉಪದೇಶಿಸುವ ತತ್ವವೇ ಆಗಿದೆ. ಆದುದರಿಂದ ಮುಷ್ಕರಗಳಿಗೆ ಅನುಮತಿ ಇರುವ ದೇಶಗಳಲ್ಲೂ ಮುಷ್ಕರಗಳನ್ನೂ ಪ್ರತಿಭಟನೆಗಳನ್ನೂ ಹೇಗೆ ನಡೆಸಬೇಕೆಂದರೆ, ಅದರಿಂದ ದೇಶಕ್ಕೆ ಮತ್ತು ಅರ್ಥಿಕ ವ್ಯವಸ್ಥೆಗೆ ಯಾವ ಹಾನಿಯೂ ಉಂಟಾಗಬಾರದು.

ಆಗಾಗ ಕೇಳಲಾಗುವ ಇನ್ನೊಂದು ಪ್ರಶ್ನೆ ಏನೆಂದರೆ, ಮುಸ್ಲಿಮರು ಪಾಶ್ಚಿಮಾತ್ಯ ದೇಶಗಳ ಸೈನ್ಯವನ್ನು ಸೇರಬಹುದೋ? ಅವರಿಗೆ ಪಾಶ್ಚಿಮಾತ್ಯ ದೇಶಗಳ ಸೈನ್ಯವನ್ನು ಸೇರಲು ಅನುಮತಿ ಇದ್ದರೆ ಮುಸ್ಲಿಮ್ ದೇಶಗಳನ್ನು ಆಕ್ರಮಿಸುವ ಸೈನ್ಯದಲ್ಲಿ ಅವರು ಭಾಗವಹಿಸಬಹುದೋ? ಇಸ್ಲಾಮಿನ ಮೂಲ ತತ್ವಗಳಲ್ಲಿ ಒಂದು ಏನೆಂದರೆ, ಯಾರೂ ದೌರ್ಜನ್ಯವನ್ನು ಬೆಂಬಲಿಸಬಾರದು. ಈ ಮುಖ್ಯ ಆಜ್ಞೆ ಮುಸ್ಲಿಮನ ಮನಸ್ಸಿನಲ್ಲಿ ಯಾವಾಗಲೂ ಇರಬೇಕು. ಒಂದು ಮುಸ್ಲಿಮ್ ದೇಶ ದೌರ್ಜನ್ಯ ನಡೆಸಿದರೆ ದೌರ್ಜನ್ಯದಿಂದ ಆ ದೇಶವನ್ನು ಹಿಮ್ಮೆಟಿಸಲು ಇತರ ಮುಸ್ಲಿಮ್ ದೇಶಗಳು, ದೌರ್ಜನ್ಯ ಮಾಡುವ ಆ ದೇಶವನ್ನು ಆಕ್ರಮಿಸಿ ದೌರ್ಜನ್ಯವನ್ನು ತಡೆಯಬಹುದೆಂದು ಪವಿತ್ರ ಖುರ್‌ಆನ್ ಉಪದೇಶಿಸುತ್ತದೆ. ಇಂತಹ ಸಂದರ್ಭದಲ್ಲಿ ದೌರ್ಜನ್ಯವನ್ನು ತಡೆಯಲು ಕ್ರಮ ಕೈಗೊಳ್ಳಲು ಅನುಮತಿ ನೀಡಲಾಗಿದೆ. ಆದರೆ ತಪ್ಪು ಮಾಡಿದ ದೇಶ ತನ್ನನ್ನು ಸುಧಾರಣೆ ಮಾಡಿಕೊಂಡು ಶಾಂತಿಗೆ ನೆರವಾದರೆ ಆ ದೇಶವನ್ನಾಗಲೀ ಅದರ ಜನರನ್ನಾಗಲೀ ಯಾವುದಾದರೂ ಮೋಸ, ನೆವನಗಳ ಮೂಲಕ

ವಶಪಡಿಸಿಕೊಳ್ಳಬಾರದು. ಆ ದೇಶಕ್ಕೂ ಜನರಿಗೂ ಸ್ವಾತಂತ್ರ್ಯವನ್ನು ನೀಡಬೇಕು. ಆದುದರಿಂದ ಸೈನ್ಯ ಕಾರ್ಯಾಚರಣೆಯ ಉದ್ದೇಶ ಯಾವುದೇ ಸ್ವಾರ್ಥ ಸಾಧನೆ ಆಗಬಾರದು. ಅದರ ಉದ್ದೇಶ ಶಾಂತಿ ಸ್ಥಾಪನೆಯಾಗಿರಬೇಕು.

ಇದೇ ರೀತಿ ಎಲ್ಲ ದೇಶಗಳಿಗೂ ಅವು ಮುಸ್ಲಿಮ್ ಆಗಿರಲಿ ಮುಸ್ಲಿಮೇತರರದು ಆಗಿರಲಿ, ದೌರ್ಜನ್ಯವನ್ನೂ ಹಿಂಸಾಚಾರವನ್ನೂ ತಡೆಗಟ್ಟಲು ಇಸ್ಲಾಮ್ ಅನುಮತಿ ನೀಡುತ್ತದೆ. ಅವಶ್ಯವಾದರೆ ದೌರ್ಜನ್ಯಗಾರ ಮುಸ್ಲಿಮ್ ದೇಶವನ್ನು ಮುಸ್ಲಿಮೇತರ ದೇಶಗಳು ಆಕ್ರಮಿಸಬಹುದು. ಅವರ ಉದ್ದೇಶ ಶಾಂತಿ ಸ್ಥಾಪಿಸಿ ದೌರ್ಜನ್ಯವನ್ನು ತಡೆಗಟ್ಟುವುದಾಗಿರಬೇಕು. ಇಂತಹ ಮುಸ್ಲಿಮೇತರ ದೇಶಗಳ ಮುಸ್ಲಿಮರು ತಮ್ಮ ದೇಶದ ಸೈನ್ಯಕ್ಕೆ ಸೇರಿ ದೌರ್ಜನ್ಯ ನಿವಾರಕ ಕಾರ್ಯಾಚರಣೆಯಲ್ಲಿ ಭಾಗವಹಿಸಲು ಅನುಮತಿ ನೀಡಲಾಗಿದೆ. ಇಂತಹ ಸನ್ನಿವೇಶಗಳಲ್ಲಿ ಮುಸ್ಲಿಮ್ ಸೈನಿಕರು ಯಾವ ದೇಶದ ಸೈನ್ಯದಲ್ಲಿ ಸೇರಿರುವರೋ ಆ ದೇಶದ ಆದೇಶಗಳಿಗನುಸಾರವಾಗಿ ಹೋರಾಡಿ ಶಾಂತಿ ಸ್ಥಾಪಿಸಬಹುದಾಗಿದೆ. ಆದರೆ ಒಂದು ದೇಶ ಅಕ್ರಮವಾಗಿ ಅನ್ಯ ದೇಶದ ಮೇಲೆ ಆಕ್ರಮಣ ನಡೆಸಲು ಉದ್ದೇಶಿಸಿದರೆ ಆ ಆಕ್ರಮಣಕಾರಿ ದೇಶದ ಸೈನ್ಯದಲ್ಲಿ ಸೇವೆ ಸಲ್ಲಿಸುವ ಮುಸ್ಲಿಮ್ ಸೈನಿಕನು ಸೈನ್ಯಕ್ಕೆ ರಾಜೀನಾಮೆ ನೀಡಬಹುದಾಗಿದೆ. ಏಕೆಂದರೆ ಅವನು ಹೋರಾಟ ನಡೆಸಿದರೆ ಅದು ದೌರ್ಜನ್ಯಗಾರರ ಜೊತೆ ಸೇರಿದ ಹಾಗೆ ಆಗುವುದು. ಇಂತಹ ನಿರ್ಧಾರ ಕೈಗೊಳ್ಳುವ ಮುಸ್ಲಿಮನು ತನ್ನ ದೇಶಕ್ಕೆ ನಿಷ್ಠನಾಗಿಲ್ಲ ಎಂದು ಗಣಿಸಲಾಗದು. ಅಂತಹ ಸಂದರ್ಭದಲ್ಲಿ ಅವಶ್ಯವಾದುದೇನೆಂದರೆ ಅವನು ತನ್ನ ಸಲಹೆ ನೀಡಬೇಕು. ಅಕ್ರಮವಾಗಿ ವರ್ತಿಸುವ ದೇಶಗಳ ಹಾಗೆ ತನ್ನ ದೇಶ ದೌರ್ಜನ್ಯ ಮಾಡಬಾರದೆಂದು ತನ್ನ ದೇಶದ ಅಧಿಕಾರಿಗಳಿಗೆ ಹೇಳಬೇಕು. ಆದರೆ ಸೈನ್ಯಕ್ಕೆ ಸೇರುವುದು ಅನಿವಾರ್ಯವಾಗಿ ಕಡ್ಡಾಯವಾಗಿದ್ದು ಅವನ ಮನಸ್ಸಾಕ್ಷಿ ಆಕ್ರಮಣವನ್ನು ಅಂಗೀಕರಿಸುವುದಿಲ್ಲವಾದರೆ ಅವನು ದೇಶವನ್ನು ಬಿಟ್ಟು ಹೋಗಬೇಕು. ಆದರೆ ಅವನು ಸರಕಾರದ ನಿಯಮದ ವಿರುದ್ಧ ಧ್ವನಿಯೆತ್ತಬಾರದು. ಒಂದು ದೇಶದ ಪ್ರಜೆಯಾಗಿರುವ ಮುಸ್ಲಿಮನು ತನ್ನ ದೇಶದ ಧೋರಣೆಗೆ ವಿರುದ್ಧವಾಗಿ ವರ್ತಿಸಬಾರದು. ಅವನು ಶತ್ರುಗಳಿಗೆ ಸಹಾಯಕನೂ ಆಗಬಾರದು.

ಒಟ್ಟಿನಲ್ಲಿ, ಇವು ನೈಜ ಮುಸ್ಲಿಮರನ್ನು ದೇಶಭಕ್ತಿ ಮತ್ತು ದೇಶನಿಷ್ಠೆಯ ಯಥಾರ್ಥ ಅವಶ್ಯಕತೆಯ ಕಡೆಗೆ ಮಾರ್ಗದರ್ಶನವನ್ನೀಯುವ ಇಸ್ಲಾಮಿಕ ಪಾಠಗಳ ಕೆಲವು ಅಂಶಗಳಾಗಿವೆ. ಲಭ್ಯವಾದ ಸಮಯದಲ್ಲಿ ನನಗೆ ಈ ವಿಷಯದ ಬಗ್ಗೆ ಸಂಕ್ಷೇಪವಾಗಿ ಮಾತ್ರ ಪ್ರಸ್ತಾಪಿಸಲು ಸಾಧ್ಯವಾಗಿದೆ.

ಕೊನೆಯದಾಗಿ ನಾನು ಹೇಳಲು ಬಯಸುವುದೇನೆಂದರೆ, ಇಂದು ಲೋಕವು ಒಂದು ಜಾಗತಿಕ ಗ್ರಾಮವಾಗಿರುವುದಾಗಿ ನಾವು ಕಾಣುತ್ತೇವೆ. ಮಾನವರೆಲ್ಲರೂ ಪರಸ್ಪರ ಬಹಳ ಹತ್ತಿರವಾಗಿರುವರು. ಎಲ್ಲ ದೇಶಗಳಲ್ಲೂ ಎಲ್ಲ ಜನಾಂಗಗಳ, ಎಲ್ಲ ಧರ್ಮಗಳ ಮತ್ತು ಎಲ್ಲ ಸಂಸ್ಕೃತಿಗಳ ಜನರನ್ನು ಕಾಣಬಹುದಾಗಿದೆ. ಆದ್ದರಿಂದ ಪ್ರತಿ ದೇಶದ

ನಾಯಕರು ತಮ್ಮ ದೇಶದ ನಿವಾಸಿಗಳಾದ ಎಲ್ಲರ ಭಾವನೆಗಳನ್ನು ಗೌರವಿಸಬೇಕು. ರಾಜಕಾರಣಿಗಳು ಮತ್ತು ಸರಕಾರಗಳು ಸತ್ಯ ಮತ್ತು ನ್ಯಾಯಪಾಲನೆ ಮಾಡುವಂತಹ ನಿಯಮಗಳನ್ನು ರಚಿಸಲು ಕಠಿಣ ಪ್ರಯತ್ನಮಾಡಬೇಕು. ಜನರಿಗೆ ಕಷ್ಟಕರವಾದ ಮತ್ತು ನಿರಾಶದಾಯಕ ನಿಯಮಗಳನ್ನು ರಚಿಸಬಾರದು. ಅನ್ಯಾಯ ಮತ್ತು ದೌರ್ಜನ್ಯವನ್ನು ಅಳಿಸಿಬಿಡಬೇಕು ಮತ್ತು ನಿಜವಾದ ಶಾಂತಿ ಸ್ಥಾಪನೆಗೋಸ್ಕರ ಪ್ರಯತ್ನಿಸಬೇಕು. ಇದಕ್ಕೆ ಇರುವ ಉತ್ತಮ ಮಾರ್ಗ ಸೃಷ್ಟಿಕರ್ತನಾದ ದೇವನನ್ನು ಲೋಕವು ಗುರುತಿಸಬೇಕು ಎಂಬುದಾಗಿದೆ. ಎಲ್ಲ ರೀತಿಯ ನಿಷ್ಠೆಗಳು ದೇವನೊಂದಿಗೆ ಇರುವ ನಿಷ್ಠೆಯೊಂದಿಗೆ ಜೋಡಿಸಲ್ಪಡಬೇಕು. ಹೀಗೆ ಮಾಡಲು ಸಾಧ್ಯವಾದರೆ ಅತ್ಯುನ್ನತ ಮಟ್ಟದ ದೇಶನಿಷ್ಠೆಯು ಎಲ್ಲ ದೇಶಗಳಲ್ಲಿ ಸ್ಥಾಪಿತವಾಗುವುದನ್ನು ನಾವು ಕಾಣುವೆವು. ಲೋಕದಾದ್ಯಂತ ಶಾಂತಿ ಮತ್ತು ಭದ್ರತೆ ಸ್ಥಾಪನೆಯಾಗುವ ಮಾರ್ಗಗಳು ತೆರೆದುಕೊಳ್ಳುವುವು.

ಕೊನೆಯದಾಗಿ, ನೀವು ನನ್ನನ್ನು ಆಮಂತ್ರಿಸಿ ನನ್ನ ಭಾಷಣವನ್ನು ಆಲಿಸಲು ಸಂದರ್ಭ ಒದಗಿಸಿದಕ್ಕೆ ನಿಮಗೆ ಕೃತಜ್ಞತೆ ಅರ್ಪಿಸುತ್ತೇನೆ. ದೇವನು ನಿಮ್ಮೆಲ್ಲರನ್ನು ಅನುಗ್ರಹಿಸಲಿ. ಜರ್ಮನಿಗೂ ಅನುಗ್ರಹ ದಯಪಾಲಿಸಲಿ.

**ನಿಮಗೆ ಧನ್ಯವಾದಗಳು.**



# ಅಣ್ವಾಯುಧ ಯುದ್ಧದ ವಿನಾಶಕರ ಪರಿಣಾಮಗಳು
# ಮತ್ತು ಪರಿಪೂರ್ಣ ನ್ಯಾಯ ಪಾಲನೆಯ ತುರ್ತು ಆವಶ್ಯಕತೆ

9ನೇ ವಾರ್ಷಿಕ ಶಾಂತಿ ವಿಚಾರಗೋಷ್ಠಿ

ಲಂಡನ್, ಯುನೈಟೆಡ್ ಕಿಂಗ್‌ಡಮ್, 2012






Hadrat Mirza Masroor Ahmad, Khalifatul-Masih V[aba]
addressing the 9th Annual Peace Symposium




Mayor of London Boris Johnson Presenting
His Holiness with a London Bus souvenir



Dame Mary Richardson DBE, UK President
of SOS Children's Villages, accepting
the 'Ahmadiyya Muslim Prize for the
Advancement of Peace' from His Holiness






Hadrat Mirza Masroor Ahmad, Khalifatul-Masih V[aba]
talking to the overseas Pakistani press regarding world affairs



# ಮುನ್ನುಡಿ

2012ರ ಮಾರ್ಚ್ ದಿನಾಂಕ 24ರಂದು ಲಂಡನಿನ ಮೋರ್ಡನ್‌ನಲ್ಲಿರುವ ಪಶ್ಚಿಮ ಯುರೋಪಿನ ಅತ್ಯಂತ ದೊಡ್ಡ ಮಸ್‌ಜಿದ್ ಆಗಿರುವ ಬೈತುಲ್ ಫುತೂಹ್‌ನಲ್ಲಿ ಬ್ರಿಟನಿನ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ವತಿಯಿಂದ ಒಂಬತ್ತನೆಯ ವಾರ್ಷಿಕ ಪೀಸ್ ಸಿಂಪೋಸಿಯಂ ಜರುಗಿತು. ಈ ಸಮಾರಂಭಕ್ಕೆ ಸರಕಾರಿ ಸಚಿವರು, ರಾಯಭಾರಿಗಳು, ಪಾರ್ಲಿಮೆಂಟಿನ ಎರಡು ಸಭೆಗಳ ಸದಸ್ಯರು, ಲಂಡನಿನ ಮೇಯರ್ ಮತ್ತು ಇತರ ಗಣ್ಯರು ಅತಿಥಿಗಳಾಗಿ ಆಗಮಿಸಿದ್ದರು. ಒಂದು ಸಾವಿರಕ್ಕಿಂತ ಹೆಚ್ಚು ಜನರು ಭಾಗವಹಿಸಿದ ಈ ವಿಚಾರಗೋಷ್ಠಿಯ ವಿಷಯ **"ಅಂತರ್‍ರಾಷ್ಟ್ರೀಯ ಶಾಂತಿ"** ಎಂದಾಗಿತ್ತು. ಅಹ್ಮದಿಯಾ ಮುಸ್ಲಿಮ್ ಪ್ರೈಝ್ ಫೋರ್ ಎಡ್ವಾನ್ಸ್‌ಮೆಂಟ್ ಆಫ್ ಪೀಸ್ (ಅಹ್ಮದಿಯಾ ಶಾಂತಿ ಸಮ್ಮಾನ) ಇದರ ಮೂರನೆಯ ವಾರ್ಷಿಕ ಸಮ್ಮಾನವನ್ನು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರಿಂದ ಎಸ್ ಓ ಎಸ್ ಚಿಲ್‌ಡ್ರನ್ಸ್ ವಿಲೇಜಸ್ ಯು. ಕೆ. (SOS CHILDREN'S VILLAGES, UK) ಇದಕ್ಕೆ "ಅನಾಥರಾದ ಮತ್ತು ಪರಿತ್ಯಜಿಸಲಾದ ಮಕ್ಕಳ ಕಷ್ಟಗಳ ನಿವಾರಣೆಗೋಸ್ಕರ ಜಗತ್ತಿನಾದ್ಯಂತ ಪ್ರಯತ್ನ ಮುಂದುವರಿಸುತ್ತಾ ಪ್ರತಿಯೊಬ್ಬ ಮಗುವಿಗೆ ಒಲುಮೆಯ ಮನೆಯನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾದುದಕ್ಕಾಗಿ" ನೀಡಲಾಯಿತು. ಈ ಸಂಸ್ಥೆಯ ಬ್ರಿಟನಿನ ಪ್ರೆಸಿಡೆಂಟ್ ಡೇಮ್ ಮೇರಿ ರಿಚರ್ಡ್‌ಸನ್ ಡಿಬಿಇ ಈ ಸಮ್ಮಾನವನ್ನು ಸಂಸ್ಥೆಯ ಪರವಾಗಿ ಪಡೆದು ಹೀಗೆ ಹೇಳಿದರು: "ನಾವು ಮಕ್ಕಳ ಆರೈಕೆಗೆ ಯಾವಾಗಲೂ ಆದ್ಯತೆ ನೀಡಬೇಕು. ನಾನು ಈ ಸಮ್ಮಾನವನ್ನು ಹೃತ್ಪೂರ್ವಕವಾಗಿ ಸ್ವೀಕರಿಸುತ್ತೇನೆ. ನಾನು ಈ ಮೂಲಕ ಗೌರವಿಸಲ್ಪಟ್ಟಿರುವೆನು ಮತ್ತು ಬೆಂಬಲ ಗಳಿಸಿರುವೆನು."

**ಈ ಸಭೆಯಲ್ಲಿ ಭಾಗವಹಿಸಿದ ಇತರ ಗಣ್ಯ ಅತಿಥಿಗಳು:**

* ರೈಟ್ ಆನರೇಬಲ್ ಜಸ್ಟಿನ್ ಗ್ರೀನಿಂಗ್ ಎಂ. ಪಿ. ಸೆಕ್ರಿಟರಿ ಆಫ್ ಸ್ಟೇಟ್ ಫೋರ್ ಟ್ರಾನ್ಸ್‌ಪೋರ್ಟ್ (ಸಾರಿಗೆ ಸಚಿವೆ)
* ಜೇನ್ ಎಲ್ಲಿಸನ್ ಎಂ. ಪಿ. (ಬೆಟ್ಟರ್‌ಸೀ)
* ಸೀಮಾ ಮಲ್‌ಹೋತ್ರ ಎಂ. ಪಿ. (ಫೆಲ್ಟ್‌ಹ್ಯಾಮ್ ಆ್ಯಂಡ್ ಹೆಸ್ಟನ್)
* ಟಾಮ್ ಬ್ರೇಕ್ ಎಂ. ಪಿ. (ಕಾರ್ಲ್‌ಶಾಲ್‌ಟ್‌ನ್ ಆ್ಯಂಡ್ ವಾಲ್ಲಿಂಗ್‌ಟನ್)
* ವೀರೇಂದ್ರ ಶರ್ಮ ಎಂ. ಪಿ. (ಈಲಿಂಗ್ ಆ್ಯಂಡ್ ಸೌತಾಲ್)
* ಲಾರ್ಡ್ ತಾರೀಖ್ ಅಹ್ಮದ್ (ಆಫ್ ವಿಂಬಲ್‌ಡನ್)
* ಎಚ್. ಇ. ವೆಸ್‌ಲೀ ಮೋಮೋ ಜೋನ್‌ಸನ್ (ಲೈಬೀರಿಯಾದ ಅಂಬಾಸಡರ್)
* ಎಚ್. ಇ. ಅಬ್ದುಲ್ಲಾ ಅಲ್ ರಾಧಿ (ಯೆಮನಿನ ಅಂಬಾಸಡರ್)
* ಎಚ್. ಇ. ಮಿಗೆಲ್ ಸೊಲಾನೋ – ಲೋಪೆಝ್ (ಪೆರುಗ್ವೇಯ ಅಂಬಾಸಡರ್)
* ಕೋಮೋಡೋರ್ ಮಾರ್ಟಿನ್ ಅಂತೆರ್‌ಟನ್ (ನೇವಲ್ ರೀಜನಲ್ ಕಮಾಂಡರ್)
* ಕೌನ್ಸಿಲರ್ ಜೇನ್ ಕೂಪರ್ (ವಾಂಡ್ಸ್‌ವರ್ಥ್ ಮೇಯರ್)
* ಕೌನ್ಸಿಲರ್ ಮಿಲ್‌ಟನ್ ಮೆಕ್‌ಕೆನ್‌ಝೀ ಎಂ.ಬಿ.ಇ. (ಬಾರ್ಕಿಂಗ್ ಮತ್ತು ಡಾಗೆನ್‌ಹ್ಯಾಮ್ ಮೇಯರ್)
* ಕೌನ್ಸಿಲರ್ ಅಮೃತ್ ಮನ್ನ್ (ಹೌನ್‌ಸ್ಲೋ ಮೇಯರ್)
* ಸಿಯೋಭಾನ್ ಬೆನಿಟ (ಲಂಡನ್ ಮೇಯರ್ ಸ್ಥಾನಕ್ಕೆ ಸ್ವತಂತ್ರ ಅಭ್ಯರ್ಥಿ)
* ಭಾರತ, ಕೆನಡ, ಇಂಡೋನೇಶಿಯಾ ಮತ್ತು ಗಿನಿ ಮೊದಲಾದ ದೇಶಗಳ ರಾಯಭಾರಿ ಕಚೇರಿಯ ಉದ್ಯೋಗಿಗಳು.

# ಅಣ್ವಾಯುಧ ಯುದ್ಧದ ವಿನಾಶಕರ ಪರಿಣಾಮಗಳು ಮತ್ತು ಪರಿಪೂರ್ಣವಾದ ನ್ಯಾಯಪಾಲನೆಯ ತುರ್ತು ಆವಶ್ಯಕತೆ

ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಮಾಡಿದ ನಂತರ ಹಝ್ರತ್ ಖಲೀಫ ಹೀಗೆ ಹೇಳಿದರು:

ಎಲ್ಲ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ – ಅಲ್ಲಾಹನ ಶಾಂತಿ ಮತ್ತು ಅನುಗ್ರಹಗಳು ನಿಮ್ಮ ಮೇಲಿರಲಿ.

ಒಂದು ವರ್ಷದಾಟಿ ಹೋದ ನಂತರ ಇಂದು ನಿಮ್ಮೆಲ್ಲರನ್ನೂ ಈ ಸಂದರ್ಭದಲ್ಲಿ ಸ್ವಾಗತಿಸುತ್ತಿದ್ದೇನೆ. ನೀವೆಲ್ಲರೂ ಈ ಸಮಾರಂಭಕ್ಕೆ ಬಂದುದಕ್ಕಾಗಿ ನಾನು ನಿಮಗೆ ಕೃತಜ್ಞನಾಗಿದ್ದೇನೆ.

"ಶಾಂತಿಗೋಷ್ಠಿ" ಎಂದು ಕರೆಯಲ್ಪಡುವ ಈ ಸಮಾರಂಭದ ಬಗ್ಗೆ ನಮ್ಮಲ್ಲಿ ಬಹುತೇಕ ಜನರು ಚೆನ್ನಾಗಿ ಪರಿಚಿತರಾಗಿದ್ದಾರೆ. ಇದನ್ನು ಪ್ರತಿವರ್ಷ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ವತಿಯಿಂದ ಜರಗಿಸಲಾಗುತ್ತಿದೆ. ಲೋಕದಲ್ಲಿ ಶಾಂತಿಯು ಸ್ಥಾಪಿಸಲ್ಪಡಬೇಕೆಂಬ ಅಭಿಲಾಷೆಯಿಂದ ನಾವು ಮಾಡುವ ಅನೇಕ ಪ್ರಯತ್ನಗಳಲ್ಲಿ ಇದು ಒಂದಾಗಿದೆ.

ಇಂದು ಕೆಲವು ಹೊಸ ಮಿತ್ರರು ಮೊದಲನೆಯ ಬಾರಿ ಇಲ್ಲಿಗೆ ಆಗಮಿಸಿದ್ದಾರೆ. ಉಳಿದವರು ನಮ್ಮ ಹಳೆಯ ಸ್ನೇಹಿತರು. ಅವರು ಅನೇಕ ವರ್ಷಗಳಿಂದ ನಮ್ಮ ಪ್ರಯತ್ನಗಳಿಗೆ ಬೆಂಬಲ ನೀಡುತ್ತಿದ್ದಾರೆ.

ನೀವೆಲ್ಲರೂ ವಿದ್ಯಾಸಂಪನ್ನರಾಗಿದ್ದೀರಿ. ಈ ಲೋಕದಲ್ಲಿ ಶಾಂತಿ ಸ್ಥಾಪಿಸಬೇಕೆಂಬ ನಮ್ಮ ಅಭಿಲಾಷೆಯಲ್ಲಿ ನೀವು ಸಹ ಪಾಲುಗಾರರಾಗಿರುವಿರಿ. ಈ ಅಭಿಲಾಷೆಯ ಕಾರಣದಿಂದಲೇ ನೀವು ಈ ಸಮಾರಂಭಕ್ಕೆ ಆಗಮಿಸಿರುವಿರಿ.

ಲೋಕವು ಪ್ರೀತಿ, ವಾತ್ಸಲ್ಯ ಮತ್ತು ಸ್ನೇಹಭರಿತವಾಗಬೇಕೆಂದು ಹೃತ್ಪೂರ್ವಕ ಆಶೆಯೊಂದಿಗೆ ನೀವೆಲ್ಲರೂ ಇಲ್ಲಿಗೆ ಆಗಮಿಸಿರುವಿರಿ. ಲೋಕದ ಬಹುತೇಕ ಜನರು ಇದೇ ಆಶಯಗಳನ್ನು ಹೊಂದಿದ್ದಾರೆ ಮತ್ತು ಅವರೆಲ್ಲರಿಗೂ ಇವುಗಳ ಆವಶ್ಯಕತೆಗಳಿರುತ್ತವೆ. ನೀವು ಬೇರೆ ಬೇರೆ ಹಿನ್ನೆಲೆಗಳನ್ನು ಹೊಂದಿ ಬೇರೆ ಬೇರೆ ಜನಾಂಗಗಳಿಗೆ ಮತ್ತು ಧರ್ಮಗಳಿಗೆ ಸೇರಿದವರಾಗಿದ್ದರೂ ನೀವೆಲ್ಲರೂ ಈ ಉದ್ದೇಶಗಳನ್ನು ಗಳಿಸಲು ಇಲ್ಲಿ ನನ್ನ ಮುಂದೆ ಸಮಾವೇಶಗೊಂಡಿರುವಿರಿ.

ನಾನು ಇದರ ಮೊದಲು ಹೇಳಿದ ಪ್ರಕಾರ ನಾವು ಈ ಸಮಾವೇಶವನ್ನು ಪ್ರತಿವರ್ಷ ಜರಗಿಸುತ್ತೇವೆ. ಪ್ರತಿ ಸಂದರ್ಭದಲ್ಲಿಯೂ ಶಾಂತಿಯು ಲೋಕದಲ್ಲಿ ನಮ್ಮ ಕಣ್ಣ ಮುಂದೆ ಸ್ಥಾಪಿತವಾಗಬೇಕೆಂದು ನಾವೆಲ್ಲರೂ ಶುಭ ಪ್ರತೀಕ್ಷೆ ಹೊಂದುತ್ತೇವೆ. ನಿಮಗೆ ಸಾಧ್ಯವಿರುವಲ್ಲೆಲ್ಲ ಮತ್ತು ನೀವು ಸಂಪರ್ಕ ಸಾಧಿಸುವವರೊಂದಿಗೆ ನೀವು ಶಾಂತಿಗೋಸ್ಕರ ಪ್ರಯತ್ನಿಸಬೇಕೆಂದು ನಾನು ಪ್ರತಿವರ್ಷ ನಿಮ್ಮನ್ನು ಕೋರುತ್ತಾ ಇರುತ್ತೇನೆ. ರಾಜಕೀಯ ಪಕ್ಷಗಳೊಂದಿಗೆ ಮತ್ತು ಸರಕಾರಗಳೊಂದಿಗೆ ಸಂಬಂಧ ಹೊಂದಿರುವ ಎಲ್ಲರೊಂದಿಗೆ ನಾನು ಅಪೇಕ್ಷಿಸುವುದೇನೆಂದರೆ, ಅವರೆಲ್ಲರೂ ಈ ಶಾಂತಿ ಸಂದೇಶವನ್ನು ತಮ್ಮ ಪ್ರಭಾವದ ವಲಯದೊಳಗೆ ಹರಡಬೇಕು. ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ಉನ್ನತ ನೈತಿಕ ಮೌಲ್ಯಗಳನ್ನು ಜೀವಿತದಲ್ಲಿ ಅಳವಡಿಸಿಕೊಳ್ಳುವುದು ಹಿಂದೆಂದಿಗಿಂತಲೂ ಈಗ ಅತ್ಯಾವಶ್ಯಕವಾಗಿದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳುವುದು ಅವಶ್ಯಕವಾಗಿದೆ.

ಅಹ್ಮದಿಯಾ ಮುಸ್ಲಿಮ್ ಸಂಘಟನೆ ಬಗ್ಗೆ ಹೇಳುವುದಾದರೆ, ನಮಗೆ ಯಾವಾಗೆಲ್ಲ ಮತ್ತು ಎಲ್ಲೆಲ್ಲ ಸಂದರ್ಭ ಸಿಗುವುದೋ ನಾವು ನಮ್ಮ ನಿಲುವನ್ನು ಬಹಿರಂಗವಾಗಿ ಘೋಷಿಸುತ್ತೇವೆ: ಲೋಕವು ಯಾವ ನಾಶದ ಕಡೆಗೆ ಸಾಗುತ್ತಿದೆಯೋ ಅದನ್ನು ಅದರಿಂದ ರಕ್ಷಿಸಲು ಇರುವ ಏಕಮಾತ್ರ ಮಾರ್ಗವಾದ ಪ್ರೀತಿ, ವಾತ್ಸಲ್ಯ ಮತ್ತು ಸಾಮಾಜಿಕ ಪ್ರಜ್ಞೆಯನ್ನು ಹರಡಲು ನಾವೆಲ್ಲರೂ ಪ್ರಯತ್ನ ಮಾಡಬೇಕಾದುದು ಅತ್ಯಾವಶ್ಯಕವಾಗಿದೆ. ಅತ್ಯಂತ ಪ್ರಾಮುಖ್ಯವಾದ ವಿಷಯವೇನೆಂದರೆ, ಲೋಕವು ತನ್ನ ಸೃಷ್ಟಿಕರ್ತನಾದ ಏಕದೇವನನ್ನು ಗುರುತಿಸಬೇಕು. ಈ ರೀತಿ ಸೃಷ್ಟಿಕರ್ತನನ್ನು ಗುರುತಿಸುವುದರಿಂದ ಅವನ ಸೃಷ್ಟಿಯ ಬಗ್ಗೆ ಪ್ರೀತಿ ಮತ್ತು ಸಹಾನುಭೂತಿ ಉಂಟಾಗುವುದು. ಇವು ನಮ್ಮ ಸದ್ಗುಣಗಳ ಅಂಶವಾಗುವಾಗ ನಾವು ದೇವನ ಪ್ರೀತಿಗೆ ಪಾತ್ರರಾಗುವೆವು.

ಲೋಕದಲ್ಲಿ ಶಾಂತಿ ಸ್ಥಾಪಿಸಲ್ಪಡಬೇಕೆಂದು ನಾವು ನಿರಂತರವಾಗಿ ಧ್ವನಿಯೆತ್ತಿ ಅಪೇಕ್ಷಿಸುತ್ತೇವೆ. ನಾವು ನಮ್ಮ ಹೃದಯದಲ್ಲಿ ಅನುಭವಿಸುವ ನೋವು ಮತ್ತು ಯಾತನೆ, ಲೋಕದ ಜನರ ಕಷ್ಟವನ್ನು ನಿವಾರಿಸಿ ನಾವು ಜೀವಿಸುವ ಲೋಕವನ್ನು ಉತ್ತಮಗೊಳಿಸಲು ಪ್ರಯತ್ನಿಸಲಿಕ್ಕೆ ನಮಗೆ ಸ್ಫೂರ್ತಿ ನೀಡುತ್ತದೆ. ಇಂದು ನಾವು ನಡೆಸುವ ಈ ಸಮಾರಂಭವು ಈ ಉದ್ದೇಶವನ್ನು ಗಳಿಸಲು ನಾವು ಮಾಡುವ ಅನೇಕ ಪ್ರಯತ್ನಗಳಲ್ಲಿ ಒಂದಾಗಿದೆ.

ನಾನು ಇದರ ಮೊದಲು ಹೇಳಿದಂತೆ ನೀವೆಲ್ಲರೂ ಈ ಉನ್ನತಮಟ್ಟದ ಅಭಿಲಾಷೆಗಳನ್ನು ಹೊಂದಿರುವಿರಿ. ನಾನು ರಾಜಕಾರಣಿಗಳೊಂದಿಗೆ ಮತ್ತು ಧಾರ್ಮಿಕ ನಾಯಕರೊಂದಿಗೆ ಶಾಂತಿಗೋಸ್ಕರ ಪ್ರಯತ್ನಿಸಲು ಅಪೇಕ್ಷಿಸಿದ್ದೇನೆ. ಆದರೆ ಈ ಎಲ್ಲ ಪ್ರಯತ್ನಗಳನ್ನು ಮಾಡಿದ್ದರೂ ಆತಂಕ ಮತ್ತು ಸಂಘರ್ಷ ಲೋಕದಾದ್ಯಂತ ವ್ಯಾಪಕವಾಗಿ ಮುಂದುವರಿಯುತ್ತಾ ಇರುತ್ತವೆ. ಇಂದಿನ ಲೋಕದಲ್ಲಿ ನಾವು ಬಹಳ ಸಂಘರ್ಷಗಳನ್ನು, ಅಸ್ವಸ್ಥತೆಗಳನ್ನು ಮತ್ತು ಅಸ್ತವ್ಯಸ್ತತೆಗಳನ್ನು ಕಾಣುತ್ತಿದ್ದೇವೆ. ಕೆಲವು ದೇಶಗಳಲ್ಲಿ ದೇಶದ ನಿವಾಸಿಗಳು ಪರಸ್ಪರ ಹೋರಾಡುತ್ತಾ ಇರುತ್ತಾರೆ. ಕೆಲವು ದೇಶಗಳಲ್ಲಿ ಪ್ರಜೆಗಳು ತಮ್ಮ ಸರಕಾರಗಳ ವಿರುದ್ಧ ಹೋರಾಡುತ್ತಿದ್ದಾರೆ. ಅದಕ್ಕೆ ಪ್ರತಿಕ್ರಿಯೆಯಾಗಿ ಸರಕಾರಗಳು ತಮ್ಮ

ದೇಶದ ಪ್ರಜೆಗಳ ಮೇಲೆ ಆಕ್ರಮಣ ಮಾಡುತ್ತಾ ಇವೆ. ಭೀಕರ ಗುಂಪುಗಳು ತಮ್ಮ ಸ್ವಾರ್ಥ ಲಾಭಕ್ಕೋಸ್ಕರ ಅರಾಜಕತೆಯನ್ನೂ ಅಸ್ತವ್ಯಸ್ತತೆಯನ್ನೂ ಉತ್ತೇಜಿಸುತ್ತಾ ನಿರಪರಾಧಿಗಳಾದ ಮಹಿಳೆಯರನ್ನೂ ಮಕ್ಕಳನ್ನೂ ವೃದ್ಧರನ್ನೂ ನಿಷ್ಕಾರಣವಾಗಿ ಕೊಲ್ಲುತ್ತಾ ಇವೆ. ಕೆಲವು ದೇಶಗಳಲ್ಲಿ ರಾಜಕೀಯ ಪಕ್ಷಗಳು ಸ್ವಾರ್ಥಕ್ಕೋಸ್ಕರ ಪರಸ್ಪರ ಹೋರಾಡುತ್ತಿವೆ. ದೇಶದ ಸೇವೆಗೋಸ್ಕರ ರಾಜಕೀಯ ಪಕ್ಷಗಳು ಪರಸ್ಪರ ಕೈಜೋಡಿಸಲು ಮುಂದಾಗುವುದಿಲ್ಲ. ಕೆಲವು ದೇಶಗಳು ಅನ್ಯ ದೇಶಗಳ ಸಾಧನ ಸಂಪತ್ತುಗಳನ್ನು ಹಿಡಿಗೂಡಲು ತಮ್ಮ ದೃಷ್ಟಿಗಳನ್ನು ಅಸೂಯೆಯಿಂದ ಹಾಯಿಸುತ್ತಾ ಇರುತ್ತವೆ. ಲೋಕದ ಮಹಾಶಕ್ತಿ ರಾಷ್ಟ್ರಗಳು ತಮ್ಮ ಮೇಧಾವಿತ್ವವನ್ನು ಕಾಪಾಡಲು ನಿರಂತರವಾಗಿ ಪ್ರಯತ್ನಿಸುತ್ತಾ ಇರುತ್ತವೆ ಮತ್ತು ತಮ್ಮ ಗುರಿಯನ್ನು ಸಾಧಿಸಲು ಅವರು ಯಾವ ಕುಕೃತ್ಯವನ್ನೂ ಮಾಡಲು ಹಿಂಜರಿಯುವುದಿಲ್ಲ.

ಇವೆಲ್ಲವನ್ನು ಗಮನಿಸುವಾಗ ನಾವು ಕಾಣುವುದೇನೆಂದರೆ, ಅಹ್ಮದಿಯಾ ಮುಸ್ಲಿಮ್ ಸಂಘಟನೆ ಮತ್ತು ನಿಮ್ಮಲ್ಲಿ ಬಹುತೇಕ ಜನರು ಲೋಕದಲ್ಲಿ ಗುಣಾತ್ಮಕ ಬದಲಾವಣೆ ತರುವ ಶಕ್ತಿಯನ್ನಾಗಲಿ, ಅಧಿಕಾರವನ್ನಾಗಲಿ ಹೊಂದಿಲ್ಲವೆಂದಾಗಿದೆ. ಇದು ಏಕೆಂದರೆ ನಾವು ಸರಕಾರಿ ಹುದ್ದೆಯನ್ನಾಗಲೀ ಶಕ್ತಿಯನ್ನಾಗಲೀ ಹೊಂದದಿರುವುದರಿಂದಾಗಿದೆ. ವಾಸ್ತವದಲ್ಲಿ ನಾವು ಸ್ನೇಹ ಸಂಬಂಧವನ್ನು ಬೆಳೆಸಿರುವ ರಾಜಕಾರಣಿಗಳು ಕೂಡ ನಮ್ಮೊಂದಿಗೆ ಇರುವಾಗ ನಮ್ಮ ಮಾತುಗಳನ್ನು ಒಪ್ಪಿಕೊಳ್ಳುತ್ತಾರಾದರೂ ಅವರು ನಿರ್ಭಯವಾಗಿ ಹೇಳಿಕೆ ನೀಡಲು ಹಿಂಜರಿಯುತ್ತಾರೆ. ಅವರ ಹೇಳಿಕೆಗಳನ್ನು ದಮನಿಸಲಾಗುತ್ತಿದೆ ಮತ್ತು ಅವರು ಹಿಂಜರಿಕೆಯಿಲ್ಲದೆ ಹೇಳಿಕೆ ನೀಡುವುದನ್ನು ತಡೆಯಲಾಗುತ್ತಿದೆ. ಹೀಗೆ ಸಂಭವಿಸುವುದು ಅವರು ತಮ್ಮ ಪಕ್ಷಗಳ ಧೋರಣೆಗಳನ್ನು ಬೆಂಬಲಿಸಲು ನಿರ್ಬಂಧಿಸಲ್ಪಡುವುದರಿಂದಾಗಿದೆ ಅಥವಾ ಪ್ರಾಯಶಃ ಬಾಹ್ಯ ಲೋಕ ಶಕ್ತಿರಾಷ್ಟ್ರಗಳ ಅಥವಾ ರಾಜಕೀಯ ಒಡಂಬಡಿಕೆಗಳ ಕಾರಣದಿಂದಾಗಿರಬಹುದು. ಅವುಗಳು ಅವರನ್ನು ಅದುಮಿಡುತ್ತವೆ.

ಹೀಗಿದ್ದರೂ ಶಾಂತಿ ಗೋಷ್ಠಿಯಲ್ಲಿ ಪ್ರತಿವರ್ಷ ಭಾಗವಹಿಸುವ ನಾವು ನಿಸ್ಸಂಶಯವಾಗಿ ಲೋಕದಲ್ಲಿ ಶಾಂತಿ ಸ್ಥಾಪಿಸಲ್ಪಡಬೇಕೆಂಬ ಆಶೆಯನ್ನು ಹೊಂದಿದ್ದೇವೆ. ಪ್ರೀತಿ, ಸಹಾನುಭೂತಿ ಮತ್ತು ಭ್ರಾತೃತ್ವವು ಎಲ್ಲ ಧರ್ಮಗಳ ಮಧ್ಯೆ, ಎಲ್ಲ ಜನಾಂಗಗಳ ಮಧ್ಯೆ, ಎಲ್ಲ ಕುಲವಂಶಗಳ ಮಧ್ಯೆ ಮತ್ತು ಎಲ್ಲ ಜನರ ಮಧ್ಯೆ ಸ್ಥಾಪಿತವಾಗಬೇಕೆಂಬ ನಮ್ಮ ಅಭಿಪ್ರಾಯಗಳನ್ನೂ ಭಾವನೆಗಳನ್ನೂ ಸೂಚಿಸುತ್ತೇವೆ.

ದುರದೃಷ್ಟಕರವಾಗಿ ನಾವು ನಮ್ಮ ಈ ಆದರ್ಶವನ್ನು ಕೃತಿಗಿಳಿಸಲು ಶಕ್ತಿಯನ್ನು ಹೊಂದಿಲ್ಲ. ನಾವು ಆಶಿಸುವ ಪರಿಣಾಮಗಳನ್ನು ಉಂಟುಮಾಡಲು ನಮಗೆ ಅಧಿಕಾರವಾಗಲಿ ಸಾಧನ ಸಂಪತ್ತಾಗಲಿ ಇಲ್ಲ.

ಕೆಲವು ವರ್ಷಗಳ ಹಿಂದೆ ಇದೇ ಸಭಾಭವನದಲ್ಲಿ ಜರುಗಿಸಲಾದ ಶಾಂತಿಗೋಷ್ಠಿಯಲ್ಲಿ, ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸುವ ಮಾರ್ಗೋಪಾಯಗಳ ಬಗ್ಗೆ ವಿವರಿಸಿ ಸಂಯುಕ್ತ ರಾಷ್ಟ್ರ ಸಂಘ ಹೇಗೆ ಕಾರ್ಯಪ್ರವೃತ್ತವಾಗಬೇಕೆಂದು ಸೂಚಿಸಿದ್ದೆನು. ಆ ಭಾಷಣದ ಬಗ್ಗೆ ನಮ್ಮ ಗಣ್ಯ ಸ್ನೇಹಿತರಾದ ಲಾರ್ಡ್ ಎರಿಕ್ ಆವ್‌ಬರಿ,

ಅಂತಹ ಭಾಷಣವನ್ನು ಸಂಯುಕ್ತ ರಾಷ್ಟ್ರ ಸಂಘದಲ್ಲಿ ಮಾಡಬೇಕಾಗಿತ್ತೆಂದು ಅಭಿಪ್ರಾಯಪಟ್ಟಿದ್ದರು. ಅವರು ತಮ್ಮ ಹೇಳಿಕೆ ಮೂಲಕ ತಮ್ಮ ಉನ್ನತ ನೈತಿಕ ಗುಣವನ್ನು ಪ್ರಕಟಿಸಿದರು. ಆದರೆ ನಾನು ಹೇಳಲು ಬಯಸುವುದೇನೆಂದರೆ, ಕೇವಲ ಭಾಷಣ ಮಾಡುವುದು ಮತ್ತು ಅದನ್ನು ಆಲಿಸುವುದು ಲೋಕದಲ್ಲಿ ಶಾಂತಿ ಸ್ಥಾಪನೆಗೆ ಸಾಕಾಗಲಾರದು. ಈ ಮುಖ್ಯ ಉದ್ದೇಶವನ್ನು ಸಾಧಿಸಲು ಇರುವ ಅತ್ಯಾವಶ್ಯಕ ಘಟಕ ಪರಿಪೂರ್ಣ ನ್ಯಾಯಪಾಲನೆ ಮತ್ತು ಎಲ್ಲ ವಿಷಯಗಳಿಗೆ ಸಂಬಂಧಿಸಿ ಉತ್ತಮ ವರ್ತನೆಯಾಗಿದೆ. ಪವಿತ್ರ ಖುರ್‌ಆನಿನ ಅಧ್ಯಾಯ 4, ವಚನ 136ರಲ್ಲಿ ಇದರ ಬಗ್ಗೆ ಒಂದು ಸುವರ್ಣ ತತ್ವವನ್ನು ವಿವರಿಸಿ ನಮಗೆ ಮಾರ್ಗದರ್ಶನ ನೀಡಲಾಗಿದೆ. ಅದರಲ್ಲಿ ಹೀಗೆ ಹೇಳಲಾಗಿದೆ: ನೀವು ಪರಿಪೂರ್ಣವಾದ ನ್ಯಾಯ ನಿಷ್ಠೆಯುಳ್ಳವರೂ ಅಲ್ಲಾಹನಿಗೋಸ್ಕರ ಸಾಕ್ಷ್ಯವಹಿಸುವವರೂ ಆಗಿರಿ. ಅದು ನಿಮಗೆ ಅಥವಾ (ನಿಮ್ಮ) ಮಾತಾ ಪಿತರಿಗೆ ಅಥವಾ ನಿಕಟ ಬಂಧುಗಳಿಗೆ ವಿರುದ್ಧವಾಗಿದ್ದರೂ ಸರಿ. ಇದು ಸರಿಯಾದ ನ್ಯಾಯಪಾಲನೆಯಾಗಿದೆ. ಸಾಮೂಹಿಕ ಹಿತಕ್ಕೋಸ್ಕರ ಸ್ವಾರ್ಥವನ್ನು ಬದಿಗಿರಿಸಲಾಗಿದೆ.

ನಾವು ಈ ತತ್ವವನ್ನು ಸಾಮೂಹಿಕ ಹಂತದಲ್ಲಿ ಬಳಸುವ ಬಗ್ಗೆ ಚಿಂತಿಸುವಾಗ ಸಂಪತ್ತು ಮತ್ತು ಪ್ರಭಾವ ಬಳಸಿ ಅನ್ಯಾಯಕರ ಪ್ರಭಾವ ಬೀರುವಿಕೆಯನ್ನು ನಾವು ಕೈಬಿಡಬೇಕೆಂದು ತಿಳಿಯುತ್ತದೆ. ಪ್ರತಿಯೊಂದು ದೇಶದ ಪ್ರತಿನಿಧಿಗಳು ಮತ್ತು ರಾಯಭಾರಿಗಳು ಪ್ರಾಮಾಣಿಕವಾಗಿ ನ್ಯಾಯಪಾಲನೆ ಮತ್ತು ಸಮತೆಗೋಸ್ಕರ ಕಾರ್ಯನಿರತರಾಗಬೇಕು. ಎಲ್ಲ ವಿಧಗಳ ಪಕ್ಷಪಾತ ಮತ್ತು ತಾರತಮತೆಯನ್ನು ನಿವಾರಿಸಬೇಕು. ಇದು ಶಾಂತಿ ಸ್ಥಾಪನೆಗಿರುವ ಏಕಮಾತ್ರ ಮಾರ್ಗವಾಗಿದೆ. ನಾವು ಸಂಯುಕ್ತ ರಾಷ್ಟ್ರ ಸಂಘದ ಜನರಲ್ ಅಸೆಂಬ್ಲಿ ಮತ್ತು ಸೆಕ್ಯುರಿಟಿ ಕೌನ್ಸಿಲ್‌ಗಳ ಕಡೆಗೆ ನೋಡುವುದಾದರೆ, ಅಲ್ಲಿ ನೀಡಲಾದ ಹೇಳಿಕೆಗಳು ಮತ್ತು ಭಾಷಣಗಳು ಬಹಳ ಪ್ರಶಂಸಿಸಲ್ಪಡುವುದನ್ನು ಕಾಣುತ್ತೇವೆ. ಆದರೆ ಅಂತಹ ಮೆಚ್ಚಿಕೆಯ ಹೇಳಿಕೆಗಳು ಅರ್ಥಶೂನ್ಯವಾಗಿವೆ. ಏಕೆಂದರೆ ವಾಸ್ತವಿಕ ತೀರ್ಮಾನಗಳನ್ನು ಮೊದಲೇ ನಿರ್ಧರಿಸಲಾಗಿರುತ್ತದೆ.

ನ್ಯಾಯಬದ್ಧವಾದ ನಿಜವಾದ ಪ್ರಜಾಪ್ರಭುತ್ವ ರೀತಿಯಲ್ಲಿ ನಿರ್ಧಾರಗಳನ್ನು ಮಾಡದೆ ಮಹಾಶಕ್ತಿ ರಾಷ್ಟ್ರಗಳ ಒತ್ತಡಗಳ ಪ್ರಭಾವಕ್ಕೊಳಗಾಗಿ ಅಲ್ಲಿ ತೀರ್ಮಾನಗಳನ್ನು ಕೈಗೊಳ್ಳಲಾಗುವುದರಿಂದ ಅಲ್ಲಿ ನಡೆಸಲಾಗುವ ಭಾಷಣಗಳು ಪೊಳ್ಳಾದುದೂ ಅರ್ಥ ಶೂನ್ಯವೂ ಹೊರ ಜಗತ್ತನ್ನು ವಂಚಿಸಲು ಮಾಡುವ ಅಭ್ಯಾಸಗಳೂ ಆಗಿರುತ್ತವೆ. ಹೀಗಿದ್ದರೂ ನಾವು ನಿರಾಶರಾಗಿ ಎಲ್ಲ ಪ್ರಯತ್ನಗಳನ್ನು ಬಿಟ್ಟುಬಿಡಬಾರದು. ಅದಕ್ಕೆ ಬದಲಾಗಿ ನಾವು ನಮ್ಮ ದೇಶಗಳ ನಿಯಮಗಳನ್ನು ಪಾಲಿಸಿಕೊಂಡು ನಮ್ಮ ಸರಕಾರಗಳ ಗಮನಕ್ಕೆ ಈ ಕಾಲದ ಆವಶ್ಯಕತೆಗಳ ಕಡೆಗೆ ಗಮನ ಸೆಳೆಯುವುದು ನಮ್ಮ ಜೀವಿತೋದ್ದೇಶವಾಗಬೇಕು. ಸ್ವಂತ ಹಿತಾಸಕ್ತಿಗಳುಳ್ಳ ಗುಂಪುಗಳಿಗೆ ನಾವು ಸಲಹೆಗಳನ್ನು ಸರಿಯಾಗಿ ನೀಡಿ ಜಾಗತಿಕ ಮಟ್ಟದಲ್ಲಿ ನ್ಯಾಯವು ಮೇಲುಗೈಯನ್ನು ಪಡೆಯುವಂತೆ ಮಾಡಬೇಕು. ಹಾಗೆ ಮಾಡಿದರೆ ಮಾತ್ರ ನಾವೆಲ್ಲರೂ ಆಶಿಸುವಂತಹ ಒಂದು

ಶಾಂತಿಧಾಮವಾಗಿ ಲೋಕವು ಪರಿವರ್ತನಗೊಳ್ಳುವುದು.

ಆದುದರಿಂದ ನಾವು ನಮ್ಮ ಪ್ರಯತ್ನಗಳನ್ನು ಬಿಟ್ಟುಬಿಡಬಾರದು. ದೌರ್ಜನ್ಯ ಮತ್ತು ಅನ್ಯಾಯಗಳ ವಿರುದ್ಧ ನಾವು ಧ್ವನಿಯೆತ್ತುವುದಿಲ್ಲವಾದರೆ ನಾವು ನೈತಿಕ ಮೌಲ್ಯರಹಿತರಾಗುವೆವು. ನಮ್ಮ ಧ್ವನಿಗಳು ಆಲಿಸಲ್ಪಡುವವೋ ಇಲ್ಲವೋ, ಅವು ಪ್ರಭಾವಶಾಲಿಯಾಗುವುವೋ ಇಲ್ಲವೋ ಎಂಬುದು ಅಪ್ರಸ್ತುತವಾಗಿದೆ. ನಾವು ಯಾವಾಗಲೂ ಶಾಂತಿ ಸ್ಥಾಪನೆಯ ಬಗ್ಗೆ ಅನ್ಯರಿಗೆ ಉಪದೇಶಿಸುತ್ತಾ ಇರಬೇಕು. ವಿವಿಧ ಧರ್ಮಗಳ ಮತ್ತು ವಿವಿಧ ಜನಾಂಗಗಳ ಜನರು ಮಾನವ ಮೌಲ್ಯಗಳನ್ನು ಪ್ರತಿಪಾದಿಸಲು ಇಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಲೋಕದಲ್ಲಿ ಶಾಂತಿ ಮತ್ತು ಸಹಾನುಭೂತಿ ಬಗ್ಗೆ ಆಲಿಸಿ, ಕಲಿತು, ಮಾತನಾಡಲು ಮುಂದಾಗುವುದನ್ನು ಕಾಣುವಾಗ ನಾನು ಯಾವಾಗಲೂ ಅತ್ಯಂತ ಸಂತೋಷಭರಿತನಾಗುತ್ತೇನೆ. ನೀವೆಲ್ಲರೂ ಲೋಕದಲ್ಲಿ ಶಾಂತಿ ಸ್ಥಾಪನೆಗೋಸ್ಕರ ನಿಮ್ಮ ಶಕ್ತಿ ಸಾಮರ್ಥ್ಯಕ್ಕನುಸಾರವಾಗಿ ಪ್ರಯತ್ನಿಸಬೇಕೆಂದು ನಿಮ್ಮೆಲ್ಲರನ್ನೂ ಅಪೇಕ್ಷಿಸುತ್ತೇನೆ. ಹೀಗೆ ಮಾಡಿದರೆ ನಾವು ನಮ್ಮ ಪ್ರತೀಕ್ಷೆಯ ಜ್ಯೋತಿಯನ್ನು ಬೆಳಗಿಸಿಡುವೆವು ಮತ್ತು ಸತ್ಯವಾದ ಶಾಂತಿ ಮತ್ತು ನ್ಯಾಯವು ಲೋಕದ ಎಲ್ಲ ಭಾಗಗಳಲ್ಲೂ ಸ್ಥಾಪಿಸಲ್ಪಡುವ ಕಾಲವು ಬಂದೇ ಬರುವುದು.

ನಾವು ಒಂದು ವಿಷಯವನ್ನು ಯಾವಾಗಲೂ ನೆನಪಿಡಬೇಕು. ಮನುಷ್ಯರ ಪ್ರಯತ್ನಗಳು ಸೋತುಹೋಗುವಾಗ ಸರ್ವಶಕ್ತನಾದ ದೇವನು ತನ್ನ ವಿಧಿಯನ್ನು ಜಾರಿಗೊಳಿಸುತ್ತಾನೆ ಮತ್ತು ಮಾನವರ ಭವಿಷ್ಯವನ್ನು ನಿರ್ಧರಿಸುತ್ತಾನೆ. ದೇವನು ತನ್ನ ವಿಧಿಯನ್ನು ಜಾರಿಗೊಳಿಸಿ ತನ್ನ ಕಡೆಗೆ ಮತ್ತು ಮಾನವರ ಹಕ್ಕುಗಳನ್ನು ಈಡೇರಿಸಿಕೊಡುವ ಬಗ್ಗೆ ಜನರನ್ನು ನಿರ್ಬಂಧಕ್ಕೊಳಪಡಿಸುವ ಮೊದಲೇ ಜನರು ಸ್ವತಃ ಈ ಅತ್ಯಾವಶ್ಯಕ ವಿಷಯಗಳ ಬಗ್ಗೆ ಗಮನಹರಿಸುವುದು ಬಹಳ ಉತ್ತಮವಾಗಿದೆ. ಏಕೆಂದರೆ ಸರ್ವಶಕ್ತನಾದ ದೇವನು ಕ್ರಮಕೈಗೊಳ್ಳುವಾಗ ಅವನ ಕೋಪವು ಮಾನವರನ್ನು ಅತ್ಯಂತ ಕಠಿಣವಾಗಿಯೂ ಭಯಾನಕವಾಗಿಯೂ ಹಿಡಿಗೂಡುತ್ತದೆ.

ಇಂದಿನ ಕಾಲದಲ್ಲಿ ದೇವನ ವಿಧಿನಿರ್ಣಯದ ಭಯಾನಕ ರೂಪವು ಇನ್ನೊಂದು ಮಹಾಯುದ್ಧದ ರೂಪದಲ್ಲಿ ಪ್ರತ್ಯಕ್ಷವಾಗಬಹುದು. ಅಂತಹ ಮಹಾಯುದ್ಧದ ದೋಷಭರಿತ ಪರಿಣಾಮಗಳು ಆ ಯುದ್ಧ ಕಾಲಕ್ಕೆ ಅಥವಾ ಈ ಪೀಳಿಗೆಗೆ ಮಾತ್ರ ಸೀಮಿತವಾಗಿರಲಾರವು ಎಂಬುದು ಸಂಶಯಾತೀತವಾಗಿದೆ. ಅಂತಹ ಯುದ್ಧದ ಭೀಕರ ಪರಿಣಾಮಗಳು ಮುಂದಿನ ಅನೇಕ ಪೀಳಿಗೆಗಳಿಗೆ ವ್ಯಾಪಿಸುವುವು. ಅದರ ಒಂದು ದಾರುಣ ಪರಿಣಾಮವು ಈಗ ಜನಿಸುವ ಮತ್ತು ಮುಂದೆ ಜನಿಸಲಿರುವ ಶಿಶುಗಳಿಗೆ ಹಾನಿಕರವಾಗಿರುವುದು. ಈಗ ಲಭ್ಯವಾಗಿರುವ ಅಣ್ವಸ್ತ್ರಗಳು ಎಷ್ಟು ವಿನಾಶಕಾರಿಗಳಾಗಿವೆ ಎಂದರೆ ಹಲವಾರು ಪೀಳಿಗೆಗಳಲ್ಲಿ ಹುಟ್ಟುವ ಮಕ್ಕಳು ತೀವ್ರತರವಾದ ಅಂಗವಿಕಲತೆಯನ್ನೂ ಅಂಗಹೀನತೆಯನ್ನೂ ವಂಶವಾಹಿ ಸಂಬಂಧವಾದ ನ್ಯೂನತೆಗಳನ್ನೂ ಹೊಂದಿ ಜನಿಸುವರು.

ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಜಪಾನ್ ಅಣುಬಾಂಬು ದಾಳಿಗೊಳಗಾಗಿ ಘೋರ ಯಾತನೆಗೆ ಗುರಿಯಾದ ದೇಶವಾಗಿದೆ. ಇಂದಿಗೂ ಜಪಾನ್ ದೇಶಕ್ಕೆ

ಭೇಟಿಕೊಡುವಾಗ ನೀವು ಜಪಾನಿನ ಜನರಲ್ಲಿ ಯುದ್ಧದ ಬಗ್ಗೆ ತೀವ್ರ ಭಯ ಮತ್ತು ದ್ವೇಷವನ್ನು ಅವರ ಮಾತುಗಳಿಂದಲೂ ಅವರ ಕಣ್ಣುಗಳಿಂದಲೂ ಕಾಣಬಹುದು. ಆದರೆ ಆ ಕಾಲದಲ್ಲಿ ಉಪಯೋಗಿಸಲಾಗುವ ಅಣುಬಾಂಬುಗಳು ವಿಸ್ತಾರ ಕ್ಷೇತ್ರದಲ್ಲಿ ವಿನಾಶವನ್ನುಂಟುಮಾಡಿದ್ದರೂ ಅವುಗಳು ಇಂದಿನ ಕಾಲದ ಅಣುಬಾಂಬುಗಳಿಗೆ ಹೋಲಿಸಿದರೆ ಬಹಳ ಕಡಿಮೆ ಶಕ್ತಿಶಾಲಿಗಳಾಗಿದ್ದುವು. ಇಂತಹ ಶಕ್ತಿಶಾಲಿ ಅಣುಬಾಂಬುಗಳು ಈಗ ಚಿಕ್ಕ ದೇಶಗಳಲ್ಲೂ ಇವೆ.

ಜಪಾನ್ ಮೇಲೆ ಅಣುಬಾಂಬು ದಾಳಿ ನಡೆದು ಏಳು ದಶಕಗಳು ದಾಟಿಹೋಗಿದ್ದರೂ ಅಣು ಬಾಂಬು ದಾಳಿಯ ದುಷ್ಪರಿಣಾಮಗಳು ಈಗ ಕೂಡ ಅಲ್ಲಿನ ನವಜಾತ ಶಿಶುಗಳಲ್ಲಿ ಕಂಡುಬರುತ್ತವೆ ಎಂದು ವರದಿಯಾಗಿದೆ. ಒಬ್ಬನಿಗೆ ಗುಂಡು ಹೊಡೆದರೆ ಕೆಲವು ಸಾರಿ ಅವನು ವೈದ್ಯಕೀಯ ಸೇವೆಯ ಮೂಲಕ ರಕ್ಷಿಸಲ್ಪಡಬಹುದಾಗಿದೆ. ಆದರೆ ಅಣ್ವಸ್ತ್ರ ಸಮರ ಪ್ರಾರಂಭವಾದರೆ ಅಣುಬಾಂಬ್ ದಾಳಿಗೆ ತುತ್ತಾಗುವ ಯಾರೂ ಇಂತಹ ಸುಯೋಗವನ್ನು ಗಳಿಸಲಾರರು. ಅಣುಬಾಂಬು ದಾಳಿಗೆ ಗುರಿಯಾಗುವವರು ಕೂಡಲೇ ಸತ್ತುಹೋಗುವರು ಮತ್ತು ಅವರ ದೇಹಗಳು ಪ್ರತಿಮೆಗಳ ಹಾಗೆ ಸ್ಥಗಿತಗೊಳ್ಳುವುವು. ಅವರ ಚರ್ಮವು ಕರಗಿ ಹೋಗುವುದು. ಕುಡಿಯುವ ನೀರು, ಆಹಾರ ಮತ್ತು ಸಸ್ಯಗಳು ಅಣು ವಿಕಿರಣದ ದೋಷಕರವಾದ ಪರಿಣಾಮಗಳಿಗೆ ಈಡಾಗುವುವು. ಆ ದೋಷಕರ ಪರಿಣಾಮಗಳು ಎಂತಹ ರೋಗಗಳನ್ನು ಉಂಟುಮಾಡಬಲ್ಲವು ಎಂಬುದರ ಬಗ್ಗೆ ನಾವು ಕೇವಲ ಊಹಿಸಬಹುದು. ಪ್ರದೇಶಗಳು ಅಣುಬಾಂಬು ದಾಳಿಗೆ ನೇರವಾಗಿ ಗುರಿಯಾಗಿಲ್ಲವಾದರೂ ಅಣುವಿಕಿರಣಗಳಿಗೆ ಕಡಿಮೆ ತುತ್ತಾಗಿದ್ದರೂ ರೋಗವು ಅಂತಹ ಸ್ಥಳಗಳಲ್ಲೂ ಹರಡುವುದು ಸಂಭಾವ್ಯವಾಗಿದೆ ಮತ್ತು ಅಲ್ಲೂ ಮುಂದಿನ ಪೀಳಿಗೆಗಳು ಸಹ ದೋಷಬಾಧಿತವಾಗುವುವು.

ನಾನು ಇದರ ಮೊದಲು ಹೇಳಿದ ಹಾಗೆ ಅಣು ಯುದ್ಧದ ವಿನಾಶಕಾರಿ ಪರಿಣಾಮಗಳು ಯುದ್ಧಕ್ಕೆ ಮತ್ತು ಅದರ ಸಮೀಪ ಕಾಲಕ್ಕೆ ಸೀಮಿತವಾಗಿರಲಾರವು. ಅವು ಪೀಳಿಗೆಗಳಿಂದ ಪೀಳಿಗೆಗಳಿಗೆ ದಾಟುತ್ತಾ ಹೋಗುವುವು. ಅಣುಬಾಂಬು ಬಳಸಲಾಗುವ ಯುದ್ಧದ ವಾಸ್ತವಿಕ ಪರಿಣಾಮಗಳು ಇವುಗಳಾಗಿದ್ದರೂ ಈಗ ಸಹ ಸ್ವಾರ್ಥಿಗಳಾದ ತಿಳಿಗೇಡಿ ಜನರು ತಮ್ಮ ಆವಿಷ್ಕಾರಗಳ ಬಗ್ಗೆ ಅತ್ಯಂತ ಹೆಮ್ಮೆಪಡುತ್ತಾ ತಾವು ಲೋಕಕ್ಕೆ ಒಂದು ಪಾರಿತೋಷಕವನ್ನು ಅರ್ಪಿಸಿದ ರೀತಿಯಲ್ಲಿ ಅದರ ಬಗ್ಗೆ ವಿವರಣೆ ನೀಡುತ್ತಾರೆ.

ಅಣು ಇಂಧನ ಮತ್ತು ತಂತ್ರಜ್ಞಾನದ ಉಪಯುಕ್ತತೆ ಬಗ್ಗೆ ವಿವರಿಸಲಾಗುತ್ತಿದ್ದರೂ ವಾಸ್ತವದಲ್ಲಿ ನಿರ್ಲಕ್ಷ್ಯತೆ ಮತ್ತು ಅಪಘಾತಗಳ ಕಾರಣಗಳಿಂದಲೂ ವ್ಯಾಪಕ ವಿನಾಶಕಾರಿ ಪರಿಣಾಮಗಳು ಉಂಟಾಗುವುವು. ನಾವು ಅಂತಹ ದುರ್ಘಟನೆಗಳಿಗೆ ಸಾಕ್ಷಿಯಾಗಿದ್ದೇವೆ. ಉದಾಹರಣೆಗೆ, 1986ರಲ್ಲಿ ಉಕ್ರೇನಿನ ಚರ್ನೋಬೈಲ್‌ನಲ್ಲಿ ನಡೆದ ಅಣು ಅಪಘಾತ. ಕಳೆದ ವರ್ಷ ಜಪಾನಿನಲ್ಲಿ ಉಂಟಾದ ಭೂಕಂಪ ಮತ್ತು ಸುನಾಮಿಯ ನಂತರ ಅಣು ರಿಯಾಕ್ಟರ್‌ಗಳ ಬಗ್ಗೆ ಬಹಳ ಭೀತಿ ಉಂಟಾಗಿತ್ತು. ಅಣು ಸಂಬಂಧಿಸಿದ ಅಪಘಾತಗಳು ನಡೆದರೆ ಅಂತಹ ಪ್ರದೇಶಗಳಲ್ಲಿ ಜನರನ್ನು ಪುನಃ ವಾಸಿಸುವಂತೆ ಮಾಡುವುದು ಬಹಳ ಕಷ್ಟಕರವಾಗಿರುತ್ತದೆ. ಜಪಾನಿಯರು ಅಸದೃಶ ಮತ್ತು ದಾರುಣ ಅನುಭವಗಳಿಗೆ ಈಡಾದ

ಕಾರಣ ಅವರು ಬಹಳ ಜಾಗರೂಕರಾಗಿರುವರು ಮತ್ತು ಅವರ ಭಯಭೀತಿಯು ನ್ಯಾಯಯುತವಾದುದೇ ಆತದೆ.

ಯುದ್ಧಗಳಲ್ಲಿ ಜನರು ಸಾಯುತ್ತಾರೆ ಎಂಬುದು ಒಂದು ಸತ್ಯ ಸಂಗತಿಯಾಗಿದೆ. ಜಪಾನ್ ದ್ವಿತೀಯ ಮಹಾಯುದ್ಧದಲ್ಲಿ ಪ್ರವೇಶಿಸಿದಾಗ ಅಲ್ಲಿನ ಸರಕಾರ ಮತ್ತು ಜನರು, ಆ ಯುದ್ಧದಲ್ಲಿ ಕೆಲವರು ಸಾಯುವರು ಎಂದು ಚೆನ್ನಾಗಿ ತಿಳಿದಿದ್ದರು. ಅಂದಾಜು ಮೂರು ಮಿಲಿಯ ಜಪಾನಿಯರು ಆ ಯುದ್ಧದಲ್ಲಿ ಕೊಲ್ಲಲ್ಪಟ್ಟರು. ಇದು ಆ ದೇಶದ ಜನಸಂಖ್ಯೆಯ ಶೇಕಡ ನಾಲ್ಕರಷ್ಟು ಆಗುತ್ತದೆ. ಬೇರೆ ಕೆಲವು ದೇಶಗಳಲ್ಲಿ ಇದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸತ್ತಿರಬಹುದಾದರೂ ಜಪಾನಿನ ಜನರಲ್ಲಿ ಯುದ್ಧದ ಬಗ್ಗೆ ಇರುವ ದ್ವೇಷ ಮತ್ತು ವಿರೋಧವು ಇತರ ದೇಶದ ಜನರಿಗೆ ಹೋಲಿಸಿ ನೋಡುವುದಾದರೆ ಬಹಳ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಇದಕ್ಕೆ ಕಾರಣವೇನೆಂದರೆ, ದ್ವಿತೀಯ ಮಹಾ ಯುದ್ಧದ ಕಾಲದಲ್ಲಿ ಎರಡು ಅಣುಬಾಂಬುಗಳನ್ನು ಜಪಾನಿನ ಮೇಲೆ ಹಾಕಲಾಯಿತು ಮತ್ತು ಅವುಗಳ ದುಷ್ಪರಿಣಾಮಗಳನ್ನು ಅವರು ಈಗಲೂ ಅನುಭವಿಸುತ್ತಿದ್ದಾರೆ. ಜಪಾನಿಯರು ತಮ್ಮ ದೇಶವನ್ನು ಪೂರ್ವಸ್ಥಿತಿಗೆ ತರುವಲ್ಲಿ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿರುವರು. ಅವರು ನಾಶವಾದ ನಗರಗಳಲ್ಲಿ ಪುನರ್ ನಿವೇಶನವನ್ನು ಬೇಗ ಬೇಗನೆ ಈಡೇರಿಸಿದರು. ಆದರೆ ನಾನು ಒಂದು ವಿಷಯ ಸ್ಪಷ್ಟಪಡಿಸಲು ಬಯಸುತ್ತೇನೆ. ಈಗಿನ ಕಾಲದಲ್ಲಿ ಅಣುಬಾಂಬುಗಳು ಪ್ರಯೋಗಿಸಲ್ಪಟ್ಟರೆ ಕೆಲವು ದೇಶಗಳ ಕೆಲವು ಪ್ರದೇಶಗಳು ಸಂಪೂರ್ಣವಾಗಿ ಅಳಿಸಿ ಹೋಗುವುವು. ಆ ದೇಶಗಳು ಸಹ ನಾಮಾವಶೇಷವಾಗಬಹುದು.

ದ್ವಿತೀಯ ಮಹಾಯುದ್ಧದಲ್ಲಿ ಸತ್ತವರ ಸಂಖ್ಯೆ ಮಿತವಾದ ಅಂದಾಜು ಪ್ರಕಾರ 62 ಮಿಲಿಯನ್ ಆಗಿದೆ. ಅವರಲ್ಲಿ 40 ಮಿಲಿಯ ಜನರು ನಾಗರಿಕರಾಗಿದ್ದರು. ಹಾಗಾದರೆ ಸೈನಿಕರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ನಾಗರಿಕರು ಸತ್ತರೆಂದು ಸ್ಪಷ್ಟವಾಗುತ್ತದೆ. ಜಪಾನ್‌ನಲ್ಲಿ ಹೊರತು ಬೇರೆಲ್ಲೂ ಅಣುಬಾಂಬು ದಾಳಿ ನಡೆದಿರದಿದ್ದರೂ ಅಲ್ಲೆಲ್ಲ ಸಾಂಪ್ರದಾಯಿಕ ರೀತಿಯ ಯುದ್ಧಗಳು ಅಣು ರಹಿತ ಅಸ್ತ್ರಗಳನ್ನು ಬಳಸಿ ನಡೆಸಲಾಗಿದ್ದರೂ ಇಷ್ಟು ಸಾವುಗಳು ಸಂಭವಿಸಿದವು.

ಬ್ರಿಟನ್ ಅಂದಾಜು ಅರ್ಧ ಮಿಲಿಯನ್ ಜನರನ್ನು ಕಳೆದುಕೊಂಡಿತು. ಆ ಸಮಯದಲ್ಲಿ ಬ್ರಿಟನ್ ಅನೇಕ ವಸಾಹತು ಪ್ರದೇಶಗಳನ್ನು ಹೊಂದಿದ್ದುದರಿಂದ ಅಲ್ಲಿನ ಜನರು ಸಹ ಬ್ರಿಟನಿನ ಪರವಾಗಿ ಯುದ್ಧದಲ್ಲಿ ಭಾಗವಹಿಸಿದರು. ಅವರ ಸಂಖ್ಯೆಯನ್ನು ಸೇರಿಸುವುದಾದರೆ ಮಿಲಿಯಾಂತರ ಜನರು ಸತ್ತರೆಂದು ತಿಳಿಯುತ್ತದೆ. ಇಂಡಿಯಾ ದೇಶದಲ್ಲಿ 1.6 ಮಿಲಿಯ ಜನರು ದ್ವಿತೀಯ ಮಹಾಯುದ್ಧ ಕಾಲದಲ್ಲಿ ಸಾವಿಗೀಡಾದರು.

ಈಗ ಸ್ಥಿತಿಯು ಬದಲಾವಣೆಗೊಂಡಿದೆ. ಬ್ರಿಟನಿನ ಆಡಳಿತಗೊಳಪಟ್ಟ ದೇಶಗಳು ಬ್ರಿಟಿಷ್ ಸಾಮ್ರಾಜ್ಯಕ್ಕೋಸ್ಕರ ಯುದ್ಧಮಾಡಿದ್ದುವು. ಆ ದೇಶಗಳು, ಈಗ ಯುದ್ಧ ಪ್ರಾರಂಭವಾಗುವುದಾದರೆ ಬ್ರಿಟನಿನ ವಿರುದ್ಧ ಹೋರಾಡಬಲ್ಲವುಗಳಾಗಿವೆ. ಇದಲ್ಲದೆ ನಾನು ಮೊದಲು ಹೇಳಿದಂತೆ ಕೆಲವು ಚಿಕ್ಕ ದೇಶಗಳು ಸಹ ಅಣ್ವಸ್ತ್ರಗಳನ್ನು ಹೊಂದಿವೆ.

ತಮ್ಮ ಕೆಲಸಗಳ ದುಷ್ಪರಿಣಾಮಗಳನ್ನು ಅರಿತುಕೊಳ್ಳುವ ಸಾಮರ್ಥ್ಯವಿಲ್ಲದ ಮತ್ತು

ಅದರ ಬಗ್ಗೆ ಚಿಂತಿಸುವುದಕ್ಕೆ ಮುಂದಾಗದ ಜನರ ಕೈಗಳಿಗೆ ಅಣ್ವಸ್ತ್ರಗಳು ಸಿಗಬಹುದಾಗಿದೆ ಎಂಬುದು ಅತ್ಯಂತ ಭಯಭೀತಿ ಉಂಟುಮಾಡುವ ವಿಷಯವಾಗಿದೆ. ವಾಸ್ತವದಲ್ಲಿ ಅವರು ತಮ್ಮ ದುಷ್ಕೃತ್ಯಗಳ ದುಷ್ಪರಿಣಾಮಗಳ ಬಗ್ಗೆ ನಿರ್ಲಕ್ಷ್ಯತೆ ಹೊಂದಿರುವ ಯುದ್ಧಪ್ರಿಯರಾಗಿದ್ದಾರೆ.

ಮಹಾಶಕ್ತಿ ರಾಷ್ಟ್ರಗಳು ನ್ಯಾಯಯುತವಾಗಿ ವರ್ತಿಸುವುದಿಲ್ಲವಾದರೆ, ಚಿಕ್ಕ ದೇಶಗಳ ಆತಂಕಗಳನ್ನು ದೂರೀಕರಿಸುವುದಿಲ್ಲವಾದರೆ ಮತ್ತು ಉತ್ತಮವೂ ವಿವೇಕಭರಿತವೂ ಆಗಿರುವ ಧೋರಣೆಗಳನ್ನು ಕೈಗೊಳ್ಳುವುದಿಲ್ಲವಾದರೆ ಲೋಕದ ಪರಿಸ್ಥಿತಿಯು ನಿಯಂತ್ರಣಾತೀತವಾಗುವುದು ಮತ್ತು ಊಹಾತೀತವಾದ ವಿನಾಶವು ಸಂಭವಿಸುವುದು. ಶಾಂತಿಯನ್ನು ಬಯಸುವ ಲೋಕದ ಬಹುತೇಕ ಭಾಗದ ಜನರು ಕೂಡ ಈ ನಾಶದಿಂದ ಆವರಿಸಲ್ಪಡುವರು.

ಆದುದರಿಂದ ಲೋಕದ ಮಹಾ ಶಕ್ತಿರಾಷ್ಟ್ರಗಳ ನಾಯಕರು ಈ ವಿನಾಶಕಾರಿ ವಾಸ್ತವಿಕತೆಯನ್ನು ಮನಗಾಣಬೇಕೆಂದು ನಾನು ಹೃತ್ಪೂರ್ವಕವಾಗಿ ಆಶಿಸುತ್ತೇನೆ. ಅವರು ತಮ್ಮ ಉದ್ದೇಶ ಲಕ್ಷ್ಯಗಳನ್ನು ಗಳಿಸಲು ಬಲಾತ್ಕಾರವನ್ನು ಮತ್ತು ಬಲಪ್ರಯೋಗವನ್ನು ಕೈಬಿಟ್ಟು ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸುವ ಧೋರಣೆಗಳನ್ನು ಕೈಗೊಳ್ಳಲು ಪ್ರಯತ್ನಿಸಬೇಕು.

ಇತ್ತೀಚೆಗೆ ರಶ್ಯದ ಮಿಲಿಟರಿಯ ಒಬ್ಬ ಹಿರಿಯ ಸೇನಾ ನಾಯಕ ಅಣು ಯುದ್ಧದ ಸಾಧ್ಯತೆಯ ಬಗ್ಗೆ ಗಂಭೀರ ಮುನ್ನೆಚ್ಚರಿಕೆ ನೀಡಿದ್ದರು. ಅವರ ಅಭಿಪ್ರಾಯ ಪ್ರಕಾರ ಏಶಿಯಾ ಮತ್ತು ಇತರ ಪ್ರದೇಶಗಳಲ್ಲಿ ಈ ಯುದ್ಧ ನಡೆಯಲಾರದು. ಅದು ಯುರೋಪಿನ ಗಡಿಗಳಲ್ಲಿ ನಡೆಯುವುದು. ಪೂರ್ವ ಯುರೋಪಿಯನ್ ದೇಶಗಳಲ್ಲಿ ಈ ಯುದ್ಧದ ಕಿಡಿಯು ಹೊರಚಿಮ್ಮಿ ಯುದ್ಧವು ಪ್ರಾರಂಭವಾಗುವುದು. ಕೆಲವು ಜನರು ಇದು ಆ ಸೇನಾನಾಯಕನ ಕೇವಲ ಸ್ವಂತ ಅಭಿಪ್ರಾಯ ಎಂದು ಹೇಳಬಹುದಾದರೂ ಅವರ ಅಭಿಪ್ರಾಯ ಅಸಂಭಾವ್ಯವೆಂದು ನಾನು ಭಾವಿಸುವುದಿಲ್ಲ. ಅದರೊಂದಿಗೆ, ಅಂತಹ ಯುದ್ಧವೇನಾದರೂ ಪ್ರಾರಂಭವಾದರೆ ಏಶಿಯಾದ ದೇಶಗಳು ಸಹ ಆ ಯುದ್ಧದಲ್ಲಿ ಸೇರಿಕೊಳ್ಳುವುವು ಎಂದು ನಾನು ನಂಬುತ್ತೇನೆ.

ಇನ್ನೊಂದು ವಾರ್ತೆಗೆ ಇತ್ತೀಚೆಗೆ ವ್ಯಾಪಕ ಪ್ರಚಾರ ನೀಡಲಾಗಿದೆ. ಇಸ್ರಾಯೇಲ್ ದೇಶದ ಗುಪ್ತಚಾರ ಸಂಸ್ಥೆಯಾದ ಮೊಸ್ಸಾದಿನ ನಿವೃತ್ತ ಮುಖ್ಯಾಧಿಕಾರಿ ಅಮೇರಿಕದ ಟೆಲಿವಿಶನ್ ಚ್ಯಾನಲ್ CBSಗೆ ನೀಡಿದ ಸಂದರ್ಶನದಲ್ಲಿ ಹೀಗೆ ಹೇಳಿದರು: "ಇಸ್ರಾಯೇಲ್ ಸರಕಾರ ಇರಾನಿನ ವಿರುದ್ಧ ಯುದ್ಧ ಮಾಡಲು ಬಯಸುತ್ತಿದೆ ಎಂದು ತೋರುತ್ತದೆ. ಆದರೆ ಅಂತಹ ಯುದ್ಧವೇನಾದರೂ ಪ್ರಾರಂಭವಾಗುವುದಾದರೆ ಆ ಯುದ್ಧವು ಹೇಗೆ ಕೊನೆಗೊಳ್ಳುವುದೆಂದು ತಿಳಿಯಲು ಅಸಾಧ್ಯವಾಗಿದೆ." ಆದುದರಿಂದ ಅಂತಹ ಆಕ್ರಮಣ ಮಾಡುವುದನ್ನು ಅವರು ತೀವ್ರವಾಗಿ ವಿರೋಧಿಸಿದರು.

ನನ್ನ ಅಭಿಪ್ರಾಯವೇನೆಂದರೆ, ಅಂತಹ ಯುದ್ಧವೇನಾದರೂ ಪ್ರಾರಂಭವಾಗುವುದಾದರೆ ಅದರ ಪರಿಣಾಮವಾಗಿ ಅಣುಬಾಂಬು ವರ್ಷಿಸಲ್ಪಡುವ ವಿನಾಶವು ಸಂಭವಿಸುವುದು.

ನಾನು ಒಂದು ಲೇಖನವನ್ನು ಇತ್ತೀಚೆಗೆ ಕಂಡೆನು. ಅದರಲ್ಲಿ ಲೇಖಕ ಹೀಗೆ ಹೇಳಿದ್ದರು: ಇಂದಿನ ಲೋಕದ ಸ್ಥಿತಿ ರಾಜಕೀಯವಾಗಿಯೂ ಆರ್ಥಿಕವಾಗಿಯೂ 1932ರ ಲೋಕದ ಸ್ಥಿತಿಗೆ ಸಮಾನವಾಗಿದೆ. ಕೆಲವು ದೇಶಗಳಲ್ಲಿರುವ ಜನರಿಗೆ ತಮ್ಮ ರಾಜಕಾರಣಿಗಳ ಬಗ್ಗೆ ಮತ್ತು ತಮ್ಮ ತಥಾಕಥಿತ ಪ್ರಜಾಪ್ರಭುತ್ವಗಳ ಬಗ್ಗೆ ವಿಶ್ವಾಸವಿಲ್ಲ. ಅನೇಕ ಸಮಾನ ಘಟಕಗಳು ಮತ್ತು ಸಮಾನ ಸ್ಥಿತಿಗಳು ಒಟ್ಟಿಗೆ ಸೇರಿಕೊಂಡಿದ್ದು ಅವು ಲೋಕವನ್ನು ದ್ವಿತೀಯ ಮಹಾಯುದ್ಧದ ಪ್ರಾರಂಭಕ್ಕೆ ಮೊದಲು ಇದ್ದ ಸ್ಥಿತಿಗತಿಗಳಿಗೆ ಸಮಾನವಾದ ಸ್ಥಿತಿಗೆ ತಲಪಿಸಿವೆ.

ಕೆಲವರು ಈ ಅಭಿಪ್ರಾಯವನ್ನು ಒಪ್ಪದಿರಬಹುದು. ಆದರೆ ನಾನು ಈ ಅಭಿಪ್ರಾಯವನ್ನು ಅಂಗೀಕರಿಸುತ್ತೇನೆ. ಇದೇ ಕಾರಣದಿಂದ ಲೋಕದ ಸರಕಾರಗಳು ಈ ಪರಿಸ್ಥಿತಿಯ ಬಗ್ಗೆ ಅತ್ಯಂತ ಚಿಂತಿತರಾಗಬೇಕೆಂದೂ ಅದರ ಬಗ್ಗೆ ಲಕ್ಷ್ಯ ನೀಡುವವರಾಗಬೇಕೆಂದೂ ನಾನು ನಿರೀಕ್ಷಿಸುತ್ತೇನೆ. ಇದೇ ರೀತಿ ಕೆಲವು ಮುಸ್ಲಿಮ್ ದೇಶಗಳ ಅನ್ಯಾಯದಿಂದ ವರ್ತಿಸುವ ನಾಯಕರು ಹೇಗಾದರೂ ತಮ್ಮ ಅಧಿಕಾರಕ್ಕೆ ಅಂಟಿಕೊಂಡಿರಬೇಕೆಂಬ ಏಕಮಾತ್ರ ಉದ್ದೇಶವನ್ನು ಹೊಂದಿದವರಾಗಿದ್ದಾರೆ. ಅವರು ತಮ್ಮ ಸ್ಥಿತಿಯ ಬಗ್ಗೆ ಪ್ರಜ್ಞಾವಂತರಾಗಬೇಕು. ಹೀಗೆ ಮಾಡದಿದ್ದರೆ ಅವರ ತಿಳಿಗೇಡಿ ವರ್ತನೆಗಳು ಅವರನ್ನು ನಾಶಕ್ಕೊಯ್ಯುವುವು ಮತ್ತು ಅವರು ತಂತಮ್ಮ ದೇಶಗಳನ್ನು ಅತ್ಯಂತ ಭಯಾನಕ ಪರಿಸ್ಥಿತಿಗೆ ಒಯ್ಯುವರು.

ಅಹ್ಮದಿಯಾ ಮುಸ್ಲಿಮ್ ಸಂಘಟನೆಗೆ ಸೇರಿದ ನಾವು ಲೋಕವನ್ನೂ ಲೋಕದ ಜನರನ್ನೂ ವಿನಾಶದಿಂದ ರಕ್ಷಿಸಲು ನಮಗೆ ಸಾಧ್ಯವಿರುವಷ್ಟರ ಮಟ್ಟಿಗೆ ಪ್ರಯತ್ನ ಮಾಡುತ್ತಿದ್ದೇವೆ. ಇದು ಏಕೆಂದರೆ ನಾವು ಈ ಕಾಲಘಟ್ಟದ ಇಮಾಮರನ್ನು ನಂಬುತ್ತೇವೆ. ಅವರನ್ನು ಅಲ್ಲಾಹನು ವಾಗ್ದತ್ತ ಮಸೀಹರಾಗಿ ಮತ್ತು ಸಕಲ ಲೋಕಗಳಿಗೆ ಅನುಗ್ರಹದಾಯಕರಾಗಿ ಆಗಮಿಸಿದ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ದಾಸರಾಗಿ ಕಳುಹಿಸಿದನು.

ನಾವು ಇಸ್ಲಾಮಿನ ಮಹಾನ್ ಪ್ರವಾದಿಯರ ಉಪದೇಶಗಳನ್ನು ಅನುಸರಿಸುವವರಾದ ಕಾರಣ ಲೋಕದ ಇಂದಿನ ಪರಿಸ್ಥಿತಿಯನ್ನು ನೋಡಿ ನಾವು ಅತ್ಯಂತ ಹೆಚ್ಚು ನೋವನ್ನು ಮತ್ತು ಆತಂಕವನ್ನು ನಮ್ಮ ಹೃದಯದಲ್ಲಿ ಅನುಭವಿಸುತ್ತಿದ್ದೇವೆ. ಲೋಕದ ಜನತೆಯನ್ನು ನಾಶದಿಂದಲೂ ಕಷ್ಟದಿಂದಲೂ ರಕ್ಷಿಸಲು ಇದು ನಮ್ಮನ್ನು ಪ್ರಚೋದಿಸುತ್ತಾ ಇದೆ. ಆದುದರಿಂದ ನಾನು ಮತ್ತು ಎಲ್ಲ ಅಹ್ಮದೀ ಮುಸ್ಲಿಮರು ಲೋಕದಲ್ಲಿ ಶಾಂತಿ ಸ್ಥಾಪನೆಗೋಸ್ಕರ ನಮ್ಮ ಜವಾಬ್ದಾರಿಗಳನ್ನು ಈಡೇರಿಸಲು ಪರಿಶ್ರಮಪಡುತ್ತಾ ಇರುತ್ತೇವೆ.

ಲೋಕದಲ್ಲಿ ಶಾಂತಿ ಸ್ಥಾಪನೆಗೆ ನಾನು ಮಾಡಿದ ಪ್ರಯತ್ನಗಳಲ್ಲಿ ಒಂದು, ಲೋಕದ ಕೆಲವು ನಾಯಕರಿಗೆ ನಾನು ಬರೆದ ಪತ್ರಗಳಾಗಿವೆ. ಕೆಲವು ತಿಂಗಳುಗಳ ಹಿಂದೆ ನಾನು ಪೋಪ್ ಬೆನಡಿಕ್ಟರಿಗೆ ಪತ್ರ ಬರೆದಿದ್ದೆನು. ಅದನ್ನು ನನ್ನ ಪ್ರತಿನಿಧಿಯಾದ ಒಬ್ಬ ಅಹ್ಮದೀ ಅವರಿಗೆ ನೇರವಾಗಿ ತಲಪಿಸಿದರು. ಪೋಪರು ಲೋಕದ ಅತ್ಯಂತ ದೊಡ್ಡ ಧಾರ್ಮಿಕ ಪಂಗಡದ ಮುಖಂಡರಾಗಿರುವ ಕಾರಣ ಅವರು ಲೋಕದಲ್ಲಿ ಶಾಂತಿ ಸ್ಥಾಪನೆಗೋಸ್ಕರ

ಪ್ರಯತ್ನ ಮಾಡಲೇ ಬೇಕು ಎಂದು ನಾನು ಅವರೊಂದಿಗೆ ಆ ಪತ್ರದಲ್ಲಿ ಅಪೇಕ್ಷಿಸಿದ್ದೆನು.

ಇತ್ತೀಚೆಗೆ ಇರಾನ್ ಮತ್ತು ಇಸ್ರಾಯೇಲ್ ಮಧ್ಯೆ ವಿರೋಧವು ವರ್ಧಿಸುತ್ತಿರುವುದನ್ನು ಕಂಡು ನಾನು ಒಂದು ಪತ್ರವನ್ನು ಇಸ್ರಾಯೇಲ್ ಪ್ರಧಾನ ಮಂತ್ರಿ ನೆತನ್ಯಾಹೂರಿಗೂ ಇರಾನಿನ ಅಧ್ಯಕ್ಷ ಮಹ್‌ಮೂದ್ ನೆಜಾದ್‌ರಿಗೂ ಬರೆದು ಅವುಗಳಲ್ಲಿ, ಅವರು ಅವಸರದಿಂದಲೂ ನಿರ್ಲಕ್ಷ್ಯಭಾವನೆಯಿಂದಲೂ ತೀರ್ಮಾನಗಳನ್ನು ಕೈಗೊಳ್ಳಬಾರದೆಂದೂ ಮಾನವರ ಹಿತಕ್ಕೋಸ್ಕರ ಸಹನೆದೋರಬೇಕೆಂದೂ ಅಪೇಕ್ಷಿಸಿದ್ದೆನು.

ಇತ್ತೀಚೆಗೆ ನಾನು ಅಮೇರಿಕದ ಪ್ರೆಸಿಡೆಂಟ್ ಬರಾಕ್ ಒಬಾಮರಿಗೂ ಕೆನಡದ ಪ್ರಧಾನ ಮಂತ್ರಿ ಸ್ಟೀಫನ್ ಹಾರ್ಪರರಿಗೂ ಪತ್ರ ಬರೆದು, ಅವರು ಲೋಕದಲ್ಲಿ ಶಾಂತಿ ಮತ್ತು ಸೌಹಾರ್ದ ವಾತಾವರಣ ಸ್ಥಾಪಿಸಲು ತಮ್ಮ ಜವಾಬ್ದಾರಿಗಳನ್ನು ಈಡೇರಿಸಬೇಕೆಂದು ಕೋರಿದ್ದೆನು.

ಇನ್ನು ಮುಂದೆ ಬೇಗನೆ ಇತರ ದೇಶಗಳ ನಾಯಕರಿಗೂ ಮುನ್ನೆಚ್ಚರಿಕೆ ನೀಡುವ ಪತ್ರಗಳನ್ನು ಬರೆಯಲು ನಾನು ಸಿದ್ಧತೆಗಳನ್ನು ಮಾಡಿದ್ದೇನೆ.

ನಾನು ಬರೆದ ಪತ್ರಗಳಿಗೆ ವಿವಿಧ ದೇಶಗಳ ನಾಯಕರು ಯಾವ ಮಹತ್ವ ನೀಡುವರು ಎಂದು ನನಗೆ ತಿಳಿಯದು. ಆದರೆ ಅವರೆಲ್ಲರ ಪ್ರತಿಕ್ರಿಯೆ ಹೇಗೆಯೇ ಇರಲಿ, ನಾನು ಮಿಲಿಯಗಟ್ಟಲೆ ಅಹ್ಮದೀ ಮುಸ್ಲಿಮರ ಆಧ್ಯಾತ್ಮಿಕ ನಾಯಕನೆಂಬ ನೆಲೆಯಲ್ಲಿ ಲೋಕವು ವಿಪತ್ತಿನ ಪರಿಸ್ಥಿತಿಯಲ್ಲಿರುವ ಬಗ್ಗೆ ನಮ್ಮ ಭಾವನೆಗಳನ್ನೂ ಆತಂಕಗಳನ್ನೂ ಲೋಕದ ನಾಯಕರಿಗೆ ತಲಪಿಸಲು ಪ್ರಯತ್ನಿಸಿದ್ದೇನೆ.

ಒಂದು ವಿಷಯವನ್ನು ಸ್ಪಷ್ಟಪಡಿಸಲು ನಾನು ಬಯಸುತ್ತೇನೆ. ನನಗೆ ವೈಯಕ್ತಿಕವಾಗಿ ಭೀತಿ ಇರುವುದರಿಂದ ನಾನು ಈ ಭಾವನೆಗಳನ್ನು ವ್ಯಕ್ತಪಡಿಸಿದುದಲ್ಲ. ಬದಲಾಗಿ, ನಾನು ಮಾನವತೆಯ ಬಗ್ಗೆ ಪ್ರಾಮಾಣಿಕ ಪ್ರೀತಿಯಿಂದ ಪ್ರೇರಿತನಾಗಿದ್ದೇನೆ.

ಎಲ್ಲ ನೈಜ ಮುಸ್ಲಿಮರಲ್ಲಿ ಮಾನವರಿಗೋಸ್ಕರ ಪ್ರೀತಿಯು ತುಂಬಿಸಲ್ಪಟ್ಟು ಬೆಳೆಸಿದುದು ಲೋಕದ ಸರ್ವರಿಗೂ ಅನುಗ್ರಹವಾಗಿ ಆಗಮಿಸಿದ ಪುಣ್ಯ ಪ್ರವಾದಿ ನೀಡಿದ ಉಪದೇಶಗಳಾಗಿವೆ ಎಂಬುದರ ಬಗ್ಗೆ ನಾನು ಇದರ ಮೊದಲು ಸಹ ಪ್ರಸ್ತಾಪಿಸಿರುವೆನು.

ನಾವು ಮಾನವರೆಲ್ಲರನ್ನೂ ಪ್ರೀತಿಸುವುದು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉಪದೇಶ ಪ್ರಕಾರವೆಂದು ನೀವು ಆಲಿಸುವಾಗ ನೀವು ಆಶ್ಚರ್ಯಚಕಿತರಾಗಬಹುದು. ಮುಸ್ಲಿಮರಲ್ಲಿ ನಿರಪರಾಧಿ ಜನರನ್ನು ಕೊಲ್ಲುವ ಭೀಕರ ಗುಂಪುಗಳೇಕೆ ಇವೆ? ಮುಸ್ಲಿಮ್ ಸರಕಾರಗಳು ತಮ್ಮ ಅಧಿಕಾರವನ್ನು ಕಾಪಾಡಲು ಜನರನ್ನು ಸಾಮೂಹಿಕವಾಗಿ ಹತ್ಯೆ ಮಾಡಲು ಏಕೆ ಆಜ್ಞಾಪಿಸುತ್ತವೆ? ಎಂಬ ಪ್ರಶ್ನೆಗಳು ನಿಮ್ಮಲ್ಲಿ ಉದಿಸಬಹುದು.

ನಾನು ನಿಮಗೆ ಸಂಪೂರ್ಣವಾಗಿ ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ. ಅಂತಹ ಕೆಟ್ಟ ಕೃತ್ಯಗಳು ಇಸ್ಲಾಮ್ ಧರ್ಮ ತತ್ವಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿವೆ. ಪವಿತ್ರ ಖುರ್‌ಆನ್ ಯಾವುದೇ ಸಂದರ್ಭದಲ್ಲಿಯೂ ಭೀಕರ ಕೃತ್ಯಗಳಿಗೆ ಅನುಮತಿ ನೀಡುವುದಿಲ್ಲ.

ನಮ್ಮ ನಂಬಿಕೆ ಪ್ರಕಾರ ಈ ಕಾಲಘಟ್ಟದಲ್ಲಿ ಸರ್ವಶಕ್ತನಾದ ದೇವನು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರಾದ ಹಝ್‌ರತ್ ಮಿರ್ಝಾ ಗ಼ುಲಾಮ್ ಅಹ್ಮದ್‌ರನ್ನು[ಅ] ವಾಗ್ದತ್ತ ಮಸೀಹರಾಗಿ ಮತ್ತು ಇಮಾಮ್ ಮಹ್‌ದಿಯಾಗಿ ಹಝ್‌ರತ್ ಮುಹಮ್ಮದ್ ಪೈಗಂಬರರ[ಸ] ನಿಷ್ಠಾವಂತ ದಾಸನಾಗಿ ನೇಮಿಸಿ ಕಳುಹಿಸಿರುವನು. ವಾಗ್ದತ್ತ ಮಸೀಹರನ್ನು ಇಸ್ಲಾಮ್ ಮತ್ತು ಪವಿತ್ರ ಖುರ್‌ಆನಿನ ನಿಜವಾದ ಉಪದೇಶಗಳನ್ನು ಲೋಕದಾದ್ಯಂತ ಪ್ರಚಾರ ಮಾಡಲು ಕಳುಹಿಸಲಾಯಿತು. ಮನುಷ್ಯ ಮತ್ತು ದೇವನ ಮಧ್ಯೆ ಸಂಬಂಧ ಸ್ಥಾಪಿಸುವುದು ಸಹ ಅವರ ಆಗಮನದ ಇನ್ನೊಂದು ಉದ್ದೇಶವಾಗಿದೆ. ಮನುಷ್ಯರು ಪರಸ್ಪರ ಹೊಂದಿರುವ ಹಕ್ಕುಗಳನ್ನೂ ಅವರ ಬಾಧ್ಯತೆಗಳನ್ನೂ ಮನವರಿಕೆ ಮಾಡಿಕೊಡಲು ಅವರು ಆಗಮಿಸಿದರು. ಎಲ್ಲ ವಿಧಗಳ ಧಾರ್ಮಿಕ ಯುದ್ಧಗಳನ್ನು ಕೊನೆಗೊಳಿಸಲು ಅವರು ಆಗಮಿಸಿದರು. ಪ್ರತಿಯೊಂದು ಧರ್ಮದ ಸ್ಥಾಪಕರನ್ನೂ ಪ್ರವಾದಿಗಳನ್ನೂ ಗೌರವಿಸಲು ಜನರಿಗೆ ಕಲಿಸಲು ಅವರನ್ನು ಕಳುಹಿಸಲಾಯಿತು. ಅತ್ಯುನ್ನತ ನೈತಿಕ ಮಟ್ಟವನ್ನು ತಲಪುವ ಬಗ್ಗೆ ಜನರಿಗೆ ಉಪದೇಶಿಸಲು, ಲೋಕದಲ್ಲಿ ಶಾಂತಿ, ಪ್ರೀತಿ, ಸಹಾನುಭೂತಿ ಮತ್ತು ಭ್ರಾತೃತ್ವ ಸ್ಥಾಪಿಸಲು ಅವರನ್ನು ಕಳುಹಿಸಲಾಯಿತು.

ನೀವು ಲೋಕದ ಯಾವ ಭಾಗಕ್ಕೆ ಹೋದರೂ ಅಹ್ಮದೀ ಮುಸ್ಲಿಮರಲ್ಲಿ ಈ ಸದ್ಗುಣಗಳನ್ನು ಕಾಣುವಿರಿ. ನಮಗೆ ಭೀಕರವಾದಿಗಳಾಗಲಿ ಮತಭ್ರಾಂತರಾಗಲಿ ಮಾದರಿ ಆಗಿಲ್ಲ. ಕ್ರೂರ ಮುಸ್ಲಿಮ್ ನಿರಂಕುಶ ಪ್ರಭುಗಳು ಸಹ ನಮಗೆ ಮಾದರಿಯಾಗಿಲ್ಲ, ಪಾಶ್ಚಿಮಾತ್ಯ ಶಕ್ತಿ ರಾಷ್ಟ್ರಗಳೂ ನಮಗೆ ಮಾದರಿಯಾಗಿಲ್ಲ. ನಾವು ಅನುಸರಿಸುವುದು ಇಸ್ಲಾಮಿನ ಪ್ರವಾದಿ ಹಝ್‌ರತ್ ಮುಹಮ್ಮದ್‌ರ[ಸ] ಮಾದರಿಯನ್ನು ಮಾತ್ರವಾಗಿದೆ. ನಮಗೆ ಮಾರ್ಗದರ್ಶನ ನೀಡುವ ತತ್ವಗಳು ಪವಿತ್ರ ಖುರ್‌ಆನಿನಲ್ಲಿದೆ.

ಈ ಶಾಂತಿ ವಿಚಾರಗೋಷ್ಠಿಯಲ್ಲಿ ನಾನು ಒಂದು ಸಂದೇಶವನ್ನು ಲೋಕದಾದ್ಯಂತ ನೀಡಲು ಬಯಸುತ್ತೇನೆ. ಪವಿತ್ರ ಖುರ್‌ಆನಿನ ಸಂದೇಶ ಮತ್ತು ಉಪದೇಶ ಪ್ರೀತಿ, ಸಹಾನುಭೂತಿ, ದಯೆ ಮತ್ತು ಶಾಂತಿ ಆಗಿರುತ್ತದೆ. ಮುಸ್ಲಿಮರಲ್ಲಿ ಒಂದು ಚಿಕ್ಕ ಗುಂಪು ಇಸ್ಲಾಮಿಗೆ ಸಂಪೂರ್ಣವಾಗಿ ವಿಕೃತವಾದ ಚಿತ್ರಣ ನೀಡುತ್ತದೆ ಮತ್ತು ತಮ್ಮ ದಾರಿತಪ್ಪಿದ ನಂಬಿಕೆಗಳ ಪ್ರಕಾರ ವರ್ತಿಸುತ್ತದೆ ಎಂಬುದು ದುಃಖಕರ. ನಾನು ನಿಮ್ಮೆಲ್ಲರೊಂದಿಗೆ ಹೇಳಲು ಬಯಸುತ್ತೇನೆ: ಈ ಜನರ ಕೃತ್ಯಗಳನ್ನು ನೀವು ನಿಜವಾದ ಇಸ್ಲಾಮ್ ಎಂದು ತಪ್ಪುಗ್ರಹಿಕೆಗೆ ಒಳಗಾಗಿ ಆ ಜನರ ಮಾರ್ಗಭ್ರಷ್ಟ ಕೃತ್ಯಗಳನ್ನು, ಶಾಂತಿಪ್ರಿಯರಾದ ಮುಸ್ಲಿಮ್ ಬಹುಸಂಖ್ಯಾತರ ಭಾವನೆಗಳನ್ನು ನೋಯಿಸಲು ಮತ್ತು ಅವರನ್ನು ದೌರ್ಜನ್ಯಗಳಿಗೆ ಗುರಿಪಡಿಸಲು ಇರುವ ಅನುಮತಿ ಪತ್ರ ಎಂಬಂತೆ ಬಳಸಬಾರದು.

ಪವಿತ್ರ ಖುರ್‌ಆನ್ ಎಲ್ಲ ಮುಸ್ಲಿಮರ ಅತ್ಯಂತ ಪವಿತ್ರ ಗ್ರಂಥವಾಗಿದೆ. ಅದರ ವಿರುದ್ಧ ಕೊಳಕು ಭಾಷೆಯನ್ನು ಪ್ರಯೋಗಿಸುವುದು ಮತ್ತು ನಿಂದಿಸುವುದು ಅಥವಾ ಅದನ್ನು ಸುಟ್ಟು ಹಾಕುವುದು ಮುಸ್ಲಿಮರ ಭಾವನೆಗಳನ್ನು ಖಂಡಿತವಾಗಿಯೂ ತೀವ್ರವಾಗಿ ನೋಯಿಸುವುದು. ಇಂತಹ ಸಂಭವ ನಡೆಯುವಾಗ ತೀವ್ರವಾದಿ ಮುಸ್ಲಿಮರು ಸಂಪೂರ್ಣ ತಪ್ಪು ಮತ್ತು ಅನುಚಿತ ಪ್ರತಿಕ್ರಿಯೆ ನೀಡುವುದು ಕಂಡುಬರುತ್ತದೆ.

ಅಫ್‌ಘಾನಿಸ್ತಾನದಲ್ಲಿ ಇತ್ತೀಚೆಗೆ ಎರಡು ಘಟನೆಗಳು ನಡೆದುದಾಗಿ ವರದಿಯಾಗಿವೆ. ಕೆಲವು ಅಮೇರಿಕನ್ ಸೈನಿಕರು ಪವಿತ್ರ ಖುರ್‌ಆನಿನೊಂದಿಗೆ ಗೌರವ ಹೀನವಾಗಿ ವರ್ತಿಸಿದರು ಮತ್ತು ನಿರಪರಾಧಿ ಮಹಿಳೆಯರನ್ನೂ ಮಕ್ಕಳನ್ನೂ ಅವರ ಮನೆಗಳೊಳಗೆ ಕೊಂದರು. ಇದೇ ರೀತಿ ಒಬ್ಬ ಕ್ರೂರಿಯು ಕೆಲವು ಫ್ರೆಂಚ್ ಸೈನಿಕರನ್ನು ದಕ್ಷಿಣ ಫ್ರಾನ್ಸಿನಲ್ಲಿ ನಿಷ್ಕಾರಣವಾಗಿ ಕೊಂದನು. ಕೆಲವು ದಿನಗಳ ನಂತರ ಅವನು ಒಂದು ಶಾಲೆಯೊಳಗೆ ನುಗ್ಗಿ ಮೂರು ನಿರಪರಾಧಿ ಯಹೂದಿ ವಿದ್ಯಾರ್ಥಿಗಳನ್ನೂ ಒಬ್ಬ ಅಧ್ಯಾಪಿಕೆಯನ್ನೂ ಕೊಂದನು.

ಇಂತಹ ನಡವಳಿಕೆಗಳು ಸಂಪೂರ್ಣವಾಗಿ ತಪ್ಪಾದುದೂ ಶಾಂತಿಗೆ ಹಾನಿಕರವೂ ಆಗಿವೆ. ಇಂತಹ ಕ್ರೂರ ಕೃತ್ಯಗಳು ಪಾಕಿಸ್ತಾನದಲ್ಲಿ ಮತ್ತು ಇತರ ಪ್ರದೇಶಗಳಲ್ಲಿ ಆಗಾಗ ಸಂಭವಿಸುತ್ತಾ ಇರುತ್ತವೆ. ಈ ಕೃತ್ಯಗಳು ಇಸ್ಲಾಮಿನ ವಿರೋಧಿಗಳಿಗೆ ತಮ್ಮ ದ್ವೇಷವನ್ನು ವರ್ಧಿಸುವ ಇಂಧನಗಳಾಗುತ್ತವೆ. ಅವರು ತಮ್ಮ ಇಸ್ಲಾಮ್ ವಿರೋಧಿ ಚಟುವಟಿಕೆಗಳನ್ನು ಹೆಚ್ಚಿಸಲು ಇಂತಹ ಘಟನೆಗಳು ನೆವನಗಳನ್ನು ಒದಗಿಸುತ್ತವೆ.

ಮೇಲೆ ವಿವರಿಸಲಾದ ಅನಾಗರಿಕ ಕ್ರೂರ ಕೃತ್ಯಗಳು ವೈಯಕ್ತಿಕ ದ್ವೇಷಾಸೂಯೆಗಳ ಕಾರಣದಿಂದ ನಡೆಸಿದವುಗಳಲ್ಲ. ವಾಸ್ತವಿಕವಾಗಿ ಅವು ಸರಕಾರಗಳ ಅನ್ಯಾಯಭರಿತ ಧೋರಣೆಗಳು ದೇಶೀಯ ಮತ್ತು ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಜಾರಿಗೊಂಡುದುದರ ಪ್ರತಿಕ್ರಿಯೆಗಳ ರೂಪದಲ್ಲಿರುತ್ತವೆ.

ಆದುದರಿಂದ ಲೋಕದಲ್ಲಿ ಶಾಂತಿ ಸ್ಥಾಪಿಸಲ್ಪಡಬೇಕಾದರೆ ಸರಿಯಾದ ರೀತಿಯ ನ್ಯಾಯಪಾಲನೆ ಎಲ್ಲ ಹಂತಗಳಲ್ಲೂ ಎಲ್ಲಾ ದೇಶಗಳಲ್ಲೂ ಜಾರಿಯಾಗಬೇಕು. ಒಬ್ಬ ಮನುಷ್ಯನನ್ನು ನಿಷ್ಕಾರಣವಾಗಿ ಕೊಲ್ಲುವುದು ಮಾನವ ಸಮೂಹವನ್ನೇ ಕೊಂದುದಕ್ಕೆ ಸಮವೆಂದು ಪವಿತ್ರ ಖುರ್‌ಆನ್ ಹೇಳಿದೆ.

ಮುಸ್ಲಿಮನೆಂಬ ನೆಲೆಯಲ್ಲಿ ನಾನು ನಿಮಗೆ ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ: ಇಸ್ಲಾಮ್ ಧರ್ಮವು ಯಾವುದೇ ರೀತಿ ಕ್ರೂರವರ್ತನೆಯನ್ನೂ ದೌರ್ಜನ್ಯವನ್ನೂ ಅನುಮತಿಸುವುದಿಲ್ಲ. ಇದು ಎಂತಹ ಆಜ್ಞೆ ಎಂದರೆ ಇದರ ಬಗ್ಗೆ ಯಾವ ರಿಯಾಯಿತಿಯೂ ಇರುವುದಿಲ್ಲ. ಪವಿತ್ರ ಖುರ್‌ಆನ್ ಹೀಗೆ ಸಹ ಹೇಳುತ್ತದೆ: ಯಾವುದೇ ದೇಶ ಅಥವಾ ಜನಾಂಗ ಮುಸ್ಲಿಮರ ವಿರುದ್ಧ ಹಗೆತನವನ್ನು ಹೊಂದಿದ್ದರೆ, ಅಂತಹ ದೇಶ ಅಥವಾ ಜನಾಂಗದೊಂದಿಗೆ ನ್ಯಾಯಯುತವಾಗಿ ನಡೆದುಕೊಳ್ಳುವುದನ್ನು ಇಸ್ಲಾಮ್ ಧರ್ಮ ತಡೆಗಟ್ಟುವುದಿಲ್ಲ. ಹಗೆತನ ಅಥವಾ ಸ್ಪರ್ಧೆಯ ಕಾರಣದಿಂದ ಸೇಡಿನ ರೂಪದಲ್ಲಿ ಅಥವಾ ಅತಿರೇಕದಿಂದ ವಿರೋಧಿಗಳೊಂದಿಗೆ ಕೂಡ ವರ್ತಿಸಬಾರದು. ಪವಿತ್ರ ಖುರ್‌ಆನ್ ನೀಡುವ ಇನ್ನೊಂದು ಉಪದೇಶವೇನೆಂದರೆ ಅನ್ಯರ ಸಂಪತ್ತನ್ನು ಅಸೂಯೆಯಿಂದಲೂ ದುರಾಶೆಯಿಂದಲೂ ನೋಡಬಾರದು.

ನಾನು ಪವಿತ್ರ ಖುರ್‌ಆನ್ ಹೇಳಿದ ಕೆಲವು ಅಂಶಗಳನ್ನು ಮಾತ್ರ ವಿವರಿಸಿರುವೆನು. ಆದರೆ ಇವುಗಳು ಅತ್ಯಂತ ಮುಖ್ಯವಾದವು ಮತ್ತು ಲೋಕದಲ್ಲಿ ಶಾಂತಿ ಮತ್ತು ನ್ಯಾಯ ಸ್ಥಾಪಿಸಲು ಅಸ್ತಿಭಾರವನ್ನು ಹಾಕುವಂತಹವುಗಳಾಗಿವೆ. ಲೋಕವು ಈ ಮುಖ್ಯ

ವಿಷಯಗಳ ಕಡೆಗೆ ಗಮನಹರಿಸಿ ಅನ್ಯಾಯಗಾರರೂ ಅಸತ್ಯವಾದಿಗಳೂ ಆಗಿರುವವರು ಲೋಕವನ್ನು ನಾಶದ ಕಡೆಗೆ ಒಯ್ಯುವುದರಿಂದ ರಕ್ಷಿಸುವಂತಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ನಾನು ನನ್ನ ಭಾಷಣಕ್ಕೆ ಸ್ವಲ್ಪ ಹೆಚ್ಚು ಸಮಯ ವಿನಿಯೋಗಿಸಿದುದಕ್ಕೋಸ್ಕರ ನಾನು ನಿಮ್ಮೊಂದಿಗೆ ಕ್ಷಮೆಯನ್ನು ಕೇಳುತ್ತೇನೆ. ವಾಸ್ತವದಲ್ಲಿ ಲೋಕದಲ್ಲಿ ಶಾಂತಿ ಸ್ಥಾಪಿಸುವ ವಿಷಯ ಅತ್ಯಂತ ಮಹತ್ವಪೂರ್ಣವಾದುದಾಗಿದೆ.

ಸಮಯವು ದಾಟಿ ಹೋಗುತ್ತಾ ಇದೆ. ನಾವು ಈ ಕಾಲಘಟ್ಟದ ಆವಶ್ಯಕತೆಯ ಬಗ್ಗೆ ಬಹಳ ಹೆಚ್ಚಿನ ಶ್ರದ್ಧೆಯನ್ನು ಸಮಯವು ಮೀರಿ ಹೋಗುವ ಮೊದಲು ನೀಡಬೇಕಾಗಿದೆ.

ನನ್ನ ಭಾಷಣವನ್ನು ಮುಕ್ತಾಯಗೊಳಿಸುವ ಮೊದಲು ನಾನು ಒಂದು ಮುಖ್ಯ ವಿಷಯದ ಬಗ್ಗೆ ಪ್ರಸ್ತಾಪಿಸಲು ಬಯಸುತ್ತೇನೆ. ನಾವೆಲ್ಲರೂ ತಿಳಿದಂತೆ ಎಲಿಝಬೆತ್ ದ್ವಿತೀಯ ಮಹಾರಾಣಿಯ ವಜ್ರ ಜೂಬಿಲಿ ಸಮಾರಂಭಗಳು ಈಗ ನಡೆಯುತ್ತಿವೆ. ನಾವು ಗಡಿಯಾರದ ಕೀಲಿಕೈಯನ್ನು 115 ವರ್ಷ ಹಿಂದಕ್ಕೆ ತಿರುಗಿಸುವುದಾದರೆ 1897ರಲ್ಲಿ ವಿಕ್ಟೋರಿಯಾ ಮಹಾರಾಣಿಯ ವಜ್ರ ಜೂಬಿಲಿ ಸಮಾರಂಭಗಳನ್ನು ಜರಗಿಸಲಾಯಿತೆಂದು ತಿಳಿಯುತ್ತದೆ. ಆ ಸಂದರ್ಭದಲ್ಲಿ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರು ವಿಕ್ಟೋರಿಯಾ ಮಹಾರಾಣಿಗೆ ಅಭಿನಂದನೆಯ ಒಂದು ಸಂದೇಶವನ್ನು ಕಳುಹಿಸಿದ್ದರು.

ಆ ಸಂದೇಶದಲ್ಲಿ ಅಹ್ಮದಿಯಾ ಜಮಾಅತಿನ ಸ್ಥಾಪಕರು ಮಹಾರಾಣಿಗೆ ಇಸ್ಲಾಮ್ ಧರ್ಮದ ತತ್ವಗಳನ್ನು ವಿವರಿಸಿಕೊಟ್ಟರಲ್ಲದೆ ಬ್ರಿಟಿಷ್ ಸರಕಾರಕ್ಕೋಸ್ಕರ ಪ್ರಾರ್ಥಿಸಿ ಮಹಾರಾಣಿಗೆ ದೀರ್ಘಾಯುಸ್ಸನ್ನು ಕೋರಿದ್ದರು. ಮಹಾರಾಣಿಯ ಸರಕಾರದ ಅತ್ಯಂತ ಉತ್ತಮ ಆಡಳಿತೆಯ ರೀತಿ, ಅದು ಎಲ್ಲ ಜನರಿಗೂ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡುತ್ತದೆ ಎಂಬುದಾಗಿದೆ ಎಂದು ಅವರು ಪ್ರಶಂಸಿಸಿದ್ದರು.

ಇಂದಿನ ಕಾಲದಲ್ಲಿ ಬ್ರಿಟಿಷ್ ಸರಕಾರ ಭಾರತದ ಉಪ-ಭೂಖಂಡದಲ್ಲಿ ಅಧಿಕಾರವನ್ನು ಹೊಂದಿಲ್ಲವಾದರೂ ಧಾರ್ಮಿಕ ಸ್ವಾತಂತ್ರ್ಯ ಎಂಬ ತತ್ವವು ಬ್ರಿಟಿಷ್ ಸಮಾಜದಲ್ಲಿ ಮತ್ತು ನ್ಯಾಯ ವ್ಯವಸ್ಥೆಯಲ್ಲಿ ಬೇರೂರಿದೆ. ಅದರ ಮೂಲಕ ಪ್ರತಿಯೊಬ್ಬ ಮನುಷ್ಯನಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಲಾಗಿದೆ.

ಈ ಸ್ವಾತಂತ್ರ್ಯದ ಒಂದು ಸುಂದರ ಉದಾಹರಣೆಯನ್ನು ನಾವು ಇಲ್ಲಿ ಇಂದು ರಾತ್ರಿ ಕಾಣುತ್ತಿದ್ದೇವೆ. ವಿವಿಧ ಧರ್ಮಗಳ ಮತ್ತು ವಿವಿಧ ನಂಬಿಕೆಗಳ ಜನರು ಇಲ್ಲಿ ಸಮಾವೇಶಗೊಂಡಿದ್ದಾರೆ ಮತ್ತು ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸುವ ಸಮಾನ ಉದ್ದೇಶ ಲಕ್ಷ್ಯಗಳನ್ನು ಹೊಂದಿದ್ದಾರೆ.

ವಾಗ್ದತ್ತ ಮಸೀಹರು ಆ ವಿಕ್ಟೋರಿಯಾ ಮಹಾರಾಣಿಯನ್ನು ಸಂಬೋಧಿಸಿ ಬರೆದ ಮಾತುಗಳನ್ನು ಬಳಸಿ ನಾನು ಎಲಿಝಬೆತ್ ಮಹಾರಾಣಿಗೆ ಶುಭಾಶಯಗಳನ್ನು ಕೋರುತ್ತೇನೆ. ಅವರು ಹೀಗೆ ಹೇಳಿದ್ದರು:

"ಸಂತೋಷ ಮತ್ತು ಕೃತಜ್ಞತೆಯಿಂದ ತುಂಬಿದ ಶುಭಾಶಯಗಳು ಮಹಾರಾಣಿಗೆ ನಮ್ಮಿಂದ ತಲುಪಲಿ. ಗೌರವಾನ್ವಿತ ಮಹಾರಾಣಿ ಸದಾಕಾಲ ಸಂತೋಷವನ್ನೂ

ಸಂತೃಪ್ತಿಯನ್ನೂ ಹೊಂದುವವರಾಗಲಿ.”

ವಾಗ್ದತ್ತ ಮಸೀಹರು ವಿಕ್ಟೋರಿಯಾ ಮಹಾರಾಣಿ ಪರವಾಗಿ ಪ್ರಾರ್ಥಿಸಿದ್ದರು. ನಾನು ಅವರ ಪದಗಳನ್ನೇ ಬಳಸಿಕೊಂಡು ಎಲಿಝಬೆತ್ ಮಹಾರಾಣಿಗೋಸ್ಕರ ಪ್ರಾರ್ಥಿಸುತ್ತೇನೆ:

“ಶಕ್ತಿಶಾಲಿಯೂ ಪ್ರತಾಪವಂತನೂ ಆಗಿರುವ ಪ್ರಭೂ, ನಿನ್ನ ಕಾರುಣ್ಯ ಮತ್ತು ಅನುಗ್ರಹಗಳ ಮೂಲಕ ನಮ್ಮ ಗೌರವಾನ್ವಿತ ಮಹಾರಾಣಿಯನ್ನು, ನಾವು ಆಕೆಯ ಉಪಕಾರ ಮತ್ತು ದಯೆಯ ಅಧೀನದಲ್ಲಿ ಸಂತೋಷದಿಂದ ಜೀವಿಸುತ್ತಿರುವ ಹಾಗೆ ಸದಾಕಾಲ ಸಂತೋಷದಿಂದ ಜೀವಿಸುವಂತೆ ಮಾಡು. ಆಕೆಯ ಪ್ರಜಾಹಿತಕಾರಿ ಆಡಳಿತೆಯಲ್ಲಿ ನಾವು ಶಾಂತಿಯಿಂದಲೂ ಸಮೃದ್ಧಿಯಿಂದಲೂ ಜೀವಿಸುತ್ತಿರುವ ಹಾಗೆ ನೀನು ಆಕೆಯೊಂದಿಗೆ ದಯೆಯಿಂದಲೂ ಪ್ರೀತಿಯಿಂದಲೂ ವರ್ತಿಸುವವನಾಗು.”

ಬ್ರಿಟಿಷ್ ಪೌರನಾಗಿರುವ ಪ್ರತಿಯೊಬ್ಬ ಅಹ್ಮದೀ ಮುಸ್ಲಿಮ್ ಇಂತಹ ಕೃತಜ್ಞತೆಯ ಮನೋಭಾವವನ್ನು ಹೊಂದಿರುತ್ತಾನೆ.

ನೀವೆಲ್ಲರೂ ಇಲ್ಲಿಗೆ ಆಗಮಿಸಿ ನಿಮ್ಮ ಪ್ರೀತಿ, ವಾತ್ಸಲ್ಯ ಮತ್ತು ಭ್ರಾತೃ ಭಾವನೆಯನ್ನು ಪ್ರಕಟಿಸಿದುದಕ್ಕೆ ನಾನು ನಿಮಗೆಲ್ಲರಿಗೂ ಇನ್ನೊಮ್ಮೆ ನನ್ನ ಕೃತಜ್ಞತೆಗಳನ್ನು ಹೃತ್ಪೂರ್ವಕವಾಗಿ ಅರ್ಪಿಸಲು ಬಯಸುತ್ತೇನೆ.

**ನಿಮಗೆಲ್ಲರಿಗೂ ಧನ್ಯವಾದಗಳು.**



# ಶಾಂತಿಗಿರುವ ಮಾರ್ಗ
# ದೇಶಗಳ ಮಧ್ಯೆ ನ್ಯಾಯಪೂರ್ಣ ಸಂಬಂಧ ಸ್ಥಾಪನೆ

ಕ್ಯಾಪಿಟೋಲ್ ಹಿಲ್
ವಾಶಿಂಗ್‌ಟನ್ ಡಿ.ಸಿ., ಯು.ಎಸ್.ಎ., 2012





The first Muslim Congressman, Keith Ellison meeting Hadrat Khalifatul Masih V[aba]




Hadrat Mirza Masroor Ahmad, Khalifatul-Masih V[aba] delivers his keynote address at U.S. Capitol Hill




Brad Sherman (Democratic member of the United States House of Representatives) presenting American flag to Hadrat Khalifatul-Masih V[aba]




Hadrat Mirza Masroor Ahmad, Khalifatul-Masih V[aba] leading silent prayer at U.S. Capitol Hill



Hadrat Khalifatul-Masih V[aba] during his official tour of U.S. Capitol Hill



Hadrat Khalifatul-Masih V[aba] in U.S. Capitol Hill after his historic address to the US Statesmen and Bureaucrats

# ಮುನ್ನುಡಿ

2012 ಜೂನ್ ದಿನಾಂಕ 27ರಂದು ಅಮೇರಿಕದ ವಾಶಿಂಗ್‌ಟನ್ ಡಿ.ಸಿ.ಯ ಕ್ಯಾಪಿಟೋಲ್ ಹಿಲ್‌ನಲ್ಲಿ ಒಂದು ಚಾರಿತ್ರಿಕ ಘಟನೆ ನಡೆಯಿತು. ಆ ದಿನ ವಾಗ್ದತ್ತ ಮಸೀಹರ ಪಂಚಮ ಖಲೀಫರೂ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ನೇತಾರರೂ ಆಗಿರುವ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದರು ಭಾಷಣ ಮಾಡಿದರು. ಆ ಸಭೆಯಲ್ಲಿ ಕಾಂಗ್ರೆಸ್ ಸಭೆಯ ಪ್ರಮುಖ ಸದಸ್ಯರೂ ಸೆನೆಟ್ ಸಭೆಯ ಸದಸ್ಯರೂ ರಾಯಭಾರಿಗಳೂ ವೈಟ್‌ಹೌಸ್ ಮತ್ತು ಸ್ಟೇಟ್ ಡಿಪಾರ್ಟ್‌ಮೆಂಟಿನ ಉದ್ಯೋಗಸ್ಥರೂ ಎನ್.ಜಿ.ಓ. ನಾಯಕರೂ ಧಾರ್ಮಿಕ ನಾಯಕರೂ ಪ್ರೊಫೆಸರ್‌ಗಳೂ ಸರಕಾರಿ ಧೋರಣೆಯ ಸಲಹೆಗಾರರೂ ಸರಕಾರಿ ಅಧಿಕಾರಿಗಳೂ ರಾಯಭಾರಿ ಕಛೇರಿಗಳ ಮುಖ್ಯಸ್ಥರೂ ಬುದ್ಧಿಶಾಲಿ ಕೂಟಗಳ ಪ್ರತಿನಿಧಿಗಳೂ ಪೆಂಟಗನ್ ಅಧಿಕಾರಿಗಳೂ ಸಂಪರ್ಕ ಮಾಧ್ಯಮಗಳ ಪ್ರತಿನಿಧಿಗಳೂ ಹಾಜರಿದ್ದರು. ಇಂತಹ ಸಭೆ ಮೊದಲ ಬಾರಿ ಏರ್ಪಡಿಸಲಾಗಿದ್ದು ಅಮೇರಿಕದ ಪ್ರಭಾವಶಾಲಿ ರಾಜಕೀಯ ನಾಯಕರಾದ ಹೌಸ್ ಆಫ್ ರೆಪ್ರಸೆಂಟೇಟಿವ್ಸ್‌ನ ಡೆಮೋಕ್ರಾಟಿಕ್ ಪಾರ್ಟಿಯ ಲೀಡರ್ ಬಹುಮಾನ್ಯ ನ್ಯಾನ್ಸೀ ಪೆಲೋಸಿ ಮೊದಲಾದವರಿಗೆ ಜಾಗತಿಕ ಶಾಂತಿಯ ಬಗ್ಗೆ ಇಸ್ಲಾಮಿನ ನಿಲುವನ್ನು ನೇರವಾಗಿ ತಿಳಿಯಲು ಸಾಧ್ಯವಾಯಿತು. ಈ ಸಭೆ ಮುಕ್ತಾಯಗೊಂಡ ನಂತರ, ಹಝ್ರತ್ ಖಲೀಫತುಲ್ ಮಸೀಹ್‌ರವರಿಗೆ ಕೆಪಿಟೋಲ್ ಹಿಲ್ ಬಿಲ್ಡಿಂಗ್‌ನ ವಿವಿಧ ಭಾಗಗಳನ್ನು ತೋರಿಸಲಾಯಿತು. ಅನಂತರ ಅವರನ್ನು ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ಗೆ ಬರಮಾಡಲಾಯಿತು. ಅಲ್ಲಿ ಹಝ್ರತ್ ಖಲೀಫತುಲ್ ಮಸೀಹರು ಅಮೇರಿಕಕ್ಕೆ ಸಂದರ್ಶನ ನೀಡಿದುದಕ್ಕೆ ಗೌರವ ನೀಡುತ್ತಾ ಒಂದು ಠರಾವನ್ನು ಅಂಗೀಕರಿಸಲಾಯಿತು.

ಸೆನೆಟರ್ ರೋಬರ್ಟ್ ಕೇಸೀ ಹಝ್ರತ್ ಖಲೀಫತುಲ್ ಮಸೀಹರನ್ನು ಸ್ವಾಗತಿಸುತ್ತಾ ಅವರನ್ನು ಭೇಟಿಯಾಗಲು ಸಂದರ್ಭ ದೊರೆತ ಬಗ್ಗೆ ಮೆಚ್ಚುಗೆ ಸೂಚಿಸುತ್ತಾ ಹೇಳಿದರು:

"ಗೌರವಾನ್ವಿತ ಮಹನೀಯರೇ, ನಿಮ್ಮ ಮಹಾನ್ ನಾಯಕತ್ವ ಮತ್ತು ಶಾಂತಿ, ಸಹನೆ ಮತ್ತು ನ್ಯಾಯಪಾಲನೆಗೋಸ್ಕರ ನಿಮ್ಮ ಬದ್ಧತೆಗಾಗಿ ನಾನು ನಿಮಗೆ ಕೃತಜ್ಞತೆ ಅರ್ಪಿಸುತ್ತೇನೆ."

ಅಮೇರಿಕದ ಪ್ರಥಮ ಮುಸ್ಲಿಮ್ ಕಾಂಗ್ರೆಸ್‌ಮನ್ ಕೆಯಿತ್ ಎಲ್ಲಿಸನ್ ಹೀಗೆಂದರು: "ನಿಮ್ಮ ಉಪಸ್ಥಿತಿಯಿಂದ ಅಮೇರಿಕ ಗೌರವಿಸಲ್ಪಟ್ಟಿದೆ." ಅವರು ಮುಂದುವರಿದು ಹೇಳಿದರು: "ಖಲೀಫರ ನಾಯಕತ್ವವನ್ನು ಹೊಂದಿರುವ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಅಮೇರಿಕದ ಜನರಿಗೆ ನಿಜವಾದ ಒಂದು ಅನುಗ್ರಹವಾಗಿ ಪರಿಣಮಿಸಿದೆ."

ಕಾಂಗ್ರೆಸ್‌ಮನ್ ಬ್ರಾಡ್ ಶೆರ್‌ಮನ್, ತಾನು ಹೌಸ್ ಆಫ್ ರೆಪ್ರಸೆಂಟೇಟಿವ್ಸ್‌ನಲ್ಲಿ ಸ್ವಾಗತ ಠರಾವು ಮಂಡಿಸಲಿರುವುದಾಗಿ ಹೇಳಿದರು ಮತ್ತು ಹಝ್ರತ್ ಖಲೀಫರು "ಸಕಲ ಜಗತ್ತಿಗೆ ಸಹನೆಯ ಒಂದು ಅನುಕರಣೀಯ ಮಾದರಿ" ಎಂದು ಪ್ರಶಂಸಿಸಿದರು.

ಯುನೈಟೆಡ್ ಸ್ಟೇಟ್ಸ್ ಕಮಿಶನ್ ಆನ್ ಇಂಟರ್‌ನೇಶನಲ್ ರಿಲಿಜಸ್ ಫ್ರೀಡಮ್ (USCIRF) ಇದರ ಚೇರ್ ಪರ್ಸನ್ ಕ್ಯಾಟ್ರೀನ ಲಾಂಟೋಸ್ ಸ್ವೆಟ್ ಹೀಗೆ ಹೇಳಿದರು: "ಈ ಸಭಾಭವನ ಅನುಗ್ರಹ ಭರಿತವಾಗಿದೆ ಎಂದು ನನಗೆ ತೋರುತ್ತದೆ. ಪರಿಶುದ್ಧ ಮಹನೀಯರು ಕ್ಯಾಪಿಟೋಲ್ ಹಿಲ್‌ಗೆ ತಂದ ಅನುಗ್ರಹದ ಪ್ರತಿಬಿಂಬ ಇದಾಗಿದೆ ಎಂಬುದು ನಿಸ್ಸಂದೇಹ. " ವಿವಿಧ ದೇಶಗಳಲ್ಲಿ ಅಹ್ಮದಿಯಾ ವಿರುದ್ಧ ನಡೆಯುತ್ತಿರುವ ದೌರ್ಜನ್ಯಗಳನ್ನು ಅವರು ಖಂಡಿಸಿದರು.

ಕಾಂಗ್ರೆಸ್‌ಮನ್ ಫ್ರಾಂಕ್ ವೂಲ್ಫ್ ಹಝ್ರತ್ ಖಲೀಫರನ್ನು ಅಮೇರಿಕಕ್ಕೆ ಸ್ವಾಗತಿಸುತ್ತಾ, ಅಹ್ಮದಿಯಾ ಮುಸ್ಲಿಮ್ ಜಮಾಅತ್ ಎಲ್ಲ ಮಾನವರ ಮೂಲಭೂತ ಹಕ್ಕುಗಳ ಸಂರಕ್ಷಣೆಯ ಕೆಲಸಗಳನ್ನು ಬೆಂಬಲಿಸುತ್ತಾ ಇದೆ ಎಂದು ಹೇಳಿದರು.

ಕಾಂಗ್ರೆಸ್‌ಮನ್ ಮೈಕ್ ಹೋಂಡಾ ತಾನು ಹಝ್ರತ್ ಖಲೀಫರನ್ನು ಹಿಂದಿನ ದಿನ ಸಂಜೆ ಬೈತುರ್ರಹ್ಮಾನ್ ಮಸ್‌ಜಿದ್‌ನಲ್ಲಿ ಭೇಟಿಯಾದ ಬಗ್ಗೆ ಸಂತೋಷ ಸೂಚಿಸುತ್ತಾ, ಅಹ್ಮದಿಯರು ಅಮೇರಿಕದಲ್ಲಿ ಸುರಕ್ಷಿತರಾಗಿದ್ದು ತಮ್ಮ ಶಾಂತಿ ಸಂದೇಶವನ್ನು ಮುಂದುವರಿಸುವುದನ್ನು ಆಶಿಸುವುದಾಗಿ ಹೇಳಿದರು.

ಕಾಂಗ್ರೆಸ್ ವುಮನ್ ಝೋ ಲೋಫ್‌ಗ್ರೀನ್ ಸ್ಪೆಶಲ್ ಕಾಂಗ್ರೆಸನಲ್ ರೆಸಲೂಷನ್ ಪ್ರತಿಯನ್ನು ಹಝ್ರತ್ ಖಲೀಫರಿಗೆ ನೀಡಿದರು.

ಡೆಮೋಕ್ರಾಟಿಕ್ ಪಾರ್ಟಿಯ ಲೀಡರ್, ಕಾಂಗ್ರೆಸ್‌ವುಮನ್ ನ್ಯಾನ್ಸಿ ಪೆಲೋಸಿ, ಅಮೇರಿಕದ ಎರಡು ರಾಜಕೀಯ ಪಾರ್ಟಿಗಳು ನೀಡಿದ ಸ್ವಾಗತದಿಂದ ತಾನು ಅಭಿಮಾನ ಹೊಂದಿರುವುದಾಗಿ ಹೇಳಿದರು.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದರ ನಾಯಕತ್ವ ಬುದ್ಧಿ ಮತ್ತು ದಯೆಯಿಂದ ಭರಿತವಾಗಿದೆ ಎಂದು ಅವರು ಹೇಳಿದರು. ಅವರು ಮುಂದುವರಿದು ಹೇಳಿದರು: "ಹಿಂಸಾಚಾರಗಳಿಗೆ ಗುರಿಯಾಗಿದ್ದರೂ ಗೌರವಾನ್ವಿತ ಮಹಾನುಭಾವರು ದ್ವೇಷ ಮತ್ತು ಪ್ರತೀಕಾರಕ್ಕೆ ಸರಿಯುವುದನ್ನು ನಿರಾಕರಿಸಿದರು."

## ಕ್ಯಾಪಿಟೋಲ್ ಹಿಲ್‌ನಲ್ಲಿ ಉಪಸ್ಥಿತರಿದ್ದ ಗಣ್ಯರು

- ಯು.ಎಸ್. ಸೆನೆಟರ್ ರೋಬರ್ಟ್ ಕೇಸಿ, ಸೀನಿಯರ್ (ಡೆಮೋಕ್ರಾಟ್ ಪಾರ್ಟಿ, ಪೆನ್ಸಿಲ್‌ವೇನಿಯಾ)
- ಯು.ಎಸ್. ಸೆನೆಟರ್ ಜಾನ್ ಕೋರಿನಿನ್ (ರಿಪಬ್ಲಿಕನ್ ಪಾರ್ಟಿ, ಟೆಕ್ಸಾಸ್)
- ಡೆಮೋಕ್ರಾಟಿಕ್ ಲೀಡರ್ ನ್ಯಾನ್ಸಿ ಪೆಲೋಸಿ (ಡೆಮೋಕ್ರಾಟ್, ಕೆಲಿಫೋರ್ನಿಯಾ)
- ಯು.ಎಸ್‌ಕಾಂಗ್ರೆಸ್‌ಮಾಕೆಯಿತ್ ಎಲ್ಲಿಸನ್(ಡೆಮೋಕ್ರಾಟ್, ಮಿನ್ನೇಸೋಟಾ)
- ಯು.ಎಸ್ ಕಾಂಗ್ರೆಸ್‌ಮ್ಯಾನ್ ಬ್ರಾಡ್ಲೀಶೆರ್‌ಮನ್ (ಡೆಮೋಕ್ರಾಟ್, ಕೆಲಿಫೋರ್ನಿಯಾ)
- ಯು.ಎಸ್ ಕಾಂಗ್ರೆಸ್‌ಮ್ಯಾನ್ ಫ್ರಾಂಕ್ ಊಲ್ಫ್ (ರಿಪಬ್ಲಿಕನ್, ವರ್ಜೀನಿಯಾ)
- ಯು.ಎಸ್ ಕಾಂಗ್ರೆಸ್‌ಮ್ಯಾನ್ ಮೈಕೆಲ್ ಹೋಂಡಾ (ಡೆಮೋಕ್ರಾಟ್, ಕೆಲಿಫೋರ್ನಿಯಾ)
- ಯು.ಎಸ್ ಕಾಂಗ್ರೆಸ್‌ಮ್ಯಾನ್ ಟಿಮೋತಿ ಮರ್ಫಿ(ರಿಪಬ್ಲಿಕನ್, ಪೆನ್ಸೀಲ್‌ವೇನಿಯಾ)
- ಯು.ಎಸ್ ಕಾಂಗ್ರೆಸ್‌ವುಮನ್ ಜೀನೆಟ್ಟ್ ಶಿಮಿಡ್ಟ್ (ರಿಪಬ್ಲಿಕನ್, ಓಹೈಯೋ)
- ಯು.ಎಸ್ ಕಾಂಗ್ರೆಸ್‌ವುಮನ್ ಜೇನಿಸ್ ಹಾನ್ (ಡೆಮೋಕ್ರಾಟ್, ಕೆಲಿಫೋರ್ನಿಯಾ)
- ಯು.ಎಸ್ ಕಾಂಗ್ರೆಸ್‌ವುಮನ್ ಜೇನಿಸ್ ಶಕೋವಸ್ಕಿ (ಡೆಮೋಕ್ರಾಟ್, ಇಲ್ಲಿನೋಯಿಸ್)
- ಯು.ಎಸ್ ಕಾಂಗ್ರೆಸ್‌ವುಮನ್ ಜೇಕಿ ಸ್ಪೈಯಿರ್ (ಡೆಮೋಕ್ರಾಟ್, ಕೆಲಿಫೋರ್ನಿಯಾ)
- ಯು.ಎಸ್ ಕಾಂಗ್ರೆಸ್‌ವುಮನ್ ಝೋ ಲೋಫ್‌ಗ್ರೆನ್ (ಡೆಮೋಕ್ರಾಟ್, ಕೆಲಿಫೋರ್ನಿಯಾ)
- ಯು.ಎಸ್ ಕಾಂಗ್ರೆಸ್‌ವುಮನ್ ಶೈಲಾ ಜ್ಯಾಕ್‌ಸನ್ ಲೀ (ಡೆಮೋಕ್ರಾಟ್, ಟೆಕ್ಸಾಸ್)
- ಯು.ಎಸ್ ಕಾಂಗ್ರೆಸ್‌ಮ್ಯಾನ್ ಗ್ಯಾರಿ ಪೀಟರ್ಸ್ (ಡೆಮೋಕ್ರಾಟ್, ಮಿಚಿಗನ್)
- ಯು.ಎಸ್ ಕಾಂಗ್ರೆಸ್‌ಮ್ಯಾನ್ ತೋಮಸ್ ಪೆಟ್ರಿ (ರಿಪಬ್ಲಿಕನ್, ವಿಸ್‌ಕೋನ್‌ಸಿನ್)
- ಯು.ಎಸ್ ಕಾಂಗೆಸ್‌ಮ್ಯಾನ್ ಆಡಮ್ ಶಿಫ್ಫ್ (ಡೆಮೋಕ್ರಾಟ್, ಕೆಲಿಫೋರ್ನಿಯಾ)
- ಯು.ಎಸ್ ಕಾಂಗ್ರೆಸ್‌ಮ್ಯಾನ್ ಮೈಕಲ್ ಕಪುಅನೊ (ಡೆಮೋಕ್ರಾಟ್, ಮಸ್ಸಾಚುಸೆಟ್ಸ್)
- ಯು.ಎಸ್ ಕಾಂಗ್ರೆಸ್‌ಮ್ಯಾನ್ ಹವಾರ್ಡ್ ಬೆರ್‌ಮನ್ (ಡೆಮೋಕ್ರಾಟ್, ಕೆಲಿಫೋರ್ನಿಯಾ)

- ಯು.ಎಸ್ ಕಾಂಗ್ರೆಸ್‌ವುಮನ್ ಜ್ಯೂಡಿ ಚೂ (ಡೆಮೋಕ್ರಾಟ್, ಕೆಲಿಫೋರ್ನಿಯಾ)
- ಯು.ಎಸ್ ಕಾಂಗ್ರೆಸ್‌ಮ್ಯಾನ್ ಆಂಡ್ರೇ ಕಾರ್ಸನ್ (ಡೆಮೋಕ್ರಾಟ್, ಕೆಲಿಫೋರ್ನಿಯಾ)
- ಯು.ಎಸ್ ಕಾಂಗ್ರೆಸ್‌ವುಮನ್ ಲೌರಾ ರಿಚರ್ಡ್‌ಸನ್ (ಡೆಮೋಕ್ರಾಟ್, ಕೆಲಿಫೋರ್ನಿಯಾ)
- ಯು.ಎಸ್ ಕಾಂಗ್ರೆಸ್‌ಮ್ಯಾನ್ ಲೋಯಿಡ್ ಪೋ (ರಿಪಬ್ಲಿಕನ್, ಟೆಕ್ಸಾಸ್)
- ಯು.ಎಸ್ ಕಾಂಗ್ರೆಸ್‌ಮ್ಯಾನ್ ಬಾರ್‌ನೀ ಫ್ರಾಂಕ್ (ಡೆಮೋಕ್ರಾಟ್, ಮಸ್ಸಾಚುಸೆಟ್ಸ್)
- ಯು.ಎಸ್ ಕಾಂಗ್ರೆಸ್‌ಮ್ಯಾನ್ ಬ್ರೂಸ್ ಬ್ರಾಲೇ (ಡೆಮೋಕ್ರಾಟ್, ಐಓವಾ)
- ಯು.ಎಸ್ ಕಾಂಗ್ರೆಸ್‌ಮ್ಯಾನ್ ಡೆನ್ನಿಸ್ ಕುಸಿನಿಚ್ (ಡೆಮೋಕ್ರಾಟ್, ಓಹಿಯೋ)
- ಯು.ಎಸ್ ಕಾಂಗ್ರೆಸ್‌ಮ್ಯಾನ್ ಟ್ರೆಂಟ್ ಫ್ರಾಂಕ್ಸ್ (ರಿಪಬ್ಲಿಕನ್, ಅರಿಝೋನಾ)
- ಯು.ಎಸ್ ಕಾಂಗ್ರೆಸ್‌ಮ್ಯಾನ್ ಕ್ರಿಸ್ ಮರ್ಫಿ (ಡೆಮೋಕ್ರಾಟ್, ಕೊನೆಕ್ಟಿಕಟ್)
- ಯು.ಎಸ್ ಕಾಂಗ್ರೆಸ್‌ಮ್ಯಾನ್ ಹ್ಯಾಂಕ್ ಜಾನ್‌ಸನ್ (ಡೆಮೋಕ್ರಾಟ್, ಜೊರ್ಜಿಯಾ)
- ಯು.ಎಸ್ ಕಾಂಗ್ರೆಸ್‌ಮ್ಯಾನ್ ಜೇಮ್ಸ್ ಕ್ಲೈಬರ್ನ್ (ಡೆಮೋಕ್ರಾಟ್, ಸೌತ್ ಕೆರೋಲಿನ)
- ಹಿಸ್ ಎಕ್ಸಲೆನ್‌ಸಿ ಬೊಕಾರಿ ಕೊರ್ಟು ಸ್ಟೀವೆನ್ಸ್ (ಸಿಯೆರಾಲಿಯೋನ್ ರಾಯಭಾರಿ ಅಮೇರಿಕದಲ್ಲಿ)
- ಡಾಕ್ಟರ್ ಕತ್ರಿನಾ ಲ್ಯಾನ್‌ಟೋಸ್ ಸ್ವೆಟ್, ಚೆಯರ್‌ವುಮನ್, ಯುನೈಟೆಡ್ ಸ್ಟೇಟ್ಸ್ ಕಮಿಶನ್ ಆನ್ ಇಂಟರ್‌ನೇಶನಲ್ ರಿಲಿಜಸ್ ಫ್ರೀಡಮ್
- ಟಿಮ್ ಕೈನೆ, ವರ್ಜೀನಿಯಾದ ಮಾಜಿ ಗವರ್ನರ್
- ಸುಝಾನ್ ಜಾನ್‌ಸನ್ ಕುಕ್, ಯು.ಎಸ್ ಅಂಬಾಸಡರ್ ಎಟ್ ಲಾರ್ಜ್ ಫೋರ್ ಇಂಟರ್‌ನೇಶನಲ್ ರಿಲಿಜಸ್ ಫ್ರೀಡಮ್
- ಅಂಬಾಸಡರ್ ಸೂಸನ್ ಬರ್ಕ್, ಸ್ಪೆಶಲ್ ರೆಪ್ರಸೆಂಟೇಟಿವ್ ಆಫ್ ಪ್ರೆಸಿಡೆಂಟ್ ಬರಾಕ್ ಒಬಾಮ ಫೋರ್ ನ್ಯೂಕ್ಲಿಯರ್ ನೋನ್‌ಪ್ರೋಲಿಫರೇಶನ್
- ಖಾಲಿದ್ ಅಲ್‌ಜಲಾಹ್ಮ, ಬಹರೈನಿನ ಡೆಪ್ಯುಟಿ ಚೀಫ್ ಆಫ್ ಮಿಶನ್
- ರೆವರೆಂಟ್ ಮೋನ್‌ಸಿನೋರ್ ಜೀನ್–ಫ್ರೇಂ ಕೋಯಿಸ್ ಲ್ಯಾನ್‌ತೆಓಮೆ, ಫಸ್ಟ್ ಕೌನ್‌ಸೆಲೋರ್ (ಡಿಪ್ಯುಟಿ ಚೀಫ್ ಆಫ್ ಮಿಶನ್), ದಿ ಅಪೋಸ್ಟೋಲಿಕ್ ನನ್‌ಸಿಯೇಚರ್ ಆಫ್‌ದಿ ಹೋಲಿಸೀ
- ಸಾರಾ ಅಲ್ ಒಜ್ಮೈಲಿ, ಪಬ್ಲಿಕ್ ಅಫೇರ್ಸ್ ಲಿಯಸನ್ ಆಫಿಸರ್, ಎಂಬಸಿ ಆಫ್

ಸುಲ್ತಾನೇಟ್ ಆಫ್ ಒಮಾನ್

- ಸಲೀಮ್ ಅಲ್ ಕಿಂಡೀ, ಫಸ್ಟ್ ಸೆಕ್ರಿಟರಿ, ಒಮಾನ್ ಎಂಬಸಿ
- ಫೌಝಿಯಾ ಫಯ್ಯಾಝ್, ಪಾಕಿಸ್ತಾನ್ ಎಂಬಸಿ
- ಸಯೀದ ಝೈದ್, ಮೊರಾಕೋ ಎಂಬಸಿ
- ನಬೀಲ್ ಮುನೀರ್, ಮಿನಿಸ್ಟರ್ IV (ಸೆಕ್ಯುರಿಟಿ ಕೌನ್ಸಿಲ್), ಪಾಕಿಸ್ತಾನ್ ಪರ್ಮನೆಂಟ್ ಮಿಶನ್
- ಜೋಸೆಫ್ ರೆಂಗ್ಲಿ, ಮಿನಿಸ್ಟರ್ ಕೌನ್ಸಿಲರ್ ಎಂಬಸಿ ಆಫ್ ಸ್ವಿಝರ್‌ಲೇಂಡ್
- ಅಲಿಸ್ಸ ಅಯ್ರ್ಸ್, ಡೆಪ್ಯುಟಿ ಅಸಿಸ್ಟೆಂಟ್ ಸೆಕ್ರಿಟರಿ ಫೋರ್ ಸೌತ್ ಆ್ಯಂಡ್ ಸೆಂಟ್ರಲ್ ಏಶಿಯಾ
- ಅಂಬಾಸಡರ್ ಕಾರ್ಲ್ ಇಂಡರ್‌ಫರ್ತ್, ಸೀನಿಯರ್ ಎಡ್‌ವೈಸರ್ ಆ್ಯಂಡ್ ವಾಧ್ವಾನಿ ಚೆಯರ್ ಇನ್ ಯು.ಎಸ್. ಇಂಡಿಯಾ ಪಾಲಿಸಿ ಸ್ಟಡೀಸ್, ಸೆಂಟರ್ ಫಾರ್ ಸ್ಟ್ರಾಟಜಿಕ್ ಆ್ಯಂಡ್ ಇಂಟರ್‌ನೇಶನಲ್ ಸ್ಟಡೀಸ್
- ಡೊನಾಲ್ಡ್ ಎ. ಕ್ಯಾಂಪ್, ಸೀನಿಯರ್ ಎಸೋಸಿಯೇಟ್, ಸೆಂಟರ್ ಫೋರ್ ಸ್ಟ್ರಾಟಜಿಕ್ ಆ್ಯಂಡ್ ಇಂಟರ್‌ನೇಶನಲ್ ಸ್ಟಡೀಸ್
- ಅಂಬಾಸಿಡರ್ ಜ್ಯಾಕಿ ವೊಲ್‌ಕೋಟ್, ಎಕ್ಸಿಕ್ಯೂಟಿವ್ ಡೈರೆಕ್ಟರ್, ಯು. ಎಸ್. ಕಮಿಶನ್ ಆನ್ ಇಂಟರ್‌ನೇಶನಲ್ ರಿಲಿಜಸ್ ಫ್ರೀಡಮ್
- ಡಾಕ್ಟರ್ ಅಝೀಝ ಅಲ್ ಹಿಬ್ರಿ, ಕಮಿಶನರ್ ಯು.ಎಸ್ ಕಮಿಶನ್ ಆನ್ ಇಂಟರ್‌ನೇಶನಲ್ ರಿಲಿಜಸ್ ಫ್ರೀಡಮ್
- ಇಸಾಯಿಯ ಲ್ಯಾಗೆಟ್, ಕೌಂಟೀ ಎಕ್ಸೆಕ್ಯುಟಿವ್, ಮೋಂಟ್‌ಗೋಮರಿ ಕೌಂಟ್, ಮೇರಿಲ್ಯಾಂಡ್
- ವಿಕ್ಟೋರಿಯಾ ಅಲ್‌ವರಡೋ, ಡೈರೆಕ್ಟರ್ ಆಫಿಸ್ ಆಫ್ ಇಂಟರ್‌ನೇಶನಲ್ ರಿಲಿಜಸ್ ಫ್ರೀಡಮ್ ಯು.ಎಸ್ ಡಿಪಾರ್ಟ್‌ಮೆಂಟ್ ಆಫ್ ಸ್ಟೇಟ್
- ಡಾಕ್ಟರ್ ಇಮಾದ್ ದೀನ್ ಅಹ್ಮದ್, ಡೈರೆಕ್ಟರ್ ಮಿನಾರತ್ ಆಫ್ ಫ್ರೀಡಮ್ ಇನ್‌ಸ್ಟಿಟ್ಯೂಟ್
- ಡಾಕ್ಟರ್ ಝೈನಬ್ ಅಲ್‌ವಾನಿ, ಅಸಿಸ್ಟೆಂಟ್ ಫ್ರೊಫೆಸರ್ ಆಫ್ ಇಸ್ಲಾಮಿಕ್ ಸ್ಟಡೀಸ್, ಹೊವಾರ್ಡ್ ಯುನಿವರ್ಸಿಟಿ ಸ್ಕೂಲ್ ಆಫ್ ಡಿವಿನಿಟಿ
- ಡಿಬೋರಾ ಎಲ್. ಬೆನೆಡಿಕ್ಟ್, ಅಸೋಸಿಯೇಟ್ ಕೌನ್ಸಿಲ್, ಯು.ಎಸ್. ಸಿಟಿಝನ್‌ಶಿಪ್ ಆ್ಯಂಡ್ ಇಮ್ಮಿಗ್ರೇಶನ್ ಸರ್ವಿಸಸ್, ಡಿಪಾರ್ಟ್‌ಮೆಂಟ್ ಆಫ್ ಹೋಮ್‌ಲೇಂಡ್ ಸೆಕ್ಯುರಿಟಿ
- ಲೋರಾ ಬರ್ಗ್, ಸೀನಿಯರ್ ಅಡ್‌ವೈಸರ್ ಟು ಸ್ಪೆಶಲ್ ರೆಪ್ರಸೆಂಟೇಟಿವ್ ಟು ಮುಸ್ಲಿಮ್ ಕಮ್ಯುನಿಟೀಸ್, ಯು.ಎಸ್. ಡಿಪಾರ್ಟ್‌ಮೆಂಟ್ ಆಫ್ ಸ್ಟೇಟ್

- ಡಾಕ್ಟರ್ ಚಾರ್ಲ್ಸ್ ಬಟರ್‌ವರ್ತ್, ಪ್ರೊಫೆಸರ್ (ಇಮೆರಿಟಸ್) ಆಫ್ ಗವರ್ನ್‌ಮೆಂಟ್ ಆ್ಯಂಡ್ ಪೊಲಿಟಿಕ್ಸ್, ಯುನಿವರ್ಸಿಟಿ ಆಫ್ ಮೇರಿಲ್ಯಾಂಡ್, ಕಾಲೇಜ್ ಪಾರ್ಕ್
- ಫಾದರ್ ಜಾನ್ ಕ್ರೊಸ್ಸಿನ್, ಎಕ್ಸಿಕ್ಯೂಟಿವ್ ಡೈರೆಕ್ಟರ್ ಫೋರ್ ಸೆಕ್ರಿಟರಿಯೇಟ್ ಫೋರ್ ಎಕ್ಯುಮೆನಿಕಲ್ ಇಂಟರ್ ರಿಲಿಜಿಸ್ ಅಫೇರ್ಸ್, ಯುನೈಟೆಡ್ ಸ್ಟೇಟ್ಸ್ ಕಾನ್‌ಫರೆನ್ಸ್ ಆಫ್ ಕ್ಯಾಥಲಿಕ್ ಬಿಶಪ್ಸ್
- ಮೇಜರ್ (ರಿಟಾಯರ್ಡ್) ಫ್ರಾನ್‌ಝ್ ಗೈಲ್, ಸೀನಿಯರ್ ಸಯನ್ಸ್ ಅಡ್‌ವೈಸರ್, ಯು.ಎಸ್ ಮರೈನ್ ಕೋರ್
- ಡಾಕ್ಟರ್ ಸೂ ಗುರುವದೇನಾ – ವಾಗ್ಸ್, ಡೈರೆಕ್ಟರ್ ಆಫ್ ಇಂಟರ್‌ನೇಶನಲ್ ಪ್ರೀಡಮ್ ಆ್ಯಂಡ್ ಸೌತ್ ಈಸ್ಟ್ ಏಶಿಯಾ ಪ್ರೋಗ್ರಾಮ್ಸ್, ಫ್ರೀಡಮ್ ಹೌಸ್
- ಫ್ರಾಂಕ್ ಜನೂಝಿ, ಹೆಡ್ ಆಫ್ ವಾಶಿಂಗ್‌ಟನ್ ಆಫಿಸ್, ಆ್ಯಮ್‌ನೆಸ್ಟಿ ಇಂಟರ್‌ನೇಶನಲ್ ಯು.ಎಸ್.ಎ
- ಟಿ. ಕುಮಾರ್, ಇಂಟರ್‌ನೇಶನಲ್ ಆ್ಯಡ್‌ವರ್ಕಸಿ ಡೈರೆಕ್ಟರ್, ಆ್ಯಮ್‌ನೆಸ್ಟಿ ಇಂಟರ್‌ನೇಶನಲ್ ಯು.ಎಸ್.ಎ
- ಜೋರ್ಜ್ ಲೆವೆನ್‌ತಲ್, ಮೆಂಬರ್ ಆಫ್ ದಿ ಮೊಂಟ್‌ಗೊಮರಿ ಕೌಂಟೀ ಕೌನ್ಸಿಲ್
- ಅಮರ್ ಲತೀಫ್, ವಿಸಿಟಿಂಗ್ ಫೆಲೋ ವಾಧ್ವಾನೀ ಚೆಯರ್ ಇನ್ ಯು.ಎಸ್ ಇಂಡಿಯಾ ಪಾಲಿಸಿ ಸ್ಟಡೀಸ್, ಸೆಂಟರ್ ಫೋರ್ ಸ್ಟ್ರಾಟೆಜಿಕ್ ಆ್ಯಂಡ್ ಇಂಟರ್‌ನೇಶನಲ್ ಸ್ಟಡೀಸ್
- ಟಿಮ್ ಲೆಂಡರ್ ಕಿಂಗ್, ಡೈರೆಕ್ಟರ್ ಪಾಕಿಸ್ತಾನ್ ಡೆಸ್ಕ್ ಆಫಿಸ್, ಯು. ಎಸ್. ಸ್ಟೇಟ್ ಡಿಪಾರ್ಟ್‌ಮೆಂಟ್
- ಜಲಾಲ್ ಮಾಲಿಕ್, ಇಂಟರ್‌ನೇಶನಲ್ ಅಫೇರ್ಸ್ ಆಫೀಸರ್, ಯು.ಎಸ್ ಆರ್ಮಿ ನ್ಯಾಶನಲ್ ಗಾರ್ಡ್
- ನವೀದ್ ಮಾಲಿಕ್, ಫಾರಿನ್ ಸರ್ವಿಸ್ ಆಫೀಸರ್, ಯು.ಎಸ್ ಡಿಪಾರ್ಟ್‌ಮೆಂಟ್ ಆಫ್ ಸ್ಟೇಟ್
- ಡಾಲಿಯಾ ಮೊಗಾಹೆಡ್, ಸೀನಿಯರ್ ಎನಾಲಿಸ್ಟ್ ಆ್ಯಂಡ್ ಎಕ್ಸಿಕ್ಯೂಟಿವ್ ಡೈರೆಕ್ಟರ್, ಗ್ಯಾಲರ್ ಸೆಂಟರ್ ಫೋರ್ ಮುಸ್ಲಿಮ್ ಸ್ಟಡೀಸ್
- ಪೌಲ್ ಮೊಂತೇರೋ, ಅಸೋಸಿಯೇಟ್ ಡೈರೆಕ್ಟರ್, ವೈಟ್ ಹೌಸ್ ಆಫೀಸ್ ಆಫ್ ಪಬ್ಲಿಕ್ ಎಂಗೇಜ್‌ಮೆಂಟ್
- ಮೇಜರ್ ಜನರಲ್ ಡೇವಿಡ್ ಕ್ವಾನ್‌ಟೋಕ್, ಯುನೈಟೆಡ್ ಸ್ಟೇಟ್ಸ್ ಆರ್ಮಿ ಪ್ರೋವೋಸ್ಟ್ ಜನರಲ್
- ಟೀನಾ ರಮೀರೆಝ್, ಡೈರೆಕ್ಟರ್ ಆಫ್ ಇಂಟರ್‌ನೇಶನಲ್ ಆ್ಯಂಡ್ ಗವರ್ನ್‌ಮೆಂಟ್ ರಿಲೇಶನ್ಸ್, ದಿ ಬೆಕೆಟ್ ಫಂಡ್

- ರಬ್ಬೀ ಡೇವಿಡ್ ಸಪರ್ ಸ್ಟೆಯಿನ್, ಡೈಯರೆಕ್ಟರ್ ಆ್ಯಂಡ್ ಕೌನ್ಸಿಲ್, ರಿಲಿಜಸ್ ಏಕ್ಷನ್ ಸೆಂಟರ್ ಫೋರ್ ರಿಫೋರ್ಮ್ ಜುದಾಯಿಸಮ್
- ಚಾಪ್‌ಲೇನ್, ಬ್ರಿಗೇಡಿಯರ್ ಜನರಲ್ ಅಲ್‌ಫೋನ್ಸೆ ಸ್ಟೀಫನ್‌ಸನ್, ಡೈರೆಕ್ಟರ್ ಆಫ್ ದಿ ನೇಶನಲ್ ಗಾರ್ಡ್ ಬ್ಯೂರೋ ಆಫಿಸ್ ಆಫ್ ದಿ ಚಾಪ್‌ಲೈನ್
- ನೋಕ್ಸ್ ತೇಮ್ಸ್, ಡೈರೆಕ್ಟರ್ ಆಫ್ ಪಾಲಿಸಿ ಆ್ಯಂಡ್ ರೀಸರ್ಚ್, ಯು.ಎಸ್. ಕಮಿಶನ್ ಆನ್ ಇಂಟರ್‌ನೇಶನಲ್ ರಿಲಿಜಸ್ ಫ್ರೀಡಮ್
- ಎರಿಕ್ ಟ್ರೀನಿ, ಸ್ಪೆಶಲ್ ಕಾನ್ಸೆಲ್ ಫೋರ್ ರಿಲಿಜಸ್ ಡಿಸ್‌ಕ್ರಿಮಿನೇಶನ್, ಸಿವಿಲ್ ರೈಟ್ಸ್ ಡಿವಿಝನ್, ಯು.ಎಸ್ ಡಿಪಾರ್ಟ್‌ಮೆಂಟ್ ಆಫ್ ಜಸ್ಟಿಸ್
- ಡಾಕ್ಟರ್ ಹಸನ್ ಅಬ್ಬಾಸ್, ಪ್ರೊಫೆಸರ್ ರೀಜನಲ್ ಆ್ಯಂಡ್ ಎನಲಿಟಿಕಲ್ ಸ್ಟಡೀಸ್ ಡಿಪಾರ್ಟ್‌ಮೆಂಟ್, ನ್ಯಾಶನಲ್ ಡಿಫೆನ್ಸ್ ಯುನಿವರ್ಸಿಟಿ.
- ಮಾಲಿಕ್ ಸಿರಾಜ್ ಅಕ್ಬರ್, ರೀಗನ್ ಫಾಸೆಲ್ಲ್ ಫೆಲೊ, ನ್ಯಾಶನಲ್ ಎಂಡೋಮೆಂಟ್ ಆಫ್ ಡೆಮೋಕ್ರಸಿ
- ಮ್ಯಾತ್ಯೂ ಕೆ. ಅಸದ್ ಕಾಂಗ್ರಶನಲ್ ಫೆಲೊ ಟು ರೆಪ್. ಗ್ಯಾರೀ ಪೀಟರ್ಸ್
- ಸ್ಟಾಸೀ ಬರ್‌ಡೆಟ್, ಡೈರೆಕ್ಟರ್ ಆಫ್ ಗವರ್ನ್‌ಮೆಂಟ್ ಆ್ಯಂಡ್ ನ್ಯಾಶನಲ್ ಅಫೇರ್ಸ್, ಆ್ಯಂಟಿ ಡಿಫೆಮೇಶನ್ ಲೀಗ್
- ಎಲಿಝಬೆತ್ ಕೆಸ್ಸಿಡಿ, ಡಿಪ್ಯುಟಿ ಡೈರೆಕ್ಟರ್ ಫೋರ್ ಪಾಲಿಸಿ ಆ್ಯಂಡ್ ರೀಸರ್ಚ್, ಯು.ಎಸ್ ಕಮಿಶನ್ ಆನ್ ಇಂಟರ್‌ನೇಶನಲ್ ರಿಲಿಜಸ್ ಫ್ರೀಡಮ್
- ಐಮೀ ಚಿಯೂ, ಡೈರೆಕ್ಟರ್ ಆಫ್ ಮೀಡಿಯಾ, ಕಮ್ಯುನಿಕೇಶನ್ ಆ್ಯಂಡ್ ಪಬ್ಲಿಕ್ ರಿಲೇಶನ್ಸ್, ಅಮೇರಿಕನ್ ಇಸ್ಲಾಮಿಕ್ ಕಾಂಗ್ರೆಸ್
- ಕೋರ್ನೆಲಿಯಸ್ ಕ್ರೀಮಿನ್, ಡಿಪಾರ್ಟ್‌ಮೆಂಟ್ ಆಫ್ ಸ್ಟೇಟ್, ಬ್ಯೂರೋ ಆಫ್ ಡಿಮೋಕ್ರಸಿ, ಹ್ಯೂಮನ್ ರೈಟ್ಸ್ ಆ್ಯಂಡ್ ಲೇಬರ್, ಆ್ಯಕ್ಟಿಂಗ್ ಡಿಪ್ಯುಟಿ ಡೈರೆಕ್ಟರ್ ಆ್ಯಂಡ್ ಫೋರಿನ್ ಅಫೇರ್ಸ್ ಆಫೀಸರ್ ಫೋರ್ ಪಾಕಿಸ್ತಾನ್
- ಸದಾನಂದ್ ಧುಮೆ, ರೆಸಿಡೆಂಟ್ ಫೆಲೋ, ಅಮೇರಿಕನ್ ಎಂಟರ್‌ಪ್ರೈಸ್ ಇನ್‌ಸ್ಟಿಟ್ಯೂಟ್
- ಡಾಕ್ಟರ್ ರಿಚರ್ಡ್ ಗಾತ್ರೋ, ಡೀನ್ ಆಫ್ ನ್ಯಾಕ್ ಕಾಲೇಜ್, ವಾಶಿಂಗ್‌ಟನ್ ಡಿಸಿ
- ಜೋಗ್ರೀಬೋಸ್ಕಿ ಚೇರ್‌ಮನ್, ದಿ ಇನ್‌ಸ್ಟಿಟ್ಯೂಟ್ ಆನ್ ರಿಲಿಜನ್ ಆ್ಯಂಡ್ ಪಬ್ಲಿಕ್ ಪಾಲಿಸಿ
- ಸಾರಾ ಗ್ರೀಬೋಸ್ಕಿ, ದಿ ಇನ್‌ಸ್ಟಿಟ್ಯೂಟ್ ಆಫ್ ರಿಲಿಜನ್ ಆ್ಯಂಡ್ ಪಬ್ಲಿಕ್ ಪಾಲಿಸಿ
- ಮ್ಯಾಕ್ಸ್ ಗ್ರೋಸ್, ಆ್ಯಜಂಕ್ಟ್ ಪ್ರೊಫೆಸರ್, ಪ್ರಿನ್ಸ್ ಅಲ್‌ವಲೀದ್ ಬಿನ್ ತಲಾಲ್ ಸೆಂಟರ್ ಫೋರ್ ಮುಸ್ಲಿಮ್–ಕ್ರಿಶ್ಚಿಯನ್ ಅಂಡರ್‌ಸ್ಟ್ಯಾಡಿಂಗ್, ಜೋರ್ಜ್‌ಟೌನ್ ಯುನಿವರ್ಸಿಟಿ.

- ಡಾಕ್ಟರ್ ರಿಯಾಝ್ ಹೈದರ್, ಕ್ಲಿನಿಕಲ್ ಪ್ರೊಫೆಸರ್ ಆಫ್ ಮೆಡಿಸಿನ್, ಜೋರ್ಜ್ ವಾಶಿಂಗ್ಟನ್ ಯುನಿವರ್ಸಿಟಿ
- ಹುಮಾ ಹಖ್, ಅಸಿಸ್ಟೆಂಟ್ ಡೈರೆಕ್ಟರ್, ಸೌತ್ ಏಶಿಯಾ ಸೆಂಟರ್, ಅಟ್‌ಲಾಂಟಿಕ್ ಕೌನ್ಸಿಲ್
- ಜಯ್ ಕನ್‌ಸಾರ, ಅಸೋಸಿಯೇಟ್ ಡೈರೆಕ್ಟರ್, ಹಿಂದೂ ಅಮೇರಿಕನ್ ಫೌಂಡೇಶನ್
- ಹಮೀದ್ ಖಾನ್, ಸೀನಿಯರ್ ಪ್ರೋಗ್ರಾಮ್ ಆಫೀಸರ್, ರೂಲ್ ಆಫ್ ಲಾ ಸೆಂಟರ್, ಯು.ಎಸ್. ಇನ್‌ಸ್ಟಿಟ್ಯೂಟ್ ಫೋರ್ ಪೀಸ್
- ವೆಲರಿ ಕಿರ್ಕ್ ಪ್ಯಾಟ್ರಿಕ್, ಅಸೋಸಿಯೇಟ್ ಫೋರ್ ರಿಫ್ಯೂಜೀಸ್ ಆ್ಯಂಡ್ ಯು.ಎಸ್ ಎಡ್ವೋಕಸಿ ಹ್ಯೂಮನ್‌ರೈಟ್ಸ್ ವಾಚ್
- ಅಲೆಕ್ಸ್ ಕ್ರೋನೇಮರ್, ಯುನಿಟಿ ಪ್ರೊಡಕ್ಷನ್ಸ್
- ಪೌಲ್ ಲಿಬೆನ್, ಎಕ್ಸಿಕ್ಯುಟಿವ್ ರೈಟರ್, ಯು.ಎಸ್ ಕಮಿಶನ್ ಆನ್ ಇಂಟರ್‌ನೇಶನಲ್ ರಿಲಿಜಸ್ ಫ್ರೀಡಮ್
- ಅಮೀ ಲಿಲ್ಲಿಸ್, ಫಾರಿನ್ ಅಫೇರ್ಸ್ ಆಫೀಸರ್, ಯು.ಎಸ್ ಡಿಪಾರ್ಟ್‌ಮೆಂಟ್ ಆಫ್ ಸ್ಟೇಟ್
- ಗ್ರಹಾಮ್ ಮೇಸನ್, ಲೆಜಿಸ್ಲೇಟಿವ್ ಅಸಿಸ್ಟೆಂಟ್ ಟು ರೆಪ್. ಅಲೀಸನ್ ಶಾರ್ಟ್ಝ್
- ಲೌರೇನ್ ಮಾರ್ಕೋ, ರಿಲಿಜನ್ ನ್ಯೂಸ್ ಸರ್ವಿಸ್
- ಡಾನ್ ಮೆರಿಕ, ಸಿ. ಎನ್. ಎನ್. ಕಾಮ್
- ಜೋಸೆಫ್ ವಿ. ಮೋಂಟ್ ವಿಲ್ಲೇ, ಸೀನಿಯರ್ ಎಸೋಸಿಯೇಟ್, ಮರಿಮ್ಯಾಕ್ ಕಾಲೇಜ್ ಸೆಂಟರ್ ಫೋರ್ ಸ್ಟಡಿ ಆಫ್ ಜ್ಯೂಯಿಶ್– ಕ್ರಿಶ್ಚಿಯನ್–ಮುಸ್ಲಿಮ್ ರಿಲೇಶನ್ಸ್
- ಆರೋನ್ ಮೈಯರ್ಸ್, ಪ್ರೋಗ್ರಾಮ್ ಆಫಿಸರ್, ಫ್ರೀಡಮ್ ಹೌಸ್
- ಅತಿಯ ನಾಸರ್, ರೀಜನಲ್ ಕೋರ್ಡಿನೇಟಿಂಗ್ ಆಫೀಸರ್, ಯು.ಎಸ್. ಡಿಪಾರ್ಟ್‌ಮೆಂಟ್ ಆಫ್‌ಸ್ಟೇಟ್
- ಮಲಾನೀ ನೇಝುರ್, ಸೀನಿಯರ್ ಡೈರೆಕ್ಟರ್, ಯು.ಎಸ್. ಪಾಲಿಸಿ ಆ್ಯಂಡ್ ಅಡ್ವೊಕಿಸಿ, HIAS
- ಡಾಕ್ಟರ್ ಏಲಿಯಟ್ ಪ್ಯಾರಿಸ್, ಬೋವೀ ಸ್ಟೇಟ್ ಯುನಿವರ್ಸಿಟಿ
- ಜಾನ್ ಪಿನ್ನಾ, ಡೈರೆಕ್ಟರ್ ಆಫ್ ಗವರ್ನ್‌ಮೆಂಟ್ ಆ್ಯಂಡ್ ಇಂಟರ್‌ನೇಶನಲ್ ರಿಲೇಶನ್ಸ್, ಅಮೇರಿಕನ್ ಇಸ್ಲಾಮಿಕ್ ಕಾಂಗ್ರೆಸ್
- ಆರಿಫ್ ರಫೀಕ್, ಆ್ಯಜಂಕ್ಟ್ ಸ್ಕಾಲರ್ ಮಿಡ್ಲ್ ಈಸ್ಟ್ ಇನ್‌ಸ್ಟಿಟ್ಯೂಟ್ ಮಾಯಾ ರಾಜ ರತ್ನಮ್, ಆ್ಯಮ್‌ನೆಸ್ಟಿ ಇಂಟರ್‌ನೇಶನಲ್

- ರಶೆಲ್ ಸೌಅರ್, ಫಾರಿನ್ ಅಫೇರ್ಸ್ ಆಫೀಸರ್ ಯು.ಎಸ್ ಡಿಪಾರ್ಟ್‌ಮೆಂಟ್ ಆಫ್ ಸ್ಟೇಟ್
- ಡಾಕ್ಟರ್ ಜೆರೋಮ್ ಸ್ಕೀಲೇ, ಡೀನ್ ಆಫ್ ಕಾಲೇಜ್ ಆಫ್ ಪ್ರೊಫೆಶನಲ್ ಸ್ಟಡೀಸ್, ಬೋವೀ ಸ್ಟೇಟ್ ಯುನಿವರ್ಸಿಟಿ
- ಸಮಂತ ಸ್ಕಿನಿಟ್‌ಝುರ್, ಸ್ಟಾಫ್, ಯುನೈಟೆಡ್ ಸ್ಟೇಟ್ಸ್ ಕಮಿಶನ್ ಆನ್ ಇಂಟರ್ ನೇಶನಲ್ ರಿಲಿಜಸ್ ಫ್ರೀಡಮ್
- ಡಾಕ್ಟರ್ ಮೆರೀ ಹೋಪ್ ಸ್ಕೋವೋಬೆಲ್, ಸೀನಿಯರ್ ಪ್ರೋಗ್ರಾಮ್ ಆಫೀಸರ್, ಅಕಾಡಮಿ ಫೋರ್ ಇಂಟರ್‌ನೇಶನಲ್ ಕನ್‌ಫ್ಲಿಕ್ಟ್ ಮೇನೇಜ್‌ಮೆಂಟ್ ಆ್ಯಂಡ್ ಪೀಸ್ ಬಿಲ್ಡಿಂಗ್, ಯು.ಎಸ್. ಇನ್‌ಸ್ಟಿಟ್ಯೂಟ್ ಫೋರ್ ಪೀಸ್
- ಸಾರಾ ಶ್ಲೇಸಿಂಗರ್, ಇಂಟರ್‌ನೇಶನಲ್ ಆ್ಯಂಡ್ ಗವರ್ನ್‌ಮೆಂಟ್ ರಿಲೇಶನ್ಸ್ ಎಸೋಸಿಯೇಟ್, ದಿ ಬೆಕೆಟ್‌ಫಂಡ್
- ಡಾಕ್ಟರ್ ಫ್ರಾಂಕ್ ಸೆಲ್ಲಿನ್, ಕಿರ್ಗಿಸ್ಥಾನ್ ಡೆಸ್ಕ್ ಆಫೀಸರ್, ಯು.ಎಸ್ ಡಿಪಾರ್ಟ್‌ಮೆಂಟ್ ಆಫ್ ಸ್ಟೇಟ್
- ಅನ್ನಾ–ಲೀ ಸ್ಟಾಂಗ್ಲ್, ಕ್ರಿಶ್ಚಿಯನ್ ಸಾಲಿಡೇರಿಟಿ ವರ್ಲ್ಡ್‌ವೈಡ್
- ಕಾಲಿಂಡ ಸ್ಟೀಫನ್‌ಸನ್, ಪ್ರೊಫೆಶನಲ್ ಸ್ಟಾಫ್, ಟೋಮ್ ಲಾಂಟೋಸ್ ಹ್ಯೂಮನ್ ರೈಟ್ಸ್ ಕಮಿಶನ್
- ಜೋರ್ಡನ್ ಟಾಮ, ಲೀಡ್ ಡೆಮೋಕ್ರಾಟಿಕ್ ಸ್ಟಾಫರ್, ಟೋಮ್ ಲಾಂಟೋಸ್ ಹ್ಯೂಮನ್ ರೈಟ್ಸ್ ಕಮಿಶನ್
- ಶೌನ್ ಟಂಡನ್, ಎ. ಎಫ್.ಪಿ
- ಡಾಕ್ಟರ್ ವಿಲ್‌ಹೆಲ್‌ಮಸ್ ವಾಲ್‌ಕೆನ್‌ಬರ್ಗ್, ಪ್ರೊಫೆಸರ್ ಆಫ್ ರಿಲಿಜನ್ ಆ್ಯಂಡ್ ಕಲ್ಚರ್, ದಿ ಕಾಥೋಲಿಕ್ ಯುನಿವರ್ಸಿಟಿ ಆಫ್ ಅಮೇರಿಕ
- ಅಂತೋಣಿ ವಾನ್ಸ್, ಡೈರಕ್ಟರ್ ಆಫ್ ಎಕ್ಸ್‌ಟರ್ನಲ್ ಅಫೇರ್ಸ್, ಬಹಾಯಿಸ್ ಆಫ್ ಯುನೈಟೆಡ್ ಸ್ಟೇಟ್ಸ್
- ಜಿಹಾದ್ ಸಾಲೆಹ್ ವಿಲಿಯಮ್ಸ್, ಗವರ್ನ್‌ಮೆಂಟ್ ಅಫೇರ್ಸ್ ರೆಪ್ರಸೆಂಟೇಟಿವ್, ಇಸ್ಲಾಮಿಕ್ ರಿಲೀಫ್, ಯು.ಎಸ್.ಎ.
- ಅಮೇಲಿಯಾ ವಾಂಗ್, ಚೀಫ್ ಆಫ್ ಸ್ಟಾಫ್ ಟು ಕಾಂಗ್ರೆಸ್‌ವುಮನ್ ಜುಡೀ ಚೂ
- ಮೋಹ್ ಶರ್ಮ, ಲೆಜಿಸ್ಲೇಟಿವ್ ಫೆಲೋ ಟು ಕಾಂಗ್ರೆಸ್‌ವುಮನ್ ಜುಡೀ ಚೂ

# U.S. Congress-House Resolution 709

AUTHENTICATED
U.S. GOVERNMENT
INFORMATION
GPO



112TH CONGRESS
2D SESSION

# H. RES. 709

Welcoming His Holiness, Hadhrat Mirza Masroor Ahmad, the worldwide spiritual and administrative head of the Ahmadiyya Muslim Community, to Washington, DC, and recognizing his commitment to world peace, justice, nonviolence, human rights, religious freedom, and democracy.

---

IN THE HOUSE OF REPRESENTATIVES

JUNE 27, 2012

Ms. ZOE LOFGREN of California (for herself, Mr. SHERMAN, Mr. CONNOLLY of Virginia, Mr. HINCHEY, Ms. ESHOO, Ms. SPEIER, Ms. RICHARDSON, Mr. SCHIFF, Ms. SCHAKOWSKY, Mr. HONDA, Mr. WOLF, Mr. PETERS, Mr. DENT, Ms. CHU, Mr. BERMAN, Mr. FRANKS of Arizona, Ms. JACKSON LEE of Texas, Ms. SCHWARTZ, Mr. BRALEY of Iowa, and Mr. MCGOVERN) submitted the following resolution; which was referred to the Committee on Foreign Affairs

---

# RESOLUTION

Welcoming His Holiness, Hadhrat Mirza Masroor Ahmad, the worldwide spiritual and administrative head of the Ahmadiyya Muslim Community, to Washington, DC, and recognizing his commitment to world peace, justice, nonviolence, human rights, religious freedom, and democracy.

Whereas, from June 16, 2012, to July 2, 2012, His Holiness, Hadhrat Mirza Masroor Ahmad, the worldwide spiritual and administrative head of the Ahmadiyya Muslim Community, an international religious organization with mil-

lions of members across the globe, is making a historic visit to the United States;

Whereas His Holiness was elected to become fifth Khalifa to Mirza Ghulam Ahmad, a lifelong position, on April 22, 2003;

Whereas His Holiness is a leading Muslim figure promoting peace, who in his sermons, lectures, books, and personal meetings has continually advocated the Ahmadiyya values of service to humanity, universal human rights, and a peaceful and just society;

Whereas the Ahmadiyya Muslim Community has suffered repeated hardships, including discrimination, persecution, and violence;

Whereas, on May 28, 2010, 86 Ahmadi Muslims were killed in Lahore, Pakistan, when two mosques belonging to the Ahmadiyya Muslim Community were attacked by anti-Ahmadiyya terrorists;

Whereas despite the continued sectarian persecution that Ahmadi Muslims are subjected to, His Holiness continues to forbid violence;

Whereas His Holiness has traveled globally to promote and facilitate service to humanity, meeting with presidents, prime ministers, parliamentarians, and ambassadors of state;

Whereas during his visit to the United States, His Holiness will meet thousands of American Muslims in addition to significant United States Government leaders in order to strengthen relationships and find means of establishing peace and justice for all people; and

Whereas, on the morning of June 27, 2012, His Holiness will deliver the keynote address at a special bipartisan recep-

tion at the Rayburn House Office Building on Capitol Hill, "The Path to Peace: Just Relations Between Nations": Now, therefore, be it

*Resolved,* That the House of Representatives—

(1) welcomes His Holiness, Mirza Masroor Ahmad to Washington, DC;

(2) commends His Holiness for promoting individual and world peace, as well as individual and world justice; and

(3) commends His Holiness for his perseverance in counseling Ahmadi Muslims to eschew any form of violence, even in the face of severe persecution.

○

# ಯು.ಎಸ್.ಕಾಂಗ್ರೆಸ್–ಹೌಸ್ ರೆಸೊಲ್ಯೂಷನ್ 709.
# ಠರಾವು

**“ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಆಧ್ಯಾತ್ಮಿಕ ಮತ್ತು ಆಡಳಿತಾತ್ಮಕ ಸರ್ವೋಚ್ಚ ನಾಯಕರಾದ, ಗೌರವಾನ್ವಿತ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದರನ್ನು ಜಾಗತಿಕ ಶಾಂತಿ, ನ್ಯಾಯಪಾಲನೆ, ಅಹಿಂಸೆ, ಮಾನವ ಹಕ್ಕುಗಳ ಸಂರಕ್ಷಣೆ, ಧಾರ್ಮಿಕ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಬಗ್ಗೆ ಅವರಿಗಿರುವ ಬದ್ಧತೆಯನ್ನು ಗುರುತಿಸಿಕೊಂಡು ವಾಶಿಂಗ್‌ಟನ್ ಡಿ.ಸಿ.ಗೆ ಸ್ವಾಗತಿಸುತ್ತೇವೆ.”**

2012 ಜೂನ್ ದಿನಾಂಕ 16ರಿಂದ 2012 ಜುಲೈ ದಿನಾಂಕ 2ರ ತನಕ, ಜಗತ್ತಿನಾದ್ಯಂತ ಮಿಲಿಯಗಟ್ಟಲೆ ಸದಸ್ಯರನ್ನು ಹೊಂದಿದ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಎಂಬ ಧಾರ್ಮಿಕ ಸಂಘಟನೆಯ ಜಾಗತಿಕ ಆಧ್ಯಾತ್ಮಿಕ ಮತ್ತು ಆಡಳಿತಾತ್ಮಕ ನಾಯಕರಾದ ಹಿಸ್ ಹೋಲಿನೆಸ್ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಯುನೈಟೆಡ್ ಸ್ಟೇಟ್ಸ್‌ಗೆ ಚಾರಿತ್ರಿಕ ಭೇಟಿ ನೀಡುತ್ತಿದ್ದಾರೆ.

ಬಹುಮಾನ್ಯರು ಮಿರ್ಝಾ ಗುಲಾಮ್ ಅಹ್ಮದ್ ಅವರ ಐದನೇ ಖಲೀಫರಾಗಿ ಆಜೀವಾವಧಿ ಕಾಲಕ್ಕೆ 2002 ಏಪ್ರಿಲ್ 22ರಂದು ಚುನಾಯಿಸಲ್ಪಟ್ಟರು.

ಬಹುಮಾನ್ಯರು ಶಾಂತಿಯ ಬಗ್ಗೆ ಪ್ರತಿಪಾದಿಸುವ ಮುಸ್ಲಿಮ್ ಧುರೀಣರಾಗಿದ್ದಾರೆ. ಅವರು ತನ್ನ ಪ್ರವಚನಗಳ, ಭಾಷಣಗಳ ಮತ್ತು ಪುಸ್ತಕಗಳ ಮೂಲಕವೂ ವೈಯಕ್ತಿಕ ಸಂದರ್ಶನಗಳ ಮೂಲಕವೂ ಮಾನವರ ಸೇವೆ, ಸಾರ್ವತ್ರಿಕ ಮಾನವನ ಮೂಲಭೂತ ಹಕ್ಕುಗಳು, ಶಾಂತಿ ಮತ್ತು ನ್ಯಾಯಪಾಲಿಸುವ ಸಮಾಜದ ಬಗ್ಗೆ ಅಹ್ಮದಿಯಾ ಜಮಾಅತಿನ ಮೌಲ್ಯಗಳನ್ನು ಸದಾ ಪ್ರತಿಪಾದಿಸುತ್ತಿದ್ದಾರೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್ ಪದೇ ಪದೇ ಕಷ್ಟಗಳನ್ನೂ ಭೇದಭಾವನೆಯನ್ನೂ ದೌರ್ಜನ್ಯವನ್ನೂ ಹಿಂಸಾಚಾರವನ್ನು ಅನುಭವಿಸುತ್ತಾ ಇದೆ.

2010 ಮೇ 28ರಂದು ಪಾಕಿಸ್ತಾನದ ಲಾಹೋರ್‌ನಲ್ಲಿ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಎರಡು ಮಸೀದಿಗಳನ್ನು ಅಹ್ಮದಿಯಾ ವಿರೋಧಿ ಉಗ್ರಗಾಮಿಗಳು ಆಕ್ರಮಿಸಿದ ಕಾರಣ 86 ಅಹ್ಮದೀ ಮುಸ್ಲಿಮರು ಕೊಲ್ಲಲ್ಪಟ್ಟರು.

ಅಹ್ಮದೀ ಮುಸ್ಲಿಮರು ಪದೇ ಪದೇ ವರ್ಗೀಯ ದೌರ್ಜನ್ಯಕ್ಕೆ ಗುರಿಯಾಗುತ್ತಿದ್ದರೂ ಬಹುಮಾನ್ಯ ಖಲೀಫರು ಹಿಂಸೆಯನ್ನು ನಿಷೇಧಿಸುತ್ತಾರೆ.

ಬಹುಮಾನ್ಯ ಖಲೀಫರು ಮಾನವರ ಸೇವೆಯನ್ನು ಪ್ರೋತ್ಸಾಹಿಸಲು ಮತ್ತು ಈಡೇರಿಸಲು ಲೋಕದ ಎಲ್ಲ ಕಡೆಗಳಲ್ಲೂ ಸಂಚರಿಸಿ ರಾಷ್ಟ್ರಾಧ್ಯಕ್ಷರನ್ನೂ ಪ್ರಧಾನ ಮಂತ್ರಿಗಳನ್ನೂ ಪಾರ್ಲಿಮೆಂಟ್ ಸದಸ್ಯರನ್ನೂ ರಾಯಭಾರಿಗಳನ್ನೂ ಭೇಟಿಯಾಗುತ್ತಿದ್ದಾರೆ.

ಬಹುಮಾನ್ಯ ಖಲೀಫರು ಯುನೈಟೆಡ್ ಸ್ಟೇಟ್ಸ್ ಸರಕಾರದ ಪ್ರಮುಖ ನಾಯಕರನ್ನೂ ಸಾವಿರಾರು ಅಮೇರಿಕನ್ ಮುಸ್ಲಿಮರನ್ನೂ ತನ್ನ ಸಂದರ್ಶನದ ಸಂದರ್ಭದಲ್ಲಿ ಭೇಟಿಯಾಗಿ ಸಂಬಂಧಗಳನ್ನು ಬಲಪಡಿಸಲು ಮತ್ತು ಎಲ್ಲ ಜನರಿಗೆ ಶಾಂತಿ ಮತ್ತು ನ್ಯಾಯ ದೊರಕಲು ಮಾರ್ಗಗಳನ್ನು ಕಂಡುಕೊಳ್ಳಲು ಪ್ರಯತ್ನಿಸುವರು.

2012 ಜೂನ್ 27ರಂದು ಬೆಳಗ್ಗೆ ರೇಬರ್ನ್ ಆಫಿಸ್ ಬಿಲ್ಡಿಂಗ್, ಕ್ಯಾಪಿಟೋಲ್ ಹಿಲ್‌ನಲ್ಲಿ ದ್ವಿಪಕ್ಷೀಯ ಸ್ವಾಗತ ಸಮಾರಂಭದಲ್ಲಿ "ಶಾಂತಿಗಿರುವ ಮಾರ್ಗ: ದೇಶಗಳ ಮಧ್ಯೆ ನ್ಯಾಯಪೂರ್ಣವಾದ ಸಂಬಂಧ ಸ್ಥಾಪನೆ " ಎಂಬ ವಿಷಯದಲ್ಲಿ ಬಹುಮಾನ್ಯ ಖಲೀಫರು ಭಾಷಣ ಮಾಡಲಿರುವರು. ಆದುದರಿಂದ ಹೀಗೆ ಠರಾವು ಅಂಗೀಕರಿಸಲಾಗಿದೆ: ಅಮೇರಿಕದ ಹೌಸ್ ಆಫ್ ರೆಪ್ರಸೆಂಟೇಟಿವ್ಸ್

1. ಹಿಸ್ ಹೋಲಿನೆಸ್ ಮಿರ್ಝಾ ಮಸ್‌ರೂರ್ ಅಹ್ಮದರನ್ನು ವಾಶಿಂಗ್‌ಟನ್ ಡಿ.ಸಿ.ಗೆ ಸ್ವಾಗತಿಸುತ್ತದೆ.
2. ವೈಯಕ್ತಿಕ ಮತ್ತು ಜಾಗತಿಕ ಶಾಂತಿಯನ್ನೂ ವೈಯಕ್ತಿಕ ಮತ್ತು ಜಾಗತಿಕ ನ್ಯಾಯವನ್ನೂ ಪ್ರೋತ್ಸಾಹಿಸುವುದಕ್ಕೆ ಬಹುಮಾನ್ಯರನ್ನು ಪ್ರಶಂಶಿಸುತ್ತದೆ.
3. ತೀವ್ರ ಹಿಂಸಾಚಾರಕ್ಕೆ ಗುರಿಯಾದಾಗ ಕೂಡ ಯಾವುದೇ ರೀತಿಯ ಹಿಂಸೆಯನ್ನು ಮಾಡಬಾರದೆಂದು ಅಹ್ಮದೀ ಮುಸ್ಲಿಮರಿಗೆ ಉಪದೇಶಿಸುವುದರಲ್ಲಿ ನಿರಂತರವಾಗಿ ಪರಿಶ್ರಮಿಸುವುದಕ್ಕೆ ಬಹುಮಾನ್ಯರನ್ನು ಪ್ರಶಂಸಿಸುತ್ತಿದೆ.

# ಶಾಂತಿಗಿರುವ ಮಾರ್ಗ–
# ದೇಶಗಳ ಮಧ್ಯೆ ನ್ಯಾಯಪೂರ್ಣ ಸಂಬಂಧ ಸ್ಥಾಪನೆ

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್– ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ.

ಎಲ್ಲ ಗಣ್ಯ ಅತಿಥಿಗಳೇ, ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ – ಅಲ್ಲಾಹನ ಶಾಂತಿ ಮತ್ತು ಅನುಗ್ರಹ ನಿಮ್ಮೆಲ್ಲರ ಮೇಲೆ ಇರಲಿ.

ನೀವು ಇಲ್ಲಿಗೆ ಆಗಮಿಸಿ ನನ್ನ ಭಾಷಣವನ್ನು ಆಲಿಸಲು ಸಮಯವನ್ನು ವಿನಿಯೋಗಿಸಿದುದಕ್ಕೋಸ್ಕರ ನಾನು ನಿಮಗೆ ಮೊದಲನೆಯದಾಗಿ ಕೃತಜ್ಞತೆ ಅರ್ಪಿಸುತ್ತೇನೆ. ಯಾವ ವಿಷಯದ ಬಗ್ಗೆ ನಾನು ಭಾಷಣ ನೀಡಬೇಕೆಂದು ಕೋರಲಾಗಿದೆಯೋ ಆ ವಿಷಯ ಬಹಳ ವಿಶಾಲವೂ ವಿಸ್ತೃತವೂ ಆಗಿದೆ. ಅದಕ್ಕೆ ಅನೇಕ ಪಾರ್ಶ್ವಗಳಿವೆ. ನನಗೆ ಲಭಿಸಿರುವ ಸೀಮಿತ ಸಮಯದೊಳಗೆ ಈ ವಿಷಯಕ್ಕೆ ಸಂಬಂಧಿಸಿ ಸಮಗ್ರವಾಗಿ ವಿವರಿಸಲು ಸಾಧ್ಯವಾಗಲಾರದು. ಜಾಗತಿಕ ಶಾಂತಿಯ ಸ್ಥಾಪನೆ ಬಗ್ಗೆ ಮಾತನಾಡಲು ನನ್ನೊಡನೆ ಕೋರಲಾಗಿದೆ. ಖಂಡಿತವಾಗಿಯೂ ಇಂದು ಲೋಕವು ಎದುರಿಸುತ್ತಿರುವ ಅತ್ಯಂತ ಮುಖ್ಯ ಮತ್ತು ಆತಂಕಕಾರಿ ವಿಷಯ ಇದಾಗಿದೆ. ಸಮಯವು ಸೀಮಿತವಾಗಿರುವ ಕಾರಣ ದೇಶಗಳ ಮಧ್ಯೆ ನ್ಯಾಯಪೂರ್ಣ ಮತ್ತು ಸಮಾನ ಸಂಬಂಧಗಳ ಸ್ಥಾಪನೆಯ ಬಗ್ಗೆ ಇಸ್ಲಾಮಿನ ದೃಷ್ಟಿಕೋನವನ್ನು ಸಂಕ್ಷಿಪ್ತವಾಗಿ ವಿವರಿಸುವೆನು.

ಸತ್ಯದಲ್ಲಿ, ಶಾಂತಿ ಮತ್ತು ನ್ಯಾಯಪಾಲನೆ ಅವಿಭಾಜ್ಯವಾಗಿವೆ. ಒಂದನ್ನು ಹೊಂದದೆ ಇನ್ನೊಂದನ್ನು ಹೊಂದಲು ಸಾಧ್ಯವಾಗಲಾರದು. ನಿಶ್ಚಯವಾಗಿಯೂ ಎಲ್ಲ ಬುದ್ಧಿಶಾಲಿಗಳೂ ಇದನ್ನು ಮನವರಿಕೆ ಮಾಡಿಕೊಂಡಿರುತ್ತಾರೆ. ಲೋಕದಲ್ಲಿ ಅಶಾಂತಿಯನ್ನು ಉಂಟುಮಾಡಬೇಕೆಂದು ನಿರ್ಧರಿಸಿದವರನ್ನು ಹೊರತುಪಡಿಸಿ ಯಾವುದೇ ಸಮಾಜದಲ್ಲಿ, ಯಾವುದೇ ದೇಶದಲ್ಲಿ ಅಥವಾ ಜಗತ್ತಿನಾದ್ಯಂತ ಯಾರೂ ನ್ಯಾಯಪಾಲನೆ ಮತ್ತು ಸರಿಯಾದ ವ್ಯವಹಾರವಿರುವಲ್ಲಿ ಅಸ್ತವ್ಯಸ್ತತೆ ಅಥವಾ ಅಶಾಂತಿ ಇರುವುದೆಂದು ಹೇಳಲಾರರು. ಇಂದು ಲೋಕದ ಅನೇಕ ಪ್ರದೇಶಗಳಲ್ಲಿ ಅಶಾಂತಿ ಮತ್ತು ಅಸ್ತವ್ಯಸ್ತತೆ ಕಂಡು ಬರುತ್ತವೆ. ಕೆಲವು ದೇಶಗಳಲ್ಲಿ ಆಂತರಿಕವಾಗಿಯೂ ವಿವಿಧ ದೇಶಗಳ ಮಧ್ಯೆ ಬಾಹ್ಯವಾಗಿಯೂ ಈ ಅಶಾಂತಿ ಕಾಣಿಸುತ್ತಾ ಇದೆ. ಎಲ್ಲ ಸರಕಾರಗಳು ತಮ್ಮ ಧೋರಣೆಗಳು ನ್ಯಾಯಬದ್ಧವಾಗಿವೆ ಎಂದು ವಾದಿಸುತ್ತಿವೆಯಾದರೂ ಇಂತಹ ಸಂಘರ್ಷ ಮತ್ತು ಅಸ್ತವ್ಯಸ್ತತೆಗಳು ಕಂಡು ಬರುತ್ತವೆ. ಶಾಂತಿಸ್ಥಾಪನೆಯೇ ತಮ್ಮ ಪ್ರಮುಖ ಉದ್ದೇಶವೆಂದು ಎಲ್ಲರೂ ವಾದಿಸುತ್ತಾರೆ. ಹೀಗಿದ್ದರೂ ಲೋಕದಲ್ಲಿ ಆತಂಕ ವರ್ಧಿಸುತ್ತಾ ಇರುವುದರ ಬಗ್ಗೆ ಮತ್ತು ಪ್ರಕ್ಷುಬ್ಧತೆ ಹರಡುತ್ತಾ ಇದೆ ಎಂಬ ಬಗ್ಗೆ ಸಂಶಯವಿಲ್ಲ. ಇದರಿಂದ ಸ್ಪಷ್ಟವಾಗುವುದೇನೆಂದರೆ, ಎಲ್ಲಿಯೋ ಒಂದು ಕಡೆ

ನ್ಯಾಯಪಾಲನೆ ಮಾಡಬೇಕೆಂಬ ಆವಶ್ಯಕತೆಯು ಈಡೇರಿಸಲ್ಪಟ್ಟಿಲ್ಲ. ಆದುದರಿಂದ ಅಸಮಾನತೆಯನ್ನು ಅದು ಎಲ್ಲಿದ್ದರೂ ಯಾವಾಗ ಇದ್ದರೂ ನಿವಾರಿಸಬೇಕಾದುದು ಅತ್ಯಂತ ತುರ್ತಾಗಿ ಮಾಡಬೇಕಾದ ಕೆಲಸವಾಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ನೇತಾರನೆಂಬ ನೆಲೆಯಲ್ಲಿ ನಾನು ನ್ಯಾಯದ ಮೇಲೆ ಅಸ್ತಿಭಾರ ಹೊಂದಿದ ಶಾಂತಿ ಸ್ಥಾಪನೆಯ ಆವಶ್ಯಕತೆ ಮತ್ತು ಅದನ್ನು ಸಾಧಿಸುವ ಮಾರ್ಗಗಳ ಬಗ್ಗೆ ಕೆಲವು ಅಭಿಪ್ರಾಯಗಳನ್ನು ಹೇಳಲು ಬಯಸುತ್ತೇನೆ.

ಅಹ್ಮದಿಯಾ ಮುಸ್ಲಿಮ್ ಸಂಘಟನೆ ಪೂರ್ಣವಾಗಿ ಒಂದು ಧಾರ್ಮಿಕ ಸಮುದಾಯವಾಗಿದೆ. ನಮ್ಮ ವಿಶ್ವಾಸವೇನೆಂದರೆ, ಇಸ್ಲಾಮಿನ ನೈಜ ತತ್ವಗಳ ಕುರಿತು ಲೋಕಕ್ಕೆ ಅರಿವು ನೀಡುವ ಮಸೀಹ್ ಮತ್ತು ಸುಧಾರಕನಾಗಿ ಆಗಮಿಸಬೇಕಾದ ಮಹಾನುಭಾವರು ಆಗಮಿಸಿದ್ದಾರೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಹೀಗೆ ಆಗಮಿಸಿದ ಮಸೀಹರೆಂದೂ ಸುಧಾರಕರೆಂದೂ ನಾವು ನಂಬುತ್ತೇವೆ. ಪವಿತ್ರ ಖುರ್‌ಆನನ್ನು ಆಧಾರವಾಗಿಟ್ಟುಕೊಂಡು ಇಸ್ಲಾಮಿನ ನೈಜ ತತ್ವಗಳನ್ನು ಅನುಷ್ಠಿಸಿ ಪ್ರಚಾರ ಮಾಡಬೇಕೆಂದು ಅವರು ತನ್ನ ಅನುಯಾಯಿಗಳನ್ನು ಆಗ್ರಹಪಡಿಸಿದರು. ಆದುದರಿಂದ ಶಾಂತಿಸ್ಥಾಪನೆ ಬಗ್ಗೆ, ಅಂತರ್‌ರಾಷ್ಟ್ರೀಯ ಸಂಬಂಧಗಳನ್ನು ಹೇಗೆ ಸ್ಥಾಪಿಸಬೇಕೆನ್ನುವುದರ ಬಗ್ಗೆ ನಾವು ಪ್ರತಿಪಾದಿಸುವ ಎಲ್ಲವೂ ಪವಿತ್ರ ಖುರ್‌ಆನನ್ನು ಆಧಾರವಾಗಿಟ್ಟುಕೊಂಡು ಹೇಳುವುದಾಗಿದೆ.

ಜಾಗತಿಕ ಶಾಂತಿ ಸ್ಥಾಪನೆ ಬಗ್ಗೆ ನೀವು ಆಗಾಗ ನಿಮ್ಮ ಅಭಿಪ್ರಾಯಗಳನ್ನು ಪ್ರಕಟಿಸುತ್ತಿರುವಿರಿ ಮತ್ತು ನೀವು ನಿಜವಾಗಿಯೂ ಬಹಳ ಪ್ರಯತ್ನಮಾಡುತ್ತಿರುವಿರಿ. ನಿಮ್ಮ ರಚನಾತ್ಮಕ ಬುದ್ಧಿಶಾಲಿ ಮನಸ್ಸುಗಳು ನೀವು ಮಹತ್ತಾದ ಅಭಿಪ್ರಾಯಗಳನ್ನೂ ಯೋಜನೆಗಳನ್ನೂ ದೂರಗಾಮಿ ಶಾಂತಿಯ ಪ್ರಸ್ತಾಪಗಳನ್ನೂ ಮಾಡಲು ಪ್ರೇರೇಪಿಸುತ್ತಿವೆ. ಆದುದರಿಂದ ನಾನು ಈ ವಿಷಯದ ಬಗ್ಗೆ ಲೌಕಿಕ ಅಥವಾ ರಾಜಕೀಯ ದೃಷ್ಟಿಕೋನದಿಂದ ಮಾತನಾಡಲು ಬಯಸುವುದಿಲ್ಲ. ನಾನು ಸಂಪೂರ್ಣವಾಗಿ ಧಾರ್ಮಿಕ ದೃಷ್ಟಿಕೋನದ ಮೇಲೆ ನನ್ನ ಗಮನವಿರಿಸಿ ಮಾತನಾಡುವೆನು. ನಾನು ಇದರ ಮೊದಲು ಹೇಳಿದ ಹಾಗೆ ಪವಿತ್ರ ಖುರ್‌ಆನಿನ ಉಪದೇಶಗಳಿಗೆ ಅನುಸಾರವಾಗಿ ಕೆಲವು ಮಾರ್ಗದರ್ಶನಗಳನ್ನು ನಿಮ್ಮ ಮುಂದೆ ಇರಿಸುವೆನು.

ಮನುಷ್ಯನ ಜ್ಞಾನ ಮತ್ತು ಬುದ್ಧಿಶಕ್ತಿ ಪರಿಪೂರ್ಣವಾಗಿರುವುದಿಲ್ಲ ಮತ್ತು ಪರಿಮಿತವಾಗಿರುತ್ತದೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳುವುದು ಆವಶ್ಯಕವಾಗಿದೆ. ಆದುದರಿಂದ ನಿರ್ಧಾರ ಕೈಗೊಳ್ಳುವಾಗ ಮತ್ತು ಯೋಚನೆಗಳನ್ನು ಮಾಡುವಾಗ ಯಾವಾಗಲೂ ಕೆಲವು ವಿಷಯಗಳು ಮನುಷ್ಯನ ಮನಸ್ಸನ್ನು ಪ್ರಭಾವಿಸುತ್ತವೆ. ಆದ ಕಾರಣ ಅವನ ತೀರ್ಮಾನಗಳು ತನ್ನ ಸ್ವಾರ್ಥ ಹಿತಾಸಕ್ತಿಗಳನ್ನು ಈಡೇರಿಸುವ ರೀತಿಯಲ್ಲಿರುತ್ತವೆ. ಇದರ ಪರಿಣಾಮವಾಗಿ ಅನ್ಯಾಯಕರವಾದ ನಿರ್ಧಾರಗಳು ಕೈಗೊಳ್ಳಲ್ಪಡುತ್ತವೆ. ಆದರೆ ದೇವನ ನಿಯಮಗಳು

ಪರಿಪೂರ್ಣವಾಗಿರುತ್ತವೆ. ಆದ್ದರಿಂದ ಅದರಲ್ಲಿ ಸ್ವಾರ್ಥ ಹಿತಾಸಕ್ತಿಗಳು ಅಥವಾ ಅನ್ಯಾಯಕರವಾದ ವಿಷಯಗಳು ಇರುವುದಿಲ್ಲ. ಇದಕ್ಕೆ ಕಾರಣವೇನೆಂದರೆ, ದೇವನು ತಾನು ಸೃಷ್ಟಿಸಿದವರ ಹಿತವನ್ನು ಮಾತ್ರ ಬಯಸುತ್ತಾನೆ. ಆದುದರಿಂದ ಅವನ ನಿಯಮಗಳು ನ್ಯಾಯಪಾಲನೆ ಮೇಲೆ ಪೂರ್ಣವಾಗಿ ಅಸ್ತಿಭಾರ ಹೊಂದಿರುತ್ತವೆ. ಈ ಮುಖ್ಯ ವಿಷಯವನ್ನು ಲೋಕದ ಜನರು ಮನವರಿಕೆ ಮಾಡಿಕೊಳ್ಳುವಾಗ ನಿಜವಾದ ಮತ್ತು ಶಾಶ್ವತ ಶಾಂತಿಗೆ ಅಸ್ತಿಭಾರ ಹಾಕಲ್ಪಡುವುದು. ಹೀಗೆ ಆಗದಿದ್ದರೆ, ಜಾಗತಿಕ ಶಾಂತಿ ಸ್ಥಾಪಿಸಲಿಕ್ಕೋಸ್ಕರ ಕೆಲವರು ನಿರಂತರ ಪ್ರಯತ್ನ ಮಾಡುತ್ತಾ ಇದ್ದರೂ ಅದರಿಂದ ಯಾವುದಾದರೂ ಪ್ರಯೋಜನಕರವಾದ ಪರಿಣಾಮ ಉಂಟುಮಾಡಲು ಅವರಿಗೆ ಸಾಧ್ಯವಾಗಲಿಲ್ಲವೆಂದು ಕಾಣುವೆವು.

ಪ್ರಥಮ ಜಾಗತಿಕ ಮಹಾಯುದ್ಧ ಕೊನೆಗೊಂಡ ನಂತರ ಕೆಲವು ದೇಶಗಳ ನಾಯಕರು ದೇಶಗಳ ಮಧ್ಯೆ, ಭವಿಷ್ಯದಲ್ಲಿ ಉತ್ತಮ ಮತ್ತು ಶಾಂತಿಯ ಸಂಬಂಧ ಸ್ಥಾಪಿಸಲು ಬಯಸಿದರು. ಜಾಗತಿಕ ಶಾಂತಿಯನ್ನು ಸ್ಥಾಪಿಸುವ ಉದ್ದೇಶದಿಂದ ಲೀಗ್ ಆಫ್ ನೇಶನ್ಸ್ ಸ್ಥಾಪಿತವಾಯಿತು. ಅದರ ಮುಖ್ಯ ಉದ್ದೇಶ ಲೋಕದಲ್ಲಿ ಶಾಂತಿ ಸ್ಥಾಪಿಸಿ ಮುಂದೆ ಯುದ್ಧಗಳು ನಡೆಯದಂತೆ ಮಾಡುವುದಾಗಿತ್ತು. ಆದರೆ ದುರದೃಷ್ಟಕರವಾಗಿ ಲೀಗ್ ಆಫ್ ನೇಶನ್ಸ್ ಸ್ಥಾಪನೆಯ ನಿಯಮಗಳು ಮತ್ತು ಅದು ಅಂಗೀಕರಿಸಿದ ಠರಾವುಗಳಲ್ಲಿ ಕೆಲವು ನ್ಯೂನತೆಗಳು ಇದ್ದುದರಿಂದ ಅವು ಲೋಕದ ಎಲ್ಲ ಜನರ ಹಕ್ಕುಗಳನ್ನು ಸಮಾನವಾಗಿ ಸಂರಕ್ಷಿಸಲು ಸಾಧ್ಯವಾಗಲಿಲ್ಲ. ಅದರ ಪರಿಣಾಮವಾಗಿ ಅಸಮಾನತೆಯು ಉಂಟಾದುದರಿಂದ ದೀರ್ಘ ಕಾಲ ಶಾಂತಿ ಪರಿಸ್ಥಿತಿ ಮುಂದುವರಿಯಲಿಲ್ಲ. ಲೀಗ್ ಆಫ್ ನೇಶನ್ಸ್ ಜಾಗತಿಕ ಶಾಂತಿ ಸ್ಥಾಪನೆಗೆ ಮಾಡಿದ ಪ್ರಯತ್ನಗಳು ನಿಷ್ಫಲವಾದವು ಮತ್ತು ದ್ವಿತೀಯ ಜಾಗತಿಕ ಮಹಾಯುದ್ಧಕ್ಕೆ ಅದು ಸಾಗಿಸಿತು.

ಆಗ ಹಿಂದೆಂದೂ ಸಂಭವಿಸದಂತಹ ಬೃಹತ್ ಮಟ್ಟದ ನಾಶವು ಲೋಕದಲ್ಲಿ ಸಂಭವಿಸಿದುದು ನಮಗೆಲ್ಲರಿಗೂ ತಿಳಿದಿದೆ. 75 ಮಿಲಿಯ ಜನರು ಲೋಕದಾದ್ಯಂತ ಆ ಯುದ್ಧಕಾಲದಲ್ಲಿ ಕೊಲ್ಲಲ್ಪಟ್ಟರು. ಅವರಲ್ಲಿ ಅನೇಕ ಸಂಖ್ಯೆಯ ಜನರು ನಿಷ್ಕಳಂಕರಾದ ನಾಗರಿಕರಾಗಿದ್ದರು. ಆ ಯುದ್ಧವು ಲೋಕದ ಕಣ್ಣನ್ನು ತೆರೆಯಲು ಸಾಕಾಗುವುದಕ್ಕಿಂತ ಹೆಚ್ಚಾಗಿತ್ತು. ಲೋಕದ ದೇಶಗಳು ಬುದ್ಧಿಪೂರ್ವಕವಾಗಿ ಧೋರಣೆಗಳನ್ನು ರೂಪಿಸಿ ಎಲ್ಲ ಜನರಿಗೆ ಅವರವರ ಹಕ್ಕುಗಳನ್ನು ನೀಡುವ ವ್ಯವಸ್ಥೆಯನ್ನು ನ್ಯಾಯಯುತವಾಗಿ ಮಾಡಿ ಲೋಕದಲ್ಲಿ ಶಾಂತಿ ಸ್ಥಾಪಿಸುವ ಮಾರ್ಗವನ್ನು ಅವಲಂಬಿಸಬೇಕಾಗಿತ್ತು. ದ್ವಿತೀಯ ಮಹಾಯುದ್ಧದ ನಂತರ ಲೋಕದ ರಾಷ್ಟ್ರಗಳು ಜಾಗತಿಕ ಶಾಂತಿ ಸ್ಥಾಪಿಸಲು ಪ್ರಯತ್ನಗಳನ್ನು ಕೈಗೊಂಡವು ಮತ್ತು ಸಂಯುಕ್ತ ರಾಷ್ಟ್ರ ಸಂಘವು ಸ್ಥಾಪಿಸಲ್ಪಟ್ಟಿತು. ಆದರೆ ಸಂಯುಕ್ತ ರಾಷ್ಟ್ರ ಸಂಘವನ್ನು ಸ್ಥಾಪಿಸಲು ಯಾವ ಭವ್ಯ ಉದ್ದೇಶಗಳನ್ನು ಗಮನದಲ್ಲಿಡಲಾಗಿತ್ತೋ ಆ ಉದ್ದೇಶಗಳನ್ನು ಈಡೇರಿಸಲು ಸಾಧ್ಯವಿಲ್ಲವೆಂದು ಸ್ವಲ್ಪ ಸಮಯದೊಳಗೆ ಸ್ಪಷ್ಟವಾಗಿ ತಿಳಿಯಿತು. ಇಂದು ಕೆಲವು ಸರಕಾರಗಳು ನೀಡುವ

ಹೇಳಿಕೆಗಳಿಂದ ಅದು ಅದರ ಉದ್ದೇಶವನ್ನು ಈಡೇರಿಸುವುದರಲ್ಲಿ ವಿಫಲವಾಗಿದೆ ಎಂದು ಸಾಬೀತಾಗುತ್ತದೆ.

ಶಾಂತಿ ಸ್ಥಾಪನೆಗೋಸ್ಕರ ನ್ಯಾಯಪಾಲನೆಯ ಅಡಿಪಾಯದಲ್ಲಿ ಅಂತರ್ರಾಷ್ಟ್ರೀಯ ಸಂಬಂಧದ ಬಗ್ಗೆ ಇಸ್ಲಾಮ್ ಏನು ಹೇಳುತ್ತದೆ? ಪವಿತ್ರ ಖುರ್‌ಆನ್‌ನಲ್ಲಿ ಸರ್ವಶಕ್ತನಾದ ದೇವನು ನಮ್ಮ ಜನಾಂಗೀಯ ವ್ಯತ್ಯಾಸಗಳು ನಮ್ಮನ್ನು ಗುರುತಿಸುವ ವಿಧಾನ ಎಂದು ಹೇಳಿ ಅದರಿಂದ ಒಂದು ಜನಾಂಗಕ್ಕೆ ಇನ್ನೊಂದು ಜನಾಂಗದ ಮೇಲೆ ಯಾವುದೇ ಶ್ರೇಷ್ಠತೆ ಇರುವುದಿಲ್ಲ ಎಂದು ಹೇಳಿರುವನು. ಪವಿತ್ರ ಖುರ್‌ಆನಿನ ವಚನ ಹೀಗಿದೆ:

**"ಮನುಷ್ಯರೇ, ನಾವು ನಿಮ್ಮನ್ನು ಗಂಡು ಮತ್ತು ಹೆಣ್ಣಿನಿಂದ ಸೃಷ್ಟಿಸಿದೆವು. ನೀವು ಪರಸ್ಪರ ಗುರುತಿಸಲ್ಪಡಲಿಕ್ಕಾಗಿ ನಿಮ್ಮನ್ನು ಕುಲಗಳನ್ನಾಗಿಯೂ ಗೋತ್ರಗಳನ್ನಾಗಿಯೂ ಮಾಡಿರುವೆವು. ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು. ದಿಟವಾಗಿಯೂ ಅಲ್ಲಾಹನು ಸರ್ವಜ್ಞನೂ ಎಲ್ಲ ಅರಿತವನೂ ಆಗಿದ್ದಾನೆ."** (49:14)

ಎಲ್ಲ ಮನುಷ್ಯರು ಸಮಾನವಾಗಿ ಜನಿಸಿರುವರು ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಇಸ್ಲಾಮಿನ ಪವಿತ್ರ ಪ್ರವಾದಿ(ಸ) ತಾನು ನೀಡಿದ ಅಂತಿಮ ಪ್ರವಚನದಲ್ಲಿ ಹೀಗೆಂದರು:

"ಮುಸ್ಲಿಮರು ಯಾವಾಗಲೂ ಹೀಗೆ ನೆನಪಿಟ್ಟುಕೊಳ್ಳಬೇಕು – ಅರಬಿಯು ಅರಬಿಯೇತರನಿಗಿಂತ ಶ್ರೇಷ್ಠನಲ್ಲ. ಅರಬಿಯೇತರನು ಅರಬಿಗಿಂತ ಶ್ರೇಷ್ಠನೂ ಅಲ್ಲ. ಬಿಳಿ ವರ್ಣದವನು ಕಪ್ಪು ವರ್ಣದವನಿಗಿಂತ ಶ್ರೇಷ್ಠನಲ್ಲ. ಕಪ್ಪು ವರ್ಣದವನು ಬಿಳಿ ವರ್ಣದವನಿಗಿಂತಲೂ ಶ್ರೇಷ್ಠನಲ್ಲ."

ಇಸ್ಲಾಮ್ ಧರ್ಮದ ಪ್ರಕಾರ ಎಲ್ಲ ಜನಾಂಗಗಳ ಜನರು ಮತ್ತು ಎಲ್ಲ ಗುಂಪುಗಳ ಜನರು ಸರ್ವಸಮಾನರಾಗಿದ್ದಾರೆ. ಪ್ರತಿಯೊಂದು ಜನಾಂಗಕ್ಕೆ ಯಾವುದೇ ಪೂರ್ವಗ್ರಹವಿಲ್ಲದೆ, ತಾರತಮ್ಯವಿಲ್ಲದೆ ಸಮಾನ ಹಕ್ಕುಗಳನ್ನು ನೀಡಬೇಕು. ವಿವಿಧ ಗುಂಪುಗಳ ಮತ್ತು ವಿವಿಧ ಜನಾಂಗಗಳ ಮಧ್ಯೆ ಸೌಹಾರ್ದಕ್ಕೆ ಮತ್ತು ಶಾಂತಿ ಸ್ಥಾಪನೆಗೆ ಅಸ್ತಿಭಾರ ಹಾಕುವ ಸುವರ್ಣ ತತ್ವ ಇದಾಗಿದೆ.

ಆದರೆ ನಾವು ಇಂದಿನ ಲೋಕದಲ್ಲಿ ಶಕ್ತಿಶಾಲಿ ಮತ್ತು ಶಕ್ತಿಹೀನ ದೇಶಗಳ ಮಧ್ಯೆ ಭಿನ್ನಾಭಿಪ್ರಾಯಗಳನ್ನೂ ಪರಸ್ಪರ ಬೇರ್ಪಡುವಿಕೆಯನ್ನೂ ಕಾಣುತ್ತೇವೆ. ಉದಾಹರಣೆಗೆ, ಸಂಯುಕ್ತರಾಷ್ಟ್ರ ಸಂಘದ ಕೆಲವು ದೇಶಗಳಿಗೆ ವಿಶೇಷಾಧಿಕಾರಗಳಿವೆ. ಸಂಯುಕ್ತರಾಷ್ಟ್ರ ಸಂಘದ ಸೆಕ್ಯುರಿಟಿ ಕೌನ್ಸಿಲ್‌ನಲ್ಲಿ (ಭದ್ರತಾ ಮಂಡಳಿಯಲ್ಲಿ) ಕೆಲವು ಸ್ಥಿರ ಸದಸ್ಯತ್ವ ಹೊಂದಿದ ದೇಶಗಳು ಮತ್ತು ಕೆಲವು ತಾತ್ಕಾಲಿಕ ಸದಸ್ಯತ್ವ ಹೊಂದಿದ ದೇಶಗಳಿವೆ. ಈ ತಾರತಮತೆ ಆಂತರಿಕ ಆತಂಕಗಳಿಗೂ ನಿರಾಶೆಗಳಿಗೂ ಹೇತುವಾಗಿದೆ ಮತ್ತು ಕೆಲವು ದೇಶಗಳು ಈ ಅಸಮಾನತೆ ಬಗ್ಗೆ ಪ್ರತಿಭಟಿಸುವುದರ ಕುರಿತು ನಾವು ಆಗಾಗ ವರದಿಗಳನ್ನು ಆಲಿಸುತ್ತೇವೆ. ಇಸ್ಲಾಮ್ ಪರಿಪೂರ್ಣ ನ್ಯಾಯಪಾಲನೆ ಮತ್ತು ಸಮಾನತೆಯನ್ನು ಉಪದೇಶಿಸುತ್ತದೆ. ಪವಿತ್ರ ಖುರ್‌ಆನ್ ಅಧ್ಯಾಯ 5 ವಚನ 3ರಲ್ಲಿ, ಹಗೆತನದಲ್ಲಿ ಮಿತಿಮೀರಿ ಹೋದವರ ವಿರುದ್ಧ ಕೂಡ ಅನ್ಯಾಯದಿಂದ

ವರ್ತಿಸಬಾರದೆಂದು ಉಪದೇಶಿಸಲಾಗಿದೆ. ಸತ್ಕರ್ಮಗಳಲ್ಲಿ ಮತ್ತು ಅಲ್ಲಾಹನ ಆಜ್ಞೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರಲ್ಲಿ ಪರಸ್ಪರ ಸಹಕರಿಸಬೇಕೆಂದೂ ಅನ್ಯಾಯ ಮತ್ತು ಪಾಪಕರ್ಮ ಮಾಡುವುದರಲ್ಲಿ ಅನ್ಯೋನ್ಯ ಸಹಕರಿಸಬಾರದೆಂದೂ ಖುರ್‌ಆನ್ ಉಪದೇಶಿಸುತ್ತದೆ.

ಸಹಜವಾಗಿ ಉದ್ಭವಿಸುವ ಒಂದು ಪ್ರಶ್ನೆ ಏನೆಂದರೆ, ಇಸ್ಲಾಮ್ ಆವಶ್ಯಪಡುವ ನ್ಯಾಯಪಾಲನೆಯ ಮಾನದಂಡವೇನು? ಪವಿತ್ರ ಖುರ್‌ಆನ್ ಅಧ್ಯಾಯ 4 ವಚನ 136ರಲ್ಲಿ ಹೀಗೆ ಹೇಳಲಾಗಿದೆ: ನಿಮ್ಮ ವಿರುದ್ಧ ಅಥವಾ ನಿಮ್ಮ ಮಾತಾಪಿತರ ವಿರುದ್ಧ ಅಥವಾ ನಿಮಗೆ ಪ್ರಿಯರಾದವರ ವಿರುದ್ಧ ಸಾಕ್ಷ್ಯ ಹೇಳಬೇಕಾದ ಆವಶ್ಯಕತೆ ಉಂಟಾದರೂ ನೀವು ಪರಿಪೂರ್ಣವಾದ ನ್ಯಾಯನಿಷ್ಠೆಯಿಂದಲೂ ಸತ್ಯಪೂರ್ಣವಾಗಿಯೂ ಸಾಕ್ಷ್ಯ ಹೇಳಬೇಕು.

ಶಕ್ತಿಶಾಲಿಗಳಾದ ಶ್ರೀಮಂತ ದೇಶಗಳು ಬಡ ಬಲಹೀನ ದೇಶಗಳ ಹಕ್ಕುಗಳನ್ನು ಅಪಹರಿಸಿ ತಮ್ಮ ಸ್ವಂತ ಹಕ್ಕುಗಳನ್ನು ರಕ್ಷಿಸಬಾರದು ಮತ್ತು ಬಡದೇಶಗಳೊಂದಿಗೆ ಅನ್ಯಾಯದಿಂದ ವರ್ತಿಸಬಾರದು. ಇನ್ನೊಂದು ಕಡೆ ಬಡ ಬಲಹೀನ ದೇಶಗಳು ತಮಗೆ ಸಂದರ್ಭ ಸಿಗುವಾಗ ಶಕ್ತಿಶಾಲಿ ಶ್ರೀಮಂತ ದೇಶಗಳಿಗೆ ಹಾನಿಯನ್ನುಂಟುಮಾಡಲು ಪ್ರಯತ್ನಿಸಬಾರದು. ಎರಡು ಪಕ್ಷಗಳ ದೇಶಗಳು ನ್ಯಾಯಪಾಲನೆಯ ತತ್ವಗಳನ್ನು ಸಂಪೂರ್ಣವಾಗಿ ಪಾಲಿಸುವವರಾಗಬೇಕು. ದೇಶಗಳ ಮಧ್ಯೆ ಶಾಂತಿ ಸಂಬಂಧ ಸ್ಥಾಪಿಸಲು ಇದು ಅತ್ಯಂತ ಮಹತ್ವಪೂರ್ಣವಾದುದಾಗಿದೆ.

ದೇಶಗಳ ಮಧ್ಯೆ ಶಾಂತಿ ಸ್ಥಾಪನೆಗೊಳ್ಳಲು ಆವಶ್ಯಕವಾದ ಇನ್ನೊಂದು ತತ್ವವನ್ನು ಪವಿತ್ರ ಖುರ್‌ಆನ್ ಅಧ್ಯಾಯ 15 ವಚನ 89ರಲ್ಲಿ ವಿವರಿಸಿದೆ. ಅನ್ಯರ ಸಂಪತ್ತನ್ನು ಅಸೂಯೆಯಿಂದ ದಿಟ್ಟಿಸಿ ನೋಡಬಾರದೆಂದು ಪವಿತ್ರ ಖುರ್‌ಆನ್ ಈ ವಚನದಲ್ಲಿ ಆದೇಶಿಸಿದೆ. ಆದುದರಿಂದ ಯಾವುದೇ ದೇಶ ಇನ್ನೊಂದು ದೇಶಕ್ಕೆ ಸಹಾಯ ನೀಡುವ ನೆವನದಿಂದ ಅದರ ಸಂಪನ್ಮೂಲಗಳನ್ನು ಅನ್ಯಾಯವಾಗಿ ಅಪಹರಿಸಬಾರದು. ತಾಂತ್ರಿಕ ಸಹಕಾರ ನೀಡುವ ಕಾರಣದಿಂದ ಅನ್ಯ ದೇಶಗಳೊಂದಿಗೆ ಅನ್ಯಾಯದ ವಾಣಿಜ್ಯ ಒಪ್ಪಂದಗಳನ್ನು ಮಾಡಬಾರದು. ಪರಿಣಿತರ ಸೇವೆ ನೀಡುವ ಮೂಲಕ ಅಭಿವೃದ್ಧಿ ಹೊಂದುತ್ತಿರುವ ಅನ್ಯ ದೇಶಗಳ ನೈಸರ್ಗಿಕ ಸಂಪತ್ತನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಬಾರದು. ವಿದ್ಯಾಭ್ಯಾಸ ಕಡಿಮೆ ಇರುವ ದೇಶಗಳ ಸರಕಾರಗಳಿಗೆ ಮತ್ತು ಜನರಿಗೆ ಅವರ ನೈಸರ್ಗಿಕ ಸಂಪನ್ಮೂಲಗಳನ್ನು ಸರಿಯಾಗಿ ಬಳಸುವುದು ಹೇಗೆ ಎಂದು ಕಲಿಸಿಕೊಡುವುದು ಆವಶ್ಯಕವಾಗಿದೆ.

ಎಲ್ಲ ಜನಾಂಗಗಳು ಮತ್ತು ಸರಕಾರಗಳು ಯಾವಾಗಲೂ ತಮಗಿಂತ ಕಡಿಮೆ ಸಂಪನ್ಮೂಲಗಳನ್ನು ಹೊಂದಿದವರ ಸೇವೆ ಮಾಡಬೇಕು ಮತ್ತು ಸಹಾಯ ಒದಗಿಸಬೇಕು. ಆದರೆ ರಾಷ್ಟ್ರೀಯ ಲಾಭ ಪಡೆಯಲು ಅಥವಾ ಸ್ವಾರ್ಥ ಹಿತಾಸಕ್ತಿಗೋಸ್ಕರ ಈ ನೆರವು ನೀಡಬಾರದು. ಕಳೆದ ಆರು ಅಥವಾ ಏಳು ದಶಕಗಳಲ್ಲಿ ಸಂಯುಕ್ತ ರಾಷ್ಟ್ರ ಸಂಘ ಬಡದೇಶಗಳ ಅಭಿವೃದ್ಧಿಗೋಸ್ಕರ ಅನೇಕ ಕಾರ್ಯಯೋಜನೆಗಳನ್ನು ರೂಪಿಸಿದೆ. ಇದಕ್ಕೋಸ್ಕರ ಅಭಿವೃದ್ಧಿ ದೇಶಗಳ ನೈಸರ್ಗಿಕ ಸಂಪನ್ಮೂಲಗಳನ್ನು ಕಂಡುಹಿಡಿಯಲಾಗಿದೆ. ಆದರೆ ಈ ಎಲ್ಲ ಪ್ರಯತ್ನಗಳನ್ನು ಮಾಡಿದ್ದರೂ ಬಡ ದೇಶಗಳಲ್ಲಿ

ಒಂದು ಕೂಡ ಅಭಿವೃದ್ಧಿ ಹೊಂದಿದ ದೇಶದ ಹಂತವನ್ನು ತಲಪಲಿಲ್ಲ. ಇದಕ್ಕೊಂದು ಕಾರಣ, ಅಭಿವೃದ್ಧಿಶೀಲ ದೇಶಗಳ ಅನೇಕ ಸರಕಾರಗಳ ವ್ಯಾಪಕವಾದ ಭ್ರಷ್ಟತೆಯಾಗಿದೆ. ನಾನು ಖೇದಕರವಾಗಿ ಹೇಳಲು ಬಯಸುವುದೇನೆಂದರೆ, ಅಭಿವೃದ್ಧಿ ಹೊಂದಿದ ದೇಶಗಳು ಇಂತಹ ಭ್ರಷ್ಟ ಸರಕಾರ ಹೊಂದಿದ ದೇಶಗಳೊಂದಿಗೆ ತಮ್ಮ ಸ್ವಾರ್ಥ ಸಾಧನೆಗೋಸ್ಕರ ತಮ್ಮ ಸಂಬಂಧವನ್ನು ಮುಂದುವರಿಸಿವೆ. ವಾಣಿಜ್ಯ ಒಪ್ಪಂದಗಳೂ ಅಂತರ್ರಾಷ್ಟ್ರೀಯ ಸಹಾಯನಿಧಿ ಮೊದಲಾದುವು ಮುಂದುವರಿಯುತ್ತಾ ಇವೆ. ಇದರ ಪರಿಣಾಮವಾಗಿ ಆ ದೇಶಗಳಲ್ಲಿರುವ ಬಡ ಜನರ ನಿರಾಶೆಗಳು ಮತ್ತು ಅಸಮಾಧಾನ ಹೆಚ್ಚುತ್ತಾ ಹೋಗುತ್ತಿವೆ. ಇದರಿಂದ ಆ ದೇಶಗಳೊಳಗೆ ವಿದ್ರೋಹ ಮತ್ತು ಆಂತರಿಕ ಗಲಭೆಗೊಂದಲಗಳು ಮುಂದುವರಿಯುತ್ತಾ ಇವೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಬಡ ಜನತೆ ಎಷ್ಟು ಕಂಗೆಟ್ಟು ಹೋಗಿರುವರೆಂದರೆ, ಅವರು ತಮ್ಮ ದೇಶಗಳ ನಾಯಕರ ವಿರುದ್ಧ ಮಾತ್ರವಲ್ಲ ಮಹಾಶಕ್ತಿ ರಾಷ್ಟ್ರಗಳ ವಿರುದ್ಧ ಸಹ ದಂಗೆ ಎದ್ದಿದ್ದಾರೆ. ಅವರು ತೀವ್ರವಾದ ಗುಂಪುಗಳ ಹಿಡಿತಕ್ಕೊಳಗಾಗಿದ್ದಾರೆ. ತೀವ್ರವಾದ ಗುಂಪುಗಳು ಅಸಮಾಧಾನಗೊಂಡ ಜನರ ಮೇಲೆ ಪ್ರಭಾವ ಬೀರಿ ತಮ್ಮ ಗುಂಪಿಗೆ ಸೇರಿಸಿಕೊಂಡು ತಮ್ಮ ದ್ವೇಷಭರಿತ ತತ್ವಗಳನ್ನು ಬೆಂಬಲಿಸುವಂತೆ ಮಾಡಿದ್ದಾರೆ. ಇದರ ಅಂತಿಮ ಪರಿಣಾಮವಾಗಿ ಲೋಕದಲ್ಲಿ ಶಾಂತಿಯು ನಾಶಗೊಳಿಸಲ್ಪಟ್ಟಿದೆ.

ಇಸ್ಲಾಮ್ ಶಾಂತಿ ಸ್ಥಾಪನೆಯ ವಿವಿಧ ಮಾರ್ಗಗಳನ್ನು ನಮ್ಮ ಗಮನಕ್ಕೆ ತಂದಿದೆ. ಅದು ಪರಿಪೂರ್ಣ ನ್ಯಾಯಪಾಲನೆಯನ್ನು ಆವಶ್ಯಪಡುತ್ತದೆ. ಸತ್ಯವಾದ ಸಾಕ್ಷ್ಯ ನೀಡಬೇಕೆಂದು ಅದು ಆವಶ್ಯಪಡುತ್ತದೆ. ಅನ್ಯರ ಸಂಪತ್ತನ್ನು ದಿಟ್ಟಿಸಿ ನೋಡಬಾರದೆಂದು ಅದು ಆವಶ್ಯಪಡುತ್ತದೆ. ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಬದಿಗಿರಿಸಬೇಕೆಂದೂ ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಿಗೆ ಸ್ವಾರ್ಥ ರಹಿತವಾಗಿ ನೆರವು ನೀಡಬೇಕೆಂದೂ ಆವಶ್ಯಪಡುತ್ತದೆ. ಈ ಎಲ್ಲ ನಿಬಂಧನೆಗಳನ್ನು ಪಾಲಿಸಿದರೆ ನೈಜ ಶಾಂತಿಯು ಸ್ಥಾಪಿತವಾಗುವುದು.

ಈ ಎಲ್ಲ ಕ್ರಮಗಳನ್ನು ಕೈಗೊಂಡ ನಂತರ ಕೂಡ ಯಾವುದಾದರೂ ದೇಶ ಮಿತಿಮೀರಿ ವರ್ತಿಸಿ ಇನ್ನೊಂದು ದೇಶವನ್ನು ಆಕ್ರಮಿಸುವುದಾದರೆ ಮತ್ತು ಅನ್ಯಾಯದಿಂದ ಆ ದೇಶದ ಸಂಪನ್ಮೂಲಗಳನ್ನು ಸ್ವಾಧೀನಪಡಿಸುವುದಾದರೆ ಆಗ ಬೇರೆ ದೇಶಗಳು ಈ ದೌರ್ಜನ್ಯವನ್ನು ತಡೆಗಟ್ಟಲು ಮುಂದಾಗಬೇಕು. ಆದರೆ ಅವು ಯಾವಾಗಲೂ ನ್ಯಾಯಪಾಲನೆ ಮಾಡುವುದು ಆವಶ್ಯಕವಾಗಿದೆ.

ಪವಿತ್ರ ಖುರ್‌ಆನ್ ಅಧ್ಯಾಯ 49 ವಚನ 10ರಲ್ಲಿ ಇದರ ಬಗ್ಗೆ ವಿವರಿಸಲಾಗಿದೆ. ಎರಡು ದೇಶಗಳು ಪರಸ್ಪರ ಹೋರಾಟಕ್ಕಿಳಿದರೆ ಉಳಿದ ದೇಶಗಳು ಅವುಗಳ ಮಧ್ಯೆ ಮಾತುಕತೆ ನಡೆಸಿ ಅವು ಪರಸ್ಪರ ರಾಜಿಯಾಗುವಂತೆ ಮಾಡಬೇಕು. ಆದರೆ ಒಂದು ಪಕ್ಷದವರು ರಾಜಿ ಪ್ರಸ್ತಾಪಗಳನ್ನು ಅಂಗೀಕರಿಸದೆ ಯುದ್ಧವನ್ನು ಮುಂದುವರಿಸಲು ಬಯಸಿದರೆ, ಆಗ ಉಳಿದ ದೇಶಗಳು ಒಟ್ಟಿಗೆ ಸೇರಿ ಆಕ್ರಮಣಗಾರರನ್ನು ತಡೆಯಬೇಕು. ಆಕ್ರಮಣಕಾರಿ ದೇಶವು ಸೋಲಿಸಲ್ಪಟ್ಟು ಪರಸ್ಪರ ಸಂಧಾನಕ್ಕೆ ಸಿದ್ಧವಾದರೆ, ಆಗ ಎಲ್ಲ ದೇಶಗಳು ಶಾಶ್ವತ ಶಾಂತಿಯನ್ನು ಸ್ಥಾಪಿಸುವಂತಹ ಒಪ್ಪಂದವನ್ನು ಮಾಡಬೇಕು. ಕಠಿಣ ಮತ್ತು ಅನ್ಯಾಯದ ಶರತ್ತುಗಳನ್ನು ವಿಧಿಸಬಾರದು. ಅವುಗಳಿಂದ ಯಾವುದಾದರೂ

ದೇಶವು ನಿರ್ಬಂಧಿಸಲ್ಪಡಬಾರದು. ಏಕೆಂದರೆ, ಆ ಕಾರಣದಿಂದ ಮುಂದೆ ಅಶಾಂತಿಯು ತಲೆದೋರಿ ಶಾಂತಿಭಂಗ ಉಂಟಾಗಬಹುದು.

ಎರಡು ರಾಷ್ಟ್ರಗಳ ಮಧ್ಯೆ ಇರುವ ಸಮಸ್ಯೆಯನ್ನು ಬಗೆಹರಿಸಲು ಮೂರನೆಯ ಒಂದು ದೇಶ ಪ್ರಯತ್ನಿಸುವಾಗ ಅದು ನಿಷ್ಪಕ್ಷಪಾತಿಯಾಗಿಯೂ ಪ್ರಾಮಾಣಿಕವಾಗಿಯೂ ವರ್ತಿಸಬೇಕು. ಸಂಘರ್ಷಭರಿತ ಎರಡು ದೇಶಗಳಲ್ಲಿ ಒಂದು, ಮಧ್ಯಸ್ಥ ದೇಶದ ವಿರುದ್ಧ ಹೇಳಿಕೆ ನೀಡಿದರೂ ನಿಷ್ಪಕ್ಷತನದಿಂದ ವರ್ತಿಸಬೇಕು. ಅಂತಹ ಸಂದರ್ಭದಲ್ಲಿ ಮಧ್ಯಸ್ಥಿಕೆ ವಹಿಸುವ ದೇಶ ಕೋಪದಿಂದಲೂ ಪ್ರತೀಕಾರ ಭಾವನೆಯಿಂದಲೂ ಅನುಚಿತವಾಗಿಯೂ ವರ್ತಿಸಬಾರದು. ಪ್ರತಿಯೊಂದು ಪಕ್ಷಕ್ಕೆ ಅದರ ಹಕ್ಕುಗಳನ್ನು ನೀಡಬೇಕು.

ನ್ಯಾಯಪಾಲನೆಯ ಆವಶ್ಯಕತೆ ಏನೆಂದರೆ, ರಾಜಿ ಪ್ರಸ್ತಾಪಗಳನ್ನು ನಡೆಸುವ ದೇಶಗಳು ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಈಡೇರಿಸಲು, ಜಗಳ ಮಾಡುವ ಎರಡು ದೇಶಗಳಿಂದಲೂ ಲಾಭ ಪಡೆಯಲು ಪ್ರಯತ್ನಿಸಬಾರದು. ಅವರು ಅನಾವಶ್ಯಕವಾಗಿ ಹಸ್ತಕ್ಷೇಪಮಾಡಬಾರದು ಅಥವಾ ಅನುಚಿತ ಒತ್ತಡಗಳನ್ನು ಹೇರಬಾರದು. ಯಾವುದೇ ದೇಶದ ನೈಸರ್ಗಿಕ ಸಂಪತ್ತನ್ನು ಅಪಹರಿಸಲು ಪ್ರಯತ್ನಿಸಬಾರದು. ಅನಾವಶ್ಯಕ ಮತ್ತು ಅನುಚಿತ ನಿರ್ಬಂಧಗಳನ್ನು ಹೇರಬಾರದು. ಏಕೆಂದರೆ ಇದು ನ್ಯಾಯಸಮ್ಮತವಲ್ಲ ಮತ್ತು ಅದರಿಂದ ದೇಶಗಳ ಮಧ್ಯೆ ಸಂಬಂಧವು ಉತ್ತಮ ಹೊಂದಲಾರದು.

ಸಮಯದ ಕೊರತೆಯ ಕಾರಣ ನಾನು ಈ ಅಂಶಗಳನ್ನು ಬಹಳ ಸಂಕ್ಷಿಪ್ತವಾಗಿ ವಿವರಿಸಿದ್ದೇನೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಲೋಕದಲ್ಲಿ ಶಾಂತಿ ಸ್ಥಾಪಿತವಾಗಬೇಕೆಂದು ನಾವು ಬಯಸುವುದಾದರೆ, ನಾವು ನಮ್ಮ ವೈಯಕ್ತಿಕ ಮತ್ತು ದೇಶೀಯ ಹಿತಾಸಕ್ತಿಗಳನ್ನು ಹೆಚ್ಚು ಉತ್ತಮವಾಗುವುದಕ್ಕೋಸ್ಕರ ಬದಿಗಿರಿಸಬೇಕು. ನಾವು ಪರಸ್ಪರ ಸಂಬಂಧಗಳನ್ನು ಸಂಪೂರ್ಣವಾಗಿ ನ್ಯಾಯನಿಷ್ಠೆಯ ಮೂಲಕ ಸ್ಥಾಪಿಸಬೇಕು. ಹೀಗೆ ಮಾಡದಿದ್ದರೆ ನಿಮ್ಮಲ್ಲಿ ಕೆಲವರು ನನ್ನೊಂದಿಗೆ ಹೀಗೆ ಸಹಮತ ಹೊಂದುವಿರಿ: ಕೆಲವು ದೇಶಗಳು ಪರಸ್ಪರ ಒಗ್ಗೂಡಿ ಸಂಯುಕ್ತ ಸಂಘಟನೆಗಳನ್ನು ರೂಪಿಸುವುವು– ಅಥವಾ ಹಾಗೆ ಸಂಯುಕ್ತ ಸಂಘಟನೆಗಳು ಈಗಾಗಲೇ ರೂಪುಗೊಳ್ಳಲು ತೊಡಗಿವೆ ಎಂದೇ ಹೇಳುವೆನು. ಆದುದರಿಂದ ಲೋಕದಲ್ಲಿ ಅಸ್ತವ್ಯಸ್ತತೆ ಹೆಚ್ಚುತ್ತಾ ಹೋಗುವುದು ಅಸಂಭಾವ್ಯವೇನೂ ಅಲ್ಲ. ಅದರ ಮೂಲಕ ಭಯಾನಕ ನಾಶವು ಸಂಭವಿಸುವುದು. ಇಂತಹ ನಾಶ ಮತ್ತು ಯುದ್ಧದ ಪರಿಣಾಮಗಳು ಖಂಡಿತವಾಗಿಯೂ ಅನೇಕ ಪೀಳಿಗೆಗಳ ತನಕ ವ್ಯಾಪಿಸುವುವು. ಲೋಕದ ಅತ್ಯಂತ ದೊಡ್ಡ ಶಕ್ತಿಶಾಲಿ ರಾಷ್ಟ್ರವಾದ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ನೈಜ ನ್ಯಾಯಪಾಲನೆಯ ಪ್ರಕಾರ, ನಾನು ಪ್ರಸ್ತಾಪಿಸಿದ ಉತ್ತಮ ಉದ್ದೇಶದಿಂದ ವರ್ತಿಸಬೇಕು. ಹೀಗೆ ವರ್ತಿಸಿದರೆ ಲೋಕವು, ನೀವು ಶಾಂತಿ ಸ್ಥಾಪನೆಗೋಸ್ಕರ ಮಾಡಿದ ಪ್ರಯತ್ನಗಳನ್ನು ಯಾವಾಗಲೂ ಮೆಚ್ಚುಗೆಯಿಂದ ನೆನಪಿಸುವುದು. ಹೀಗೆ ನಿಜವಾಗಿಯೂ ಸಂಭವಿಸಲಿ ಎಂದು ನಾನು ಪ್ರಾರ್ಥಿಸುತ್ತೇನೆ. ನಿಮಗೆ ಕೃತಜ್ಞತೆಗಳು.

ನಮ್ಮ ಸಂಪ್ರದಾಯ ಪ್ರಕಾರ ಒಂದು ಕಾರ್ಯಕ್ರಮದ ಕೊನೆಯಲ್ಲಿ ನಾವು ಮೌನ ಪ್ರಾರ್ಥನೆ ಮಾಡುತ್ತೇವೆ. ನಾನು ಮೌನ ಪ್ರಾರ್ಥನೆ ಮಾಡುವೆನು. ಅಹ್ಮದಿಯರು ನನ್ನನ್ನು ಅನುಸರಿಸುವರು. ನಮ್ಮ ಅತಿಥಿಗಳಾದ ನೀವೆಲ್ಲರೂ ನಿಮ್ಮ ಸ್ವಂತ ರೀತಿಯಲ್ಲಿ ಪ್ರಾರ್ಥಿಸಬಹುದು.



# ಶಾಂತಿಯ ಕೀಲಿಕೈ–
# ಜಾಗತಿಕ ಐಕ್ಯ

ಯುರೋಪಿಯನ್ ಪಾರ್ಲಿಮೆಂಟ್
ಬ್ರಸ್ಸೆಲ್ಸ್, ಬೆಲ್ಜಿಯಮ್, 2012





Hadrat Khalifatul-Masih V[aba] being welcomed by Martin Schulz, President of European Parliament




His Holiness leading silent prayer at conclusion of the European Parliament event.
Seated to his right: Dr. Charles Tannock (MEP-UK), left: Rafiq Hayat (National Amir AMA UK)




Hadrat Mirza Masroor Ahmad, Khalifatul-Masih V[aba] delivers the keynote address at the European Parliament event





Press Conference with Hadrat Khalifatul-Masih V[aba] at European Parliament.
Seated with His Holiness is Dr. Charles Tannock (MEP-UK and Chair
of European Parliament Friends of Ahmadiyya Muslims Group)



Tunne Kelam (MEP Estonia & Vice-Chair of European Parliament Friends of Ahmadiyya Muslims Group) meeting with His Holiness



Phil Bennion (MEP West Midlands and member of European Parliament's South Asia Delegation) meeting with His Holiness



# ಮುನ್ನುಡಿ

2012 ಡಿಸೆಂಬರ್ 3 ಮತ್ತು 4ರಂದು ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, (ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನಾಯಕ ಮತ್ತು ಪಂಚಮ ಖಲೀಫ) ಬ್ರಸ್ಸೆಲ್ಸ್‌ನಲ್ಲಿರುವ ಯುರೋಪಿಯನ್ ಪಾರ್ಲಿಮೆಂಟನ್ನು ಪ್ರಥಮ ಸಲ ಸಂದರ್ಶಿಸಿ ಮೂವತ್ತು ದೇಶಗಳನ್ನು ಪ್ರತಿನಿಧೀಕರಿಸುವ 350 ಅತಿಥಿಗಳನ್ನು ಸಂಬೋಧಿಸಿ ಮಾತನಾಡಿದರು. ಈ ಸಮಾರಂಭವನ್ನು ವಿವಿಧ ದೇಶಗಳ ಯುರೋಪಿನ ಪಾರ್ಲಿಮೆಂಟ್ ಸದಸ್ಯರಿಂದ ರಚಿಸಲ್ಪಟ್ಟ "ಫ್ರೆಂಡ್ಸ್ ಆಫ್ ಅಹ್ಮದಿಯಾ ಮುಸ್ಲಿಮ್ಸ್" ಎಂಬ ಸಂಘಟನೆಯ ವತಿಯಿಂದ ವ್ಯವಸ್ಥೆಗೊಳಿಸಲಾಗಿತ್ತು. ಇದರ ಚೇರ್‌ಮನ್ ಯುರೋಪಿಯನ್ ಪಾರ್ಲಿಮೆಂಟ್‌ನಲ್ಲಿ ಯುನೈಟೆಡ್ ಕಿಂಗ್‌ಡಮ್ ಸದಸ್ಯರಾದ ಡಾಕ್ಟರ್ ಚಾರ್ಲ್ಸ್ ಟನ್ನೋಕ್ ಆಗಿದ್ದಾರೆ. ಹಝ್ರತ್ ಖಲೀಫರು ಈ ಕೆಳಗಿನ ಗಣ್ಯರೊಂದಿಗೆ ವಿಶೇಷವಾಗಿ ಮಾತುಕತೆ ನಡೆಸಿದರು:

- ಡಾಕ್ಟರ್ ಚಾರ್ಲ್ಸ್ ಟನ್ನೋಕ್ (MEP – ಯು.ಕೆ.) – ಯುರೋಪಿಯನ್ ಪಾರ್ಲಿಮೆಂಟಿನ ಫೋರಿನ್ ಅಫೇರ್ಸ್ ಕಮಿಟಿ ಸದಸ್ಯ, ಸಬ್ ಕಮಿಟಿ ಆನ್ ಹ್ಯೂಮನ್ ರೈಟ್ಸ್‌ನ ಸದಸ್ಯ ಮತ್ತು ನ್ಯಾಟೋ ಪಾರ್ಲಿಮೆಂಟರಿ ಎಸೆಂಬ್ಲಿಯೊಂದಿಗೆ ಸಂಪರ್ಕ ಸ್ಥಾಪಿಸುವ ಪಾರ್ಲಿಮೆಂಟರಿ ಡೆಲಿಗೇಶನಿನ ವೈಸ್ ಚೇರ್‌ಮನ್.
- ಟುನ್ನೇ ಕೇಲಮ್ (MEP–ಎಸ್ಟೋನಿಯಾ)–ಯುರೋಪಿಯನ್ ಪಾರ್ಲಿಮೆಂಟ್ ಫೋರಿನ್ ಅಫೇರ್ಸ್ ಕಮಿಟಿ, ಸಬ್ ಕಮಿಟಿ ಆನ್ ಸೆಕ್ಯುರಿಟಿ ಆ್ಯಂಡ್ ಡಿಫೆನ್ಸ್ ಸದಸ್ಯರೂ ಯುರೋಪಿಯನ್ ಪಾರ್ಲಿಮೆಂಟ್ ಫ್ರೆಂಡ್ಸ್ ಆಫ್ ಅಹ್ಮದಿಯಾ ಮುಸ್ಲಿಮ್ಸ್ ಗ್ರೂಪ್ ವೈಸ್‌ಚೇರ್‌ಮನ್ ಆಗಿರುವರು.
- ಕ್ಲೌಡೆ ಮೊರಾಯೆಸ್ (MEP–ಯು.ಕೆ.)–ಡೆಲಿಗೇಶನ್ ಫೋರ್ ರಿಲೇಶನ್ಸ್ ವಿದ್ ದಿ ಅರಬ್ ಪೆನಿನ್ಸುಲಾದ ವೈಸ್ ಚೇರ್‌ಮನ್, ಕಮಿಟಿ ಆನ್ ಸಿವಿಲ್ ಲಿಬರ್ಟೀಸ್ ಜಸ್ಟಿಸ್ ಆ್ಯಂಡ್ ಹೋಮ್ ಅಫೇರ್ಸ್ ಸದಸ್ಯ, ಯುರೋಪಿಯನ್ ಪಾರ್ಲಿಮೆಂಟರಿ ಲೇಬರ್ ಪಾರ್ಟಿಯ ಡೆಪ್ಯುಟಿ ಲೀಡರ್, ಯುರೋಪಿಯನ್ ಪಾರ್ಲಿಮೆಂಟ್ ಫ್ರೆಂಡ್ಸ್ ಆಫ್ ಅಹ್ಮದಿಯಾ ಮುಸ್ಲಿಮ್ಸ್ ಗ್ರೂಪ್‌ವೈಸ್ ಚೇರ್‌ಮನ್
- ಬಾರ್ಬರಾ ಲೋಚ್ ಬಿಹ್ಲರ್ (MEP–ಜರ್ಮನಿ)–ಯುರೋಪಿಯನ್ ಪಾರ್ಲಿಮೆಂಟ್ ಸಬ್ ಕಮಿಟಿ ಆನ್ ಹ್ಯೂಮನ್ ರೈಟ್ಸ್ ಚೇರ್‌ಪರ್ಸನ್.
- ಜೀನ್ ಲೇಂಬರ್ಟ್ (MEP–ಯು.ಕೆ.)–ಯುರೋಪಿಯನ್ ಪಾರ್ಲಿಮೆಂಟ್ ಸೌತ್ ಏಶಿಯಾ ಡೆಲಿಗೇಶನ್ ಚೇರ್‌ಪರ್ಸನ್.
- ಜಿಲ್ ಬೆನ್ನಿಯೋನ್ (MEP–ಯು.ಕೆ.)–ಯುರೋಪಿಯನ್ ಪಾರ್ಲಿಮೆಂಟ್ ಸೌತ್ ಏಶಿಯಾ ಡೆಲಿಗೇಶನ್ ಸದಸ್ಯ, ಲಿಬ್ ಡೆಮ್ ಯುರೋಪಿಯನ್ ಗ್ರೂಪ್ ಚೇರ್‌ಮನ್.

2012 ಡಿಸೆಂಬರ್ ದಿನಾಂಕ 4ರಂದು ಯುರೋಪಿಯನ್ ಪಾರ್ಲಿಮೆಂಟ್ ಪ್ರೆಸ್ ರೂಮಿನಲ್ಲಿ ಒಂದು ಅಂತರ್‍ರಾಷ್ಟ್ರೀಯ ಪ್ರೆಸ್ ಕಾನ್‌ಫರೆನ್ಸ್ ನಡೆಸಲಾಗಿತ್ತು. ಮುಖ್ಯ ಭಾಷಣಕ್ಕೆ ಮೊದಲು ನಡೆಸಲಾದ ಪ್ರೆಸ್ ಕಾನ್‌ಫರೆನ್ಸ್ ನಲ್ವತ್ತು ನಿಮಿಷಗಳ ಕಾಲ ಮುಂದುವರಿಯಿತು. ಯು.ಕೆ., ಸ್ಪೈನ್, ಫ್ರಾನ್ಸ್, ಬೆಲ್‌ಜಿಯಮ್, ಪಾಕಿಸ್ತಾನ ಮತ್ತು ಇತರ ದೇಶಗಳ ಸಂಪರ್ಕ ಮಾಧ್ಯಮಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಲೋಕದಲ್ಲಿ ಇಸ್ಲಾಮ್ ಧರ್ಮದ ಪಾತ್ರದ ಬಗ್ಗೆ ಬಿಬಿಸಿ ಪ್ರತಿನಿಧಿ ಕೇಳಿದ ಪ್ರಶ್ನೆಗೆ ಹಝ್ರತ್ ಖಲೀಫರು ಹೀಗೆ ಉತ್ತರ ನೀಡಿದರು: "ಇಸ್ಲಾಮ್ ಧರ್ಮದ ಶಾಂತಿ ಸಂದೇಶ ಸಾರ್ವಲೌಕಿಕವಾಗಿದೆ. ಆ ಕಾರಣದಿಂದ ನಮ್ಮ ಧ್ಯೇಯವಚನ LOVE FOR ALL, HATRED FOR NONE–ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ ಎಂದಾಗಿದೆ. ಸ್ಪೈನ್ ದೇಶದ ಸಂಪರ್ಕ ಮಾಧ್ಯಮ ಪ್ರತಿನಿಧಿಯ ಪ್ರಶ್ನೆಗೆ ಹೀಗೆ ಉತ್ತರ ಹೇಳಿದರು: "ಎಲ್ಲ ಧರ್ಮಗಳು ತಮ್ಮ ಮೂಲ ರೂಪದಲ್ಲಿ ಶಾಂತಿಯ ಸಂದೇಶವನ್ನು ಉಪದೇಶಿಸಿವೆ. ನೈಜ ಮುಸ್ಲಿಮರು ಎಲ್ಲ ಪ್ರವಾದಿಗಳನ್ನು ನಂಬುತ್ತಾರೆ. ಪ್ರತಿಯೊಬ್ಬ ಪ್ರವಾದಿ ತಂದ ಸಂದೇಶ ಒಬ್ಬ ದೇವನಿದ್ದಾನೆ ಎಂದಾಗಿದೆ." ಮಾಲ್ಟಾ ದೇಶದ ಸಂಪರ್ಕ ಮಾಧ್ಯಮ ಪ್ರತಿನಿಧಿಯ ಪ್ರಶ್ನೆಗೆ ಹೀಗೆ ಉತ್ತರ ಹೇಳಿದರು: "ಅಹ್ಮದೀ ಮುಸ್ಲಿಮರ ಕರ್ತವ್ಯ ಮಾನವರನ್ನು ದೇವನೊಂದಿಗೆ ಸಂಬಂಧ ಸ್ಥಾಪಿಸುವಂತೆ ಮಾಡುವುದು ಮತ್ತು ಲೋಕದ ಜನರೆಲ್ಲರೂ ಪರಸ್ಪರ ಹಕ್ಕುಗಳನ್ನು ಸಂರಕ್ಷಿಸುವ ಹೊಣೆಗಾರಿಕೆ ಬಗ್ಗೆ ಪ್ರಜ್ಞಾವಂತರಾಗುವಂತೆ ಮಾಡುವುದು."

ಮುಖ್ಯ ಕಾರ್ಯಕ್ರಮವು ಜನನಿಬಿಡ ಶ್ರೋತೃಗಳ ಮುಂದೆ ಜರಗಿತು. ಯುರೋಪಿಯನ್ ಪಾರ್ಲಿಮೆಂಟಿನ ಫ್ರೆಂಡ್ಸ್ ಆಫ್ ಅಹ್ಮದಿಯಾ ಮುಸ್ಲಿಮ್ ಗ್ರೂಪಿನ ಅಧ್ಯಕ್ಷರು ಮತ್ತು ಇಬ್ಬರು ಉಪಾಧ್ಯಕ್ಷರು ಅಹ್ಮದಿಯಾ ಜಮಾಅತಿನ ಸರ್ವೋನ್ನತ ನಾಯಕರೂ ಖಲೀಫರೂ ಆದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರನ್ನು ವೇದಿಕೆಗೆ ಬರಮಾಡಿಕೊಂಡರು. ಯುರೋಪಿಯನ್ ಪಾರ್ಲಿಮೆಂಟ್ ಪ್ರೆಸಿಡೆಂಟ್ ಮಾರ್ಟಿನ್ ಶುಲ್‌ಝ್ ಹಝ್ರತ್ ಖಲೀಫರನ್ನು ಭೇಟಿಯಾಗಲು ವಿಶಿಷ್ಟ ಸಂದರ್ಶನ ನೀಡಿದರು. ಮುಖ್ಯ ಭಾಷಣದ ಮೊದಲು ಯುರೋಪಿಯನ್ ಪಾರ್ಲಿಮೆಂಟಿನ ಕೆಲವು ಸದಸ್ಯರು, ಅಹ್ಮದಿಯಾ ಮುಸ್ಲಿಮ್ ಜಮಾಅತ್ ಪ್ರತಿಪಾದಿಸುತ್ತಿರುವ ಶಾಂತಿಭರಿತ ಇಸ್ಲಾಮ್ ಬಗ್ಗೆ ಮೆಚ್ಚಿಗೆ ಸೂಚಿಸಿ ಭಾಷಣ ಮಾಡಿದರು. ಡಾಕ್ಟರ್ ಚಾರ್ಲ್ಸ್ ಟನ್ನೋಕ್ (ಚೇರ್‌ಮನ್ ಯುರೋಪಿಯನ್ ಪಾರ್ಲಿಮೆಂಟ್ ಫ್ರೆಂಡ್ಸ್ ಆಫ್ ಅಹ್ಮದಿಯಾ ಮುಸ್ಲಿಮ್ ಗ್ರೂಪ್) ಹೀಗೆ ಹೇಳಿದರು: "ಅಹ್ಮದಿಯಾ ಮುಸ್ಲಿಮರು ಲೋಕದಲ್ಲಿ ಸಹಿಷ್ಣುತೆಯ ಸ್ವಾಗತಾರ್ಹ ಉದಾಹರಣೆಯಾಗಿದ್ದಾರೆ."

# ಶಾಂತಿಯ ಕೀಲಿಕೈ – ಜಾಗತಿಕ ಐಕ್ಯ

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್ – ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ.

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ – ಅಲ್ಲಾಹನ ಶಾಂತಿ ಮತ್ತು ಅನುಗ್ರಹಗಳು ನಿಮ್ಮ ಮೇಲಿರಲಿ.

ಈ ಸಮಾರಂಭವನ್ನು ಸಂಘಟಿಸಿ ಯುರೋಪಿಯನ್ ಪಾರ್ಲಿಮೆಂಟಿನಲ್ಲಿ ನಿಮ್ಮೊಂದಿಗೆ ಮಾತನಾಡಲು ನನಗೆ ಸಂದರ್ಭ ಒದಗಿಸಿ ಕೊಟ್ಟವರಿಗೆ ನಾನು ಮೊತ್ತ ಮೊದಲು ಕೃತಜ್ಞತೆ ಅರ್ಪಿಸುತ್ತೇನೆ. ಈ ಸಮಾರಂಭದಲ್ಲಿ ಭಾಗವಹಿಸಲು ಬಹಳ ಪ್ರಯತ್ನಪಟ್ಟು ಆಗಮಿಸಿದ ವಿವಿಧ ದೇಶಗಳ ಪ್ರತಿನಿಧಿಗಳಿಗೆ ಮತ್ತು ಇತರ ಅತಿಥಿಗಳಿಗೆ ಸಹ ನಾನು ಕೃತಜ್ಞನಾಗಿದ್ದೇನೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್ ಅಥವಾ ಸಂಘಟನೆ ಬಗ್ಗೆ ಚೆನ್ನಾಗಿ ತಿಳಿದುಕೊಂಡವರಿಗೆ ಮತ್ತು ಕೆಲವು ಅಹ್ಮದಿ ಮಿತ್ರರೊಂದಿಗೆ ಸಂಪರ್ಕ ಹೊಂದಿರುವ ಕಾರಣ ಸ್ವಲ್ಪ ಮಟ್ಟಿಗೆ ಈ ಸಂಘಟನೆಯ ಪರಿಚಯವಿರುವವರಿಗೆ, ನಾವು ಲೋಕದಲ್ಲಿ ಶಾಂತಿ ಮತ್ತು ಭದ್ರತೆ ಸ್ಥಾಪಿಸಲು ಪ್ರಯತ್ನ ಮಾಡುತ್ತಾ ಇರುವ ಸಮುದಾಯ ಎಂದು ತಿಳಿದಿದೆ. ಖಂಡಿತವಾಗಿಯೂ ನಾವು ಈ ಉದ್ದೇಶ ಲಕ್ಷ್ಯಗಳನ್ನು ಈಡೇರಿಸಲು ನಮ್ಮ ಸಂಪನ್ಮೂಲಗಳ ಮಿತಿಯೊಳಗೆ ಪರಿಪೂರ್ಣ ಪ್ರಯತ್ನ ಮಾಡುತ್ತಾ ಇದ್ದೇವೆ.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನಾಯಕನ ನೆಲೆಯಲ್ಲಿ ನಾನು ಈ ವಿಷಯಗಳಿಗೆ ಸಂಬಂಧಿಸಿ ಸಂದರ್ಭ ದೊರೆತಾಗಲೆಲ್ಲಾ ಸದಾ ಮಾತನಾಡುತ್ತೇನೆ. ಶಾಂತಿ ಮತ್ತು ಪರಸ್ಪರ ಪ್ರೀತಿಯ ಬಗ್ಗೆ ನಾನು ಪ್ರಸ್ತಾಪಿಸುವುದು ಯಾವುದಾದರೂ ಹೊಸ ತತ್ತ್ವೋಪದೇಶಗಳನ್ನು ಅಹ್ಮದಿಯಾ ಸಂಘಟನೆ ರೂಪಿಸಿದ ಕಾರಣದಿಂದಲ್ಲ. ಅಹ್ಮದಿಯಾ ಜಮಾಅತಿನ ಸ್ಥಾಪಕರ ಆಗಮನದ ಮುಖ್ಯ ಉದ್ದೇಶಗಳಲ್ಲೊಂದು ಶಾಂತಿ ಮತ್ತು ಸೌಹಾರ್ದ ಸ್ಥಾಪಿಸುವುದಾಗಿದೆಯಾದರೂ ವಾಸ್ತವದಲ್ಲಿ ನಮ್ಮ ಎಲ್ಲ ಚಟುವಟಿಕೆಗಳು ಹೊಂದಿಕೊಂಡಿರುವುದು ಹಝ್ರತ್ ಮುಹಮ್ಮದ್ ಪೈಗಂಬರರರಿಗೆ[ಸ] ಅಲ್ಲಾಹನಿಂದ ಅವತೀರ್ಣವಾದ ಉಪದೇಶಗಳನ್ನಾಗಿದೆ.

ಪವಿತ್ರ ಪೈಗಂಬರರ[ಸ] ಆಗಮನದ ನಂತರ ದಾಟಿಹೋದ 1400 ವರ್ಷಗಳಲ್ಲಿ ಅವರು ಉಪದೇಶಿಸಿದ ಪರಿಶುದ್ಧ ತತ್ವಗಳನ್ನು ದುರದೃಷ್ಟಕರವಾಗಿ ಮುಸ್ಲಿಮರಲ್ಲಿ ಬಹುತೇಕ ಜನರು ದೀರ್ಘಕಾಲದಿಂದ ಮರೆತು ಬಿಟ್ಟಿರುವರು. ಆದುದರಿಂದ ನೈಜ ಇಸ್ಲಾಮ್ ಧರ್ಮವನ್ನು ಪುನಶ್ಚೇತನಗೊಳಿಸಲು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಅವರನ್ನು ಅಲ್ಲಾಹನು ಹಝ್ರತ್ ಪೈಗಂಬರರ[ಸ] ಭವಿಷ್ಯವಾಣಿ ಪ್ರಕಾರ ಕಳುಹಿಸಿರುವನು. ಲೋಕದಲ್ಲಿ ಶಾಂತಿ ಮತ್ತು ಸೌಹಾರ್ದ ಸ್ಥಾಪನೆ ಬಗ್ಗೆ ಇಸ್ಲಾಮಿನ ಉಪದೇಶಗಳನ್ನು ನಾನು ಪ್ರತಿಪಾದಿಸುವಾಗ

ನಾನು ಪ್ರಸ್ತಾವಿಕವಾಗಿ ಹೇಳಿದ ಈ ಮಾತುಗಳನ್ನು ನೆನಪಿನಲ್ಲಿಡಬೇಕೆಂದು ಕೋರುತ್ತೇನೆ.

ಶಾಂತಿ ಮತ್ತು ಸುರಕ್ಷೆ ವಿವಿಧ ಆಯಾಮಗಳನ್ನು ಹೊಂದಿವೆ. ಪ್ರತಿಯೊಂದು ಅಂಶವು ಮುಖ್ಯವಾಗಿದ್ದು ವಿವಿಧ ಅಂಶಗಳ ಪರಸ್ಪರ ಜೋಡಣೆ ಸಹ ಅತ್ಯಂತ ಮುಖ್ಯವಾಗಿದೆ. ಉದಾಹರಣೆಗೆ, ಸಮಾಜದಲ್ಲಿ ಶಾಂತಿ, ಸೌಹಾರ್ದ ಸ್ಥಾಪನೆಗೆ ಅಸ್ತಿಭಾರವಾಗಿರುವುದು ಕುಟುಂಬದೊಳಗೆ ಶಾಂತಿ ಮತ್ತು ಸೌಹಾರ್ದವಾಗಿದೆ. ಮನೆಯೊಳಗಿರುವ ಕುಟುಂಬದ ಪರಿಸ್ಥಿತಿ ಮನೆಗೆ ಮಾತ್ರ ಸೀಮಿತವಾಗಿರುವುದಿಲ್ಲ. ಮನೆಯೊಳಗಿನ ಅಶಾಂತಿ ಆ ಮನೆಯಿರುವ ಪ್ರದೇಶದ ಶಾಂತಿಯನ್ನು ಕೆಡಿಸುತ್ತದೆ. ವಿವಿಧ ಮನೆಗಳಲ್ಲಿ ತಲೆದೋರುವ ಅಶಾಂತಿ ಪಟ್ಟಣ ಅಥವಾ ನಗರವನ್ನು ಬಾಧಿಸುತ್ತದೆ. ಒಂದು ಮನೆಯಲ್ಲಿ ಜಗಳ ಉಂಟಾದರೆ ಅದರಿಂದ ಅದರ ಸುತ್ತಮುತ್ತಲೂ ಕೆಟ್ಟ ಪ್ರಭಾವ ಉಂಟಾಗುತ್ತದೆ. ಇದು ಹೆಚ್ಚಾಗಿ ಪಟ್ಟಣವನ್ನೂ ನಗರವನ್ನೂ ಅಶಾಂತಿಗೀಡು ಮಾಡುತ್ತದೆ. ಇದೇ ರೀತಿ ಪಟ್ಟಣಗಳಲ್ಲಿ ಮತ್ತು ನಗರಗಳಲ್ಲಿ ತಲೆದೋರುವ ಶಾಂತಿಭಂಗ ದೇಶವನ್ನು ಬಾಧಿಸುತ್ತದೆ. ದೇಶಗಳಲ್ಲಿ ತಲೆದೋರುವ ಅಶಾಂತಿ ಆ ಪ್ರದೇಶದ ಅಥವಾ ಲೋಕದ ಶಾಂತಿ ಮತ್ತು ಸಾಮರಸ್ಯವನ್ನು ಬಾಧಿಸುತ್ತದೆ. ಆದುದರಿಂದ ಶಾಂತಿಯ ಬಗ್ಗೆ ಒಂದು ಅಂಶವನ್ನು ವಿವರಿಸುವುದಾದರೆ ಆ ವಿವರಣೆ ಸೀಮಿತವಾಗಿರದೆ ವಿಶಾಲವಾಗುತ್ತಾ ಹೋಗುವುದು. ಇದೇ ರೀತಿ ಎಲ್ಲಿಯಾದರೂ ಶಾಂತಿಗೆ ಭಂಗವುಂಟಾದರೆ, ಶಾಂತಿ ಸ್ಥಾಪಿಸಲು ವಿವಿಧ ಮಾರ್ಗಗಳನ್ನು ಅನುಸರಿಸಬೇಕಾಗುತ್ತದೆ. ಶಾಂತಿ ಭಂಗವುಂಟಾಗಲು ಕಾರಣವೇನೆಂದು ಪರಿಶೀಲಿಸಿ, ಸೂಕ್ತವಾದ ಪರಿಹಾರ ಮಾರ್ಗಗಳನ್ನು ನಿರ್ದೇಶಿಸಬೇಕಾಗುತ್ತದೆ. ಇವೆಲ್ಲ ವಿಷಯಗಳನ್ನು ಪರಾಂಬರಿಸುವಾಗ ಈ ವಿಷಯದ ಬಗ್ಗೆ ಸವಿಸ್ತಾರವಾಗಿ ಪ್ರಸ್ತಾಪಿಸಲು ಈಗ ಲಭ್ಯವಿರುವ ಸಮಯಕ್ಕಿಂತ ಹೆಚ್ಚು ಸಮಯ ಬೇಕಾಗುತ್ತದೆ. ಹೀಗಿದ್ದರೂ ಈ ವಿಷಯಕ್ಕೆ ಸಂಬಂಧಿಸಿದ ಇಸ್ಲಾಮಿನ ನೈಜ ತತ್ವಗಳ ಕೆಲ ಅಂಶಗಳ ಬಗ್ಗೆ ವಿವರಿಸಲು ಪ್ರಯತ್ನಿಸುವೆನು.

ಆಧುನಿಕ ಲೋಕದಲ್ಲಿ ಇಸ್ಲಾಮಿನ ವಿರುದ್ಧ ಅನೇಕ ಆಕ್ಷೇಪಗಳನ್ನು ಮಾಡಲಾಗುತ್ತಿದೆ. ಇಂದಿನ ಕಾಲದಲ್ಲಿ ಲೋಕದಲ್ಲಿ ಸಂಭವಿಸುತ್ತಿರುವ ಅಸ್ತವ್ಯಸ್ತತೆಗೆ ಮತ್ತು ಸಂಘರ್ಷಗಳಿಗೆ ಇಸ್ಲಾಮ್ ಕಾರಣವೆಂದು ನಿಂದಿಸಲಾಗುತ್ತಿದೆ. ಇಸ್ಲಾಮ್ ಎಂಬ ಶಬ್ದದ ಅರ್ಥ ಶಾಂತಿ ಮತ್ತು ಸುರಕ್ಷೆ ಎಂದಾಗಿದ್ದರೂ ಇಂತಹ ದೋಷಾರೋಪಗಳನ್ನು ಮಾಡಲಾಗುತ್ತಿದೆ.

ಶಾಂತಿಯನ್ನು ಸ್ಥಾಪಿಸುವುದು ಹೇಗೆ ಎಂಬುದರ ಬಗ್ಗೆ ಇಸ್ಲಾಮ್ ಸ್ಪಷ್ಟ ಮಾರ್ಗದರ್ಶನಗಳನ್ನು ಮತ್ತು ಅದಕ್ಕೋಸ್ಕರ ಕೆಲವು ಆಜ್ಞೆಗಳನ್ನು ನೀಡಿದೆ. ಇಸ್ಲಾಮಿನ ನೈಜ ಮತ್ತು ಶಾಂತಿ ಪ್ರತಿಪಾದಕ ಉಪದೇಶಗಳನ್ನು ವಿವರಿಸುವ ಮೊದಲು ನಾನು ಲೋಕದ ಇಂದಿನ ಸ್ಥಿತಿಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುವೆನು. ನಿಮಗೆ ಈ ವಿಷಯಗಳ ಬಗ್ಗೆ ಚೆನ್ನಾಗಿ ತಿಳಿದಿರಬಹುದೆಂದು ನಾನು ನಂಬುತ್ತೇನೆ. ಆದರೆ ನಾನು ಶಾಂತಿ ಮತ್ತು ಸೌಹಾರ್ದದ ಬಗ್ಗೆ ಇಸ್ಲಾಮಿನ ಉಪದೇಶಗಳನ್ನು ವಿವರಿಸುವಾಗ ನೀವು ಈ ವಿಷಯಗಳನ್ನು ಗಮನದಲ್ಲಿರಿಸಲಿಕ್ಕೋಸ್ಕರ ಅವುಗಳ ಬಗ್ಗೆ ಹೇಳುತ್ತಿರುವೆನು. ಇಂದಿನ

ಕಾಲದಲ್ಲಿ ಲೋಕವು ಒಂದು ಜಾಗತಿಕ ಗ್ರಾಮವಾಗಿದೆ ಎಂದು ನಮಗೆಲ್ಲರಿಗೂ ತಿಳಿದಿದೆ ಮತ್ತು ನಾವು ಅಂಗೀಕರಿಸುತ್ತೇವೆ. ಆಧುನಿಕ ಸಂಚಾರ ವ್ಯವಸ್ಥೆ ಮೂಲಕ, ಸಂಪರ್ಕ ಮಾಧ್ಯಮಗಳ ಮೂಲಕ, ಇಂಟರ್‌ನೆಟ್ ಮೂಲಕ ಮತ್ತು ಇತರ ಅನೇಕ ಮಾಧ್ಯಮಗಳ ಮೂಲಕ ವಿವಿಧ ದೇಶಗಳಲ್ಲಿರುವ ಎಲ್ಲರೂ ಪರಸ್ಪರ ಸಂಬಂಧ ಸ್ಥಾಪಿಸಿದ್ದಾರೆ. ಈ ಕಾರಣಗಳಿಂದ ಲೋಕದ ವಿವಿಧ ದೇಶಗಳೂ ಜನಾಂಗಗಳೂ ಮೊದಲಿಗಿಂತ ಹೆಚ್ಚು ನಿಕಟ ಸಂಬಂಧ ಹೊಂದಿರುತ್ತವೆ. ಲೋಕದ ಪ್ರಧಾನ ದೇಶಗಳಲ್ಲಿ ವಿವಿಧ ಬುಡಕಟ್ಟಿನ, ವಿವಿಧ ಧರ್ಮಗಳ, ವಿವಿಧ ಜನಾಂಗಗಳ ಜನರು ಒಟ್ಟಿಗೆ ಜೀವಿಸುತ್ತಿರುವುದಾಗಿ ನಾವು ಕಾಣುತ್ತೇವೆ. ಅನೇಕ ದೇಶಗಳಲ್ಲಿ ವಿದೇಶಿ ವಲಸೆಗಾರರು ವಾಸಿಸುತ್ತಿದ್ದಾರೆ. ವಿದೇಶಿ ವಲಸೆಗಾರರು ಎಷ್ಟು ಚೆನ್ನಾಗಿ ನೆಲೆಸಿದ್ದಾರೆಂದರೆ, ಅವರನ್ನು ಹೊರಗೆ ಕಳುಹಿಸಲು ಈಗ ಸರಕಾರಗಳಿಗೆ ಮತ್ತು ಸ್ಥಳೀಯ ಜನರಿಗೆ ಅಸಾಧ್ಯವೇ ಆಗಿದೆ. ವಲಸೆಯನ್ನು ತಡೆಗಟ್ಟಲು ಪ್ರಯತ್ನ ಮಾಡಲಾಗುತ್ತಿದೆಯಾದರೂ ಮತ್ತು ಕೆಲವು ನಿಬಂಧನೆಗಳನ್ನು ಹೇರಲಾಗಿದ್ದರೂ, ವಿವಿಧ ರೀತಿಗಳಲ್ಲಿ ಒಂದು ದೇಶದ ನಾಗರಿಕ ಇನ್ನೊಂದು ದೇಶಕ್ಕೆ ಪ್ರವೇಶಿಸಲು ಶಕ್ತನಾಗುತ್ತಿದ್ದಾನೆ. ನಿಯಮ ವಿರುದ್ಧ ವಲಸೆಯಲ್ಲದೆ, ಅಂತರ್ರಾಷ್ಟ್ರೀಯ ನಿಯಮಗಳು, ವಲಸೆ ಹೋಗಲು ಬಲಾತ್ಕರಿಸಲ್ಪಟ್ಟ ಜನರಿಗೆ ಅವರು ನೈಜ ಕಾರಣಗಳಿಂದ ನಿರ್ಬಂಧಿಸಲ್ಪಟ್ಟಿದ್ದರೆ ಸಹಾಯಕವಾಗಿವೆ.

ಕೆಲವು ದೇಶಗಳಲ್ಲಿ ವಲಸೆಗಾರರ ಸಂಖ್ಯೆ ಅಧಿಕವಾಗಿದ್ದರೆ ವಲಸೆಗಾರರ ಮತ್ತು ಅಲ್ಲಿನ ಮೂಲ ನಿವಾಸಿಗಳ ಬಗ್ಗೆ ಆತಂಕ ಭರಿತ ಪರಿಸ್ಥಿತಿ ತಲೆದೋರುತ್ತದೆ. ಇದರ ಹೊಣೆಗಾರಿಕೆ ವಲಸೆಗಾರರು ಮತ್ತು ಸ್ಥಳೀಯ ಜನರು – ಈ ಎರಡು ಗುಂಪುಗಳ ಮೇಲಿದೆ. ಒಂದು ಕಡೆ, ವಲಸೆಗಾರರು ಸ್ಥಳೀಯ ಜನರೊಂದಿಗೆ ಸ್ವಲ್ಪ ಮಟ್ಟಿಗಾದರೂ ಹೊಂದಿಕೊಂಡು ಜೀವಿಸಲು ಪ್ರಯತ್ನಿಸುವುದಿಲ್ಲ ಮತ್ತು ಸ್ಥಳೀಯ ಜನರನ್ನು ಉದ್ರೇಕಗೊಳ್ಳುವಂತೆ ಮಾಡುತ್ತಾರೆ. ಇನ್ನೊಂದು ಕಡೆ, ಸ್ಥಳೀಯ ಜನರು ಸಹನೆಯನ್ನು ಮತ್ತು ವಿಶಾಲ ಮನೋಭಾವನೆಯನ್ನು ಪ್ರಕಟಿಸುವುದಿಲ್ಲ. ಕ್ರಮೇಣ ಪರಸ್ಪರ ದ್ವೇಷ ವರ್ಧಿಸಿ ಅಪಾಯಕಾರಿ ಮಟ್ಟವನ್ನು ತಲುಪುತ್ತದೆ. ಪಶ್ಚಿಮದ ದೇಶಗಳಲ್ಲಿ ಸ್ಥಳೀಯ ಜನರ ದ್ವೇಷವು, ಹೆಚ್ಚಾಗಿ ಇಸ್ಲಾಮಿನ ವಿರುದ್ಧವಾಗಿರುತ್ತದೆ. ಇದಕ್ಕೆ ಕಾರಣ ಕೆಲವು ಮುಸ್ಲಿಮರ ಮತ್ತು ಮುಖ್ಯವಾಗಿ ವಲಸೆ ಬಂದವರ ಋಣಾತ್ಮಕ ಮನೋಭಾವವಾಗಿದೆ. ಕೋಪ ಮತ್ತು ಅದಕ್ಕೆದುರಾಗಿರುವ ಪ್ರತಿಕ್ರಿಯೆ ಚಿಕ್ಕಮಟ್ಟದಲ್ಲಿರದೆ ಅತ್ಯಂತ ಉಗ್ರ ಸ್ಥಿತಿಯನ್ನು ತಲುಪುತ್ತದೆ. ಇದೇ ಕಾರಣದಿಂದ ಪಾಶ್ಚಿಮಾತ್ಯ ದೇಶಗಳ ನಾಯಕರು ಈ ಸಮಸ್ಯೆಗಳ ಬಗ್ಗೆ ಆಗಾಗ ಪ್ರಸ್ತಾಪಿಸುತ್ತಾ ಇರುತ್ತಾರೆ. ಆದುದರಿಂದ ನಾವು ಕಾಣುವುದು ಏನೆಂದರೆ ಜರ್ಮನಿಯ ಚಾನ್ಸಿಲರ್, ಮುಸ್ಲಿಮರು ಜರ್ಮನಿಯ ಭಾಗವಾಗಿದ್ದಾರೆ ಎಂದು ಹೇಳುವಾಗ ಯುನೈಟೆಡ್ ಕಿಂಗ್‌ಡಮ್‌ನ ಪ್ರಧಾನಮಂತ್ರಿ ಮುಸ್ಲಿಮರು ಸ್ಥಳೀಯ ನಿವಾಸಿಗಳೊಂದಿಗೆ ಹೊಂದಿಕೊಂಡು ಜೀವಿಸಬೇಕೆಂದು ಹೇಳುತ್ತಾರೆ. ಕೆಲವು ದೇಶಗಳ ನಾಯಕರು ಮುಸ್ಲಿಮರಿಗೆ ಮುನ್ನೆಚ್ಚರಿಕೆ ಕೂಡ ನೀಡಿದ್ದಾರೆ. ಆಂತರಿಕ ಕಲಹಗಳು ಮಿತಿಮೀರಿ ಹೋಗಿಲ್ಲವಾದರೂ, ಅದರ ಬಗ್ಗೆ ಕಾಳಜಿ ಹೊಂದಬೇಕಾಗಿದೆ. ಈ

ಸಮಸ್ಯೆಗಳು ನೇರವಾಗಿ ಶಾಂತಿಭಂಗಕ್ಕೆ ಹೇತುವಾಗಬಲ್ಲದು. ಇಂತಹ ಸಂಘರ್ಷಗಳ ದುಷ್ಪರಿಣಾಮಗಳು ಪಶ್ಚಿಮ ದೇಶಗಳಿಗೆ ಸೀಮಿತವಾಗದೆ ಅದು ಲೋಕವನ್ನು ಬಾಧಿಸುವುದು, ವಿಶಿಷ್ಟವಾಗಿ ಮುಸ್ಲಿಮ್ ದೇಶಗಳನ್ನು. ಇದರ ಫಲ ಸ್ವರೂಪವಾಗಿ ಪಾಶ್ಚಿಮಾತ್ಯ ಮತ್ತು ಪೌರಸ್ತ್ಯ ಲೋಕಗಳ ಮಧ್ಯೆ ಇರುವ ಸಂಬಂಧಗಳು ತೀವ್ರವಾಗಿ ಕೆಟ್ಟು ಹೋಗುವುವು. ಆದುದರಿಂದ ಈ ಪರಿಸ್ಥಿತಿಯನ್ನು ಸುಧಾರಿಸಲು ಮತ್ತು ಶಾಂತಿಯನ್ನು ಸ್ಥಾಪಿಸಲು ಎಲ್ಲ ಗುಂಪುಗಳ ಜನರು ಒಟ್ಟಿಗೆ ಪ್ರಯತ್ನಿಸಬೇಕು. ಸರಕಾರಗಳು ಧೋರಣೆಗಳನ್ನು ರೂಪಿಸಿ ವಿವಿಧ ಗುಂಪುಗಳ ಜನರು ಪರಸ್ಪರ ಗೌರವಿಸುವಂತೆ ಮಾಡುವ ಮತ್ತು ವಿವಿಧ ಗುಂಪುಗಳ ಜನರ ಗೌರವವನ್ನು ರಕ್ಷಿಸುವ ನಿಯಮಗಳನ್ನು ಜಾರಿಗೊಳಿಸಿ ಅನ್ಯರ ಭಾವನೆಗಳನ್ನು ನೋಯಿಸುವ ಅಥವಾ ಹಾನಿಗೊಳಿಸುವ ಚಟುವಟಿಕೆಗಳನ್ನು ನಿಯಮಬಾಹಿರವೂ ಶಿಕ್ಷಾರ್ಹವೂ ಆಗಿದೆ ಎಂದು ಘೋಷಿಸಬೇಕು.

ವಲಸೆ ಬಂದ ಜನರು ಸ್ಥಳೀಯ ಜನರೊಂದಿಗೆ ಹೊಂದಿಕೊಂಡು ಹೋಗಲು ಪ್ರಯತ್ನಿಸಬೇಕು ಮತ್ತು ಸ್ಥಳೀಯ ಜನರು ವಿಶಾಲ ಹೃದಯರೂ ಸಹನೆದೋರುವವರೂ ಆಗಬೇಕು. ಕೆಲವು ನಿಯಂತ್ರಣಗಳನ್ನು ಮುಸ್ಲಿಮರ ಮೇಲೆ ಹೇರುವುದರಿಂದ ಶಾಂತಿ ಸ್ಥಾಪಿತವಾಗದು. ಏಕೆಂದರೆ ಅವುಗಳು ಮಾತ್ರ ಜನರ ಮನೋಭಾವನೆ ಮತ್ತು ಅಭಿಪ್ರಾಯಗಳನ್ನು ಬದಲಾಯಿಸುವಂತೆ ಮಾಡಲು ಸಾಧ್ಯವಾಗದು. ಇದು ವಿಶಿಷ್ಟವಾಗಿ ಮುಸ್ಲಿಮರಿಗೆ ಸಂಬಂಧಿಸಿ ಹೇಳಿದುದಲ್ಲ. ಒಬ್ಬ ಮನುಷ್ಯನನ್ನು ಅವನು ನಂಬುವ ಧರ್ಮದ ಕಾರಣ ಬಲಾತ್ಕಾರಪಡಿಸಿದರೆ ಅದರಿಂದ ಉಂಟಾಗುವ ಋಣಾತ್ಮಕ ಪ್ರತಿಕ್ರಿಯೆಗಳಿಂದ ಶಾಂತಿ ಭಂಗವಾಗುವುದು. ನಾನು ಇದರ ಮೊದಲು ಹೇಳಿದ ಹಾಗೆ ಕೆಲವು ದೇಶಗಳಲ್ಲಿ ಸ್ಥಳೀಯ ಜನರು ಮತ್ತು ಮುಸ್ಲಿಮ್ ವಲಸೆಗಾರರ ಮಧ್ಯೆ ಘರ್ಷಣೆ ವರ್ಧಿಸುತ್ತಾ ಇದೆ. ಎರಡು ಪಕ್ಷಗಳ ಜನರು ಸಹನೆಗೆಡುತ್ತಿದ್ದಾರೆ ಮತ್ತು ಪರಸ್ಪರ ಅರಿತುಕೊಳ್ಳಲು ನಿರಾಸಕ್ತರಾಗಿದ್ದಾರೆ ಎನ್ನುವುದು ತೋರುತ್ತಾ ಇದೆ. ಯುರೋಪಿನ ನಾಯಕರು ಈ ವಾಸ್ತವಿಕತೆಯನ್ನು ಮನವರಿಕೆ ಮಾಡಿಕೊಳ್ಳಬೇಕು ಮತ್ತು ವಿವಿಧ ಧರ್ಮದ ಜನರು ಪರಸ್ಪರ ಗೌರವಿಸುವ ಮನೋಭಾವವನ್ನು ಹೊಂದುವಂತೆ ಮಾಡುವ ಹೊಣೆಗಾರಿಕೆ ತಮ್ಮದಾಗಿದೆ ಎಂದು ತಿಳಿದುಕೊಳ್ಳಬೇಕು. ಯುರೋಪಿನ ಎಲ್ಲ ದೇಶಗಳೊಳಗೆ ಹಾಗೂ ಯುರೋಪಿಯನ್ ಮತ್ತು ಮುಸ್ಲಿಮ್ ದೇಶಗಳ ಮಧ್ಯೆ ಸೌಹಾರ್ದದ ಪರಿಸ್ಥಿತಿ ಉಂಟಾಗಬೇಕಾದುದು ಜಾಗತಿಕ ಶಾಂತಿಯು ಭಂಗವಾಗದಿರಲು ಅವಶ್ಯಕವಾಗಿದೆ.

ನಾನು ನಂಬುವುದೇನೆಂದರೆ, ಈ ಸಂಘರ್ಷಗಳಿಗೆ ಕಾರಣ ಧಾರ್ಮಿಕ ನಂಬಿಕೆಗಳು ಹಾಗೂ ಪಾಶ್ಚಿಮಾತ್ಯ ಮತ್ತು ಮುಸ್ಲಿಮ್ ಜನಾಂಗಗಳ ವ್ಯತ್ಯಾಸಗಳು ಮಾತ್ರವಲ್ಲ. ವಾಸ್ತವದಲ್ಲಿ ಈ ಸಂಘರ್ಷಗಳ ಮುಖ್ಯ ಕಾರಣ ಜಾಗತಿಕ ಆರ್ಥಿಕ ಬಿಕ್ಕಟ್ಟಾಗಿದೆ. ಆರ್ಥಿಕ ಹಿನ್ನಡೆ ಅಥವಾ ಸಾಲದ ದೌರ್ಬಲ್ಯದ ಪ್ರಶ್ನೆ ಇಲ್ಲದ ಸಂದರ್ಭದಲ್ಲಿ ವಲಸೆಗಾರರ ಆಗಮನದ ಬಗ್ಗೆ ಯಾರೂ ಲಕ್ಷ್ಯ ನೀಡುತ್ತಿರಲಿಲ್ಲ. ಮುಸ್ಲಿಮರು, ಮುಸ್ಲಿಮೇತರರು ಅಥವಾ ಆಫ್ರಿಕನರು ವಲಸೆ ಬಂದ ಬಗ್ಗೆ ಆಕ್ಷೇಪಿಸುತ್ತಿರಲಿಲ್ಲ. ಆದರೆ

ಈಗ ಆ ಪರಿಸ್ಥಿತಿ ಬದಲಾಗಿದೆ. ಅದರ ಕಾರಣದಿಂದ ಈಗಿನ ಸ್ಥಿತಿ ಸಂಭವಿಸಿದೆ. ಯುರೋಪಿಯನ್ ದೇಶಗಳ ಪರಸ್ಪರ ಸಂಬಂಧ ಸಹ ಬಿಗಡಾಯಿಸಿದೆ. ಕೆಲವು ಯುರೋಪಿಯನ್ ದೇಶಗಳ ಜನರು ಬೇರೆ ಕೆಲವು ಯುರೋಪಿಯನ್ ದೇಶಗಳ ಜನರ ವಿರುದ್ಧ ಕೋಪ ಮತ್ತ ಅಸಂತೃಪ್ತಿಯನ್ನು ದಿನಂಪ್ರತಿ ಪ್ರಕಟಿಸುತ್ತಾ ಇರುವುದು ಹೆಚ್ಚಾಗುತ್ತಾ ಇದೆ. ಇಂತಹ ನಿರಾಶಾದಾಯಕ ಸ್ಥಿತಿ ಎಲ್ಲ ಕಡೆಗಳಲ್ಲೂ ಕಾಣಿಸುತ್ತಾ ಇದೆ.

ಯುರೋಪಿಯನ್ ದೇಶಗಳು ಯುರೋಪಿಯನ್ ಯೂನಿಯನ್ ಎಂಬ ಒಕ್ಕೂಟ ಸ್ಥಾಪಿಸಿದ್ದು ಬಹಳ ದೊಡ್ಡ ಯಶಸ್ಸಾಗಿದೆ. ಆ ಮೂಲಕ ಯುರೋಪ್ ಖಂಡವು ಐಕ್ಯತೆ ಸ್ಥಾಪಿಸಿದೆ. ಯುರೋಪಿಯನ್ ದೇಶದ ಎಲ್ಲ ಜನರು ಈ ಐಕ್ಯತೆಯನ್ನು ಸಂರಕ್ಷಿಸಲು ಪರಿಶ್ರಮ ಮಾಡುವವರಾಗಬೇಕು ಮತ್ತು ಪರಸ್ಪರ ಹಕ್ಕುಗಳನ್ನು ಗೌರವಿಸಬೇಕು. ಜನಸಾಮಾನ್ಯರ ಭಯಗಳನ್ನು ಮತ್ತು ಚಿಂತೆಗಳನ್ನು ನಿವಾರಿಸಬೇಕು. ಪರಸ್ಪರ ಸಮಾಜಗಳನ್ನು ರಕ್ಷಿಸಲು ಒಬ್ಬರಿನ್ನೊಬ್ಬರ ನ್ಯಾಯಬದ್ಧ ಬೇಡಿಕೆಗಳನ್ನು ಈಡೇರಿಸಬೇಕು. ಪ್ರತಿಯೊಂದು ದೇಶದ ಜನರು ನ್ಯಾಯಬದ್ಧ ಮತ್ತು ಉತ್ತಮವಾದ ಬೇಡಿಕೆಗಳನ್ನು ಮಾತ್ರ ಸರಕಾರಗಳ ಮುಂದಿರಿಸಬೇಕು.

ಯುರೋಪಿನ ಶಕ್ತಿ ಅದರ ಐಕ್ಯತೆಯಲ್ಲಿ ಮತ್ತು ಒಗ್ಗೂಡಿ ಇರುವುದರಲ್ಲಿ ಅಡಕವಾಗಿದೆ ಎಂದು ನೆನಪಿಡಿರಿ. ಇಂತಹ ಐಕ್ಯತೆ ಯುರೋಪಿನಲ್ಲಿರುವ ನಿಮಗೆ ಪ್ರಯೋಜನಕರವಾಗುವುದಲ್ಲದೆ ಜಾಗತಿಕ ಮಟ್ಟದಲ್ಲಿ ಸಹ ಯುರೋಪ್ ಖಂಡ ತನ್ನ ಶಕ್ತಿ ಮತ್ತು ಪ್ರಭಾವವನ್ನು ಕಾಪಾಡಲು ಸಹಾಯಕವಾಗುವುದು. ಇಸ್ಲಾಮಿಕ ದೃಷ್ಟಿಕೋನದಿಂದ ಹೇಳುವುದಾದರೆ, ನಾವು ಜಾಗತಿಕ ಐಕ್ಯಕ್ಕೋಸ್ಕರ ಕಠಿಣ ಪರಿಶ್ರಮ ಮಾಡಬೇಕು. ನಾಣ್ಯ, ನೋಟುಗಳಿಗೆ ಸಂಬಂಧಿಸಿ ಜಾಗತಿಕ ಐಕ್ಯ ಇರಬೇಕು. ಸ್ವತಂತ್ರ ವ್ಯಾಪಾರದ ಬಗ್ಗೆ ಜಗತ್ತು ಐಕಮತ್ಯ ಹೊಂದಬೇಕು. ಸಂಚಾರ ಸ್ವಾತಂತ್ರ್ಯ ಮತ್ತು ವಲಸೆಹೋಗುವ ಬಗ್ಗೆ ಒಮ್ಮತದಿಂದ ಪ್ರಾಯೋಗಿಕ ಧೋರಣೆಗಳನ್ನು ರೂಪಿಸಬೇಕು. ಆ ಮೂಲಕ ಲೋಕದಲ್ಲಿ ಐಕ್ಯ ಸ್ಥಾಪಿತವಾಗಬೇಕು. ಮುಖ್ಯವಾಗಿ ದೇಶಗಳು ಪರಸ್ಪರ ಸಹಕಾರ ಮನೋಭಾವದಿಂದ ವರ್ತಿಸಬೇಕು. ಇದರಿಂದ ಪರಸ್ಪರ ಭಿನ್ನಾಭಿಪ್ರಾಯಗಳು ಹೋಗಲಾಡಿಸಲ್ಪಡುವುವು. ಈ ಕ್ರಮಗಳನ್ನು ಕೈಗೊಳ್ಳುವುದಾದರೆ ಈಗಿರುವ ಸಂಘರ್ಷಗಳು ಕೊನೆಗೊಳ್ಳುವುದಾಗಿ ಕಾಣಿಸಿಕೊಳ್ಳುವುದು. ಶಾಂತಿ ಮತ್ತು ಪರಸ್ಪರ ಗೌರವ ಅದರ ಬದಲಾಗಿ ಸ್ಥಾಪಿತವಾಗುವುವು. ಆದರೆ ಇದಕ್ಕೋಸ್ಕರ ಸತ್ಯಸಂಧವಾದ ನ್ಯಾಯ ಪಾಲನೆಯನ್ನು ಅನುಷ್ಠಾನಿಸುವ ಹೊಣೆಗಾರಿಕೆಯನ್ನು ಪ್ರತಿಯೊಂದು ದೇಶ ಮನವರಿಕೆ ಮಾಡಿಕೊಳ್ಳುವುದು ಅವಶ್ಯಕವಾಗಿದೆ. ಬಹಳ ಖೇದಪೂರ್ವಕವಾಗಿ ನಾನು ಹೇಳಲು ಬಯಸುವುದೇನೆಂದರೆ, ನಾನು ಹೇಳುವುದು ಇಸ್ಲಾಮಿನ ತತ್ವೋಪದೇಶಗಳಿಗೆ ಅನುಸಾರವಾಗಿದ್ದರೂ ಮುಸ್ಲಿಮ್ ದೇಶಗಳು ಪರಸ್ಪರ ಐಕ್ಯದಿಂದ ವರ್ತಿಸಲು ವಿಫಲವಾಗಿವೆ. ಮುಸ್ಲಿಮ್ ದೇಶಗಳು ಪರಸ್ಪರ ಸಹಕರಿಸಲು ಮತ್ತು ಐಕ್ಯದಿಂದ ಇರಲು ಸಾಧ್ಯವಾಗುವುದಾದರೆ, ಅವು ನಿರಂತರವಾಗಿ ಪಶ್ಚಿಮದ ದೇಶಗಳ ಸಹಾಯವನ್ನು, ತಮ್ಮ ಆಂತರಿಕ ತೊಂದರೆಗಳನ್ನು ನಿವಾರಿಸಲು ಮತ್ತು ತಮ್ಮ ಅವಶ್ಯಕತೆಗಳನ್ನು ಈಡೇರಿಸಲು

ಅಗತ್ಯಪಡುವ ಸಂದರ್ಭ ಉಂಟಾಗಲಾರದು.

ಈ ಪ್ರಸ್ತಾವನೆಯ ನಂತರ ಲೋಕದಲ್ಲಿ ದೀರ್ಘಕಾಲ ಶಾಂತಿ ಸ್ಥಾಪನೆಗೊಳ್ಳುವ ಬಗ್ಗೆ ಇಸ್ಲಾಮಿನ ನೈಜ ತತ್ವೋಪದೇಶಗಳನ್ನು ವಿವರಿಸುತ್ತೇನೆ. ಮೊದಲನೆಯದಾಗಿ, ಇಸ್ಲಾಮಿನ ಮೂಲ ತತ್ವಗಳಲ್ಲಿ ಒಂದು ಹೀಗಿದೆ: ಸತ್ಯಸಂಧನಾದ ಒಬ್ಬ ಮುಸ್ಲಿಮನು ಹೇಗಿರಬೇಕು ಎಂದರೆ ಅವನ ನಾಲಗೆಯಿಂದಲೂ ಕೈಗಳಿಂದಲೂ ಇತರ ಎಲ್ಲ ಶಾಂತಿಪ್ರಿಯ ಜನರು ಹಾನಿ ಅನುಭವಿಸುವುದರಿಂದ ಸುರಕ್ಷಿತರಾಗಿರುವರು. ಇದು ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮುಸ್ಲಿಮ್ ಪದಕ್ಕೆ ನೀಡಿದ ಅರ್ಥ ವಿವರಣೆಯಾಗಿದೆ. ಈ ಮೂಲಭೂತ ಇಸ್ಲಾಮಿಕ ತತ್ವವನ್ನು ಆಲಿಸಿದ ನಂತರ ಯಾವುದೇ ದೋಷಾರೋಪ ಇಸ್ಲಾಮಿನ ವಿರುದ್ಧ ಮಾಡಲು ಸಾಧ್ಯವೇ? ಖಂಡಿತವಾಗಿಯೂ ಸಾಧ್ಯವಿಲ್ಲ. ತಮ್ಮ ನಾಲಗೆಗಳನ್ನೂ ಕೈಗಳನ್ನೂ ಅನ್ಯಾಯ ಮತ್ತು ದ್ವೇಷವನ್ನು ಹರಡಲು ಪ್ರಯೋಗಿಸುವವರನ್ನು ಶಿಕ್ಷಿಸಬೇಕೆಂದು ಇಸ್ಲಾಮ್ ಉಪದೇಶಿಸುತ್ತದೆ. ಆದುದರಿಂದ ಪ್ರಾದೇಶಿಕ ಮಟ್ಟದಿಂದ ಜಾಗತಿಕ ಮಟ್ಟದ ತನಕ ಎಲ್ಲ ಪಕ್ಷಗಳ ಜನರು ಈ ಸುವರ್ಣ ತತ್ವದ ಪರಿಮಿತಿಯೊಳಗೆ ವರ್ತಿಸುವುದಾದರೆ ಲೋಕದಲ್ಲಿ ಎಂದೂ ಧಾರ್ಮಿಕ ಸಂಘರ್ಷಗಳುಂಟಾಗಲಾರವು. ರಾಜಕೀಯ ಸಂಘರ್ಷಗಳು, ದುರಾಶೆ ಮತ್ತು ಅಧಿಕಾರ ಪಡೆಯುವ ಹಂಬಲಗಳು ಉಂಟಾಗಲಾರವು. ಇಸ್ಲಾಮಿನ ಈ ತತ್ವೋಪದೇಶಗಳನ್ನು ಅನುಸರಿಸಿ ವರ್ತಿಸುವುದಾದರೆ, ಪ್ರತಿ ದೇಶದೊಳಗೆ ದೇಶವಾಸಿಗಳು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಮತ್ತು ಭಾವನೆಗಳನ್ನು ರಕ್ಷಿಸುವರು ಮತ್ತು ಸರಕಾರಗಳು ಎಲ್ಲ ನಾಗರಿಕರನ್ನು ರಕ್ಷಿಸುವ ತಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವುವು. ಜಾಗತಿಕ ಮಟ್ಟದಲ್ಲಿ ಪ್ರತಿಯೊಂದು ದೇಶ ಇತರ ದೇಶಗಳೊಂದಿಗೆ ಸತ್ಯಸಂಧವಾದ ಸಹಾನುಭೂತಿಯಿಂದಲೂ ದಯಾ ಭಾವದಿಂದಲೂ ವರ್ತಿಸುವುದು.

ಇಸ್ಲಾಮ್ ಉಪದೇಶಿಸುವ ಇನ್ನೊಂದು ಮುಖ್ಯ ತತ್ವವೇನೆಂದರೆ, ಶಾಂತಿಯನ್ನು ಸ್ಥಾಪಿಸಲು ಪ್ರಯತ್ನಿಸುವಾಗ ಎಲ್ಲ ಪಕ್ಷಗಳು ಗರ್ವದಿಂದ ಅಥವಾ ದುರಹಂಕಾರದಿಂದ ವರ್ತಿಸಬಾರದು ಎಂಬುದು ಅವಶ್ಯಕವಾಗಿದೆ. ಈ ತತ್ವವನ್ನು ಹಝ್ರತ್ ಪೈಗಂಬರರು(ಸ) ಬಹಳ ಚೆನ್ನಾಗಿ ವಿಶದೀಕರಿಸಿರುವರು. ಅವರು ಹೀಗೆ ಹೇಳಿದ ಮಾತುಗಳು ಬಹಳ ಪ್ರಸಿದ್ಧವಾಗಿವೆ: "ಒಬ್ಬ ಕಪ್ಪು ಮನುಷ್ಯನು ಬಿಳಿ ಮನುಷ್ಯನಿಗಿಂತ ಶ್ರೇಷ್ಠನಲ್ಲ. ಒಬ್ಬ ಬಿಳಿ ಮನುಷ್ಯನು ಕಪ್ಪು ಮನುಷ್ಯನಿಗಿಂತ ಶ್ರೇಷ್ಠನಲ್ಲ." ಆದುದರಿಂದ ಒಬ್ಬ ಯುರೋಪಿಯನ್ ಬೇರೆ ಯಾವುದೇ ಜನಾಂಗದವನಿಗಿಂತ ಶ್ರೇಷ್ಠನೆಂದು ಗಣಿಸಬಾರದು. ಇದೇ ರೀತಿ ಆಫ್ರಿಕನರು, ಏಶಿಯಾದವರು ಅಥವಾ ಲೋಕದ ಬೇರೆ ಯಾವುದೇ ಜನಾಂಗದವರು ಅನ್ಯ ಜನಾಂಗದವರಿಗಿಂತ ಶ್ರೇಷ್ಠರೆಂದು ಗಣಿಸಬಾರದು. ಜನಾಂಗೀಯ, ವರ್ಗೀಯ, ವರ್ಣೀಯ ಮತ್ತು ಬುಡಕಟ್ಟು ಸಂಬಂಧ ವ್ಯತ್ಯಾಸಗಳು ವಿವಿಧ ಜನಸಮೂಹಗಳನ್ನು ಗುರುತಿಸಲು ಸಹಕಾರಿಯಾಗುವಂಥವುಗಳು ಮಾತ್ರವಾಗಿವೆ.

ಆಧುನಿಕ ಲೋಕದಲ್ಲಿ ನಾವೆಲ್ಲರೂ ಒಬ್ಬರಿನ್ನೊಬ್ಬರನ್ನು ಆಶ್ರಯಿಸಿರುತ್ತೇವೆ.

ಇಂದಿನ ಕಾಲದಲ್ಲಿ ಮಹಾಶಕ್ತಿ ರಾಷ್ಟ್ರಗಳಾದ ಯುರೋಪ್ ಮತ್ತು ಯು.ಎಸ್.ಎ. ಕೂಡ ತಮ್ಮನ್ನು ಅನ್ಯ ದೇಶಗಳಿಂದ ಸಂಪೂರ್ಣವಾಗಿ ಬೇರ್ಪಡಿಸಿ ಬಾಳಲಾರವು. ಇದೇ ರೀತಿ ಆಫ್ರಿಕನ್ ದೇಶಗಳು ತಮ್ಮನ್ನು ಅನ್ಯ ದೇಶಗಳಿಂದ ದೂರಸರಿಸಿ ಅಭಿವೃದ್ಧಿ ಹೊಂದಲಾರವು. ಏಶಿಯನ್ ದೇಶಗಳು ಮತ್ತು ಲೋಕದ ಯಾವುದೇ ಪ್ರದೇಶದ ಜನತೆ ಸ್ವಯಂ ಪ್ರಗತಿ ಪಥದಲ್ಲಿ ಸಾಗಲಾರವು. ಉದಾಹರಣೆಗೆ ಹೇಳುವುದಾದರೆ, ನಿಮ್ಮ ಆರ್ಥಿಕ ವ್ಯವಸ್ಥೆ ಅಭಿವೃದ್ಧಿ ಹೊಂದಬೇಕಾದರೆ ನೀವು ಜಾಗತಿಕ ವಾಣಿಜ್ಯ ವ್ಯವಸ್ಥೆಯಲ್ಲಿ ಭಾಗವಹಿಸಬೇಕಾಗುತ್ತದೆ. ಈಗ ಲೋಕದ ದೇಶಗಳು ಪರಸ್ಪರ ಜೋಡಿಸಲ್ಪಟ್ಟಿವೆ ಎಂಬುದಕ್ಕೆ ಒಂದು ಸ್ಪಷ್ಟ ಉದಾಹರಣೆ ಯುರೋಪಿನ ಮತ್ತು ಜಗತ್ತಿನ ಆರ್ಥಿಕ ಮುಗ್ಗಟ್ಟು ಕಳೆದ ಕೆಲವು ವರ್ಷಗಳಲ್ಲಿ ಹೆಚ್ಚು ಕಡಿಮೆ ಎಲ್ಲ ದೇಶಗಳ ಮೇಲೆ ಹಾನಿಕಾರಕ ಪ್ರಭಾವ ಉಂಟು ಮಾಡಿದೆ. ಇದಲ್ಲದೆ ದೇಶಗಳು ವಿಜ್ಞಾನ ಕ್ಷೇತ್ರದಲ್ಲಿ ಪ್ರಗತಿ ಪಡೆಯಲು ಮತ್ತು ಇತರ ಕ್ಷೇತ್ರಗಳಲ್ಲಿ ತರಬೇತಿ ಮತ್ತು ನೈಪುಣ್ಯ ಪಡೆಯಲು ಪರಸ್ಪರ ಸಹಕರಿಸುವುದು ಮತ್ತು ಸಹಾಯ ಮಾಡುವುದು ಅತ್ಯಾವಶ್ಯಕವಾಗಿದೆ.

ನಾವು ಯಾವಾಗಲೂ ಒಂದು ವಿಷಯವನ್ನು ಜ್ಞಾಪಕದಲ್ಲಿಡಬೇಕು. ಲೋಕದ ಎಲ್ಲ ಜನರಿಗೆ, ಅವರು ಯುರೋಪಿನವರಾಗಲಿ, ಆಫ್ರಿಕಾದವರಾಗಲಿ, ಏಶ್ಯಾದವರಾಗಲಿ ಅಥವಾ ಬೇರೆ ಯಾವುದೇ ಪ್ರದೇಶದವರಾಗಲಿ, ಸರ್ವಶಕ್ತನಾದ ಅಲ್ಲಾಹನು ಅವರಿಗೆ ಹಿರಿಯ ಮಟ್ಟದ ಬುದ್ಧಿಶಕ್ತಿಯನ್ನು ದಯಪಾಲಿಸಿರುವನು. ಲೋಕದಲ್ಲಿರುವ ಎಲ್ಲ ವಿಭಾಗದ ಜನರು ತಮಗೆ ದೇವನಿಂದ ವರದಾನವಾಗಿ ದೊರೆತ ಸಾಮರ್ಥ್ಯಗಳನ್ನು ಪೂರ್ಣ ರೀತಿಯಲ್ಲಿ ಬಳಸುವುದಾದರೆ ಲೋಕವು ಶಾಂತಿಧಾಮವಾಗಿ ಪರಿವರ್ತಿತವಾಗುವುದು. ಆದರೆ ಅಭಿವೃದ್ಧಿ ಹೊಂದಿದ ದೇಶಗಳು ಅವರಿಗಿಂತ ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳನ್ನು ಮತ್ತು ಅಭಿವೃದ್ಧಿಶೀಲ ದೇಶಗಳನ್ನು ಅದುಮಿ ಹಾಕಿ ಅಲ್ಲಿನ ಬುದ್ಧಿಶಾಲಿಗಳಾದ ಜನರಿಗೆ ಪ್ರಗತಿಗಳಿಸುವ ಸಂದರ್ಭಗಳನ್ನು ಒದಗಿಸಿ ಕೊಡದಿದ್ದರೆ ಆಗ ನಿಶ್ಚಿತವಾಗಿಯೂ ಆ ದೇಶಗಳ ಆತಂಕ ವರ್ಧಿಸುವುದು ಮತ್ತು ಅದರ ಫಲಸ್ವರೂಪವಾಗಿ ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆ ಕೆಟ್ಟು ಹೋಗುವುದು.

ಇಸ್ಲಾಮ್ ಧರ್ಮ ಪ್ರತಿಪಾದಿಸುವ ಇನ್ನೊಂದು ತತ್ವ, ಅನ್ಯರಿಗೆ ಅನ್ಯಾಯವಾಗುವುದನ್ನು ಮತ್ತು ಅನ್ಯರ ಹಕ್ಕುಗಳು ಕಸಿಯಲ್ಪಡುವುದನ್ನು ನಾವು ಸಹಿಸಬಾರದೆಂದಾಗಿದೆ. ಇದೇ ರೀತಿ ನಾವು ನಮ್ಮ ಹಕ್ಕುಗಳನ್ನು ಅಂಗೀಕರಿಸಿ ಅನ್ಯರಿಗೆ ಆ ಹಕ್ಕುಗಳನ್ನು ನಿರಾಕರಿಸಬಾರದು. ಇಸ್ಲಾಮ್ ಉಪದೇಶಿಸುವುದೇನೆಂದರೆ, ಪ್ರತಿಕಾರ ಮಾಡುವುದಾದರೆ ಅದು ಉಂಟಾದ ಹಾನಿಗೆ ಸಮ ಪ್ರಮಾಣದಲ್ಲಿರಬೇಕು. ಆದರೆ ಪ್ರತೀಕಾರ ಮಾಡದೆ ಕ್ಷಮಿಸುವುದು ಉತ್ತಮ ಪರಿಣಾಮ ಉಂಟು ಮಾಡುವುದಾದರೆ ಕ್ಷಮಿಸಲು ಆದ್ಯತೆ ನೀಡಬೇಕು. ಸತ್ಯವಾದ ಮತ್ತು ಉತ್ತಮವಾದ ಉದ್ದೇಶ ಯಾವಾಗಲೂ ಸುಧಾರಣೆ, ಸೌಹಾರ್ದ ವರ್ಧನೆ ಮತ್ತು ಸ್ಥಾಯಿಯಾದ ಶಾಂತಿಯಾಗಿರಬೇಕು. ಆದರೆ ಈಗ ಲೋಕದಲ್ಲಿ ನಡೆಯುತ್ತಿರುವುದಾದರೂ ಏನು? ಒಬ್ಬನು ಒಂದು ಅನ್ಯಾಯದ ಕೆಲಸ ಮಾಡಿದರೆ ಅದರಿಂದ ಹಾನಿ ಅನುಭವಿಸಿದವನು

ಮಾಡುವ ಪ್ರತಿಕಾರ ಅವನು ಅನುಭವಿಸಿದ ಹಾನಿಗಿಂತ ಅತ್ಯಂತ ಹೆಚ್ಚಿನ ಮಟ್ಟದಲ್ಲಿದ್ದು ಅವನು ಅನುಭವಿಸಿದ ಅನ್ಯಾಯಕ್ಕಿಂತ ಬಹಳ ಘೋರ ಮಟ್ಟದ ಅನ್ಯಾಯವಾಗಿರುತ್ತದೆ.

ಇಸ್ರಾಯೇಲ್ ಮತ್ತು ಪಾಲೆಸ್ತೀನ್ ಮಧ್ಯೆ ವರ್ಧಿಸುತ್ತಾ ಇರುವ ಸಂಘರ್ಷಗಳಲ್ಲಿ ನಾವು ಇದನ್ನೇ ಕಾಣುತ್ತಿದ್ದೇವೆ. ಸಿರಿಯಾ, ಲಿಬ್ಯ, ಈಜಿಪ್ಟ್ ಮೊದಲಾದ ದೇಶಗಳಲ್ಲಿರುವ ಅಶಾಂತಿ ಪರಿಸ್ಥಿತಿ ಬಗ್ಗೆ ಮಹಾಶಕ್ತಿ ದೇಶಗಳು ತಮ್ಮ ಅಸಮಾಧಾನ ಮತ್ತು ಕಳವಳವನ್ನು ಬಹಿರಂಗವಾಗಿ ಪ್ರಕಟಿಸಿವೆ. ಅಲ್ಲಿನ ಪರಿಸ್ಥಿತಿಗಳು ಆಂತರಿಕ ಸಮಸ್ಯೆಗಳೆಂದು ವಾದಿಸಬಹುದಾದರೂ ಹೀಗೆ ಅತೃಪ್ತಿ ಸೂಚಿಸಲಾಗಿದೆ. ಹೀಗಿದ್ದರೂ ಈ ಮಹಾಶಕ್ತಿ ರಾಷ್ಟ್ರಗಳು ಪಾಲೆಸ್ತೀನ್ ಜನತೆ ಬಗ್ಗೆ ಲಕ್ಷ್ಯ ನೀಡುತ್ತಿರುವುದಾಗಿ ಕಾಣುವುದಿಲ್ಲ. ಇದು ಈ ಮಹಾಶಕ್ತಿ ರಾಷ್ಟ್ರಗಳ ದ್ವಿಮುಖ ಧೋರಣೆ ಎಂದು ಮುಸ್ಲಿಮ್ ದೇಶಗಳ ಜನರು ಗ್ರಹಿಸುತ್ತಾರೆ. ಇದು ಮಹಾಶಕ್ತಿ ರಾಷ್ಟ್ರಗಳ ವಿರುದ್ಧ ಮುಸ್ಲಿಂ ರಾಷ್ಟಗಳ ಜನರ ಹೃದಯದಲ್ಲಿ ಅತೃಪ್ತಿ ಮತ್ತು ಹಗೆತನ ವರ್ಧಿಸಲು ಕಾರಣವಾಗುವುದು. ಈ ಜನರ ಕ್ರೋಧ ಮತ್ತು ಕಡು ಹಗೆತನ ಅತ್ಯಂತ ಅಪಾಯಕರವಾಗಿದೆ ಮತ್ತು ಅದು ಕುದಿದು ಯಾವಾಗಲಾದರೂ ಸ್ಫೋಟಗೊಳ್ಳಬಹುದಾಗಿದೆ. ಇದರ ಪರಿಣಾಮ ಏನಾಗುವುದು? ಇದರಿಂದ ಅಭಿವೃದ್ಧಿಶೀಲ ದೇಶಗಳಿಗೆ ಎಷ್ಟು ಹಾನಿ ಉಂಟಾಗುವುದು? ಅವುಗಳಿಗೆ ಬದುಕಿ ಬಾಳಲು ಸಾಧ್ಯವಾಗುವುದೇ? ಅಭಿವೃದ್ಧಿ ಹೊಂದಿದ ದೇಶಗಳಿಗೆ ಉಂಟಾಗುವ ಹಾನಿ ಎಷ್ಟು? ಇಂತಹ ಪ್ರಶ್ನೆಗಳಿಗೆ ಉತ್ತರ ದೇವನಿಗೆ ಮಾತ್ರ ತಿಳಿದಿದೆ. ನಾನು ಈ ಪ್ರಶ್ನೆಗಳಿಗೆ ಉತ್ತರ ನೀಡಲಾರೆ. ಬೇರೆ ಯಾರಿಗೂ ಉತ್ತರ ನೀಡಲು ಸಾಧ್ಯವಾಗದು. ಆದರೆ ಒಂದು ವಿಷಯದ ಬಗ್ಗೆ ಸ್ಪಷ್ಟವಾಗಿ ಹೇಳಬಹುದು. ಜಗತ್ತಿನಲ್ಲಿ ಶಾಂತಿಗೆ ಭಂಗ ಉಂಟಾಗುವುದು. ನಾನು ಯಾವುದೇ ದೇಶದ ಪರವಾಗಿ ಮಾತನಾಡುತ್ತಾ ಇಲ್ಲ ಎಂದು ಸ್ಪಷ್ಟಪಡಿಸಲು ಬಯಸುತ್ತೇನೆ. ನಾನು ಹೇಳುವುದೇನೆಂದರೆ, ಎಲ್ಲ ರೀತಿಯ ಕ್ರೂರ ವರ್ತನೆಗಳನ್ನು, ಅವು ಎಲ್ಲಿ ನಡೆಯುತ್ತಾ ಇದ್ದರೂ ತಡೆದು ಕೊನೆಗೊಳಿಸಬೇಕು. ಪಾಲೆಸ್ತೀನಿನ ಜನರು, ಇಸ್ರಾಯೇಲಿನ ಜನರು ಅಥವಾ ಬೇರೆ ಯಾವುದೇ ದೇಶದ ಜನರು ಕ್ರೂರ ಕೃತ್ಯಗಳನ್ನು ಮಾಡುತ್ತಿದ್ದರೆ ಅವರೆಲ್ಲರ ಕ್ರೂರತೆಗಳನ್ನು ತಡೆಗಟ್ಟಬೇಕು. ಏಕೆಂದರೆ ಅವುಗಳನ್ನು ಹರಡಲು ಅನುಮತಿಸಿದರೆ ದ್ವೇಷದ ಜ್ವಾಲೆಗಳು ಖಂಡಿತವಾಗಿಯೂ ಲೋಕವನ್ನೆಲ್ಲ ಸುತ್ತುವರಿಯುವುದು. ಅವು ಇಂದಿನ ಆರ್ಥಿಕ ಬಿಕ್ಕಟ್ಟು ಬೇಗನೆ ಮರೆತು ಹೋಗುವಷ್ಟು ಭೀಕರವಾಗುವುದು. ಅದಕ್ಕೆ ಬದಲಾಗಿ ಅವರು ಅತ್ಯಂತ ಭೀತಿದಾಯಕ ಪರಿಸ್ಥಿತಿಯನ್ನು ಎದುರಿಸಬೇಕಾಗುವುದು. ನಾವು ಊಹಿಸಲು ಕೂಡ ಸಾಧ್ಯವಾಗದಷ್ಟು ಬೃಹತ್ ಮಟ್ಟದಲ್ಲಿ ಜೀವ ಹಾನಿ ಸಂಭವಿಸುವುದು.

ದ್ವಿತೀಯ ಮಹಾಯುದ್ಧದಲ್ಲಿ ಬೃಹತ್ ಹಾನಿಯನ್ನು ಅನುಭವಿಸಿದ ಯುರೋಪಿಯನ್ ದೇಶಗಳು ಈ ಕಾರಣಗಳಿಂದ ತಮ್ಮ ಗತ ಕಾಲದ ಚರಿತ್ರೆಯಿಂದ ಪಾಠಗಳನ್ನು ಕಲಿತು ಲೋಕವನ್ನು ನಾಶದಿಂದ ಸಂರಕ್ಷಿಸಲು ಪ್ರಯತ್ನಿಸುವುದು ಅವರ ಕರ್ತವ್ಯವಾಗಿದೆ. ಹೀಗೆ ಮಾಡಲು ಯುರೋಪಿಯನ್ ದೇಶಗಳು ನ್ಯಾಯಪಾಲನೆಯ ಅವಶ್ಯಕತೆಗಳನ್ನು ಈಡೇರಿಸಬೇಕು ಮತ್ತು ತಮ್ಮ ಹೊಣೆಗಾರಿಕೆಗಳನ್ನು ನಿರ್ವಹಿಸಬೇಕು. ಇಸ್ಲಾಮ್ ನ್ಯಾಯಯುತವಾಗಿಯೂ ಉತ್ತಮ ರೀತಿಯಲ್ಲೂ ಎಲ್ಲರೂ ಯಾವಾಗಲೂ

ವರ್ತಿಸುವ ಅವಶ್ಯಕತೆ ಬಗ್ಗೆ ಒತ್ತಿ ಹೇಳುತ್ತದೆ. ಯಾವುದೇ ಪಕ್ಷಕ್ಕೆ ಆದ್ಯತೆ ನೀಡಬಾರದೆಂದೂ ಯಾವುದೇ ಪಕ್ಷಕ್ಕೆ ಅನ್ಯಾಯಕರವಾಗಿ ಸವಲತ್ತು ನೀಡಬಾರದೆಂದೂ ಇಸ್ಲಾಮ್ ಉಪದೇಶಿಸುತ್ತದೆ. ಒಬ್ಬ ತಪ್ಪುಗಾರನ ಸ್ಥಾನಮಾನಗಳು ಹೇಗಿದ್ದರೂ ಅವನು ತನ್ನ ತಪ್ಪು ಕೆಲಸಗಳನ್ನು ಮುಂದುವರಿಸಲು ಅಂತರ್ರಾಷ್ಟ್ರೀಯ ಸಮುದಾಯ ಬಿಡಲಾರದೆಂಬ ಪ್ರಜ್ಞೆ ಪ್ರತಿಯೊಬ್ಬನಿಗಿರಬೇಕು. ಸಂಯುಕ್ತ ರಾಷ್ಟ್ರ ಸಂಘದ ಸದಸ್ಯ ದೇಶಗಳು, ಯುರೋಪಿಯನ್ ಯೂನಿಯನ್‌ನಿಂದ ಲಾಭ ಪಡೆಯುವ ದೇಶಗಳು, ಮಹಾಶಕ್ತಿ ರಾಷ್ಟ್ರಗಳ ಗುಂಪಿಗೆ ಸೇರಿದ ದೇಶಗಳು ಮತ್ತು ಅಭಿವೃದ್ಧಿ ಹೊಂದದ ದೇಶಗಳು ಕೂಡ ಈ ತತ್ವವನ್ನು ಅಂಗೀಕರಿಸುವುದಾದರೆ ಮಾತ್ರ, ಆಗ ಮಾತ್ರ ಲೋಕದಲ್ಲಿ ಶಾಂತಿ ಸ್ಥಾಪಿತವಾಗುವುದು.

ಇದಲ್ಲದೆ, ಸಂಯುಕ್ತ ರಾಷ್ಟ್ರ ಸಂಘದಲ್ಲಿ ವೀಟೋ ಅಧಿಕಾರವಿರುವ ದೇಶಗಳು ತಮ್ಮ ಕೃತ್ಯಗಳ ಬಗ್ಗೆ ಉತ್ತರ ಹೇಳಬೇಕಾಗುವುದು. ಅವರು ಆ ಕೃತ್ಯಗಳ ತಪ್ಪುಗಳಿಗೆ ಹೊಣೆಗಾರರಾಗುವರು ಎಂದು ಅರಿತುಕೊಳ್ಳುವುದಾದರೆ ನ್ಯಾಯ ಪಾಲನೆಯು ಸತ್ಯವಾಗಿ ಸ್ಥಾಪಿತವಾಗುವುದು. ನಾನು ಹೇಳಲು ಬಯಸುವುದೇನೆಂದರೆ, ವೀಟೋ ಪ್ರಯೋಗಿಸುವ ಅಧಿಕಾರವು ಶಾಂತಿ ಸ್ಥಾಪನೆಗೆ ಎಂದೂ ಸಹಾಯಕವಾಗಲಾರದು. ಏಕೆಂದರೆ ಸಂಯುಕ್ತ ರಾಷ್ಟ್ರದ ಸದಸ್ಯ ದೇಶಗಳು ಸಮಾನ ಮಟ್ಟದಲ್ಲಿ ಸದಸ್ಯತ್ವ ಹೊಂದಿರುವುದಿಲ್ಲ. ಈ ವರ್ಷದ ಆರಂಭದಲ್ಲಿ ನಾನು ಯು.ಎಸ್.ಎ. ದೇಶದ ಮುಖ್ಯ ರಾಜಕಾರಣಿಗಳನ್ನೂ ಧೋರಣೆಗಳನ್ನು ರೂಪಿಸುವವರನ್ನೂ ಕ್ಯಾಪಿಟೋಲ್ ಹಿಲ್‌ನಲ್ಲಿ ಸಂಬೋಧಿಸಿ ಮಾತನಾಡಿದಾಗ ಈ ಅಂಶವನ್ನು ಅವರೊಂದಿಗೆ ಹೇಳಿದ್ದೆನು. ನಾವು ಸಂಯುಕ್ತ ರಾಷ್ಟ್ರ ಸಂಘದಲ್ಲಿ ವೀಟೋ ಪ್ರಯೋಗದ ಚರಿತ್ರೆಯನ್ನು ನೋಡುವಾಗ, ವೀಟೋ ಪ್ರಯೋಗಿಸಿದ್ದು ದಬ್ಬಾಳಿಕೆಗೆ ತುತ್ತಾದವರನ್ನು ರಕ್ಷಿಸಲಿಕ್ಕೆ ಅಥವಾ ಸರಿಯಾಗಿ ವರ್ತಿಸುವವರನ್ನು ಬೆಂಬಲಿಕ್ಕೋಸ್ಕರವಾಗಿರಲಿಲ್ಲ ಎಂದು ಸ್ಪಷ್ಟವಾಗುತ್ತದೆ. ವೀಟೋ ಪ್ರಯೋಗಿಸುವ ಅಧಿಕಾರವನ್ನು ಕೆಲವು ಸಂದರ್ಭಗಳಲ್ಲಿ ಕ್ರೂರತೆಯನ್ನು ಬೆಂಬಲಿಸಲು ಬಳಸಲಾಗಿದೆ; ಅದನ್ನು ತಡೆಯಲಿಕ್ಕಲ್ಲ ಎಂದು ನಾವು ನೋಡಿರುತ್ತೇವೆ. ಇದು ರಹಸ್ಯವಾಗಿರುವ ಅಥವಾ ಯಾರಿಗೂ ತಿಳಿಯದಿರುವ ವಿಷಯವೇನೂ ಅಲ್ಲ. ಸಂಪರ್ಕ ಮಾಧ್ಯಮಗಳ ಅನೇಕ ವಿಶ್ಲೇಷಕರು ಬಹಿರಂಗವಾಗಿ ಇದರ ಬಗ್ಗೆ ಬರೆದಿರುತ್ತಾರೆ ಮತ್ತು ಮಾತನಾಡಿರುತ್ತಾರೆ.

ಇಸ್ಲಾಮ್ ಉಪದೇಶಿಸುವ ಇನ್ನೊಂದು ಸುಂದರ ತತ್ವ, ಸಮಾಜದಲ್ಲಿ ಶಾಂತಿಯನ್ನು ಕಾಪಾಡಲು ಕೋಪವನ್ನು ಪ್ರತಿಯೊಬ್ಬನು ತಗ್ಗಿಸಬೇಕೆಂದಾಗಿದೆ. ಪ್ರಾಮಾಣಿಕತೆ ಮತ್ತು ನ್ಯಾಯ ಪಾಲನೆಯ ಮೇಲೆ ಅದಕ್ಕೆಂದೂ ಆದ್ಯತೆ ನೀಡಬಾರದು. ಇಸ್ಲಾಮಿನ ಆದಿ ಕಾಲೀನ ಚರಿತ್ರೆ ಇದಕ್ಕೆ ಸಾಕ್ಷ್ಯವಹಿಸುತ್ತದೆ. ಸತ್ಯಸಂಧರಾದ ಮುಸ್ಲಿಮರು ಯಾವಾಗಲೂ ಈ ತತ್ವವನ್ನು ಪಾಲಿಸುತ್ತಿದ್ದರು. ಯಾರು ಈ ತತ್ವವನ್ನು ಪಾಲಿಸಲಿಲ್ಲವೋ ಅವರನ್ನು ಹಝ್ರತ್ ಮಹಮ್ಮದ್ ಪೈಗಂಬರರು[ಸ] ತೀವ್ರವಾಗಿ ಖಂಡಿಸಿದ್ದರು. ಆದರೆ ಇಂದು ದುರದೃಷ್ಟಕರವಾಗಿ ಯಾವಾಗಲೂ ಈ ತತ್ವ ಪಾಲಿಸಲ್ಪಡುತ್ತಿಲ್ಲ. ಈಗಿನ ಕಾಲದಲ್ಲಿ ಕೆಲವು ಸಂದರ್ಭಗಳಲ್ಲಿ ಶಾಂತಿ ಪಾಲನೆಗೆ ಕಳುಹಿಸಲ್ಪಟ್ಟ ಸೈನ್ಯ ಅಥವಾ ಸೈನಿಕರು

ಅವರಿಗೆ ವಹಿಸಿಕೊಟ್ಟ ಕರ್ತವ್ಯಗಳಿಗೆ ಸಂಪೂರ್ಣ ವಿರುದ್ಧ ವರ್ತಿಸುತ್ತಾರೆ. ಉದಾಹರಣೆಗೆ, ಕೆಲವು ದೇಶಗಳಲ್ಲಿ ವಿದೇಶಿ ಸೈನಿಕರು ತಮ್ಮ ಗುಂಡಿಗೆ ಬಲಿಯಾದ ಸ್ಥಳೀಯ ಜನರ ಮೃತ ಶರೀರಗಳೊಂದಿಗೆ ಅತ್ಯಂತ ಗೌರವ ರಹಿತವಾಗಿಯೂ ಬಹಳ ಭಯಾನಕವಾಗಿಯೂ ವರ್ತಿಸಿದ್ದಾರೆ. ಈ ರೀತಿ ಶಾಂತಿ ಸ್ಥಾಪಿಸಲು ಸಾಧ್ಯವೇ? ಇದಕ್ಕೆದುರಾಗಿ ಪ್ರತಿಕ್ರಿಯೆ ಆ ಬಾಧಿತ ದೇಶಕ್ಕೆ ಸೀಮಿತವಾಗದೆ ಲೋಕದಲ್ಲಿ ಎಲ್ಲ ಕಡೆಗಳಲ್ಲೂ ಪ್ರಕಟವಾಗುತ್ತಿದೆ. ಮುಸ್ಲಿಮರ ವಿರುದ್ದ ತಪ್ಪಾಗಿ ವರ್ತಿಸಿದರೆ ಮುಸ್ಲಿಮ್ ತೀವ್ರವಾದಿಗಳು ಅದರ ಲಾಭ ಖಂಡಿತವಾಗಿ ಪಡೆಯುತ್ತಾರೆ ಮತ್ತು ಇಸ್ಲಾಮಿನ ತತ್ವಗಳಿಗೆ ವಿರುದ್ಧವಾಗಿ ವರ್ತಿಸಿ ಜಾಗತಿಕ ಶಾಂತಿಯನ್ನು ಕೆಡಿಸುತ್ತಾರೆ. ಇಸ್ಲಾಮ್ ಉಪದೇಶಿಸುವುದೇನೆಂದರೆ, ದೌರ್ಜನ್ಯಗಾರನಿಗೂ ದೌರ್ಜನ್ಯ ಪೀಡಿತನಿಗೂ ಸಂಪೂರ್ಣ ನಿಷ್ಪಕ್ಷವಾಗಿ, ಸ್ವಾರ್ಥ ಲಾಭ ಬಯಸದೆ ಮತ್ತು ಹಗೆತನ ರಹಿತವಾಗಿ ಸಹಾಯ ಮಾಡಬೇಕೆಂದಾಗಿದೆ. ಎಲ್ಲ ಪಕ್ಷಗಳ ಜನರಿಗೆ ಸಮಾನ ವೇದಿಕೆ ಮತ್ತು ಆಡುವ ಕ್ಷೇತ್ರ ನೀಡಿ ಮಾತ್ರ ಶಾಂತಿ ಸ್ಥಾಪಿಸಬಹುದಾಗಿದೆ.

ಸಮಯಾವಕಾಶ ಸೀಮಿತವಾದ ಕಾರಣ ನಾನು ಇಸ್ಲಾಮಿನ ಇನ್ನೊಂದು ಉಪದೇಶವನ್ನು ಮಾತ್ರ ನಿಮ್ಮ ಮುಂದಿರಿಸುತ್ತೇನೆ. ಅನ್ಯರ ಸಂಪತ್ತನ್ನೂ ಸಂಪನ್ಮೂಲಗಳನ್ನೂ ಅಸೂಯೆಯಿಂದ ದಿಟ್ಟಿಸಿ ನೋಡಬಾರದೆಂಬುದು ಇಸ್ಲಾಮ್ ಉಪದೇಶಿಸುವ ಇನ್ನೊಂದು ತತ್ವವಾಗಿದೆ. ಅನ್ಯರ ಸಂಪತ್ತನ್ನು ಅಪಹರಿಸಲು ಪ್ರಯತ್ನಿಸಬಾರದು. ಹೀಗೆ ಮಾಡುವುದರಿಂದ ಸಹ ಶಾಂತಿಗೆ ಭಂಗ ಉಂಟಾಗುತ್ತದೆ. ಶ್ರೀಮಂತ ದೇಶಗಳು ಅಭಿವೃದ್ಧಿ ಹೊಂದದ ದೇಶಗಳ ಸಂಪತ್ತನ್ನು ಸ್ವಾಧೀನಪಡಿಸಿ ತಮ್ಮ ಸ್ವಂತ ಅವಶ್ಯಕತೆಗಳನ್ನು ಈಡೇರಿಸಲು ಬಯಸಿದರೆ ಅದರಿಂದ ಸಹ ಶಾಂತಿಭಂಗವಾಗುವುದು. ಅಭಿವೃದ್ಧಿ ಹೊಂದಿದ ದೇಶಗಳು ಅಭಿವೃದ್ಧಿ ಹೊಂದದ ದೇಶಗಳಿಗೆ ಮಾಡುವ ಸೇವೆಗೋಸ್ಕರ ಯೋಗ್ಯ ಸಂದರ್ಭಗಳಲ್ಲಿ ಸಂಪತ್ತಿನ ಚಿಕ್ಕ ಪಾಲನ್ನು ಪಡೆದುಕೊಂಡು ಸಂಪತ್ತಿನ ಬಹುಭಾಗವನ್ನು ಅಭಿವೃದ್ಧಿ ಹೊಂದದ ದೇಶಗಳ ಜನರ ಜೀವನ ಮಟ್ಟವನ್ನು ಉನ್ನತಗೊಳಿಸಲು ವಿನಿಯೋಗಿಸಬೇಕು. ಅಭಿವೃದ್ಧಿ ಹೊಂದದ ದೇಶಗಳು ಅಭಿವೃದ್ಧಿ ಪಡೆಯಲು ಮತ್ತು ಆ ದೇಶಗಳ ಜನರ ಜೀವನ ಮಟ್ಟವನ್ನು ಏರಿಸಲು ಸಹಾಯ ಮಾಡಬೇಕು. ಹೀಗೆ ಮಾಡಿದರೆ ಮಾತ್ರ ಜಾಗತಿಕ ಶಾಂತಿ ಸ್ಥಾಪಿಸಲ್ಪಡುವುದು. ಆ ದೇಶಗಳ ರಾಜಕೀಯ ನಾಯಕರು ಪ್ರಾಮಾಣಿಕರಾಗಿಲ್ಲವಾದರೆ ಪಾಶ್ಚಿಮಾತ್ಯ ದೇಶಗಳು ಅಥವಾ ಅಭಿವೃದ್ಧಿ ಹೊಂದಿದ ದೇಶಗಳು ಸ್ವತಃ ಅಭಿವೃದ್ಧಿ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸಿ ಅವರಿಗೆ ಸಹಾಯ ಧನ ನೀಡಿ ಸ್ವತಃ ಮೇಲ್ವಿಚಾರಣೆ ನಡೆಸಬೇಕು.

ನಾನು ವಿವರಿಸಬಹುದಾದ ಬೇರೆ ಅನೇಕ ಅಂಶಗಳಿವೆ. ಆದರೆ ಸಮಯದ ಪರಿಮಿತಿಯ ಕಾರಣ ನಾನು ಇಷ್ಟರವರೆಗೆ ವಿವರಿಸಿದ ಅಂಶಗಳಿಗೆ ವಿಷಯವನ್ನು ಸೀಮಿತಗೊಳಿಸುತ್ತೇನೆ. ಖಂಡಿತವಾಗಿಯೂ ನಾನು ವಿವರಿಸಿದ ಎಲ್ಲ ಅಂಶಗಳು ಇಸ್ಲಾಮಿನ ತತ್ವೋಪದೇಶಗಳ ಸತ್ಯಸಂಧವಾದ ವಿವರಣೆಯಾಗಿವೆ.

ಒಂದು ಪ್ರಶ್ನೆ ನಿಮ್ಮ ಹೃದಯದಲ್ಲಿ ಉದ್ಭವಿಸಲು ಸಾಧ್ಯವಿದೆ. ಆದುದರಿಂದ

ಅದಕ್ಕೆ ಮುಂಚಿತವಾಗಿ ಅದರ ಉತ್ತರ ಹೇಳಲು ನಾನು ಬಯಸುತ್ತೇನೆ. ನೀವು ಪ್ರಶ್ನಿಸಬಹುದು. ನಾನು ವಿವರಿಸಿದ ಹಾಗೆಯೇ ಇಸ್ಲಾಮಿನ ತತ್ತೋಪದೇಶಗಳಾಗಿದ್ದರೆ ಮುಸ್ಲಿಮ್ ಲೋಕದಲ್ಲಿ ಇಷ್ಟೆಲ್ಲ ವಿಭಜನೆಗಳನ್ನು ಮತ್ತು ಅಸ್ತವ್ಯಸ್ತತೆಗಳನ್ನು ನಾವು ಕಾಣುತ್ತಿರುವುದೇಕೆ? ಈ ಪ್ರಶ್ನೆಗೆ ಉತ್ತರ ನಾನು ನನ್ನ ಭಾಷಣದ ಪ್ರಾರಂಭದಲ್ಲಿ ಸೂಚಿಸಿ ಒಬ್ಬ ಸುಧಾರಕನ ಆಗಮನದ ಅವಶ್ಯಕತೆಯನ್ನು ವಿವರಿಸಿದ್ದೇನೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು ಹೀಗೆ ಆಗಮಿಸಿದ ಸುಧಾರಕರೆಂದು ನಾವು ನಂಬುತ್ತೇವೆ. ಅಹ್ಮದಿಯಾ ಮುಸ್ಲಿಮ್ ಸಂಘಟನೆಗೆ ಸೇರಿದ ನಾವು ಯಾವಾಗಲೂ ಇಸ್ಲಾಮಿನ ಸತ್ಯ ತತ್ತೋಪದೇಶಗಳನ್ನು ಹೆಚ್ಚು ಹೆಚ್ಚಾಗಿ ವಿಶಾಲವಾಗಿ ಜನರಿಗೆ ತಲುಪಿಸಲು ಪ್ರಯತ್ನಿಸುತ್ತಾ ಇರುತ್ತೇವೆ. ನೀವೆಲ್ಲರೂ ನಿಮ್ಮ ಪ್ರದೇಶಗಳಲ್ಲಿ ಈ ವಿಷಯಗಳ ಬಗ್ಗೆ ಜನರಲ್ಲಿ ಪ್ರಜ್ಞೆ ಮೂಡುವಂತೆ ಪ್ರಯತ್ನಿಸಬೇಕೆಂದು ನಿಮ್ಮನ್ನೆಲ್ಲ ಕೋರುತ್ತೇನೆ. ಈ ಮೂಲಕ ದೀರ್ಘಕಾಲ ನೆಲೆನಿಲ್ಲುವ ಶಾಂತಿ ಲೋಕದಲ್ಲಿ ಎಲ್ಲ ಕಡೆಗಳಲ್ಲೂ ಸ್ಥಾಪಿತವಾಗಲಿ ಎಂದು ಬಯಸುತ್ತೇನೆ.

ನಾವು ಈ ನಿಟ್ಟಿನಲ್ಲಿ ಜಯಶಾಲಿಗಳಾಗದಿದ್ದರೆ, ಲೋಕದ ಯಾವುದೇ ಭಾಗ ಭಯಾನಕ ಮತ್ತು ವಿನಾಶಕಾರಿ ಯುದ್ಧದ ಪರಿಣಾಮಗಳಿಂದ ಸುರಕ್ಷಿತವಾಗಿರಲಾರದು. ಲೋಕದ ಜನರು ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಕಡೆಗಣಿಸಿ ಸಂಭವಿಸಲಿರುವ ನಾಶದಿಂದ ಲೋಕವನ್ನು ರಕ್ಷಿಸಲು ಪ್ರಯತ್ನಿಸುವ ಭಾಗ್ಯವನ್ನು ಅಲ್ಲಾಹನು ಅವರಿಗೆ ನೀಡಲಿ ನಾನು ಪ್ರಾರ್ಥಿಸುತ್ತೇನೆ.

ಪಶ್ಚಿಮದ ಅಭಿವೃದ್ಧಿ ಹೊಂದಿದ ದೇಶಗಳು ಇಂದಿನ ಲೋಕದಲ್ಲಿ ಅತ್ಯಂತ ಹೆಚ್ಚು ಅಧಿಕಾರ ಶಕ್ತಿಗಳನ್ನು ಹೊಂದಿವೆ. ಆದುದರಿಂದ ಈ ಅತ್ಯಂತ ಮುಖ್ಯ ವಿಷಯದ ಬಗ್ಗೆ ತುರ್ತಾಗಿ ಲಕ್ಷ್ಯ ನೀಡಬೇಕಾದುದು ಇತರರಿಗಿಂತ ಹೆಚ್ಚಾಗಿ ನಿಮ್ಮ ಕಡ್ಡಾಯ ಕರ್ತವ್ಯವಾಗಿದೆ.

ಕೊನೆಯದಾಗಿ, ನೀವೆಲ್ಲರೂ ಸಮಯಾವಕಾಶ ಮಾಡಿಕೊಂಡು ಇಲ್ಲಿಗೆ ಬಂದು ನನ್ನ ಭಾಷಣವನ್ನು ಆಲಿಸಿದುದಕ್ಕಾಗಿ ನಾನು ನಿಮಗೆ ಕೃತಜ್ಞತೆ ಅರ್ಪಿಸುತ್ತೇನೆ. ಅಲ್ಲಾಹನು ನಿಮಗೆಲ್ಲರಿಗೂ ಅನುಗ್ರಹ ನೀಡಲಿ.

**ನಿಮಗೆ ಧನ್ಯವಾದಗಳು.**




# ಮುಸ್ಲಿಮರು ಪಾಶ್ಚಿಮಾತ್ಯ ಸಮಾಜಗಳೊಂದಿಗೆ ಭಾವೈಕ್ಯ ಹೊಂದಲು ಸಾಧ್ಯವೇ?

ಬೈತುರ್ರಶೀದ್ ಮಸ್ಜಿದ್

ಹಂಬರ್ಗ್, ಜರ್ಮನಿ, 2012





Hadrat Mirza Masroor Ahmad, Khalifatul-Masih V[aba]
delivers the keynote address at Baitur-Rasheed Mosque






MUSLIME FÜR
FRIEDEN
FREIHEIT
LOYALITÄT
15



## ಮುಸ್ಲಿಮರು ಪಾಶ್ಚಿಮಾತ್ಯ ಸಮಾಜಗಳೊಂದಿಗೆ ಭಾವೈಕ್ಯ ಹೊಂದಲು ಸಾಧ್ಯವೇ?

**ಜಾಗತಿಕ ಅಹ್ಮದಿಯಾ ಜಮಾಅತಿನ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಅಹ್ಮದಿಯೇತರ ಅತಿಥಿಗಳನ್ನು ಸಂಬೋಧಿಸಿ 2012ರಲ್ಲಿ ಹ್ಯಾಂಬರ್ಗ್ (ಜರ್ಮನಿ) ಬೈತುರ್‌ರಶೀದ್ ಮಸೀದಿಯಲ್ಲಿ ಮಾಡಿದ ಭಾಷಣ.**

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್ – ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ.

ಎಲ್ಲ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ – ಅಲ್ಲಾಹನ ಶಾಂತಿ ಮತ್ತು ಅನುಗ್ರಹಗಳು ನಿಮ್ಮೆಲ್ಲರ ಮೇಲೆ ಸುರಿಸಲ್ಪಡಲಿ.

ಈ ಸಮಾರಂಭಕ್ಕೆ ಬರಲು ನೀಡಿದ ಆಹ್ವಾನವನ್ನು ಸ್ವೀಕರಿಸಿದ ನಿಮಗೆಲ್ಲರಿಗೂ ನಾನು ಮೊತ್ತ ಮೊದಲು ಕೃತಜ್ಞತೆ ಅರ್ಪಿಸುತ್ತೇನೆ. ನಿಮ್ಮ ಪೈಕಿ ಅನೇಕರಿಗೆ ಅಹ್ಮದಿಯಾ ಜಮಾಅತ್ ಬಗ್ಗೆ ಚೆನ್ನಾಗಿ ತಿಳಿದಿದೆ ಮತ್ತು ಅಹ್ಮದೀ ಮುಸ್ಲಿಮರೊಂದಿಗೆ ಸ್ನೇಹ ಸಂಬಂಧಗಳು ಇವೆ. ಇತ್ತೀಚೆಗೆ ಅಹ್ಮದಿಯಾ ಜಮಾಅತ್ ಬಗ್ಗೆ ತಿಳಿದವರು ಈ ಜಮಾಅತ್ ಕುರಿತು ಹೆಚ್ಚಿನ ಮಾಹಿತಿ ಗಳಿಸಲು ತಮ್ಮ ಹೃದಯಗಳಲ್ಲಿ ಅಭಿಲಾಷೆ ಹೊಂದಿರಬಹುದು. ಅಹ್ಮದೀ ಮುಸ್ಲಿಮರೊಂದಿಗೆ ಸಂಬಂಧ ಸ್ಥಾಪಿಸುವುದರಿಂದ ಮತ್ತು ಅವರ ಮಸೀದಿಗಳಿಗೆ ಹೋಗುವುದರಿಂದ ಯಾವ ಅಪಾಯವೂ ಸಂಭವಿಸಲಾರದು ಎಂಬ ನಂಬಿಕೆ ನಿಮಗಿದೆ ಎಂದು ನೀವಿಲ್ಲಿಗೆ ಬಂದುದರಿಂದ ಸಾಬೀತಾಗುತ್ತದೆ.

ಇಂದಿನ ಪರಿಸ್ಥಿತಿಯಲ್ಲಿ ಇಸ್ಲಾಮ್ ಧರ್ಮದ ಬಗ್ಗೆ ಪ್ರಕಟವಾಗುವ ಬಹುತೇಕ ವಾರ್ತೆಗಳು ಋಣಾತ್ಮಕವಾಗಿವೆ. ಆದುದರಿಂದ ಮುಸ್ಲಿಮೇತರರಾದ ನೀವು ಅಹ್ಮದೀ ಮಸ್‌ಜಿದ್‌ನಲ್ಲಿ ಜರಗಿಸಲಾಗುವ ಸಮಾರಂಭದಲ್ಲಿ ಭಾಗವಹಿಸಿದರೆ ಕಷ್ಟಕೀಡಾಗಬಹುದು ಅಥವಾ ದೊಡ್ಡ ಹಾನಿಗೆ ಕಾರಣವಾಗಬಹುದೆಂಬ ಆತಂಕ ನಿಮಗಿರಬಹುದಾಗಿದೆ. ಆದರೆ ನೀವು ಇಲ್ಲಿಗೆ ಆಗಮಿಸಿದುದರಿಂದ ನಿಮಗೆ ಅಹ್ಮದೀ ಮುಸ್ಲಿಮರಿಂದ ಅಪಾಯ ಉಂಟಾಗುವ ಭಯವಿಲ್ಲ ಎಂದು ಸ್ಪಷ್ಟವಾಗುತ್ತದೆ. ನೀವು ಅಹ್ಮದಿಯರನ್ನು ವಿಶ್ವಾಸಾರ್ಹರೆಂದೂ ನಿಮ್ಮ ಹಾಗೆ ಮತ್ತು ಬಹುತೇಕ ಜನರ ಹಾಗೆ ಸಭ್ಯರೆಂದೂ ಗಣಿಸುತ್ತೀರೆಂದು ನಿಮ್ಮ ವರ್ತನೆ ತೋರಿಸುತ್ತದೆ.

ನಾನು ಹೀಗೆ ಹೇಳುತ್ತಿರುವೆನಾದರೂ ನಿಮ್ಮ ಪೈಕಿ ಕೆಲವರಿಗೆ ಸ್ವಲ್ಪ ಮಟ್ಟಿಗೆ ಭಯಾಶಂಕೆಗಳು ಇರಬಹುದು. ನೀವು ಉಗ್ರವಾದಿಗಳ ಜೊತೆ ಕುಳಿತುಕೊಳ್ಳಬೇಕಾದೀತು ಎಂಬ ಭಯವೂ ನಿಮಗೆ ಇರಬಹುದು. ನಿಮ್ಮಲ್ಲಿ ಯಾರಿಗಾದರೂ ಅಂತಹ ಭಯಾಶಂಕೆಗಳಿದ್ದರೆ ಅವರು ತಕ್ಷಣ ಅವುಗಳನ್ನು ತಮ್ಮ ಹೃದಯಗಳಿಂದ ದೂರ

ಸರಿಸಬೇಕು. ನಾವು ಭದ್ರತೆ ಬಗ್ಗೆ ಅತ್ಯಂತ ಜಾಗರೂಕರಾಗಿದ್ದೇವೆ. ಉಗ್ರವಾದಿಯಾದವನೊಬ್ಬ ಅಪ್ರತೀಕ್ಷಿತವಾಗಿ ಮಸೀದಿಯೊಳಗೆ ಅಥವಾ ನಮ್ಮ ಪ್ರದೇಶದೊಳಗೆ ಪ್ರವೇಶಿಸಲು ಪ್ರಯತ್ನಿಸಿದರೆ ನಾವು ಕೂಡಲೆ ಅವನ ಮೇಲೆ ಕಠಿಣ ಕ್ರಮ ಕೈಗೊಂಡು ಅವನನ್ನು ಹೊರಗೆ ಹಾಕುವೆವು. ಆದುದರಿಂದ ನೀವು ಸುರಕ್ಷಿತರಾಗಿ ಇಲ್ಲಿರುವಿರಿ ಎಂದು ಧೈರ್ಯಗೊಳ್ಳಿರಿ.

ಅಹ್ಮದಿಯಾ ಮುಸ್ಲಿಮ್ ಜಮಾಅತಿಗೆ ಸೇರಿದ ಯಾರಾದರೊಬ್ಬ ಯಾವುದಾದರೂ ಸ್ಥಳ ಅಥವಾ ಕಾಲದಲ್ಲಿ ಉಗ್ರವಾದಿ ಮನೋಭಾವ ಪ್ರಕಟಿಸಿದರೆ, ಕಾನೂನು ಕಾಯಿದೆಗಳನ್ನು ಉಲ್ಲಂಘಿಸಿ ಶಾಂತಿಗೆ ಭಂಗ ಉಂಟುಮಾಡಿದರೆ ನಾವು ಕೂಡಲೆ ಆತನನ್ನು ಜಮಾಅತಿನಿಂದ ಹೊರಗೆ ತಳ್ಳುತ್ತೇವೆ. ಇಂತಹ ಕ್ರಮ ಕೈಗೊಳ್ಳುವುದು ನಮಗೆ ಕಡ್ಡಾಯವಾಗಿದೆ. ಏಕೆಂದರೆ ಇಸ್ಲಾಮ್ ಎಂಬ ಪದದ ಬಗ್ಗೆ ನಮಗೆ ಪರಿಪೂರ್ಣ ಗೌರವವಿದೆ. ಇಸ್ಲಾಮ್ ಪದದ ಅರ್ಥ "ಶಾಂತಿ" ಮತ್ತು "ಭದ್ರತೆ" ಎಂದಾಗಿದೆ. "ಇಸ್ಲಾಮ್" ಎಂಬ ಪದದ ಸರಿಯಾದ ಅರ್ಥವನ್ನು ನಮ್ಮ ಸಂಘಟನೆ ಪ್ರಕಟಿಸುತ್ತಿದೆ. ಇಸ್ಲಾಮಿನಲ್ಲಿ ಮುಂದೆ ಸಂಭವಿಸಲಿರುವ ನೈಜ ಚಿತ್ರಣದ ಬಗ್ಗೆ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಹದಿನಾಲ್ಕು ನೂರಕ್ಕಿಂತ ಹೆಚ್ಚು ವರ್ಷಗಳ ಹಿಂದೆಯೇ ಭವಿಷ್ಯ ನುಡಿದಿದ್ದರು. ಹಝ್ರತ್ ಪೈಗಂಬರರು(ಸ) ಹೀಗೆ ಹೇಳಿದರು: ಮುಸ್ಲಿಮರಲ್ಲಿ ಬಹುಸಂಖ್ಯಾತರು ಇಸ್ಲಾಮಿನ ನೈಜವೂ ಪರಿಶುದ್ಧವೂ ಆಗಿರುವ ಉಪದೇಶಗಳನ್ನು ಮರೆತು ಬಿಡುವಂತಹ ಪರಿಸ್ಥಿತಿ ಮುಂದೆ ತಲೆದೋರುವುದು. ಅಂತಹ ಕಾಲಘಟ್ಟದಲ್ಲಿ ಅಲ್ಲಾಹನು ಒಬ್ಬ ಸುಧಾರಕರನ್ನು ಮಹ್‌ದೀ ಮತ್ತು ಮಸೀಹರನ್ನಾಗಿ ನೇಮಿಸಿ ಕಳುಹಿಸುವನು. ಹೀಗೆ ಆಗಮಿಸುವ ಮಹಾಪುರುಷರು ನೈಜ ಇಸ್ಲಾಮನ್ನು ಲೋಕದಲ್ಲಿ ಸ್ಥಾಪಿಸುವರು.

ಅಹ್ಮದೀ ಮುಸ್ಲಿಮರಾದ ನಾವು ನಮ್ಮ ಜಮಾಅತಿನ ಸ್ಥಾಪಕರಾದ ಖಾದಿಯಾನಿನ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಅವರನ್ನು ಮೇಲೆ ವಿವರಿಸಿದ ಭವಿಷ್ಯವಾಣಿ ಪ್ರಕಾರ ಅಲ್ಲಾಹನು ಕಳುಹಿಸಿದ ಮಹ್‌ದೀ ಮಸೀಹ್ ಎಂದು ನಂಬುತ್ತೇವೆ. ಅಲ್ಲಾಹನ ಅನುಗ್ರಹದಿಂದ ಈ ಜಮಾಅತ್ ಬಹಳ ಪ್ರಗತಿ ಹೊಂದಿದೆ ಮತ್ತು ಈಗ ಲೋಕದ 202 ದೇಶಗಳಿಗೆ ವ್ಯಾಪಿಸಿದೆ. ಇಂತಹ ಪ್ರತಿಯೊಂದು ದೇಶದಲ್ಲಿ ಸ್ಥಳೀಯ ಜನರಾದ ವಿವಿಧ ಬುಡಕಟ್ಟುಗಳಿಗೆ ಸೇರಿದವರೂ ವಿವಿಧ ಹಿನ್ನೆಲೆ ಹೊಂದಿದವರೂ ಈ ಜಮಾಅತಿಗೆ ಸೇರಿರುವರು. ಅಹ್ಮದೀ ಮುಸ್ಲಿಮರಾದ ಅವರು ತಮ್ಮ ತಮ್ಮ ದೇಶಗಳ ನಿಷ್ಠಾವಂತ ದೇಶಭಕ್ತರಾಗಿರುವರು. ಇಸ್ಲಾಮ್ ಬಗ್ಗೆ ಅವರಿಗಿರುವ ಪ್ರೀತಿ ಮತ್ತು ದೇಶದ ಬಗ್ಗೆ ಅವರಿಗಿರುವ ಪ್ರೀತಿ ಇವುಗಳ ಮಧ್ಯೆ ಯಾವುದೇ ವೈರುಧ್ಯವಿರುವುದಿಲ್ಲ. ವಾಸ್ತವದಲ್ಲಿ ಈ ಎರಡು ನಿಷ್ಠಾ ಭಾವನೆಗಳು ಹಾಸು ಹೊಕ್ಕಾಗಿವೆ ಮತ್ತು ಅವು ಜೊತೆಗೂಡಿರುತ್ತವೆ. ಅಹ್ಮದೀ ಮುಸ್ಲಿಮರು ಯಾವ ದೇಶದಲ್ಲಿ ವಾಸಿಸುತ್ತಿದ್ದರೂ ಅವರು ಕಾನೂನುಕಾಯಿದೆಗಳನ್ನು ಅತ್ಯಂತ ಉತ್ತಮ ರೀತಿಯಲ್ಲಿ

ಅನುಸರಿಸುವವರಾಗಿದ್ದಾರೆ. ನಿಶ್ಚಯವಾಗಿಯೂ ನಮ್ಮ ಜಮಾಅತಿಗೆ ಸೇರಿದವರಲ್ಲಿ, ಬಹುಸಂಖ್ಯಾತರಲ್ಲಿ ಈ ಗುಣವಿಶೇಷಗಳು ನಿಸ್ಸಂಶಯವಾಗಿಯೂ ಇವೆ ಎಂದು ನಾನು ಹೇಳಲು ಬಯಸುತ್ತೇನೆ.

ಅಹ್ಮದೀ ಮುಸ್ಲಿಮರು ತಮ್ಮ ದೇಶ ಬಿಟ್ಟು ಬೇರೆ ದೇಶಕ್ಕೆ ವಲಸೆ ಹೋದ ಸಂದರ್ಭದಲ್ಲಿಯೂ ಸ್ಥಳೀಯ ಜನರು ಅಹ್ಮದಿಯಾ ಜಮಾಅತಿಗೆ ಸೇರಿದಾಗಲೂ ಹೊಸ ಸಮಾಜದ ಭಾಗವಾಗಿ ಕಾರ್ಯನಿರತರಾಗಲು ಅಹ್ಮದಿಯರಿಗೆ ಯಾವುದೇ ಸಂಕೋಚವಿರುವುದಿಲ್ಲ ಮತ್ತು ತಮಗೆ ಪೌರತ್ವ ನೀಡಿದ ಹೊಸ ದೇಶದ ಪ್ರಗತಿಗೋಸ್ಕರ ಪ್ರಯತ್ನಿಸುವ ಬಗ್ಗೆ ಅವರು ಉತ್ಸಾಹಭರಿತರಾಗಿರುತ್ತಾರೆ. ಅಹ್ಮದೀ ಮುಸ್ಲಿಮರು ಯಾವ ದೇಶದ ನಾಗರಿಕರಾದರೂ ಅವರು ತಮ್ಮ ದೇಶದ ಹಿತಕ್ಕೋಸ್ಕರ ಮತ್ತು ಅಭಿವೃದ್ಧಿಗೋಸ್ಕರ ಜೀವಿತದಾದ್ಯಂತ ಪರಿಶ್ರಮಪಡುವರು. ಹೀಗೆ ಜೀವಿಸಲು ನಮಗೆ ಕಲಿಸಿರುವುದು ಇಸ್ಲಾಮ್ ಧರ್ಮವಾಗಿದೆ. ಇಸ್ಲಾಮ್ ಇದರ ಬಗ್ಗೆ ಉಪದೇಶಿಸುತ್ತಿದೆ ಮಾತ್ರವಲ್ಲ, ತಮ್ಮ ದೇಶಗಳಿಗೆ ಪರಿಪೂರ್ಣವಾಗಿ ನಿಷ್ಠರಾಗಿರಲು ಮುಸ್ಲಿಮರಿಗೆ ಅದು ಆಜ್ಞಾಪಿಸಿರುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ದೇಶಪ್ರೇಮವು ಮುಸ್ಲಿಮರ ಧಾರ್ಮಿಕ ವಿಶ್ವಾಸದ ಒಂದು ಭಾಗವೆಂದು ಒತ್ತಿ ಹೇಳಿರುವರು. ದೇಶಪ್ರೇಮವು ಇಸ್ಲಾಮ್ ಧರ್ಮದ ಮೂಲ ತತ್ವವಾಗಿರುವಾಗ ಒಬ್ಬ ನಿಜವಾದ ಮುಸ್ಲಿಮನು ತನ್ನ ದೇಶಕ್ಕೆ ನಿಷ್ಠೆದ್ರೋಹಿಯಾಗಲು ಹೇಗೆ ತಾನೆ ಸಾಧ್ಯ? ಹಾಗೆ ಮಾಡಿದರೆ ಅವನು ತನ್ನ ಧಾರ್ಮಿಕ ವಿಶ್ವಾಸವನ್ನು ಕೈಬಿಡುವವನಾಗುವನು. ಅಹ್ಮದೀ ಮುಸ್ಲಿಮರ ಬಗ್ಗೆ ಹೇಳುವುದಾದರೆ, ನಮ್ಮ ಸಾಮೂಹಿಕ ಕಾರ್ಯಕ್ರಮಗಳಲ್ಲಿ ನಮ್ಮ ಜಮಾಅತಿನ ಎಲ್ಲ ಪುರುಷರೂ ಮಹಿಳೆಯರೂ ಮಕ್ಕಳೂ ಅಲ್ಲಾಹನನ್ನು ಸಾಕ್ಷಿಯಾಗಿ ಮಾಡಿಕೊಂಡು ಪ್ರತಿಜ್ಞೆ ಮಾಡುತ್ತಾರೆ. ಆ ಪ್ರತಿಜ್ಞೆಯಲ್ಲಿ ಅವರೆಲ್ಲರೂ ತಮ್ಮ ಜೀವ, ಸಂಪತ್ತು, ಸಮಯ ಮತ್ತು ಗೌರವವನ್ನು ತಮ್ಮ ಧರ್ಮಕ್ಕೋಸ್ಕರ ಮಾತ್ರವಲ್ಲ, ತಮ್ಮ ದೇಶಕ್ಕೋಸ್ಕರ ಸಹ ಬಲಿಯರ್ಪಿಸಲು ಸಿದ್ಧರೆಂದು ವಾಗ್ದಾನ ಮಾಡುತ್ತಾರೆ. ಯಾರಿಂದ ಪದೇ ಪದೇ ಪ್ರತಿಜ್ಞೆ ಮಾಡಿಸಿ ತಮ್ಮ ಧರ್ಮ ಮತ್ತು ದೇಶಕ್ಕೋಸ್ಕರ ಸರ್ವತ್ಯಾಗಕ್ಕೆ ಸದಾ ಸಿದ್ಧರಾಗಲು ಯಾವಾಗಲೂ ನೆನಪಿಸಲಾಗುತ್ತಿದೆಯೋ ಅವರಿಗಿಂತ ಹೆಚ್ಚು ನಿಷ್ಠಾವಂತ ನಾಗರಿಕರಾಗಲು ಬೇರೆ ಯಾರಿಗೆ ತಾನೆ ಸಾಧ್ಯ?

ಕೆಲವು ಜನರ ಮನಸ್ಸಿನಲ್ಲಿ ಒಂದು ಪ್ರಶ್ನೆ ಉದ್ಭವಿಸಬಹುದಾಗಿದೆ: ಜರ್ಮನಿಗೆ ವಲಸೆ ಬಂದಿರುವ ಮುಸ್ಲಿಮರಲ್ಲಿ ಬಹುತೇಕ ಜನರು ಪಾಕಿಸ್ತಾನ, ಟರ್ಕಿ ಮತ್ತಿತರ ಏಶಿಯನ್ ದೇಶಗಳಿಂದ ಬಂದವರಾಗಿರುತ್ತಾರೆ. ಸಂದರ್ಭ ಬಂದಾಗ ಅವರು ಜರ್ಮನಿಗೆ ಬದಲಾಗಿ ತಮ್ಮ ಮೂಲ ದೇಶಕ್ಕೋಸ್ಕರ ಬಲಿಯರ್ಪಿಸಲು ಸಿದ್ಧರಾಗಲಾರರೆ? ನಾನು ಸ್ಪಷ್ಟ ಪಡಿಸಲು ಬಯಸುವುದೇನೆಂದರೆ, ಒಬ್ಬನು ಜರ್ಮನಿಯ ನಾಗರಿಕತೆ ಪಡೆದರೆ ಅಥವಾ ಬೇರೆ ಒಂದು ದೇಶದ ನಾಗರಿಕತೆ ಪಡೆದರೆ ಅವನು ಆಯಾ ದೇಶದ ಪೂರ್ಣ ಪೌರನಾಗುತ್ತಾನೆ. ಇದೇ ಅಂಶವನ್ನು ನಾನು ಕೋಬ್ಲೆನ್ಝ್‌ನ

ಜರ್ಮನ್ ಮಿಲಿಟರಿ ಹೆಡ್‌ಕ್ವಾರ್ಟರ್ಸ್‌ನಲ್ಲಿ ಈ ವರ್ಷದ ಆರಂಭದಲ್ಲಿ ನೀಡಿದ ಭಾಷಣದಲ್ಲಿ ಸ್ಪಷ್ಟಪಡಿಸಿರುವೆನು. ಜರ್ಮನಿಯಲ್ಲಿ ಪೌರತ್ವ ಪಡೆದ ವಲಸೆಗಾರನ ಮೂಲದೇಶದ ವಿರುದ್ಧ ಜರ್ಮನ್ ಯುದ್ಧ ಪ್ರಾರಂಭಿಸಿದರೆ ಆ ವಲಸೆಗಾರ ಹೇಗೆ ವರ್ತಿಸಬೇಕು ಎಂದು ನಾನು ಆ ಭಾಷಣದಲ್ಲಿ ವಿಶದೀಕರಿಸಿದ್ದೇನೆ. ಜರ್ಮನ್ ನಾಗರಿಕತೆ ಪಡೆದ ವಲಸೆಗಾರನಿಗೆ ತನ್ನ ಮೂಲ ದೇಶದ ಬಗ್ಗೆ ಸಹಾನುಭೂತಿ ಇದ್ದರೆ ಮತ್ತು ತಾನು ಜರ್ಮನಿಗೆ ಹಾನಿಯಾಗುವಂತೆ ವರ್ತಿಸುವ ಸಂಭವವಿದ್ದರೆ ಅವನು ಕೂಡಲೆ ತನ್ನ ಜರ್ಮನ್ ಪೌರತ್ವ ಅಥವಾ ವಲಸೆಗಾರ ಸ್ಥಾನಮಾನ ತ್ಯಜಿಸಿ ತನ್ನ ಮೂಲ ದೇಶಕ್ಕೆ ಮರಳಿ ಹೋಗಬೇಕು. ಆದರೆ ಅವನು ಜರ್ಮನಿಯಲ್ಲಿ ಇರಲು ಬಯಸುವುದಾದರೆ, ಯಾವುದೇ ರೀತಿಯಲ್ಲಿ ಜರ್ಮನಿಯ ಬಗ್ಗೆ ನಿಷ್ಠೆರಹಿತನಾಗಲು ಇಸ್ಲಾಮ್ ಅನುಮತಿಸುವುದಿಲ್ಲ. ಇದು ಪರಿಪೂರ್ಣವೂ ನಿಸ್ಸಂದಿಗ್ಧವೂ ಆಗಿರುವ ಉಪದೇಶವಾಗಿದೆ. ಇಸ್ಲಾಮ್ ಯಾವುದೇ ರೀತಿಯ ವಿದ್ರೋಹ ಚಟುವಟಿಕೆಗಳನ್ನು ಅನುಮತಿಸುವುದಿಲ್ಲ. ಪೌರನು ತನ್ನ ದೇಶದ ವಿರುದ್ಧ ಗೂಢತಂತ್ರಗಳನ್ನು ಹೂಡಲು ಮತ್ತು ಹಾನಿಯನ್ನುಂಟು ಮಾಡಲು – ಸ್ವಂತ ದೇಶದ ವಿರುದ್ಧವಾಗಲಿ, ಹೊಸದಾಗಿ ಪೌರತ್ವ ಪಡೆದ ದೇಶದ ವಿರುದ್ಧವಾಗಲಿ, ಇಸ್ಲಾಮ್ ಅನುಮತಿಸುವುದಿಲ್ಲ. ಯಾವ ದೇಶ ಒಬ್ಬನಿಗೆ ಹೊಸದಾಗಿ ಪೌರತ್ವ ನೀಡಿದೆಯೋ ಆ ದೇಶದ ವಿರುದ್ಧ ವರ್ತಿಸಿ ಹಾನಿ ಉಂಟು ಮಾಡುವುದಾದರೆ, ಅವನನ್ನು ದೇಶದ ಶತ್ರುವೆಂದೂ ದೇಶದ್ರೋಹಿ ಎಂದೂ ಪರಿಗಣಿಸಿ ದೇಶದ ನಿಯಮಗಳ ಪ್ರಕಾರ ಶಿಕ್ಷಿಸಬೇಕು.

ವಲಸೆಗಾರನಾದ ಮುಸ್ಲಿಮನಿಗೆ ಸಂಬಂಧಿಸಿ ಮೇಲಿನ ವಿಶದೀಕರಣದ ನಂತರ ಇನ್ನೊಂದು ವಿಷಯದ ಬಗ್ಗೆ ಹೇಳುತ್ತೇನೆ. ಒಬ್ಬ ಸ್ಥಳೀಯ ಜರ್ಮನ್ ನಾಗರಿಕನು ಅಥವಾ ಯಾವುದೇ ದೇಶದ ನಾಗರಿಕನಾದವನು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿ ಅವನು (ಅಥವಾ ಅವಳು) ತನ್ನ ದೇಶಕ್ಕೆ ಸಂಪೂರ್ಣ ನಿಷ್ಠನಾಗಿರುವುದು ಕಡ್ಡಾಯವಾಗಿದೆ.

ಕೆಲವು ಸಲ ಕೇಳಲಾಗುವ ಇನ್ನೊಂದು ಪ್ರಶ್ನೆ ಹೀಗಿದೆ: ಪಶ್ಚಿಮ ದೇಶಗಳಲ್ಲಿ ವಾಸಿಸುವ ಮುಸ್ಲಿಮರು, ಒಂದು ಪಾಶ್ಚಿಮಾತ್ಯ ದೇಶ ಇನ್ನೊಂದು ಮುಸ್ಲಿಮ್ ದೇಶವನ್ನು ಆಕ್ರಮಿಸುವಾಗ ಹೇಗೆ ವರ್ತಿಸಬೇಕು? ಈ ಪ್ರಶ್ನೆಗೆ ಉತ್ತರ ನೀಡುವಾಗ ನಾನು ಮೊತ್ತ ಮೊದಲು ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೇಳಿದುದನ್ನು ವಿವರಿಸುತ್ತೇನೆ. ವಾಗ್ದತ್ತ ಮಸೀಹರಾದ ಅವರು ಹೀಗೆ ಹೇಳಿದರು: ಈ ಕಾಲಘಟ್ಟದಲ್ಲಿ ಧಾರ್ಮಿಕ ಯುದ್ಧಗಳು ಸಂಪೂರ್ಣವಾಗಿ ಕೊನೆಗೊಂಡಿವೆ. ಹಿಂದಿನ ಕಾಲಘಟ್ಟಗಳಲ್ಲಿ ಮುಸ್ಲಿಮರು ಮತ್ತು ಅನ್ಯಧರ್ಮಗಳ ಜನರ ಮಧ್ಯೆ ಯುದ್ಧಗಳು ನಡೆದಿದ್ದವು. ಅಂದಿನ ಕಾಲದಲ್ಲಿ ಮುಸ್ಲಿಮೇತರರ ಉದ್ದೇಶ ಲಕ್ಷ್ಯ ಮುಸ್ಲಿಮರನ್ನು ಸಂಪೂರ್ಣವಾಗಿ ಕೊಂದು ಇಸ್ಲಾಮನ್ನು ನಾಶಪಡಿಸುವುದಾಗಿತ್ತು.

ಹಿಂದಿನ ಕಾಲಘಟ್ಟದ ಹೆಚ್ಚಿನ ಯುದ್ಧಗಳಲ್ಲಿ ಮುಸ್ಲಿಮೇತರರು ಮುಸ್ಲಿಮರನ್ನು ಮೊದಲು ಆಕ್ರಮಿಸಿದರು. ಆದುದರಿಂದ ಮುಸ್ಲಿಮರು ತಮ್ಮನ್ನು ಪ್ರತಿರೋಧಿಸಲು ಯುದ್ಧ ಮಾಡಲು ನಿರ್ಬಂಧಿತರಾದರು. ಆದರೆ ಇಂತಹ ಸನ್ನಿವೇಶ ಈಗ ಇಲ್ಲ ಎಂದು ವಾಗ್ದತ್ತ ಮಸೀಹರು ಸ್ಪಷ್ಟಪಡಿಸಿರುವರು. ಇಂದಿನ ಕಾಲದ ಸರಕಾರಗಳು ಇಸ್ಲಾಮನ್ನು ನಾಶಗೊಳಿಸುವ ಘೋಷಣೆ ಮಾಡಿ ಯುದ್ಧ ಮಾಡುವುದಿಲ್ಲ. ಬದಲಾಗಿ, ಪಶ್ಚಿಮದ ಮತ್ತು ಮುಸ್ಲಿಮೇತರರ ಬಹುತೇಕ ದೇಶಗಳಲ್ಲಿ ಧಾರ್ಮಿಕ ಸ್ವಾತಂತ್ರ್ಯ ಬಹಳ ಮಟ್ಟಿಗೆ ಇರುತ್ತದೆ. ಇಂತಹ ಸ್ವಾತಂತ್ರ್ಯ ದೊರೆತುದಕ್ಕೋಸ್ಕರ ನಮ್ಮ ಜಮಾಅತ್ ಬಹಳ ಕೃತಜ್ಞತೆ ಅರ್ಪಿಸುತ್ತದೆ.

ಅಹ್ಮದೀ ಮುಸ್ಲಿಮರು ಇಸ್ಲಾಮಿನ ಸಂದೇಶವನ್ನು ಮುಸ್ಲಿಮೇತರ ದೇಶಗಳಲ್ಲಿ ಪ್ರಚಾರ ಮಾಡಲು ಆ ದೇಶಗಳು ಅನುಮತಿ ನೀಡುತ್ತಿವೆ. ಈ ಕಾರಣದಿಂದ ಶಾಂತಿ ಮತ್ತು ಸೌಹಾರ್ದಕ್ಕೆ ಸಂಬಂಧಿಸಿದ ಇಸ್ಲಾಮಿನ ನೈಜ ಸುಂದರ ತತ್ವಗಳನ್ನು ಪಾಶ್ಚಿಮಾತ್ಯ ಲೋಕಕ್ಕೆ ಪರಿಚಯ ಮಾಡಿಕೊಡಲು ನಮಗೆ ಸಾಧ್ಯವಾಗಿದೆ. ಈ ದೇಶದ ಧಾರ್ಮಿಕ ಸ್ವಾತಂತ್ರ್ಯ ಮತ್ತು ಸಹಿಷ್ಣುಭಾವದ ಕಾರಣದಿಂದಲೇ ನಿಮ್ಮ ಮುಂದೆ ನಿಂತುಕೊಂಡು ನೈಜ ಇಸ್ಲಾಮನ್ನು ನಿಮ್ಮ ಮುಂದೆ ಇರಿಸಲು ನನಗೆ ಸಾಧ್ಯವಾಗಿದೆ. ಇಂದಿನ ಕಾಲದಲ್ಲಿ ಯಾವುದೇ ಧಾರ್ಮಿಕ ಯುದ್ಧಗಳು ನಡೆಯುತ್ತಾ ಇಲ್ಲ ಎಂಬುದು ಸ್ಪಷ್ಟವಾಗಿದೆ. ಇನ್ನೊಂದು ಸನ್ನಿವೇಶ ಹೀಗಿದೆ: ಮುಸ್ಲಿಮರು ಬಹುಸಂಖ್ಯಾತರಾಗಿರುವ ದೇಶ, ಕ್ರೈಸ್ತರು ಬಹುಸಂಖ್ಯಾತರಾಗಿರುವ ದೇಶ ಅಥವಾ ಇತರ ಧರ್ಮೀಯರು ಬಹುಸಂಖ್ಯಾತ ರಾಗಿರುವ ದೇಶ ಧಾರ್ಮಿಕವಲ್ಲದ ಯುದ್ಧದಲ್ಲಿ ಹೋರಾಡುತ್ತಿದ್ದರೆ, ಅಂತಹ ದೇಶಗಳ ಮುಸ್ಲಿಮ್ ನಾಗರಿಕ ಹೇಗೆ ಪ್ರತಿಕ್ರಿಯೆ ನೀಡಬೇಕು? ಈ ಪ್ರಶ್ನೆಗೆ ಉತ್ತರ ನೀಡಲು ಇಸ್ಲಾಮ್ ಒಂದು ಸುವರ್ಣ ತತ್ವವನ್ನು ಪ್ರತಿಪಾದಿಸಿದೆ. ದೌರ್ಜನ್ಯವನ್ನೂ ಕ್ರೂರಕೃತ್ಯಗಳನ್ನೂ ಯಾರೂ ಬೆಂಬಲಿಸಬಾರದು ಎಂಬುದೇ ಆ ತತ್ವವಾಗಿದೆ. ಆದುದರಿಂದ ಒಂದು ಮುಸ್ಲಿಮ್ ದೇಶ ದೌರ್ಜನ್ಯ ಮಾಡುತ್ತಿದ್ದರೆ ಅದನ್ನು ಅದರಿಂದ ತಡೆಯಬೇಕು. ಒಂದು ಕ್ರೈಸ್ತ ದೇಶ ದೌರ್ಜನ್ಯ ಮಾಡುತ್ತಿದ್ದರೆ ಅದನ್ನು ಸಹ ದೌರ್ಜನ್ಯದಿಂದ ತಡೆಯಬೇಕು.

ಒಬ್ಬ ನಾಗರಿಕನು ತನ್ನ ದೇಶವನ್ನು ದೌರ್ಜನ್ಯದಿಂದಲೂ ಅನ್ಯಾಯದಿಂದಲೂ ತಡೆಯುವುದು ಹೇಗೆ? ಈ ಪ್ರಶ್ನೆಯ ಉತ್ತರ ಸರಳವಾಗಿದೆ. ಇಂದಿನ ಕಾಲದಲ್ಲಿ ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಯಲ್ಲಿದೆ. ಒಬ್ಬ ನ್ಯಾಯನಿಷ್ಠನಾದ ನಾಗರಿಕನು ತನ್ನ ದೇಶದ ಸರಕಾರ ದಬ್ಬಾಳಿಕೆ ನಡೆಸುತ್ತಿದೆ ಎಂದು ಮನವರಿಕೆ ಮಾಡಿದರೆ ಅವನು ಅದರ ವಿರುದ್ಧ ಧ್ವನಿ ಎತ್ತಬೇಕು ಮತ್ತು ತನ್ನ ದೇಶಕ್ಕೆ ಸರಿಯಾದ ಮಾರ್ಗದರ್ಶನ ನೀಡಬೇಕು. ಒಂದು ಗುಂಪಿನ ಜನರು ಒಗ್ಗೂಡಿ ಸಹ ಹೀಗೆ ಮಾಡಬಹುದು. ತನ್ನ ದೇಶ ಇನ್ನೊಂದು ದೇಶದ ಪರಮಾಧಿಕಾರವನ್ನು ಭಂಗಪಡಿಸುತ್ತಿದೆ ಎಂದು ಒಬ್ಬ ನಾಗರಿಕನಿಗೆ ತಿಳಿದರೆ, ಅವನು ಅದರ ಬಗ್ಗೆ ತನ್ನ ದೇಶದ

ಸರಕಾರದ ಗಮನ ಸೆಳೆಯಬೇಕು ಮತ್ತು ತನ್ನ ಆತಂಕ ಪ್ರಕಟಿಸಬೇಕು. ಎದ್ದುನಿಂತು ಶಾಂತಿಯುತವಾಗಿ ನಿಮ್ಮ ಪ್ರತಿಭಟನೆ ಪ್ರಕಟಿಸುವುದು ವಿದ್ರೋಹಕರ ಕೃತ್ಯವಲ್ಲ. ವಾಸ್ತವದಲ್ಲಿ ಆ ನಾಗರಿಕನಿಗೆ ತನ್ನ ದೇಶದ ಬಗ್ಗೆ ಇರುವ ಪ್ರೇಮವನ್ನು ಅದು ಸೂಚಿಸುತ್ತದೆ. ಒಬ್ಬ ನ್ಯಾಯನಿಷ್ಠನಾದ ನಾಗರಿಕನು ತನ್ನ ದೇಶವು ಅಪಕೀರ್ತಿಗೆ ಗುರಿಯಾಗುವುದನ್ನು ಮತ್ತು ಅದರ ಖ್ಯಾತಿಗೆ ಅಂತರ್‍ರಾಷ್ಟ್ರೀಯ ಮಟ್ಟದಲ್ಲಿ ಹಾನಿ ತಟ್ಟುವುದನ್ನು ಸಹಿಸಲಾರನು. ಆದುದರಿಂದ ಅವನು ತನ್ನ ಪ್ರತಿಭಟನೆ ಮೂಲಕ ತನಗೆ ದೇಶದ ಬಗ್ಗೆ ಇರುವ ನಿಷ್ಠೆ ಮತ್ತು ಪ್ರೇಮವನ್ನು ಪ್ರಕಟಿಸುತ್ತಾನೆ.

ಅಂತರ್‍ರಾಷ್ಟ್ರೀಯ ಸಂಘಟನೆಗಳ ಬಗ್ಗೆ ಇಸ್ಲಾಮ್ ಕಲಿಸುವುದೇನೆಂದರೆ, ಒಂದು ದೇಶವು ಅನ್ಯಾಯಕರವಾಗಿ ಆಕ್ರಮಿಸಲ್ಪಟ್ಟರೆ ಇತರ ದೇಶಗಳು ಒಟ್ಟಿಗೆ ಸೇರಿ ಆ ಆಕ್ರಮಣವನ್ನು ತಡೆಗಟ್ಟಬೇಕು. ಆಕ್ರಮಣಕಾರಿ ದೇಶ ತನ್ನ ತಪ್ಪನ್ನರಿತು ಆಕ್ರಮಣದಿಂದ ಹಿಂದೆ ಸರಿದರೆ ಅದರ ವಿರುದ್ಧ ಕ್ರೂರ ಶಿಕ್ಷೆಗಳನ್ನೂ ಅನ್ಯಾಯಕರ ತೀರ್ಪುಗಳನ್ನೂ ಹೇರಬಾರದು. ಪ್ರತೀಕಾರಾತ್ಮಕವಾಗಿ ಅಥವಾ ಸ್ವಾರ್ಥ ಹಿತಾಸಕ್ತಿಯಿಂದ ಕ್ರಮಗಳನ್ನು ಕೈಗೊಳ್ಳಬಾರದು. ಹೀಗೆ ಇಸ್ಲಾಮ್ ಎಲ್ಲ ಸಂಭಾವ್ಯ ಸನ್ನಿವೇಶಗಳನ್ನು ಸರಿಪಡಿಸಲು ಪರಿಹಾರ ಮಾರ್ಗಗಳನ್ನು ಸೂಚಿಸುತ್ತದೆ. ಇಸ್ಲಾಮ್ ಧರ್ಮದ ಮೂಲ ಸತ್ವ ಶಾಂತಿಯನ್ನು ಹರಡಬೇಕೆಂದಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮುಸ್ಲಿಮನನ್ನು ಹೀಗೆ ವರ್ಣಿಸಿದ್ದಾರೆ: ಯಾರ ಕೈಯಿಂದಲೂ ನಾಲಗೆಯಿಂದಲೂ ಅನ್ಯ ಶಾಂತಿಪ್ರಿಯರು ಸುರಕ್ಷಿತರಾಗಿರುವರೋ ಅವನೇ ಮುಸ್ಲಿಮನು. ನಾನು ಇದರ ಮೊದಲು ಹೇಳಿದಂತೆ, ಇಸ್ಲಾಮ್ ಉಪದೇಶಿಸುವುದೇನೆಂದರೆ, ನೀವು ಎಂದೂ ದೌರ್ಜನ್ಯವನ್ನು ಬೆಂಬಲಿಸಬಾರದು. ಇದು ಎಂತಹ ಸುಂದರ ವಿವೇಕಭರಿತ ಉಪದೇಶವೆಂದರೆ, ಇದನ್ನು ಅನುಸರಿಸುವ ನೈಜ ಮುಸ್ಲಿಮನು, ಅವನು ಯಾವ ದೇಶದಲ್ಲಿ ವಾಸಿಸುತ್ತಿದ್ದರೂ ಗೌರವಾನ್ವಿತನಾಗುವನು. ಎಲ್ಲ ಪ್ರಾಮಾಣಿಕರೂ ಸಭ್ಯರೂ ಇಂತಹ ಶಾಂತಿಪ್ರಿಯರು ತಮ್ಮ ಸಮಾಜದಲ್ಲಿರಬೇಕೆಂದು ನಿಸ್ಸಂಶಯವಾಗಿ ಬಯಸುವರು.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮುಸ್ಲಿಮರಿಗೆ ಅನುಸರಿಸಲು ಇನ್ನೊಂದು ಸುಂದರ ಉಪದೇಶ ನೀಡಿರುವರು. ಸತ್ಯವಿಶ್ವಾಸಿಯಾದವನು ಯಾವಾಗಲೂ ಉತ್ತಮವಾದುದನ್ನೂ ಪರಿಶುದ್ಧವಾದುದನ್ನೂ ಹುಡುಕುತ್ತಾ ಇರಬೇಕೆಂದು ಅವರು ಕಲಿಸಿದರು. ಎಲ್ಲಿಯಾದರೂ ಜಾಣ್ಮೆಭರಿತ ಮಾತು ಅಥವಾ ಯಾವುದಾದರೂ ಶ್ರೇಷ್ಠವಾದುದನ್ನು ಒಬ್ಬ ಸತ್ಯವಿಶ್ವಾಸಿ ಕಂಡರೆ ಅವನು ಅದನ್ನು ತನ್ನ ಸ್ವಂತ ಹಕ್ಕು ಎಂಬಂತೆ ಕೈಗೆತ್ತಿಕೊಳ್ಳಬೇಕು. ಒಬ್ಬನು ತನಗೆ ವಾರೀಸುದಾರಿಕೆಯಿಂದ ದೊರಕಬಹುದಾದ ಸ್ವತ್ತನ್ನು ಪಡೆದು ಅದರಿಂದ ಲಾಭಪಡೆಯಲು ಪ್ರಯತ್ನಿಸುವ ಹಾಗೆಯೇ ಅವನು ಉತ್ತಮ ನಡೆವಳಿಕೆಗಳಿಂದಲೂ ಲಾಭ ಪಡೆಯಲು ಪ್ರಯತ್ನಿಸಬೇಕು. ವಲಸೆ ಬಂದ ಜನರು ಸ್ಥಳೀಯರೊಂದಿಗೆ ಸಮನ್ವಯತೆ ಹೊಂದುವ ಬಗ್ಗೆ ಆತಂಕಗಳಿರುವಾಗ ಇದು ಎಷ್ಟು ಪರಿಪೂರ್ಣವೂ ಸುಂದರವೂ ಆಗಿರುವ

ಮಾರ್ಗದರ್ಶಕ ಸೂತ್ರವಾಗಿದೆ! ಮುಸ್ಲಿಮರಿಗೆ ಹೀಗೆ ಕಲಿಸಲಾಗಿದೆ: ಅವರು ಎಲ್ಲಿಗೆ ವಲಸೆ ಹೋಗಿರುವರೋ ಅಲ್ಲಿನ ಜನರೊಂದಿಗೆ ಭಾವೈಕ್ಯ ಹೊಂದಲು ಹಾಗೂ ಅವರು ಮತ್ತು ಸ್ಥಳೀಯ ಜನರು ಪರಸ್ಪರ ಗೌರವಿಸಲು ಆವಶ್ಯಕವಾದುದೇನೆಂದರೆ, ಅವರು ಎಲ್ಲ ದೇಶಗಳ, ಎಲ್ಲ ಪ್ರದೇಶಗಳ, ಎಲ್ಲ ನಗರಗಳ ಮತ್ತು ಎಲ್ಲ ಸಮಾಜಗಳ ಉತ್ತಮ ಮೌಲ್ಯಗಳನ್ನು ಮನವರಿಕೆ ಮಾಡಿಕೊಳ್ಳಬೇಕು ಹಾಗೂ ಅವುಗಳನ್ನು ತಮ್ಮ ವೈಯಕ್ತಿಕ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಈ ಉಪದೇಶ ಅನ್ಯೋನ್ಯತೆಯನ್ನೂ ಪರಸ್ಪರ ನಂಬಿಕೆಯನ್ನೂ ಪ್ರೀತಿಯನ್ನೂ ವರ್ಧಿಸುತ್ತದೆ. ನಿಶ್ಚಯವಾಗಿಯೂ ಒಬ್ಬ ನಿಜವಾದ ಸತ್ಯವಿಶ್ವಾಸಿಗಿಂತ ಹೆಚ್ಚು ಶಾಂತಿಪ್ರಿಯನು ಬೇರೆ ಯಾರೂ ಇಲ್ಲ. ಸತ್ಯವಿಶ್ವಾಸಿ ತನ್ನ ಧರ್ಮದ ಆಜ್ಞೆಗಳನ್ನು ಈಡೇರಿಸುತ್ತಾನಲ್ಲದೆ ತಾನಿರುವ ದೇಶದ, ಸಮಾಜದ ಮತ್ತು ಇತರ ಸಮಾಜಗಳ ಉತ್ತಮ ಗುಣಗಳನ್ನು ತನ್ನಲ್ಲಿ ಅಳವಡಿಸಲು ಪ್ರಯತ್ನಿಸುತ್ತಾನೆ. ಶಾಂತಿ ಮತ್ತು ಭದ್ರತೆಯನ್ನು ಅವನಿಗಿಂತ ಮಿಗಿಲಾಗಿ ಹರಡಲು ಯಾರಿಗೆ ತಾನೆ ಸಾಧ್ಯ?

ಇಂದಿನ ಕಾಲದಲ್ಲಿ ಲಭ್ಯವಾಗಿರುವ ಸಂಪರ್ಕ ಮಾಧ್ಯಮಗಳ ಕಾರಣದಿಂದ ಲೋಕವು ಇಂದು ಒಂದು ಜಾಗತಿಕ ಗ್ರಾಮ ಎಂದು ಕರೆಯಲ್ಪಡುತ್ತದೆ. ಒಂದು ಸಾವಿರದ ನಾಲ್ಕುನೂರು ವರ್ಷಗಳಿಗಿಂತ ಹಿಂದೆ ಇದರ ಬಗ್ಗೆ ಹಝ್ರತ್ ಪೈಗಂಬರರು(ಸ) ಭವಿಷ್ಯ ನುಡಿದಿದ್ದರು. ಲೋಕವು ಒಂದಾಗುವುದೆಂದೂ ದೂರಗಳು ಕಡಿತಗೊಳ್ಳುವುವು ಎಂದೂ ಹಝ್ರತ್ ಪೈಗಂಬರರು(ಸ) ಹೇಳಿದ್ದರು. ಶೀಘ್ರವಾದ ಮತ್ತು ಆಧುನಿಕ ಸಂಪರ್ಕ ಸಾಧನಗಳ ಕಾರಣದಿಂದ ಜನರು ಲೋಕವನ್ನು ಸಂಪೂರ್ಣವಾಗಿ ಕಾಣಲು ಸಾಧ್ಯವಾಗುವುದೆಂದೂ ಹಝ್ರತ್ ಪೈಗಂಬರರು(ಸ) ಹೇಳಿದ್ದರು. ವಾಸ್ತವದಲ್ಲಿ ಇದು ಪವಿತ್ರ ಖುರ್‌ಆನಿನಲ್ಲಿರುವ ಭವಿಷ್ಯವಾಣಿ ಆಗಿದೆ. ಹಝ್ರತ್ ಪೈಗಂಬರರು(ಸ) ಅದನ್ನು ವಿಶದೀಕರಿಸಿದರು. ಇಂತಹ ಕಾಲಘಟ್ಟದಲ್ಲಿ ಜನರು ಪರಸ್ಪರ ಒಳ್ಳೆಯ ಮೌಲ್ಯಗಳನ್ನು ಹಂಚಿಕೊಳ್ಳಬೇಕೆಂದೂ ಅವುಗಳನ್ನು ತಮ್ಮ ಕಳೆದುಹೋದ ಸಂಪತ್ತಿನ ಹಾಗೆ ಎತ್ತಿಕೊಳ್ಳಬೇಕೆಂದೂ ಹೇಳಿರುವರು. ಇದರ ಅರ್ಥ, ಎಲ್ಲ ಒಳಿತುಗಳನ್ನು ಹೊಂದಬೇಕೆಂದೂ ಕೆಡುಕುಗಳನ್ನು ತ್ಯಜಿಸಬೇಕೆಂದೂ ಆಗಿದೆ. ಪವಿತ್ರ ಖುರ್‌ಆನ್, ನಿಜವಾದ ಮುಸ್ಲಿಮನು ಒಳಿತನ್ನು ಉಪದೇಶಿಸುತ್ತಾನೆಂದೂ ಕೆಡುಕಿನಿಂದ ತಡೆಯುತ್ತಾನೆಂದೂ ಹೇಳಿದೆ. ಇಂತಹ ವಿಷಯಗಳನ್ನು ಮನವರಿಕೆ ಮಾಡಿಕೊಂಡರೆ ಯಾವ ದೇಶ ಅಥವಾ ಸಮಾಜ ಇಂತಹ ಸ್ವಭಾವಗುಣಗಳನ್ನು ಹೊಂದಿದ ಶಾಂತಿಪ್ರಿಯರಾದ ಮುಸ್ಲಿಮರು ಅಥವಾ ಇಸ್ಲಾಮ್ ತಮ್ಮೊಂದಿಗೆ ಇರುವುದನ್ನು ತಾವು ಸಹಿಸಲಾರೆವು ಎಂದು ಹೇಳಲು ಸಾಧ್ಯ? ಕಳೆದ ವರ್ಷ ಬರ್ಲಿನ್ ನಗರದ ಮೇಯರನ್ನು ಭೇಟಿಯಾಗುವ ಸಂದರ್ಭ ಒದಗಿ ಬಂತು. ನಾನು ಅವರೊಂದಿಗೆ ಹೀಗೆ ಹೇಳಿದೆ: ಇಸ್ಲಾಮ್ ಕಲಿಸುವುದೇನೆಂದರೆ, ಪ್ರತಿಯೊಂದು ಜನಾಂಗದ ಉತ್ತಮ ಮೌಲ್ಯಗಳನ್ನು ನಿಮ್ಮ ಸ್ವಂತ ಆಸ್ತಿಯ ಹಾಗೆ ತೆಗೆದುಕೊಳ್ಳಬೇಕು. ಇದಕ್ಕೆ ಉತ್ತರವಾಗಿ ಅವರು ಹೇಳಿದರು: ನೀವು ಈ ಉಪದೇಶ ಪ್ರಕಾರ ವರ್ತಿಸಿದರೆ ಲೋಕವು ಸಂಪೂರ್ಣವಾಗಿ ನಿಮ್ಮೊಂದಿಗೆ ಕೈ

ಜೋಡಿಸುವುದು ಮತ್ತು ನಿಮಗೆ ಬೆಂಬಲ ನೀಡುವುದು.

ನನಗೆ ಆಶ್ಚರ್ಯ ಮತ್ತು ದುಃಖ ಉಂಟಾದ ಒಂದು ಸಮಾಚಾರವೇನೆಂದರೆ, ಜರ್ಮನಿಯ ಕೆಲವು ಪ್ರದೇಶಗಳ ಜನರು ಹೇಳುತ್ತಾರೆ: "ಮುಸ್ಲಿಮರಿಗಾಗಲಿ ಇಸ್ಲಾಮಿಗಾಗಲಿ ಜರ್ಮನಿಯ ಸಮಾಜದೊಂದಿಗೆ ಏಕೀಕರಣ ಹೊಂದಲು ಸಾಧ್ಯವಿಲ್ಲ." ಒಂದು ವಿಷಯ ಖಂಡಿತವಾಗಿಯೂ ಸತ್ಯವಾಗಿದೆ. ಭೀಕರವಾದಿಗಳು ಅಥವಾ ತೀವ್ರವಾದಿಗಳು ಪ್ರತಿಪಾದಿಸುವ ಇಸ್ಲಾಮ್‌ನೊಂದಿಗೆ ಜರ್ಮನ್ ದೇಶದ ಅಥವಾ ಬೇರೆ ಯಾವುದೇ ದೇಶದ ಸಮಾಜಕ್ಕೆ ಸಮನ್ವಯತೆ ಹೊಂದಲು ಸಾಧ್ಯವಿಲ್ಲ. ನಿಶ್ಚಯವಾಗಿಯೂ ಒಂದು ಕಾಲ ಬರಲಿದೆ. ಆಗ ತೀವ್ರವಾದಿಗಳ ಸಿದ್ಧಾಂತಗಳ ವಿರುದ್ಧ ಮುಸ್ಲಿಮ್ ದೇಶಗಳಲ್ಲೂ ಪ್ರತಿಭಟನೆಯ ಧ್ವನಿ ಕೇಳಿಸುವುದು. ಅದೇನೇ ಇದ್ದರೂ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಉಪದೇಶಿಸಿದ ನೈಜ ಇಸ್ಲಾಮ್ ಖಂಡಿತವಾಗಿಯೂ ಪ್ರಾಮಾಣಿಕರಾದ ಸಭ್ಯ ಜನರನ್ನು ಯಾವಾಗಲೂ ಆಕರ್ಷಿಸುತ್ತಾ ಇರುವುದು. ಇಂದಿನ ಕಾಲಘಟ್ಟದಲ್ಲಿ ಇಸ್ಲಾಮಿನ ಮೂಲ ತತ್ವಗಳನ್ನು ಪುನಶ್ಚೇತನಗೊಳಿಸಲು ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸೇವಕನಾಗಿ ವಾಗ್ದತ್ತ ಮಸೀಹರನ್ನು(ಅ) ಕಳುಹಿಸಿದನು. ಅವರು ಸ್ಥಾಪಿಸಿದ ಸಂಘಟನೆ ನೈಜ ಇಸ್ಲಾಮನ್ನು ಆಚರಣೆಗೆ ತರುತ್ತದೆ ಮತ್ತು ಅದರ ಸರಿಯಾದ ಸಂದೇಶವನ್ನು ಅನ್ಯರಿಗೆ ಉಪದೇಶಿಸುತ್ತದೆ.

ನಾನು ಸ್ಪಷ್ಟಪಡಿಸಲು ಬಯಸುತ್ತೇನೆ. ನೈಜ ಇಸ್ಲಾಮ್ ಯಾವುದೇ ಸಮಾಜದೊಂದಿಗೆ ಹೊಂದಾಣಿಕೆ ಹೊಂದಲಾರರೆಂದು ಹೇಳುವುದನ್ನು ಯಾರೂ ಸಾಬೀತುಗೊಳಿಸಲಾರರು. ನೈಜ ಇಸ್ಲಾಮ್ ಸಾತ್ವಿಕತೆಯನ್ನು ಹರಡುತ್ತದೆ. ಎಲ್ಲ ವಿಧಗಳ ಕೆಡುಕುಗಳನ್ನು ತಡೆಯುತ್ತದೆ. ನೈಜ ಇಸ್ಲಾಮ್ ಹೇಳುವುದೇನೆಂದರೆ, ದೌರ್ಜನ್ಯ ಮತ್ತು ಕ್ರೌರ್ಯವನ್ನು ಅವು ಎಲ್ಲಿದ್ದರೂ ತಡೆಗಟ್ಟಬೇಕು. ಆದುದರಿಂದ ಭಾವೈಕ್ಯ ಹೊಂದದಿರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನೈಜ ಇಸ್ಲಾಮ್ ಒಂದು ಅಯಸ್ಕಾಂತದ ಹಾಗೆ ಸಮಾಜವನ್ನು ತನ್ನ ಕಡೆಗೆ ಸೆಳೆಯುತ್ತದೆ. ಇಸ್ಲಾಮ್ ಉಪದೇಶಿಸುವುದೇನೆಂದರೆ, ವ್ಯಕ್ತಿ ತನಗೋಸ್ಕರ ಶಾಂತಿಯನ್ನು ಆಶಿಸಿ ಅದರ ಬಗ್ಗೆ ಕಠಿಣ ಪರಿಶ್ರಮ ನಡೆಸಬೇಕಲ್ಲದೆ ಇತರರಿಗೂ ಶಾಂತಿ ಮತ್ತು ಸಾಮರಸ್ಯ ಹರಡಲು ಪೂರ್ಣ ಪ್ರಯತ್ನ ಮಾಡಬೇಕು. ಇಂತಹ ನಿಸ್ವಾರ್ಥ ಮನೋಭಾವ ಲೋಕದಲ್ಲಿ ಶಾಂತಿ ಸ್ಥಾಪಿಸಲು ಆವಶ್ಯಕವಾಗಿದೆ. ಇಂತಹ ಉಪದೇಶಗಳನ್ನು ಮೆಚ್ಚದ ಮತ್ತು ಅಂಗೀಕರಿಸದ ಯಾವುದಾದರೂ ಸಮಾಜವಿರಲು ಸಾಧ್ಯವೇ? ಒಂದು ಉತ್ತಮ ಸಮಾಜ ತನ್ನೊಳಗೆ ಅನೈತಿಕತೆ ಮತ್ತು ಕೆಡುಕು ಹರಡುವುದನ್ನು ಎಂದೂ ಇಚ್ಛಿಸಲಾರದು. ಒಳಿತು ಮತ್ತು ಶಾಂತಿಗೆ ಪ್ರೋತ್ಸಾಹ ನೀಡುವುದನ್ನು ಅದು ವಿರೋಧಿಸಲಾರದು.

"ಒಳಿತು" ಎಂದರೇನೆಂದು ವಿಶದೀಕರಿಸುವ ವಿಷಯದಲ್ಲಿ ಧಾರ್ಮಿಕ ಮನೋಭಾವದ ವ್ಯಕ್ತಿ ಮತ್ತು ಧಾರ್ಮಿಕ ಮನೋಭಾವ ಇಲ್ಲದ ವ್ಯಕ್ತಿ ಮಧ್ಯೆ

ಭಿನ್ನಾಭಿಪ್ರಾಯಗಳಿರಬಹುದು. ಇಸ್ಲಾಮ್ ಪ್ರತಿಪಾದಿಸುವ ಒಳಿತು ಮತ್ತು ಸುಗುಣಗಳಲ್ಲಿ ಎರಡು ಮುಖ್ಯ ಸದ್ಗುಣಗಳಿವೆ. ಅವುಗಳ ಮೂಲಕ ಇತರ ಉತ್ತಮ ಗುಣಗಳು ಹೊರಹೊಮ್ಮುತ್ತವೆ. ಅವುಗಳಲ್ಲಿ ಒಂದು, ಸರ್ವಶಕ್ತನಾದ ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸುವುದಾಗಿದೆ. ಇನ್ನೊಂದು, ಮಾನವರಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸುವುದಾಗಿದೆ. ಸರ್ವಶಕ್ತನಾದ ದೇವನ ಹಕ್ಕುಗಳ ಬಗ್ಗೆ ಧಾರ್ಮಿಕ ಮನುಷ್ಯ ಮತ್ತು ಧರ್ಮರಹಿತ ಮನುಷ್ಯನ ಮಧ್ಯೆ ಅಭಿಪ್ರಾಯ ವ್ಯತ್ಯಾಸಗಳು ಇರಬಹುದಾದರೂ ಮಾನವರ ಹಕ್ಕುಗಳಿಗೆ ಸಂಬಂಧಿಸಿ ಅವರಿಬ್ಬರ ಮಧ್ಯೆ ಭಿನ್ನಾಭಿಪ್ರಾಯಗಳು ಇರಲಾರವು. ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳೆಂದರೆ, ಆರಾಧನೆ ಮಾಡುವುದು. ಎಲ್ಲ ಧರ್ಮಗಳು ದೇವನನ್ನು ಆರಾಧಿಸುವುದರ ಬಗ್ಗೆ ಮಾರ್ಗದರ್ಶನ ನೀಡುತ್ತವೆ. ಮಾನವರ ಹಕ್ಕುಗಳಿಗೆ ಸಂಬಂಧಿಸಿ ಧರ್ಮಗಳೂ ಸಮಾಜಗಳೂ ಮಾನವರಿಗೆ ಶಿಕ್ಷಣ ನೀಡಿವೆ. ಇಸ್ಲಾಮ್ ಮಾನವರ ಹಕ್ಕುಗಳ ಬಗ್ಗೆ ಬಹಳ ವಿಸ್ತಾರವಾಗಿ ವಿವರಿಸಿದೆ. ಅವುಗಳನ್ನೆಲ್ಲ ಈಗ ವಿವರಿಸಲು ಸಮಯ ಸಾಲದು. ಆದರೆ ಇಸ್ಲಾಮ್ ಮಾನವರಿಗೆ ಸಂಬಂಧಿಸಿ ಸಮಾಜದಲ್ಲಿ ಶಾಂತಿ ಸ್ಥಾಪಿಸಲು ಪ್ರತಿಪಾದಿಸಿದ ಮುಖ್ಯ ಹಕ್ಕುಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುವೆನು.

ಅನ್ಯರ ಭಾವನೆಗಳನ್ನು ಗೌರವಿಸಬೇಕೆಂದು ಇಸ್ಲಾಮ್ ಉಪದೇಶಿಸುತ್ತದೆ. ಧಾರ್ಮಿಕ ಭಾವನೆಗಳು ಮತ್ತು ಇತರ ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದ ಮನೋಭಾವಗಳು ಇದರಲ್ಲಿ ಸೇರುತ್ತವೆ. ಒಬ್ಬ ಮುಸ್ಲಿಮ್ ಮತ್ತು ಒಬ್ಬ ಯಹೂದಿಯ ಮಧ್ಯೆ ಧಾರ್ಮಿಕ ವಾದ – ವಿವಾದ ಉಂಟಾದಾಗ ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಯಹೂದಿಯ ಭಾವನೆಗೆ ನೋವಾಗದಂತೆ ಅವನನ್ನು ಬೆಂಬಲಿಸಿದರು. ತಾನು ಅಂತಿಮ ನಿಯಮಸಂಹಿತೆ ತಂದ ಅತ್ಯಂತ ಶ್ರೇಷ್ಠ ಪ್ರವಾದಿಯಾಗಿದ್ದರೂ ಯಹೂದಿಯೊಂದಿಗೆ ವಾದಿಸುವಾಗ ತನ್ನನ್ನು ಮೋಶೆ ಪ್ರವಾದಿಗಿಂತ ಶ್ರೇಷ್ಠನೆಂದು ಹೇಳಬೇಕಾಗಿಲ್ಲ ಎಂದು ಅವರು ಮೇಲೆ ಉಲ್ಲೇಖಿಸಿದ ಮುಸ್ಲಿಮನೊಂದಿಗೆ ಹೇಳಿದರು. ಈ ರೀತಿ ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಅನ್ಯರ ಭಾವನೆಗಳನ್ನು ಗೌರವಿಸಿದರು ಮತ್ತು ಸಮಾಜದಲ್ಲಿ ಶಾಂತಿಭಂಗವಾಗದಂತೆ ನೋಡಿಕೊಂಡರು.

ಇಸ್ಲಾಮ್ ಉಪದೇಶಿಸುವ ಇನ್ನೊಂದು ಮಹತ್ತಾದ ತತ್ವ, ಬಡವರ ಮತ್ತು ಶೋಷಣೆಗೆ ಗುರಿಯಾದವರ ಹಕ್ಕುಗಳನ್ನು ಈಡೇರಿಸಬೇಕೆಂದಾಗಿದೆ. ಬಡವರ ಸಾಮಾಜಿಕ ಸ್ಥಿತಿಯನ್ನು ಸುಧಾರಣೆ ಮಾಡಲು ಸಂದರ್ಭಗಳನ್ನು ಅನ್ವೇಷಿಸಬೇಕೆಂದು ಇಸ್ಲಾಮ್ ಉಪದೇಶಿಸುತ್ತದೆ. ಬಡವರಿಗೆ ನಿಸ್ವಾರ್ಥ ಸೇವೆ ಸಲ್ಲಿಸಬೇಕು. ಅವರನ್ನು ಯಾವುದೇ ರೀತಿಯಲ್ಲಿ ಶೋಷಿಸಬಾರದು. ದುರದೃಷ್ಟಕರವಾಗಿ ಇಂದಿನ ಕಾಲದಲ್ಲಿ ಬಡವರಿಗೆ 'ಸಹಾಯ' ಮಾಡುವ ಯೋಜನೆಗಳು ವಾಸ್ತವಿಕವಾಗಿ ಸಾಲದ ರೂಪದಲ್ಲಿರುತ್ತವೆ ಮತ್ತು ಬಡ್ಡಿ ಜೊತೆ ಸಹಾಯಧನವನ್ನು ಮರಳಿಸಬೇಕಾಗುತ್ತದೆ. ಉದಾಹರಣೆಗೆ, ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಲ ನೀಡಲಾಗುತ್ತಿದೆ ಮತ್ತು ಜನರಿಗೆ ವ್ಯಾಪಾರ ಪ್ರಾರಂಭಿಸಲು ಸಾಲ ನೀಡಲಾಗುತ್ತಿದೆ. ಇಂತಹ ಸಾಲ ಮರುಪಾವತಿ

ಮಾಡಲು ಅನೇಕ ವರ್ಷಗಳು ಅಥವಾ ದಶಕಗಳು ಬೇಕಾಗುತ್ತವೆ. ಅನೇಕ ವರ್ಷ ಸಾಲ ಮರುಪಾವತಿಗೆ ಹೋರಾಟ ನಡೆಸಲಾಗುತ್ತದೆ. ಅದರ ಮಧ್ಯೆ ಆರ್ಥಿಕ ಮುಗ್ಗಟ್ಟು ಪ್ರಾರಂಭವಾದರೆ ಅವರು ಪಡಕೊಂಡ ಸಾಲ ಅದರ ಪ್ರಾರಂಭದ ಘಟ್ಟದಲ್ಲಿದ್ದಷ್ಟು ಅಥವಾ ಅದಕ್ಕಿಂತ ಬಹಳ ಹೆಚ್ಚಾಗಿರುತ್ತದೆ. ನಾವು ಇಂತಹ ಅಸಂಖ್ಯಾತ ಉದಾಹರಣೆಗಳನ್ನು ಲೋಕದ ಅನೇಕ ಪ್ರದೇಶಗಳು ಆರ್ಥಿಕ ಮುಗ್ಗಟ್ಟಿನ ಸಂಕಷ್ಟಕ್ಕೆ ತುತ್ತಾದಾಗ ಕಳೆದ ಕೆಲವು ವರ್ಷಗಳಲ್ಲಿ ಕಂಡಿದ್ದೇವೆ ಅಥವಾ ಅವುಗಳ ಬಗ್ಗೆ ಆಲಿಸಿದ್ದೇವೆ.

ಇಸ್ಲಾಮ್ ಧರ್ಮದ ವಿರುದ್ಧ ಸಾಮಾನ್ಯವಾಗಿ ಮಾಡಲಾಗುವ ಒಂದು ದೋಷಾರೋಪ ಅದು ಮಹಿಳೆಯರೊಡನೆ ಒಳ್ಳೆಯ ರೀತಿಯಲ್ಲಿ ವರ್ತಿಸುವುದಿಲ್ಲ ಮತ್ತು ಅವರಿಗೆ ಸಮಾನತೆ ಇಲ್ಲ ಎಂದಾಗಿದೆ. ಈ ದೋಷಾರೋಪಕ್ಕೆ ಯಾವ ಆಧಾರವೂ ಇಲ್ಲ. ಇಸ್ಲಾಮ್ ಮಹಿಳೆಗೆ ಗೌರವವನ್ನೂ ಘನತೆಯನ್ನೂ ನೀಡಿದೆ. ನಾನು ಒಂದೆರಡು ಉದಾಹರಣೆಗಳನ್ನು ನೀಡುತ್ತೇನೆ. ಮಹಿಳೆಯರನ್ನು ಜನರು ಚರಸ್ವತ್ತುಗಳ ಹಾಗೆ ಪರಿಗಣಿಸುತ್ತಿದ್ದ ಒಂದು ಕಾಲಘಟ್ಟದಲ್ಲಿ ಇಸ್ಲಾಮ್ ಅವರಿಗೆ, ತಮ್ಮ ಪತಿ ಕೆಟ್ಟದಾಗಿ ವರ್ತಿಸಿದರೆ ವಿವಾಹ ವಿಚ್ಛೇದನೆ ಪಡೆಯುವ ಹಕ್ಕನ್ನು ನೀಡಿತು. ಅಭಿವೃದ್ಧಿ ಹೊಂದಿದ ದೇಶಗಳ ಮಹಿಳೆಯರಿಗೆ ಈ ಹಕ್ಕು ದೊರೆತದ್ದು ಕಳೆದ ಶತಮಾನದಲ್ಲಾಗಿದೆ. ಮಹಿಳೆಯರಿಗೆ ಯಾವ ಸ್ಥಾನಮಾನವೂ ಇಲ್ಲದ ಕಾಲದಲ್ಲಿ ಇಸ್ಲಾಮ್ ಮಹಿಳೆಯರಿಗೆ ವಾರೀಸು ಹಕ್ಕು ನೀಡಿತು. ಯುರೋಪಿನ ಮಹಿಳೆಯರಿಗೆ ಈ ಹಕ್ಕು ದೊರೆತದ್ದು ಅದಕ್ಕಿಂತ ಎಷ್ಟೋ ಕಾಲ ಕಳೆದ ನಂತರವಾಗಿದೆ.

ಇಸ್ಲಾಮ್ ನೆರೆಹೊರೆಯವರಿಗೂ ಕೆಲವು ಹಕ್ಕುಗಳನ್ನು ನೀಡುತ್ತದೆ. ನೆರೆಹೊರೆಯವರು ಯಾರು? ಅವರ ಹಕ್ಕುಗಳು ಏನು? ಎಂದು ಇಸ್ಲಾಮ್ ವಿಶದೀಕರಿಸುತ್ತದೆ. ನಿಮ್ಮ ಜೊತೆಗೆ ಕುಳಿತಿರುವವನು, ನಿಮ್ಮ ಮನೆಯ ಸಮೀಪದ ಮನೆಗಳು, ನಿಮಗೆ ಪರಿಚಯವಿದ್ದರೂ ಪರಿಚಯವಿಲ್ಲದಿದ್ದರೂ ನಿಮ್ಮ ಮನೆಯ ಸುತ್ತುಮುತ್ತಲಿನ ನಲ್ವತ್ತು ಮನೆಗಳ ಜನರು ನಿಮ್ಮ ನೆರೆಹೊರೆಯವರಾಗಿದ್ದಾರೆ. ನಿಮ್ಮ ಜೊತೆಗೆ ಪ್ರಯಾಣ ಮಾಡುವವರೂ ನಿಮ್ಮ ನೆರೆಹೊರೆಯವರಾಗಿದ್ದಾರೆ. ಅವರ ಬಗ್ಗೆ ಸಹ ಗಮನಕೊಡಲು ಇಸ್ಲಾಮ್ ಆಜ್ಞಾಪಿಸಿದೆ. ನೆರೆಹೊರೆಯವರ ಹಕ್ಕುಗಳ ಬಗ್ಗೆ ಎಷ್ಟು ಒತ್ತಿಹೇಳಲಾಗಿದೆ ಎಂದರೆ ಪ್ರಾಯಶಃ ಅವರು ವಾರೀಸುದಾರರಾಗಿ ಗಣಿಸಲ್ಪಡುವರೋ ಎಂಬ ಯೋಚನೆ ತನಗುಂಟಾಯಿತೆಂದು ಹಝ್ರತ್ ಪೈಗಂಬರರು[ಸ] ಹೇಳಿದರು. ಯಾರಿಂದ ನೆರೆಹೊರೆಯವರು ಸುರಕ್ಷಿತರಾಗಿಲ್ಲವೋ ಅಂತಹ ವ್ಯಕ್ತಿ ಸತ್ಯವಿಶ್ವಾಸಿ ಅಥವಾ ಮುಸ್ಲಿಮ್ ಅಲ್ಲ ಎಂದು ಸಹ ಹಝ್ರತ್ ಪೈಗಂಬರರು[ಸ] ಹೇಳಿದರು.

ಜನರ ಹಿತಕ್ಕೋಸ್ಕರ ಇಸ್ಲಾಮ್ ನೀಡುವ ಇನ್ನೊಂದು ಆದೇಶ, ಬಡವರಿಗೆ ಮತ್ತು ನಿರ್ಗತಿಕರಿಗೆ ಸಹಾಯ ನೀಡುವ ಬಗ್ಗೆ ಪರಸ್ಪರ ಸಹಕರಿಸಿ ಬಡವರ ಜೀವನ ಮಟ್ಟವನ್ನು ಸುಧಾರಿಸಬೇಕೆಂದಾಗಿದೆ. ಇಸ್ಲಾಮಿನ ಉಪದೇಶಗಳನ್ನು ಕಾರ್ಯರೂಪಕ್ಕೆ

ತರಲು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಲೋಕದ ಬಡ ದೇಶಗಳಲ್ಲಿ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣ ನೀಡುತ್ತಿದೆ. ನಾವು ಶಾಲೆಗಳನ್ನು ನಿರ್ಮಿಸಿ ನಡೆಸುತ್ತಿದ್ದೇವೆ. ಉನ್ನತ ವಿದ್ಯಾಭ್ಯಾಸಕ್ಕೋಸ್ಕರ ವಿದ್ಯಾವೇತನದ ವ್ಯವಸ್ಥೆ ಮಾಡಿ ಬಡ ವಿದ್ಯಾರ್ಥಿಗಳು ಸ್ವಂತ ಕಾಲಿನ ಮೇಲೆ ನಿಲ್ಲುವಂತೆ ಮಾಡುತ್ತಿದ್ದೇವೆ.

ಇಸ್ಲಾಮ್ ನೀಡುವ ಇನ್ನೊಂದು ಆಜ್ಞೆ ಪ್ರತಿಜ್ಞೆಗಳನ್ನು ಈಡೇರಿಸುವ ಬಗ್ಗೆಯಾಗಿದೆ. ನೀವು ಪರಸ್ಪರ ಮಾಡುವ ವಾಗ್ದಾನಗಳು ಮತ್ತು ಒಪ್ಪಂದಗಳು ಇದರಲ್ಲಿ ಸೇರಿವೆ. ಮುಸ್ಲಿಮನು ನಾಗರಿಕನಾಗಿ ತನ್ನ ದೇಶಕ್ಕೆ ನಿಷ್ಠನಾಗಿರುವ ಪ್ರತಿಜ್ಞೆಯನ್ನು ಈಡೇರಿಸಬೇಕಾಗಿದೆ. ಇದರ ಬಗ್ಗೆ ಇದಕ್ಕೆ ಮೊದಲು ವಿವರಿಸಿದ್ದೇನೆ.

ಇಸ್ಲಾಮ್ ಕರುಣೆಯಿಂದ ಭರಿತವಾದ ಸ್ನೇಹಮಯವಾದ ಧರ್ಮವೆಂದು ನಾನು ಮೇಲೆ ನೀಡಿದ ವಿವರಣೆಗಳಿಂದ ತಿಳಿಯಬಹುದಾಗಿದೆ. ಅತ್ಯಂತ ದುಃಖಕರವಾದುದೇನೆಂದರೆ, ಇಸ್ಲಾಮ್ ಲೋಕದಲ್ಲಿ ಶಾಂತಿಸ್ಥಾಪನೆ ಬಗ್ಗೆ ಎಷ್ಟು ಒತ್ತಿ ಹೇಳುತ್ತಿದೆಯೋ ಇಸ್ಲಾಮಿನ ವಿರೋಧಿಗಳೂ ಅದರ ನಿಜವಾದ ತತ್ವಗಳ ಬಗ್ಗೆ ಅಜ್ಞಾನಿಗಳಾದವರೂ ಅದರ ವಿರುದ್ಧ ನಿರಾಧಾರ ಆಪಾದನೆಗಳನ್ನು ಅಷ್ಟೇ ತೀವ್ರವಾಗಿ ಹೊರಿಸುತ್ತಾರೆ. ನಾನು ಇದರ ಮೊದಲು ಹೇಳಿದ ಹಾಗೆ, ಈ ಕಾಲಘಟ್ಟದಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಇಸ್ಲಾಮಿನ ನೈಜ ಸಂದೇಶಗಳನ್ನು ತೋರಿಸಿ ಪ್ರಚಾರ ಮಾಡುತ್ತಾ ಇದೆ. ಇಸ್ಲಾಮಿನಲ್ಲಿರುವ ಅಲ್ಪಸಂಖ್ಯಾತರಾದ ಒಂದು ವರ್ಗದ ಅಕ್ರಮಗಳನ್ನು ಆಧಾರವಾಗಿಟ್ಟುಕೊಂಡು ಇಸ್ಲಾಮಿನ ವಿರುದ್ಧ ಆಕ್ಷೇಪ ಮಾಡುವವರು ಅಂತಹ ಅಕ್ರಮಕಾರರಾದ ಜನರನ್ನು ಪ್ರಶ್ನಿಸಿ ದಂಡಿಸಬಹುದಾಗಿದೆ. ಆದರೆ ಆ ಜನರ ಅನ್ಯಾಯಭರಿತ ಉದಾಹರಣೆಗಳನ್ನು ನೀಡಿ ಇಸ್ಲಾಮಿನ ನೈಜ ತತ್ವಗಳನ್ನು ಅಪಮಾನಿಸಿ ಅಪಕೀರ್ತಿ ಮಾಡಬಾರದು.

ಇಸ್ಲಾಮಿನ ಉಪದೇಶಗಳು ಜರ್ಮನಿಗಾಗಲಿ ಇತರ ದೇಶಗಳಿಗಾಗಲಿ ಅಪಾಯಕರ ಬೆದರಿಕೆಯಾಗಿದೆ ಎಂದು ನೀವು ಭಾವಿಸಬಾರದು. ಮುಸ್ಲಿಮನಿಗೆ ಜರ್ಮನ್ ಸಮಾಜದೊಂದಿಗೆ ಭಾವೈಕ್ಯ ಹೊಂದಲು ಸಾಧ್ಯವೇ? ಇಲ್ಲವೇ? ಎಂಬ ಬಗ್ಗೆ ಚಿಂತಿತರಾಗಬೇಡಿರಿ. ನಾನು ಇದರ ಮೊದಲು ಹೇಳಿದ ಹಾಗೆ, ಇಸ್ಲಾಮಿನ ವೈಶಿಷ್ಟ್ಯವೇನೆಂದರೆ, ಮುಸ್ಲಿಮರು ಎಲ್ಲ ಒಳಿತುಗಳನ್ನು ತಮ್ಮಲ್ಲಿ ಅಳವಡಿಸಿ ಕೊಳ್ಳಬೇಕೆಂದು ಅದು ಹೇಳಿದೆ. ಆದುದರಿಂದ ನಿಸ್ಸಂಶಯವಾಗಿಯೂ ಮುಸ್ಲಿಮರಿಗೆ ಯಾವುದೇ ಸಮಾಜದೊಂದಿಗೆ ಹೊಂದಾಣಿಕೆ ಹೊಂದಲು ಮತ್ತು ಅವರೊಂದಿಗೆ ಜೀವಿಸಲು ಸಾಧ್ಯವಿದೆ. ಯಾರಾದರೂ ಇದಕ್ಕೆ ವಿರುದ್ಧವಾಗಿ ವರ್ತಿಸುತ್ತಾನಾದರೆ ಅವನು ಕೇವಲ ನಾಮ ಮಾತ್ರ ಮುಸ್ಲಿಮನಾಗಿದ್ದು ನೈಜ ಇಸ್ಲಾಮ್ ಧರ್ಮವನ್ನು ಅನುಸರಿಸದವನಾಗಿದ್ದಾನೆ. ಖಂಡಿತವಾಗಿಯೂ ಮುಸ್ಲಿಮರೊಂದಿಗೆ ಕೆಟ್ಟ ಕೆಲಸ ಮಾಡಲು ಆಜ್ಞಾಪಿಸಿದರೆ, ಸದ್ಗುಣಗಳ ಬಗ್ಗೆ ಖುರ್‌ಆನಿನ ಉಪದೇಶಗಳಿಗೆ ವಿರುದ್ಧವಾಗಿ ವರ್ತಿಸಲು ಆಜ್ಞಾಪಿಸಿದರೆ, ಸಾತ್ವಿಕತೆಯನ್ನು ಪಾಲಿಸದಿರಲು ಆಜ್ಞಾಪಿಸಿದರೆ, ಅಂತಹ

ಆಜ್ಞೆಗಳನ್ನು ಅವರು ಪಾಲಿಸಲಾರರು. ಇಂತಹ ವಿಷಯಗಳು ಸಮನ್ವಯತೆಗೆ ಸಂಬಂಧಿಸಿಲ್ಲ. ಅವು ವೈಯಕ್ತಿಕ ಧಾರ್ಮಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದುದಾಗಿರುತ್ತವೆ.

ವೈಯಕ್ತಿಕ ಧಾರ್ಮಿಕ ಸ್ವಾತಂತ್ರ್ಯದ ಉಲ್ಲಂಘನೆ ವಿರುದ್ಧ ಮುಸ್ಲಿಮರು ಮಾತ್ರವಲ್ಲ, ಎಲ್ಲ ಪ್ರಾಮಾಣಿಕ ಜನರು ಎದ್ದು ನಿಂತು ಪ್ರತಿಭಟಿಸಬೇಕು ಮತ್ತು ಯಾವುದೇ ಸಮಾಜ ಅಥವಾ ಸರಕಾರಕ್ಕೆ ವೈಯಕ್ತಿಕ ಧಾರ್ಮಿಕ ಸ್ವಾತಂತ್ರ್ಯವನ್ನು ಉಲ್ಲಂಘಿಸಲು ಹಕ್ಕು ಇಲ್ಲ ಎಂದು ಬಹಿರಂಗವಾಗಿ ಪ್ರಕಟಿಸಬೇಕು. ಜರ್ಮನಿ ಮತ್ತು ಇತರ ಅನೇಕ ದೇಶಗಳು ವಿವಿಧ ಜನಾಂಗಗಳ ಮತ್ತು ಸಂಸ್ಕೃತಿಯ ಜನರಿಗೆ ಆಶ್ರಯತಾಣವಾಗಿ ಪರಿಣಮಿಸಿದೆ. ಅವೆಲ್ಲವೂ ಸಹಿಷ್ಣುತೆಯ, ಪರಸ್ಪರ ಗೌರವಿಸುವಿಕೆಯ ಉನ್ನತ ಮಟ್ಟವನ್ನು ಕಾಪಾಡಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಪರಸ್ಪರ ಪ್ರೀತಿ ವಾತ್ಸಲ್ಯವನ್ನು ಪ್ರಕಟಿಸಿ ಶಾಂತಿಯನ್ನು ಕಾಪಾಡಲು ಈ ದೇಶಗಳು ಮಾದರಿಯಾಗಲಿ. ಲೋಕದಲ್ಲಿ ಶಾಶ್ವತ ಶಾಂತಿ ಮತ್ತು ಭದ್ರತೆಯನ್ನು ಕಾಪಾಡಲು ಮತ್ತು ಪರಸ್ಪರ ಸಹಿಷ್ಣುತೆಯ ಕೊರತೆಯ ಕಾರಣದಿಂದ ಲೋಕವು ವಿನಾಶದ ಕಡೆಗೆ ಸಾಗುವುದರಿಂದ ರಕ್ಷಿಸಲ್ಪಡಲು ಇದು ಸಹಾಯಕವಾಗುವುದು.

ಭೀಕರ ನಾಶದ ಬೆದರಿಕೆಯು ನಮ್ಮ ಮೇಲಿರುವಾಗ ನಮ್ಮನ್ನು ನಾಶದಿಂದ ರಕ್ಷಿಸಲು ಪ್ರತಿಯೊಂದು ದೇಶ, ಪ್ರತಿಯೊಬ್ಬ ವ್ಯಕ್ತಿ, ಆತ ಧರ್ಮಾವಲಂಬಿಯಾಗಿರಲಿ, ಅಲ್ಲದಿರಲಿ – ಬಹಳ ಜಾಗರೂಕತೆಯಿಂದ ಮುಂದೆ ಸಾಗಬೇಕಾಗಿದೆ. ಲೋಕದಲ್ಲಿರುವ ಎಲ್ಲ ಜನರು ಈ ವಾಸ್ತವಿಕ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಳ್ಳುವವರಾಗಲಿ.

ಕೊನೆಯದಾಗಿ, ನೀವೆಲ್ಲರೂ ಸಮಯಾವಕಾಶ ಮಾಡಿಕೊಂಡು ಇಲ್ಲಿಗೆ ಬಂದು ನನ್ನ ಮಾತುಗಳನ್ನು ಆಲಿಸಿದುದಕ್ಕೆ ನಿಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅಲ್ಲಾಹನು ನಿಮ್ಮೆಲ್ಲರನ್ನು ಅನುಗ್ರಹಿಸಲಿ.

**ನಿಮಗೆ ಧನ್ಯವಾದಗಳು.**



# ಇಸ್ಲಾಮ್
# ಶಾಂತಿ ಮತ್ತು ಕರುಣೆಯ ಧರ್ಮ

---

ಹೌಸಸ್ ಆಫ್ ಪಾರ್ಲಿಮೆಂಟ್
ಲಂಡನ್, ಯು.ಕೆ., 2013








The Deputy Prime Minister, Rt Hon Nick Clegg in discussion with Hadrat Khalifatul-Masih V[aba] House of Commons, London, 11th June 2013



The Home Secretary, Rt Hon Theresa May MP with Hadrat Khalifatul-Masih V[aba]



The Shadow Foreign Minister Rt Hon Douglas Alexander with Hadrat Khalifatul-Masih V[aba]



Rt. Hon Ed Davey MP with Hadrat Khalifatul-Masih V[aba]



Hadrat Khalifatul-Masih V[aba] received at the House of Commons by Rt Hon Ed Davey MP
London, 11th June 2013



Rt Hon Ed Davey MP escorts Hadrat Khalifatul-Masih V[aba] through Westminster Hall. House of Commons, London, 11th June 2013




Hadrat Khalifatul-Masih V[aba] delivering his historic speech to Parliamentarians, VIPs and diplomats at the House of Commons, London, 11th June 2013

# ಮುನ್ನುಡಿ

ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಸ್ಥಾಪಿತವಾಗಿ ಒಂದು ನೂರು ವರ್ಷಗಳು ತುಂಬಿದ ಸಮಾರಂಭಾಚರಣೆಯ ಅಂಗವಾಗಿ, ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನೇತಾರ ಮತ್ತು ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಲಂಡನಿನ ಹೌಸ್ ಆಫ್ ಪಾರ್ಲಿಮೆಂಟ್‌ನಲ್ಲಿ 2013 ಜೂನ್ 11ರಂದು ಭಾಷಣ ಮಾಡಿದರು.

ಈ ಶತವಾರ್ಷಿಕ ಸಮಾರಂಭ ಸಭೆಯಲ್ಲಿ 30 ಪಾರ್ಲಿಮೆಂಟ್ ಸದಸ್ಯರೂ 12 ಹೌಸ್ ಆಫ್ ಲಾರ್ಡ್ಸ್ ಸದಸ್ಯರೂ 6 ಕ್ಯಾಬಿನೆಟ್ ಸಚಿವರೂ ಬೇರೆ ಇಬ್ಬರು ಸಚಿವರೂ ಸೇರಿ 68 ಗಣ್ಯರು ಭಾಗವಹಿಸಿದ್ದರು. ಬಿ.ಬಿ.ಸಿ., ಸ್ಕೈಟಿವಿ, ಐಟಿವಿ ಸಹಿತ ಹಲವಾರು ವಾರ್ತಾ ಮಾಧ್ಯಮ ಪ್ರತಿನಿಧಿಗಳೂ ಹಾಜರಿದ್ದರು.

ಎಡ್ ಡೇವಿ ಎಂ.ಪಿ. (ಸೆಕ್ರಿಟರಿ ಆಫ್ ಸ್ಟೇಟ್ ಫೋರ್ ಎನರ್ಜಿ ಆ್ಯಂಡ್ ಕ್ಲೈಮೇಟ್ ಚೇಂಜ್), ನಿಕ್ ಕ್ಲೆಗ್ಗ್ ಎಂ.ಪಿ. (ಡಿಪ್ಯುಟಿ ಪ್ರೈಮ್ ಮಿನಿಸ್ಟರ್), ತೆರೇಸಾ ಮೇ ಎಂ.ಪಿ. (ಹೋಂ ಸೆಕ್ರಿಟರಿ), ಡಗ್ಲಾಸ್ ಅಲೆಕ್ಸಾಂಡರ್ ಎಂ.ಪಿ. (ಶಾಡೋ ಫಾರಿನ್ ಸೆಕ್ರಿಟರಿ), ಕೇತ್ ವಾಝ್ ಎಂ.ಪಿ. (ಚೇರ್‌ಮನ್ ಆಫ್ ಹೋಂ ಅಫೇರ್ಸ್ ಸೆಲೆಕ್ಟ್ ಕಮಿಟಿ), ಸಿಯೋಭೈನ್ ಮೆಕ್‌ಡೊನೋ ಎಂ.ಪಿ. (ಮಿಟ್‌ಚಾಮ್ ಆ್ಯಂಡ್ ಮೋರ್ಡೆನ್) ಮೊದಲಾದವರು ಉಪಸ್ಥಿತರಿದ್ದರು.

# ಇಸ್ಲಾಮ್ –
# ಶಾಂತಿ ಮತ್ತು ಕರುಣೆಯ ಧರ್ಮ

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್ – ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ.

ಎಲ್ಲ ಗಣ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ – ಅಲ್ಲಾಹನ ಶಾಂತಿ ಮತ್ತು ಅನುಗ್ರಹಗಳು ನಿಮ್ಮ ಮೇಲೆ ಸುರಿಯಲ್ಪಡಲಿ.

ಮೊತ್ತ ಮೊದಲು ನಾನು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ನೇಹಿತರಿಗೆ ಕೃತಜ್ಞತೆ ಅರ್ಪಿಸುತ್ತೇನೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಶತವಾರ್ಷಿಕ ಸಮಾರಂಭವನ್ನು ಆಚರಿಸುವ ಪ್ರಯುಕ್ತ ಈ ಜಮಾಅತಿನೊಂದಿಗೆ ತಮ್ಮ ಸ್ನೇಹ ಮತ್ತು ನಿಕಟ ಸಂಬಂಧವನ್ನು ಬಹಿರಂಗಗೊಳಿಸಲು ನಮ್ಮ ಸ್ನೇಹಿತರು ಈ ಸಮಾರಂಭವನ್ನು ಪಾರ್ಲಿಮೆಂಟ್ ಹೌಸ್‌ನಲ್ಲಿ ವ್ಯವಸ್ಥೆಗೊಳಿಸಿದ್ದಾರೆ. ಈ ಸಮಾರಂಭವನ್ನು ಯಶಸ್ವಿಯಾಗಿಯೂ ಪ್ರಯೋಜನಕರ ವಾಗಿಯೂ ಜರಗಿಸಲು ಇಲ್ಲಿಗೆ ಆಗಮಿಸಿರುವ ಎಲ್ಲ ಅತಿಥಿಗಳಿಗೆ ಸಹ ನಾನು ಕೃತಜ್ಞತೆ ಅರ್ಪಿಸುತ್ತೇನೆ. ನೀವು ನಿಮ್ಮ ಇತರ ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸದೆ ಈ ಕಾರ್ಯಕ್ರಮಕ್ಕೆ ಆಸಕ್ತಿಯಿಂದ ಆಗಮಿಸಿರುವುದರಿಂದ ನಾನು ಸಂತೋಷಪಡುತ್ತೇನೆ. ನಾನು ನಿಮ್ಮ ಮನೋಭಾವಕ್ಕೆ ಕೃತಜ್ಞತೆ ಅರ್ಪಿಸುತ್ತೇನೆ ಮತ್ತು ಅದನ್ನು ಮೆಚ್ಚುಗೆಯಿಂದ ಕಾಣುತ್ತೇನೆ. ಈ ಸುಂದರ ಭವ್ಯ ಭವನದಲ್ಲಿ ಕೆಲಸ ಮಾಡುತ್ತಿರುವ ಜನರು ಮತ್ತು ಸರಕಾರಿ ವಿಭಾಗಗಳು ಈ ದೇಶಕ್ಕೂ ಈ ದೇಶದ ಜನತೆಗೂ ಸೇವೆ ಮಾಡಿ ತಮ್ಮ ಕರ್ತವ್ಯಗಳನ್ನು ನೇರವೇರಿಸಲಿ ಎಂದು ಪ್ರಾರ್ಥಿಸುತ್ತೇನೆ. ಅನ್ಯ ದೇಶಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಲು, ನ್ಯಾಯಪಾಲಿಸಲು ಮತ್ತು ಎಲ್ಲ ಪಕ್ಷಗಳಿಗೆ ಪ್ರಯೋಜನಕರವಾದ ತೀರ್ಮಾನಗಳನ್ನು ಕೈಗೊಳ್ಳಲು ಅವರು ಉತ್ತಮವಾಗಿ ಪ್ರಯತ್ನಿಸುವವರಾಗಲಿ ಎಂದು ನಾನು ಶುಭಪ್ರತೀಕ್ಷೆ ಹೊಂದಿ ಪ್ರಾರ್ಥಿಸುತ್ತೇನೆ. ಇಂತಹ ಮನೋಭಾವವನ್ನು ಬೆಳೆಸಿದರೆ ಆದರಿಂದ ಉತ್ತಮ ಫಲಗಳು ಲಭಿಸುವುವು. ಪ್ರೀತಿ, ವಾತ್ಸಲ್ಯ ಮತ್ತು ಸಾಹೋದರ್ಯವೆಂಬುದೇ ಆ ಉತ್ತಮ ಫಲಗಳಾಗಿವೆ. ಅವುಗಳ ಮೂಲಕ ಲೋಕವು ಶಾಂತಿ ಮತ್ತು ಸಮೃದ್ಧಿಯ ಧಾಮವಾಗುವುದು.

ನನ್ನ ಈ ಅಭಿಲಾಷೆ ಮತ್ತು ಪ್ರಾರ್ಥನೆಯಲ್ಲಿ ಎಲ್ಲ ಅಹ್ಮದೀ ಮುಸ್ಲಿಮರು ಭಾಗಿಗಳಾಗಿದ್ದಾರೆ. ನಾವೆಲ್ಲರೂ ದೇಶಭಕ್ತರಾಗಿ ಮಾನವರೆಲ್ಲರ ಹಿತೈಷಿಗಳಾಗಬೇಕೆಂದು ದೃಢವಾಗಿ ನಂಬುತ್ತೇವೆ. ದೇಶ ಭಕ್ತಿಯು ಧಾರ್ಮಿಕ ವಿಶ್ವಾಸದ ಒಂದು ಭಾಗವಾಗಿದೆ ಎಂದು ಅಹ್ಮದೀ ಮುಸ್ಲಿಮರು ನಂಬುತ್ತಾರೆ. ಏಕೆಂದರೆ, ಹಝ್ರತ್ ಮುಹಮ್ಮದ್

ಪೈಗಂಬರರು[ಸ] ಇದರ ಬಗ್ಗೆ ಒತ್ತಿಹೇಳಿ ಆಜ್ಞಾಪಿಸಿದ್ದಾರೆ. ಆದುದರಿಂದ ನಾನು ಸ್ಪಷ್ಟಪಡಿಸಲು ಬಯಸುತ್ತೇನೆ. ಬ್ರಿಟಿಷ್ ಪ್ರಜೆಯಾದ ಅಹ್ಮದೀ ಮುಸ್ಲಿಮ್, ಆತನು ಇಲ್ಲಿ ಜನಿಸಿದವನಾಗಿದ್ದರೂ ವಿದೇಶದಿಂದ ವಲಸೆ ಬಂದು ಇಲ್ಲಿನ ಪೌರತ್ವ ಗಳಿಸಿವವನಾಗಿದ್ದರೂ ಈ ದೇಶಕ್ಕೆ ಸಂಪೂರ್ಣವಾಗಿ ನಿಷ್ಠನಾಗಿರುತ್ತಾನೆ ಮತ್ತು ಈ ದೇಶವನ್ನು ಹೃತ್ಪೂರ್ವಕವಾಗಿ ಪ್ರೀತಿಸುತ್ತಾನೆ. ಈ ಮಹಾನ್ ದೇಶ ಅಭಿವೃದ್ಧಿಯನ್ನೂ ಸಮೃದ್ಧಿಯನ್ನೂ ಗಳಿಸಬೇಕೆಂದು ಅವರೆಲ್ಲರೂ ಆಶಿಸುತ್ತಾರೆ. ಇತರ ದೇಶಗಳಿಂದ ವಲಸೆ ಬಂದು ಈ ದೇಶದಲ್ಲಿ ವಾಸಿಸುವವರು ಈ ದೇಶದ ಜನಸಂಖ್ಯೆಯ ಹದಿನಾಲ್ಕು ಹದಿನೈದು ಶತಮಾನಗಳಷ್ಟು ಎಂದು ಅಂದಾಜು ಮಾಡಲಾಗಿದೆ ಮತ್ತು ಇದು ಬಹಳ ಗಮನಾರ್ಹವಾಗಿದೆ. ಇಲ್ಲಿನ ಬ್ರಿಟಿಷ್ ಜನತೆಯ ವಿಶಾಲ ಹೃದಯ ಮತ್ತು ಸಹಿಷ್ಣುತಾ ಮನೋಭಾವವನ್ನು ಪ್ರಸ್ತಾಪಿಸಿ ಪ್ರಶಂಸಿಸದೆ ನಾನು ಮುಂದುವರಿಯಲಾರೆನು. ಅವರು ವಲಸೆಗಾರರನ್ನು ಈ ದೇಶದ ಪ್ರಜೆಗಳಾಗಿ ಅಂಗೀಕರಿಸಿ ಬ್ರಿಟಿಷ್ ಸಮಾಜದ ಭಾಗವಾಗಲು ಅನುಮತಿಸಿರುವುದು ಬ್ರಿಟಿಷ್ ಜನತೆಯ ಮಹತ್ತರವಾದ ಸದ್ಗುಣಗಳಾಗಿವೆ. ಈ ದೇಶಕ್ಕೆ ವಲಸೆ ಬಂದವರು ಈ ದೇಶದ ನಿಷ್ಠಾವಂತ ಪ್ರಜೆಗಳಾಗಬೇಕು ಮತ್ತು ಎಲ್ಲ ವಿಧಗಳ ಅಸ್ತವ್ಯಸ್ತತೆಯನ್ನೂ ಸಂಘರ್ಷವನ್ನೂ ನಿವಾರಿಸಲು ಸರಕಾರಕ್ಕೆ ಬೆಂಬಲ ನೀಡಬೇಕಾದುದು ಅವರ ನೈತಿಕ ಜವಾಬ್ದಾರಿಯಾಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿಗೆ ಸೇರಿದವರು, ಅವರು ಯಾವ ದೇಶದಲ್ಲಿ ನೆಲೆಸಿದ್ದರೂ ಈ ತತ್ವಕ್ಕೆ ಅನುಸಾರವಾಗಿ ವರ್ತಿಸುತ್ತಾರೆ.

ನಿಮಗೆ ತಿಳಿದಿರುವಂತೆ ಈ ವರ್ಷ ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಸ್ಥಾಪನೆಯ ಶತವಾರ್ಷಿಕಾಚರಣೆಯನ್ನು ನಾವು ಮಾಡುತ್ತಿದ್ದೇವೆ. ಕಳೆದ ಒಂದು ನೂರು ವರ್ಷಗಳಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಹೀಗೆ ಸಾಬೀತುಗೊಳಿಸಿದೆ: ಈ ಜಮಾಅತಿನ ಸದಸ್ಯರು ಈ ದೇಶದ ನಿಷ್ಠಾವಂತ ನಾಗರಿಕರಾಗಿ ಜೀವಿಸಿ ಎಲ್ಲ ವಿಧಗಳ ಅತಿರೇಕವಾದ, ವಿದ್ರೋಹ ಮತ್ತು ಗಲಭೆ ಗೊಂದಲಗಳಿಂದ ತಮ್ಮನ್ನು ಮುಕ್ತರನ್ನಾಗಿ ಮಾಡಿದ್ದಾರೆ. ಈ ನಿಷ್ಠೆ ಮತ್ತು ದೇಶಪ್ರೇಮಕ್ಕೆ ಮೂಲಕಾರಣ ಅಹ್ಮದಿಯಾ ಮುಸ್ಲಿಮ್ ಜಮಾಅತ್ ನೈಜ ಇಸ್ಲಾಮೀ ಧರ್ಮವನ್ನು ಅನುಸರಿಸುವ ಸಮುದಾಯವಾಗಿದೆ. ನಾವು ಯಾವಾಗಲೂ ಇಸ್ಲಾಮ್ ಧರ್ಮದ ನೈಜ ಶಾಂತಿ ಪ್ರತಿಪಾದಕ ತತ್ವಗಳನ್ನು ಲೋಕದ ಜನರ ಮುಂದೆ ನಿರಂತರವಾಗಿ ಪ್ರಸ್ತಾಪಿಸುತ್ತಾ ಇದ್ದೇವೆ ಮತ್ತು ಆ ತತ್ವಗಳು ಇಸ್ಲಾಮ್ ಧರ್ಮದ ವಾಸ್ತವಿಕ ಧರ್ಮತತ್ವಗಳು ಎಂದು ಅಂಗೀಕರಿಸಲ್ಪಡಲು ಕಠಿಣ ಪರಿಶ್ರಮ ನಡೆಸುತ್ತಾ ಇರುತ್ತೇವೆ. ಈ ಪ್ರಸ್ತಾವನೆಯ ನಂತರ ನಾನು ನನ್ನ ಭಾಷಣದ ಮುಖ್ಯ ವಿಷಯದ ಕಡೆಗೆ ಬರುತ್ತೇನೆ.

ನಮ್ಮ ಜಮಾಅತ್ ಶಾಂತಿ, ಸೌಹಾರ್ದ ಮತ್ತು ಭಾವೈಕ್ಯತೆಯನ್ನು ಪ್ರತಿಪಾದಿಸುತ್ತಿದ್ದು ನಮ್ಮ ಧ್ಯೇಯವಾಕ್ಯ **"ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ"** ಎಂದಾಗಿದೆ. ಮುಸ್ಲಿಮೇತರರಾದ ಕೆಲವರಿಗೆ ನಮ್ಮ ಬಗ್ಗೆ ತಿಳಿದಿದ್ದರೂ ಮತ್ತು ನಮ್ಮೊಂದಿಗೆ ನಿಕಟ ಸಂಬಂಧ ಇದ್ದರೂ ಅಹ್ಮದಿಯಾ ಮುಸ್ಲಿಮ್ ಜಮಾಅತ್ ತನ್ನ ಶಾಂತಿ ಸಂದೇಶ ಮತ್ತು ಭ್ರಾತೃತ್ವ ಮನೋಭಾವವನ್ನು ನೇರವಾಗಿ ಇಸ್ಲಾಮ್

ಧರ್ಮದೊಂದಿಗೆ ಜೋಡಿಸಿ ಹೇಳುವುದು ಅವರಿಗೆ ಆಶ್ಚರ್ಯಕರವಾಗುತ್ತದೆ. ಅವರ ಈ ಆಶ್ಚರ್ಯ ಮತ್ತು ಆಘಾತಕ್ಕೆ ಕಾರಣವೇನೆಂದರೆ, ಅಹ್ಮದಿಯೇತರರಾದ ತಥಾಕಥಿತ ಮುಸ್ಲಿಮ್ ವಿದ್ವಾಂಸರಲ್ಲಿ ಹಲವರು ಮತ್ತು ಸಂಸ್ಥೆಗಳು ಸಂಪೂರ್ಣವಾಗಿ ಬೇರೆ ರೀತಿಯಲ್ಲಿ ಮಾತನಾಡುತ್ತಾರೆ ಮತ್ತು ಬೇರೆಯೇ ಆದ ಒಂದು ಸಂದೇಶವನ್ನು ನೀಡುತ್ತಿದ್ದಾರೆ. ನಮ್ಮ ಮತ್ತು ಇತರ ಮುಸ್ಲಿಮರ ಮಧ್ಯೆ ಇರುವ ಭಿನ್ನಾಭಿಪ್ರಾಯಗಳ ಬಗ್ಗೆ ಹೀಗೆ ವಿವರಣೆ ನೀಡಬಹುದು: ಅಹ್ಮದೀ ಮುಸ್ಲಿಮರಾದ ನಾವು, ಈ ಕಾಲಘಟ್ಟದಲ್ಲಿ ಖಡ್ಗ ಮೂಲಕ ಜಿಹಾದ್ ನಡೆಸುವುದು ಸಂಪೂರ್ಣ ತಪ್ಪೆಂದು ನಂಬುತ್ತೇವೆ ಮತ್ತು ಅದನ್ನು ತಿರಸ್ಕರಿಸುತ್ತೇವೆ. ಆದರೆ ಬೇರೆ ಕೆಲವು ಮುಸ್ಲಿಮ್ ವಿದ್ವಾಂಸರು ಅದನ್ನು ಪ್ರತಿಪಾದಿಸುತ್ತಾರೆ ಮತ್ತು ಅನುಷ್ಠಾನಕ್ಕೆ ತರುತ್ತಿದ್ದಾರೆ. ಈ ವಿದ್ವಾಂಸರ ಈ ನಂಬಿಕೆಯ ಕಾರಣದಿಂದ ಅನೇಕ ಭೀಕರ ಸಂಘಟನೆಗಳು ಲೋಕದಲ್ಲಿ ವಿವಿಧ ದೇಶಗಳಲ್ಲಿ ಮುಸ್ಲಿಮರಲ್ಲಿ ತಲೆ ಎತ್ತಿವೆ. ಭೀಕರ ಸಂಘಟನೆಗಳು ಮಾತ್ರವಲ್ಲ, ಕೆಲವು ವ್ಯಕ್ತಿಗಳು ಸಹ ಈ ತಪ್ಪು ವಿಶ್ವಾಸಗಳ ಪ್ರಕಾರ ಕಾರ್ಯೋನ್ಮುಖರಾಗಿ ಭೀಕರ ಕೃತ್ಯಗಳನ್ನು ನಡೆಸುತ್ತಾರೆ. ಇತ್ತೀಚೆಗಿನ ಒಂದು ಉದಾಹರಣೆ, ಒಬ್ಬ ನಿರಪರಾಧಿ ಬ್ರಿಟಿಷ್ ಸೈನಿಕನನ್ನು ಲಂಡನ್‌ನಲ್ಲಿ ಕ್ರೂರವಾಗಿ ವಧಿಸಿದುದಾಗಿದೆ. ಈ ಆಕ್ರಮಣಕ್ಕೆ ಇಸ್ಲಾಮಿನ ನೈಜ ಧರ್ಮತತ್ವಗಳೊಂದಿಗೆ ಯಾವ ಸಂಬಂಧವೂ ಇರುವುದಿಲ್ಲ. ಇಸ್ಲಾಮ್ ಧರ್ಮತತ್ವಗಳು ಇಂತಹ ವರ್ತನೆಯನ್ನು ಬಲಯುತವಾಗಿ ಖಂಡಿಸುತ್ತವೆ. ಇಂತಹ ಕೆಟ್ಟ ಗೂಢ ಕಾರ್ಯಕ್ರಮಗಳು ಇಸ್ಲಾಮಿನ ನೈಜ ತತ್ವಗಳು ಮತ್ತು ತಪ್ಪಾಗಿ ಗ್ರಹಿಸಲ್ಪಟ್ಟ ತತ್ವಗಳ ಮಧ್ಯೆ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತವೆ. ಕೆಲವು ತಥಾಕಥಿತ ಮುಸ್ಲಿಮರು ತಮ್ಮ ದುರುದ್ದೇಶಗಳನ್ನು ಈಡೇರಿಸಲು ಈ ತಪ್ಪು ತತ್ವಗಳನ್ನು ಅನುಸರಿಸುತ್ತಾರೆ. ಸ್ಥಳೀಯ ಕೆಲವು ಗುಂಪುಗಳು ಈ ಘಟನೆ ಬಗ್ಗೆ ನೀಡಿದ ಪ್ರತಿಕ್ರಿಯೆ ಸರಿಯಾಗಿರಲಿಲ್ಲವೆಂದೂ ಅವರ ಪ್ರತಿಕ್ರಿಯೆ ಸಮಾಜದಲ್ಲಿ ಶಾಂತಿಭಂಗ ಉಂಟು ಮಾಡುವಂತಹದಾಗಿತ್ತೆಂದೂ ನಾನು ಹೇಳಲು ಬಯಸುತ್ತೇನೆ.

ನಾವು ಇಸ್ಲಾಮ್ ಧರ್ಮದ ಬಗ್ಗೆ ಏನನ್ನು ಪ್ರತಿಪಾದಿಸುತ್ತಿದ್ದೇವೋ ಅದೇ ನೈಜ ಇಸ್ಲಾಮ್ ಧರ್ಮತತ್ವಗಳು ಎಂದು ಸಾಬೀತುಗೊಳಿಸಬಲ್ಲ ಸಾಕ್ಷ್ಯಗಳೇನು? ಮೂಲಭೂತ ತತ್ವವೇನೆಂದರೆ, ಇಸ್ಲಾಮ್ ಧರ್ಮದ ವಿರುದ್ಧ ಯುದ್ಧಾಕ್ರಮಣ ನಡೆದಾಗ ಮಾತ್ರ ಖಡ್ಗ ಅಥವಾ ಬಲಪ್ರಯೋಗಕ್ಕೆ ಅನುಮತಿ ನೀಡಲಾಗಿದೆ. ಇಂದಿನ ಲೋಕದಲ್ಲಿ ಯಾವುದೇ ದೇಶ ಅಥವಾ ಯಾವುದೇ ಧರ್ಮ ಇಸ್ಲಾಮ್ ಧರ್ಮದ ವಿರುದ್ಧ ಯುದ್ಧ ನಡೆಸುತ್ತಾ ಇಲ್ಲ. ಆದುದರಿಂದ ಮುಸ್ಲಿಮರು ಧರ್ಮದ ಹೆಸರಿನಲ್ಲಿ ಅನ್ಯರ ವಿರುದ್ಧ ಆಕ್ರಮಣ ನಡೆಸುವುದನ್ನು ಸಮರ್ಥಿಸಲು ಸಾಧ್ಯವಿಲ್ಲ. ಏಕೆಂದರೆ ಅದು ಖುರ್‌ಆನಿನ ತತ್ವಗಳಿಗೆ ವಿರುದ್ಧವಾದ ವರ್ತನೆಯಾಗಿದೆ. ಇಸ್ಲಾಮ್ ವಿರುದ್ಧ ಖಡ್ಗ ಎತ್ತಿದವರ ವಿರುದ್ಧ ಮಾತ್ರ ಬಲಪ್ರಯೋಗಮಾಡಲು ಪವಿತ್ರ ಖುರ್‌ಆನ್ ಅನುಮತಿ ನೀಡಿದೆ. ಇನ್ನೊಂದು ಮುಖ್ಯ ಅಂಶವೇನೆಂದರೆ, ಒಬ್ಬ ಪ್ರಜೆ ತನ್ನ ದೇಶ ಅಥವಾ ತನ್ನ ದೇಶದ ಪ್ರಜೆಯ ವಿರುದ್ಧ ಏನಾದರೂ ಹಾನಿಯನ್ನು ಉಂಟುಮಾಡುತ್ತಾನಾದರೆ ಅವನು ಇಸ್ಲಾಮ್ ಧರ್ಮ ತತ್ವಗಳಿಗೆ ವಿರುದ್ಧವಾಗಿ ವರ್ತಿಸುತ್ತಾನೆ. ಒಬ್ಬ ನಿರಪರಾಧಿಯ ರಕ್ತವನ್ನು ಹರಿಸುವವನು ಮುಸ್ಲಿಮನಲ್ಲ ಎಂದು ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಹೇಳಿರುವರು.

ಅಂತಹ ಜನರು ಬಲಹೀನ ವಿಶ್ವಾಸ ಹೊಂದಿದವರೂ ಪಾಪಿಗಳೂ ಆಗಿರುವರೆಂದು ಹಝ್ರತ್ ಪೈಗಂಬರರು[ಸ] ಗಣಿಸಿದ್ದರು.

ಇಸ್ಲಾಮಿನ ಧರ್ಮ ತತ್ವಗಳು ಎಷ್ಟು ತೇಜೋಮಯವಾಗಿವೆ ಮತ್ತು ಪರಿಶುದ್ಧವಾಗಿವೆ ಎಂಬುದರ ಬಗ್ಗೆ ಇನ್ನಷ್ಟು ವಿವರಣೆ ನೀಡಲು ಬಯಸುತ್ತೇನೆ. ಕೆಲವು ತಥಾಕಥಿತ ಮುಸ್ಲಿಮ್ ಗುಂಪುಗಳು ಪ್ರತಿಪಾದಿಸುವ ಇಸ್ಲಾಮ್, ನೈಜ ಇಸ್ಲಾಮ್ ಧರ್ಮ ತತ್ವಗಳೊಂದಿಗೆ ಸಂಬಂಧ ಹೊಂದಿಲ್ಲ ಎಂದು ವಿವರಿಸಲು ಬಯಸುತ್ತೇನೆ. ಅವರು ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಈಡೇರಿಸಲು ಮತ್ತು ತಮ್ಮ ದ್ವೇಷಭರಿತ ಚಟುವಟಿಕೆಗಳನ್ನು ಸಮರ್ಥಿಸಲು ಇಸ್ಲಾಮಿನ ಹೆಸರನ್ನು ದುರುಪಯೋಗಿಸುತ್ತಾರೆ.

ಇಸ್ಲಾಮ್ ಧಾರ್ಮಿಕ ಸಹಿಷ್ಣುತಾ ಮನೋಭಾವಕ್ಕೆ ಒತ್ತು ನೀಡಿದಷ್ಟು ಉನ್ನತ ಮಟ್ಟದ ತತ್ವೋಪದೇಶಗಳನ್ನು ಬೇರೆ ಎಲ್ಲಿಯೂ ಕಾಣಲು ಸಾಧ್ಯವಾಗದು. ಅನ್ಯ ಧರ್ಮಗಳನ್ನು ಸುಳ್ಳು ಎಂದು ಸಾಬೀತುಪಡಿಸುವ ತನಕ ತಮ್ಮ ಧರ್ಮದ ಸತ್ಯತೆಯನ್ನು ಸಾಬೀತುಪಡಿಸಲು ಸಾಧ್ಯವಿಲ್ಲವೆಂದು ಅನ್ಯರು ಭಾವಿಸುತ್ತಾರೆ. ಆದರೆ ಇಸ್ಲಾಮಿನ ನಿಲುವು ಸಂಪೂರ್ಣ ವಿಭಿನ್ನವಾದುದಾಗಿದೆ. ಇಸ್ಲಾಮ್ ಹೀಗೆ ಪ್ರತಿಪಾದಿಸುತ್ತದೆ: ಇಸ್ಲಾಮ್ ಮನುಕುಲಕ್ಕೆ ಕಳುಹಿಸಲ್ಪಟ್ಟ ಸತ್ಯ ಧರ್ಮವೆಂದು ಹೇಳುವುದರೊಂದಿಗೆ ಲೋಕದ ಎಲ್ಲ ಜನಾಂಗಗಳಿಗೆ ಅಲ್ಲಾಹನ ಪ್ರವಾದಿಗಳು ಕಳುಹಿಸಲ್ಪಟ್ಟಿದ್ದರು ಎಂದು ಅದು ಕಲಿಸುತ್ತದೆ. ಇದನ್ನು ಪವಿತ್ರ ಖುರ್‌ಆನಿನಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಎಲ್ಲ ಪ್ರವಾದಿಗಳನ್ನು ಪ್ರೀತಿ ಮತ್ತು ವಾತ್ಸಲ್ಯದ ಉಪದೇಶಗಳನ್ನು ನೀಡಲು ತಾನು ಕಳುಹಿಸಿರುವುದಾಗಿಯೂ ಎಲ್ಲ ಸತ್ಯವಂತರಾದ ಮುಸ್ಲಿಮರು ಅವರನ್ನು ನಂಬಬೇಕೆಂದೂ ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳಿರುವನು. ಪ್ರತಿಯೊಂದು ಧರ್ಮವನ್ನೂ ಪ್ರತಿಯೊಂದು ಜನಾಂಗವನ್ನೂ ಪವಿತ್ರ ಖುರ್‌ಆನ್ ಬಹಿರಂಗವಾಗಿಯೂ ಹೃತ್ಪೂರ್ವಕವಾಗಿಯೂ ಪ್ರಶಂಸಿಸುವ ಹಾಗೆ ಬೇರೆ ಯಾವ ಧರ್ಮವೂ ಪ್ರಶಂಸಿಸುವುದಿಲ್ಲ. ಪ್ರವಾದಿಗಳು ಎಲ್ಲ ಜನಾಂಗಗಳಿಗೆ ಕಳುಹಿಸಲ್ಪಟ್ಟಿದ್ದಾರೆಂದು ನಂಬುವ ಮುಸ್ಲಿಮರು ಅವರನ್ನು ಸುಳ್ಳುಗಾರರೆಂದು ಪರಿಗಣಿಸಲು ಎಂದೂ ಸಾಧ್ಯವಿಲ್ಲ. ಆದುದರಿಂದ ಯಾವುದೇ ಪ್ರವಾದಿಯನ್ನು ಗೌರವ ರಹಿತವಾಗಿ ಕಾಣಲು, ಅವರನ್ನು ಅಪಹಾಸ್ಯ ಮಾಡಲು, ನಿಂದಿಸಲು ಯಾವುದೇ ಮುಸ್ಲಿಮನಿಗೆ ಸಾಧ್ಯವಿಲ್ಲ. ಯಾವುದೇ ಧರ್ಮದ ಅನುಯಾಯಿಗಳ ಭಾವನೆಗಳಿಗೆ ನೋವನ್ನುಂಟುಮಾಡಲು ಕೂಡ ಮುಸ್ಲಿಮರಿಗೆ ಸಾಧ್ಯವಿಲ್ಲ.

ಆದರೆ ಕೆಲವು ಮುಸ್ಲಿಮೇತರರ ನಿಲುವು ಅದಕ್ಕೆ ವಿರುದ್ಧವಾಗಿದೆ ಎಂಬುದು ದುಃಖಕರ. ಹಝ್ರತ್ ಮುಹಮ್ಮದ್ ಪೈಗಂಬರರನ್ನು[ಸ] ನಿಂದಿಸಲು ಮತ್ತು ಅವರ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಲು ಅವರು ಸಿಗುವ ಸಂದರ್ಭಗಳನ್ನೆಲ್ಲ ಬಳಸದೆ ಬಿಡುವುದಿಲ್ಲ. ಈ ಕಾರಣದಿಂದ ಅವರು ಮುಸ್ಲಿಮರ ಭಾವನೆಗಳನ್ನು ತೀವ್ರವಾಗಿ ನೋಯಿಸುತ್ತಾರೆ. ನಾವು ಧಾರ್ಮಿಕ ಸಹಿಷ್ಣುತೆ ಮತ್ತು ಪರಸ್ಪರ ಹೊಂದಾಣಿಕೆಗಳನ್ನು ಸತ್ಯವಾಗಿಯೂ ಬಯಸುವುದು ನಾವು ಹೊಂದಿರುವ ನಂಬಿಕೆಗಳ ಕಾರಣದಿಂದಾಗಿದೆ. ಆದರೆ ದುರದೃಷ್ಟಕರವಾಗಿ ಕೆಲವರು ಮುಸ್ಲಿಮರ ಭಾವನೆಗಳೊಂದಿಗೆ ಆಟವಾಡುವಾಗ

ಕೆಲವು ತಥಾಕಥಿತ ಮುಸ್ಲಿಮರು ಸಂಪೂರ್ಣವಾಗಿ ತಪ್ಪು ಮತ್ತು ಬೇಜವಾಬ್ದಾರಿಯಿಂದ ವರ್ತಿಸಲು ಉತ್ತೇಜಿಸಲ್ಪಡುತ್ತಾರೆ. ಅವರ ಪ್ರತಿಕ್ರಿಯೆಯ ವಿಧಾನಕ್ಕೆ ನೈಜ ಇಸ್ಲಾಮ್ ಧರ್ಮದೊಂದಿಗೆ ಯಾವ ಸಂಬಂಧವೂ ಇರುವುದಿಲ್ಲ. ಆದರೆ ಅಹ್ಮದೀ ಮುಸ್ಲಿಮರನ್ನು ಯಾವ ರೀತಿಯಲ್ಲಿ ಪ್ರಚೋದಿಸಿದರೂ ಅವರು ಅಂತಹ ಋಣಾತ್ಮಕ ಪ್ರತಿಕ್ರಿಯೆ ನೀಡಲಾರರು. ಹಝ್ರತ್ ಪೈಗಂಬರರ(ಸ) ಮತ್ತು ಪವಿತ್ರ ಖುರ್‌ಆನ್ ವಿರುದ್ಧ ಮಾಡಲಾಗುವ ಇನ್ನೊಂದು ತೀವ್ರ ದೋಷಾರೋಪ ಅವರು ಅತಿರೇಕವಾದವನ್ನು ಪ್ರತಿಪಾದಿಸುತ್ತಾರೆಂದೂ ಇಸ್ಲಾಮಿನ ಪ್ರಚಾರಕ್ಕೆ ಬಲಪ್ರಯೋಗವನ್ನು ಉಪದೇಶಿಸುತ್ತಾರೆಂದೂ ಆಗಿದೆ. ಈ ದೋಷಾರೋಪದ ನೈಜತೆಯನ್ನು ಅರಿಯಲು ನಾವು ಪವಿತ್ರ ಖುರ್‌ಆನ್ ವಚನಗಳನ್ನು ಪರಿಶೀಲಿಸುವ. ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದ್ದಾನೆ:

**“ನಿನ್ನ ಪ್ರಭು ಇಚ್ಛಿಸಿದ್ದರೆ ಭೂಲೋಕದಲ್ಲಿರುವ ಎಲ್ಲರೂ ವಿಶ್ವಾಸ ಹೊಂದಿರುತ್ತಿದ್ದರು. (ಆದರೆ ಅವನು ನಿರ್ಬಂಧಿಸುವುದಿಲ್ಲ.) ಹಾಗಿರುವಾಗ ಜನರು ವಿಶ್ವಾಸಿಗಳಾಗುವಂತೆ ನೀನು ಬಲವಂತಪಡಿಸುವಿಯೋ?” (10:100)**

ಈ ವಚನ ಸ್ಪಷ್ಟವಾಗಿ ಹೇಳುವುದೇನೆಂದರೆ, ಸರ್ವಶಕ್ತನಾದ ದೇವನು ಇಚ್ಛಿಸುತ್ತಿದ್ದರೆ ಎಲ್ಲ ಜನರನ್ನು ಒಂದೇ ಧರ್ಮವನ್ನು ಅನುಸರಿಸಲು ಬಲಪ್ರಯೋಗ ಮಾಡಲು ಸಾಧ್ಯವಿತ್ತು. ಆದರೆ ಜನರಿಗೆ ನಂಬಲು ಮತ್ತು ನಂಬದಿರಲು ಸ್ವಾತಂತ್ರ್ಯವನ್ನು ದೇವನು ನೀಡಿರುತ್ತಾನೆ. ದೇವನು ಮನುಷ್ಯನಿಗೆ ಆಯ್ಕೆಯ ಸ್ವಾತಂತ್ರ್ಯವನ್ನು ನೀಡಿರುವಾಗ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಆಗಲಿ ಅವರ ಯಾವನೇ ಅನುಯಾಯಿಯಾಗಲಿ ಯಾರನ್ನಾದರೂ ಮುಸ್ಲಿಮನಾಗಲು ಒತ್ತಾಯಿಸಲು ಹೇಗೆ ತಾನೆ ಸಾಧ್ಯ? ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನಿನ ಇನ್ನೊಂದು ವಚನದಲ್ಲಿ ಹೀಗೆ ಹೇಳಿದ್ದಾನೆ:

**“ಇದು ನಿಮ್ಮ ಪ್ರಭುವಿನ ಕಡೆಯಿಂದಿರುವ ಸತ್ಯವಾಗಿದೆ. ಆದುದರಿಂದ ಯಾರು ಇಚ್ಛಿಸುತ್ತಾನೋ ಅವನು ನಂಬಲಿ. ಯಾರು ಇಚ್ಛಿಸುತ್ತಾನೋ ಅವನು ನಿರಾಕರಿಸಲಿ.” (18:30)**

ಇದು ಇಸ್ಲಾಮ್ ಪ್ರತಿಪಾದಿಸುವ ಸತ್ಯವಾದ ತತ್ವವಾಗಿದೆ. ಇದು ಇಸ್ಲಾಮಿನ ಸತ್ಯವಾದ ಉಪದೇಶವಾಗಿದೆ. ಒಬ್ಬ ಮನುಷ್ಯನ ಹೃದಯ ಇಚ್ಛಿಸುವುದಾದರೆ ಇಸ್ಲಾಮ್ ಧರ್ಮವನ್ನು ಸ್ವೀಕರಿಸಬಹುದು. ಹೃದಯಗಳು ಒಪ್ಪದವರು ಇಸ್ಲಾಮನ್ನು ತಿರಸ್ಕರಿಸಲು ಸ್ವತಂತ್ರರಾಗಿದ್ದಾರೆ. ಇಸ್ಲಾಮ್ ಧರ್ಮವು ಬಲಪ್ರಯೋಗ ಮತ್ತು ಅತಿರೇಕವಾದಕ್ಕೆ ಸಂಪೂರ್ಣ ವಿರುದ್ಧವಾಗಿದೆ. ಅದು ಶಾಂತಿಯನ್ನೂ ಸೌಹಾರ್ದವನ್ನೂ ಸಮಾಜದ ಎಲ್ಲ ಹಂತಗಳಲ್ಲೂ ಪ್ರತಿಪಾದಿಸುತ್ತದೆ. ಹಿಂಸೆ ಮತ್ತು ಬಲಪ್ರಯೋಗವನ್ನು ಉಪದೇಶಿಸುವುದು ಇಸ್ಲಾಮ್ ಧರ್ಮಕ್ಕೆ ಅಸಾಧ್ಯವಾದುದಾಗಿದೆ. ಏಕೆಂದರೆ “ಇಸ್ಲಾಮ್” ಎಂಬ ಪದದ ಅರ್ಥ ಶಾಂತಿಯಿಂದ ಜೀವಿಸುವುದು ಮತ್ತು ಇತರರಿಗೆ ಶಾಂತಿ ನೀಡುವುದು ಎಂದಾಗಿದೆ. ಹೀಗಿದ್ದರೂ ನಮ್ಮ ಧಾರ್ಮಿಕ ಭಾವನೆಗಳನ್ನು ಅಪಹಾಸ್ಯ ಮಾಡುವಾಗ ನಮಗೆ ಬಹಳ ನೋವು ಮತ್ತು ಯಾತನೆ ಉಂಟಾಗುತ್ತದೆ. ಹಝ್ರತ್ ಮುಹಮ್ಮದ್

ಪೈಗಂಬರರ(ಸ) ವಿರುದ್ಧ ಅಪಮಾನಕರವಾಗಿ ಹೇಳಿದ ಯಾವುದೇ ಮಾತು ಹೃದಯವನ್ನು ಚುಚ್ಚಿ ಗಾಯ ಉಂಟುಮಾಡುತ್ತದೆ. ದೇವನನ್ನು ಪ್ರೀತಿಸಲು ಮತ್ತು ಅವನ ಸೃಷ್ಟಿಗಳನ್ನು ಪ್ರೀತಿಸಲು ನಮಗೆ ಕಲಿಸಿದುದು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಆಗಿದ್ದಾರೆ. ಎಲ್ಲ ಮಾನವರನ್ನು ಮತ್ತು ಎಲ್ಲ ಧರ್ಮಗಳನ್ನು ಗೌರವಿಸುವ ಮನೋಭಾವವನ್ನು ನಮ್ಮ ಮನಸ್ಸುಗಳಲ್ಲಿ ಸ್ಥಾಪಿಸಿದವರು ಹಝ್ರತ್ ಪೈಗಂಬರ್(ಸ) ಆಗಿದ್ದಾರೆ. ಇಸ್ಲಾಮ್ ಧರ್ಮ ಶಾಂತಿ ಪ್ರತಿಪಾದಿಸುವ ಧರ್ಮ ಎಂಬುದಕ್ಕೆ ಹಝ್ರತ್ ಪೈಗಂಬರರ ವಿರೋಧಿಗಳು ಹಝ್ರತ್ ಪೈಗಂಬರರ ಆಹ್ವಾನಕ್ಕೆ ನೀಡಿದ ಉತ್ತರಕ್ಕಿಂತ ಹಿರಿದಾದ ಸಾಕ್ಷ್ಯ ಬೇರೆ ಇಲ್ಲ. ಹಝ್ರತ್ ಪೈಗಂಬರರು(ಸ) ವಿರೋಧಿಗಳನ್ನು ಇಸ್ಲಾಮಿಗೆ ಆಹ್ವಾನಿಸಿ ಕ್ರೌರ್ಯವನ್ನೂ ದುಷ್ಕೃತ್ಯಗಳನ್ನೂ ನಿರಂತರವಾಗಿ ನಡೆಸಲು ಆವಶ್ಯಪಡುತ್ತಾರೆ ಎಂದು ವಿರೋಧಿಗಳು ಹೇಳಲಿಲ್ಲ. ವಿರೋಧಿಗಳು ಹೇಳಿದುದು ಏನೆಂದರೆ : "ನಾವು ಹಝ್ರತ್ ಪೈಗಂಬರರ ಶಾಂತಿ ಸಂದೇಶವನ್ನು ಅಂಗೀಕರಿಸಿದರೆ ನಮ್ಮ ಸಂಪತ್ತು ಮತ್ತು ಸ್ಥಾನಮಾನಗಳಿಗೆ ಬೆದರಿಕೆ ಉಂಟಾಗುವುದು ಮತ್ತು ನಿಷ್ಕರುಣಿಗಳಾದ ಜನರು ಅವುಗಳನ್ನು ಕಸಿದುಕೊಳ್ಳುವರು. ಏಕೆಂದರೆ ಹಝ್ರತ್ ಪೈಗಂಬರರು(ಸ) ಶಾಂತಿ ಮತ್ತು ಸೌಹಾರ್ದವನ್ನು ಮಾತ್ರ ಒತ್ತಿ ಹೇಳುತ್ತಾರೆ." ಆ ಜನರು ಹೀಗೆ ಸಹ ಹೇಳಿದರು : "ನಾವು ಇಸ್ಲಾಮನ್ನು ಸ್ವೀಕರಿಸಿ, ಶಾಂತಿಯನ್ನು ಅವಲಂಬಿಸಿದರೆ ಸುತ್ತು ಮುತ್ತಲು ಇರುವ ಗೋತ್ರಗಳ ಜನರು ಇದರಿಂದ ಲಾಭ ಪಡೆದು ನಮ್ಮನ್ನು ನಾಶ ಮಾಡುವರು." ಸಂಕ್ಷಿಪ್ತವಾಗಿ ಹೇಳುವುದಾದರೆ, ಇಸ್ಲಾಮ್ ಹಿಂಸಾಚಾರವನ್ನು ಪ್ರತಿಪಾದಿಸುತ್ತಿದ್ದುದಾದರೆ ಮತ್ತು ಮುಸ್ಲಿಮರು ಖಡ್ಗ ಹಿಡಿದು ಯುದ್ಧಮಾಡಬೇಕೆಂದು ಉಪದೇಶಿಸಿದ್ದರೆ ಅವಿಶ್ವಾಸಿಗಳು ಮೇಲೆ ವಿವರಿಸಿದ ರೀತಿಯಲ್ಲಿ ತಮ್ಮ ನಿಲುವನ್ನು ಪ್ರತಿಪಾದಿಸುತ್ತಿರಲಿಲ್ಲ. "ನಾವು ಇಸ್ಲಾಮನ್ನು ಸ್ವೀಕರಿಸದೆ ಇರುವುದು, ಇಸ್ಲಾಮಿನ ಶಾಂತಿ ಸಂದೇಶವನ್ನು ಅನುಸರಿಸಿದರೆ ಲೌಕಿಕವಾದಿಗಳಾದ ಜನರಿಂದ ನಾವು ನಾಶಗೊಳಿಸಲ್ಪಡುವೆವು ಎಂಬ ಭಯದ ಕಾರಣದಿಂದಾಗಿದೆ" ಎಂದು ಅವಿಶ್ವಾಸಿಗಳು ಹೇಳುತ್ತಿರಲಿಲ್ಲ.

ಪವಿತ್ರ ಖುರ್‌ಆನ್, ಸರ್ವಶಕ್ತನಾದ ದೇವನ ಒಂದು ಗುಣ "ಸಲಾಮ್" ಎಂದು ಹೇಳಿದೆ. ಇದರ ಅರ್ಥ ದೇವನು "ಶಾಂತಿಯ ಉದ್ಭವ ಸ್ಥಾನ" ಎಂದಾಗಿದೆ. ದೇವನು ನಿಜವಾಗಿಯೂ ಶಾಂತಿಯ ಉಗಮ ಸ್ಥಾನವಾದುದರಿಂದ ಅವನ ಶಾಂತಿ ಅವನ ಎಲ್ಲ ಸೃಷ್ಟಿಗಳನ್ನೂ ಎಲ್ಲ ಮಾನವರನ್ನೂ ಆವರಿಸಬೇಕಾಗಿದೆ. ಅದು ಕೇವಲ ವಿಶಿಷ್ಟವಾದೊಂದು ಗುಂಪಿಗೆ ಮಾತ್ರ ಸೀಮಿತವಾಗದು. ದೇವನ ಶಾಂತಿ ಕೆಲವು ಜನರನ್ನು ಮಾತ್ರ ಸಂರಕ್ಷಿಸಲು ಮಾತ್ರ ರೂಪಿಸಲ್ಪಟ್ಟದ್ದಾಗಿದ್ದರೆ ದೇವನನ್ನು ಸಕಲ ಲೋಕಗಳ ಪ್ರಭು ಎಂದು ಹೇಳಲು ಸಾಧ್ಯವಾಗದು. ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಈ ವಿಷಯದ ಬಗ್ಗೆ ಹೀಗೆ ಹೇಳಿದ್ದಾನೆ:

**'ಪ್ರಭೂ, ಈ ಜನರು ಸತ್ಯವನ್ನು ನಂಬುವುದಿಲ್ಲ' ಎಂಬ ಅವರ (ಪ್ರವಾದಿಯ) ಅಳಲಿಗೆ ನಾವು ಸಾಕ್ಷಿ. (ನಾವು ಉತ್ತರಿಸಿದೆವು:) "ಅವರಿಂದ ವಿಮುಖನಾಗು ಮತ್ತು 'ಶಾಂತಿ' ಎಂದು ಮಾತ್ರ ಹೇಳು. ಅವರು ಬೇಗನೆ ಅರಿತುಕೊಳ್ಳುವರು."**

**(43:89, 90)**

ಪವಿತ್ರ ಖುರ್‌ಆನಿನ ಈ ವಚನಗಳು ಸ್ಪಷ್ಟಪಡಿಸುವುದೇನೆಂದರೆ, ಹಝ್ರತ್ ಪೈಗಂಬರರು(ಸ) ಶಾಂತಿಯ ಉದ್ಭವ ಸ್ಥಾನವಾದಂತಹ ಮತ್ತು ಕರುಣೆಯನ್ನು ಎಲ್ಲ ಮಾನವರಿಗೆ ನೀಡುವಂತಹ ಉಪದೇಶವನ್ನು ತಂದರು. ಹಝ್ರತ್ ಪೈಗಂಬರರ ವಿರೋಧಿಗಳು ಶಾಂತಿಯ ಸಂದೇಶವನ್ನು ತಿರಸ್ಕರಿಸಿದರು. ಮಾತ್ರವಲ್ಲ, ಅವರನ್ನು ಅಪಹಾಸ್ಯ ಮಾಡಿ ನಿಂದಿಸಿದರು. ಅವರು ಗಲಭೆಗೊಂದಲಗಳನ್ನೂ ಸಂಘರ್ಷವನ್ನೂ ಉಂಟುಮಾಡಿದರು. ಆಗ ಹಝ್ರತ್ ಪೈಗಂಬರರು(ಸ) ಹೀಗೆ ದೇವನೊಂದಿಗೆ ನಿವೇದಿಸಿದರು:

**ನಾನು ಜನರಿಗೆ ಶಾಂತಿ ನೀಡಲು ಇಚ್ಛಿಸುತ್ತೇನೆ. ಆದರೆ ಅವರು ನನಗೆ ಶಾಂತಿಯನ್ನು ನೀಡುವುದಿಲ್ಲ. ಅವರು ನನಗೆ ನೋವು ಮತ್ತು ಯಾತನೆ ನೀಡಲು ಪ್ರಯತ್ನಿಸುತ್ತಾರೆ.**

ಈ ನಿವೇದನೆಗೆ ಉತ್ತರವಾಗಿ ದೇವನು ಹೀಗೆ ಹೇಳಿದನು:

**ಅವರು ಮಾಡುವುದನ್ನು ನೀನು ನಿರ್ಲಕ್ಷಿಸು ಮತ್ತು ಅವರಿಂದ ದೂರಸರಿದು ಹೋಗು. ನಿನ್ನ ಏಕಮಾತ್ರ ಕೆಲಸ ಲೋಕದಲ್ಲಿ ಶಾಂತಿಯನ್ನು ಹರಡಿ ಅದನ್ನು ಸ್ಥಾಪಿಸುವುದಾಗಿದೆ. ನೀನು ಅವರ ದ್ವೇಷ ಮತ್ತು ಅತಿರೇಕ ವರ್ತನೆಗೆ ಉತ್ತರವಾಗಿ "ನಿಮ್ಮ ಮೇಲೆ ಶಾಂತಿ ಇರಲಿ" ಎಂದು ಹೇಳು ಮತ್ತು ನೀನು ಅವರಿಗೆ ಶಾಂತಿಯನ್ನು ತಂದಿರುವೆ ಎಂದು ಹೇಳು.**

ಹಝ್ರತ್ ಪೈಗಂಬರ್(ಸ) ತನ್ನ ಜೀವಿತವನ್ನು, ಸಂಪೂರ್ಣವಾಗಿ ಲೋಕದಲ್ಲಿ ಶಾಂತಿಯನ್ನು ಹರಡಲು ವಿನಿಯೋಗಿಸಿದರು. ಅದು ಅವರ ಆಗಮನದ ಭವ್ಯ ಉದ್ದೇಶವಾಗಿತ್ತು. ಹಝ್ರತ್ ಪೈಗಂಬರರು(ಸ) ಅತಿರೇಕವಾದದ ಮತ್ತು ಹಿಂಸೆಯ ಉಪದೇಶಗಳನ್ನು ತಂದಿರಲಿಲ್ಲ ಎಂದು ಲೋಕದ ಜನರು ನಿಶ್ಚಯವಾಗಿಯೂ ಮುಂದೆ ಮನವರಿಕೆ ಮಾಡಿಕೊಳ್ಳುವರು. ಹಝ್ರತ್ ಪೈಗಂಬರರು(ಸ) ಶಾಂತಿ, ಪ್ರೀತಿ ಮತ್ತು ದಯೆಯ ಉಪದೇಶ ತಂದಿದ್ದರು ಎಂದು ಜನರು ತಿಳಿದುಕೊಳ್ಳುವರು. ಈ ಶ್ರೇಷ್ಠ ಸಂದೇಶವಾಹಕರ ಅನುಯಾಯಿಗಳು ದೌರ್ಜನ್ಯಕ್ಕೆ ಮತ್ತು ಅನ್ಯಾಯಕ್ಕೆ ವಿರುದ್ಧವಾಗಿ ಇಂತಹ ಪ್ರೀತಿಭರಿತ ಪ್ರತಿಕ್ರಿಯೆ ನೀಡುವುದಾದರೆ ಇಸ್ಲಾಮಿನ ಭವ್ಯ ಉಪದೇಶಗಳ ವಿರುದ್ಧ ದೋಷಾರೋಪಮಾಡುವವರು ನಿಸ್ಸಂದೇಹವಾಗಿಯೂ ಮುಂದೆ ಅದರ ಸತ್ಯತೆ ಮತ್ತು ಸೌಂದರ್ಯದ ಬಗ್ಗೆ ತಿಳಿದುಕೊಳ್ಳುವರು.

ಅಹ್ಮದಿಯಾ ಮುಸ್ಲಿಮ್ ಜಮಾಅತ್ ಈ ತತ್ವಗಳನ್ನು ಅನುಸರಿಸಿ ಜೀವಿಸುತ್ತದೆ. ಪರಸ್ಪರ ಅರ್ಥಮಾಡಿಕೊಳ್ಳುವ, ಸಹಿಷ್ಣುತೆಯ ಮತ್ತು ಕರುಣೆಯ ಈ ಉಪದೇಶಗಳನ್ನು ಲೋಕದ ಮೂಲೆ ಮೂಲೆಗಳಿಗೆ ನಾವು ತಲುಪಿಸುತ್ತೇವೆ. ಅತ್ಯಂತ ಭೀಕರ ದೌರ್ಜನ್ಯಗಳಿಗೂ ಹಿಂಸಾಚಾರಗಳಿಗೂ ಮಕ್ಕದಲ್ಲಿ ಹಲವಾರು ವರ್ಷ ಗುರಿಯಾದ ನಂತರ ವಲಸೆ ಹೋಗಿ ಪುನಃ ಮಕ್ಕವನ್ನು ಜಯಶಾಲಿಯಾಗಿ ಪ್ರವೇಶಿಸಿದಾಗ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಅದ್ವಿತೀಯ ಚಾರಿತ್ರಿಕ ಸಂಭವವಾಗಿ ಪ್ರದರ್ಶಿಸಿದ ಕ್ಷಮೆ ಮತ್ತು ದಯೆಯ ಉದಾಹರಣೆಯನ್ನು ನಾವು ಅನುಸರಿಸುತ್ತೇವೆ.

ಹಲವು ವರ್ಷಗಳ ಕಾಲ ಹಝ್ರತ್ ಪೈಗಂಬರರಿಗೆ(ಸ) ಮತ್ತು ಅವರ ಅನುಯಾಯಿಗಳಿಗೆ ಆಹಾರ ಮತ್ತು ನೀರು ಸಹ ಲಭಿಸುವುದನ್ನು ವಿರೋಧಿಗಳು ತಡೆಗಟ್ಟಿದ್ದರು. ಅವರು ಅನೇಕ ದಿನ ಆಹಾರ ಮತ್ತು ನೀರಿನ ಕೊರತೆಯಿಂದ ಬಳಲಿದ್ದರು. ಹಝ್ರತ್ ಪೈಗಂಬರರ ಅನೇಕ ಅನುಯಾಯಿಗಳನ್ನು ಆಕ್ರಮಿಸಲಾಗಿತ್ತು. ಕೆಲವರನ್ನು ಬಹಳ ಊಹಾತೀತ ಅನಾಗರಿಕ ರೀತಿಯಲ್ಲಿ ಕೊಲ್ಲಲಾಯಿತು. ವೃದ್ಧರು, ಮಹಿಳೆಯರು ಮತ್ತು ಮಕ್ಕಳು ಸಹ ಹಿಂಸಾಚಾರಗಳಿಗೆ ತುತ್ತಾಗದೆ ಬಾಕಿಯಾಗಲಿಲ್ಲ. ಅವರೊಂದಿಗೆ ಅತ್ಯಂತ ಮೃಗೀಯವಾಗಿಯೂ ನಿರ್ದಯವಾಗಿಯೂ ವರ್ತಿಸಲಾಯಿತು. ಹೀಗೆ ಸಂಭವಿಸಿದ್ದರೂ ಹಝ್ರತ್ ಪೈಗಂಬರರು(ಸ) ಜಯಶಾಲಿಯಾಗಿ ಮಕ್ಕಕ್ಕೆ ಮರಳಿದಾಗ ಪ್ರತೀಕಾರ ಮಾಡಲಿಲ್ಲ. ಅವರು ಹೀಗೆ ಘೋಷಿಸಿದರು:

**"ನಾನು ನಿಮ್ಮನ್ನೆಲ್ಲ ಕ್ಷಮಿಸಿರುವೆನು. ನಿಮಗೆ ಯಾವ ಶಿಕ್ಷೆಯನ್ನೂ ನೀಡುವುದಿಲ್ಲ. ನಾನು ಪ್ರೀತಿ ಮತ್ತು ಶಾಂತಿಯ ಸಂದೇಶವಾಹಕನಾಗಿದ್ದೇನೆ. ಅಲ್ಲಾಹನು "ಶಾಂತಿಯ ಉದ್ಭವ ಸ್ಥಾನ"ವಾಗಿರುವನೆಂಬುದರ ಬಗ್ಗೆ ನನಗೆ ಚೆನ್ನಾಗಿ ತಿಳಿದಿದೆ. ಅವನು ಏಕನಾಗಿದ್ದಾನೆ. ಅವನು ಶಾಂತಿಯನ್ನು ದಯಪಾಲಿಸುವವನಾಗಿದ್ದಾನೆ. ನೀವು ಹಿಂದೆ ಮಾಡಿದ ಅಕ್ರಮಗಳನ್ನು ನಾನು ಕ್ಷಮಿಸುತ್ತೇನೆ. ನಾನು ನಿಮಗೆ ಶಾಂತಿ ಮತ್ತು ಭದ್ರತೆಯ ಖಾತರಿ ನೀಡುತ್ತೇನೆ. ನೀವು ಮಕ್ಕದಲ್ಲಿ ನಿರ್ಭಯರಾಗಿ ನಿಮ್ಮ ಧರ್ಮವನ್ನು ಅವಲಂಬಿಸಿ ಜೀವಿಸಬಹುದು. ಯಾರನ್ನೂ ಯಾವುದೇ ರೀತಿ ಬಲಾತ್ಕಾರಕ್ಕೆ ಗುರಿಪಡಿಸಲಿಕ್ಕಿಲ್ಲ."**

ಕೆಲವು ಕಠಿಣ ಶತ್ರುಗಳಾದ ಅವಿಶ್ವಾಸಿಗಳು ಶಿಕ್ಷೆಗೆ ಭಯಪಟ್ಟು ಮಕ್ಕದಿಂದ ಓಡಿ ಹೋಗಿದ್ದರು. ತಾವು ಮುಸ್ಲಿಮರ ವಿರುದ್ಧ ಮಿತಿ ಮೀರಿ ದೌರ್ಜನ್ಯ ಮಾಡಿದುದಾಗಿ ಅವರು ಮನವರಿಕೆ ಮಾಡಿಕೊಂಡಿದ್ದರು. ಆದರೆ ಹಝ್ರತ್ ಪೈಗಂಬರರು(ಸ) ತೋರಿಸಿದ ಅದ್ವಿತೀಯ ಕ್ಷಮೆ ಮತ್ತು ಕರುಣೆಯನ್ನು ಕಂಡಾಗ ಮಕ್ಕದಿಂದ ಓಡಿ ಹೋದ ಅವಿಶ್ವಾಸಿಗಳ ಸಂಬಂಧಿಕರು, ಓಡಿ ಹೋದವರು ಮರಳಿ ಬರಬೇಕೆಂಬ ಸಂದೇಶವನ್ನು ಕಳುಹಿಸಿದರು. ಹಝ್ರತ್ ಪೈಗಂಬರರು(ಸ) ಶಾಂತಿ ಮತ್ತು ಸುರಕ್ಷೆಯ ಖಾತರಿ ನೀಡಿರುವರೆಂದು ತಿಳಿದುಕೊಂಡು, ಓಡಿ ಹೋದವರು ಮಕ್ಕಕ್ಕೆ ಮರಳಿ ಬಂದರು. ಇಸ್ಲಾಮಿನ ಕಠಿಣ ಶತ್ರುಗಳಾಗಿದ್ದ ಅವಿಶ್ವಾಸಿಗಳು ಹಝ್ರತ್ ಪೈಗಂಬರರ(ಸ) ಕ್ಷಮೆಯನ್ನೂ ಕರುಣೆಯನ್ನೂ ಸ್ವತಃ ಕಂಡಾಗ ತಮ್ಮ ಸ್ವಂತ ಇಷ್ಟದ ಪ್ರಕಾರ ಇಸ್ಲಾಮ್ ಧರ್ಮಕ್ಕೆ ಸೇರಿದರು.

ನಾನು ನಿಮ್ಮ ಮುಂದೆ ವಿವರಿಸಿದ್ದು ದಾಖಲಿಸಲ್ಪಟ್ಟ ಚರಿತ್ರೆಯ ಸತ್ಯಗಳಾಗಿವೆ. ಮುಸ್ಲಿಮೇತರರಾದ ಬಹುತೇಕ ಚರಿತ್ರೆಗಾರರು ಮತ್ತು ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರು ಈ ಘಟನೆಯ ಸತ್ಯತೆಯನ್ನು ಪ್ರಮಾಣೀಕರಿಸಿದ್ದಾರೆ. ಇವು ಇಸ್ಲಾಮಿನ ನೈಜ ತತ್ವಗಳಾಗಿವೆ. ಇದು ಹಝ್ರತ್ ಪೈಗಂಬರರ(ಸ) ಉದಾತ್ತ ನಡೆವಳಿಕೆಯ ಉದಾಹರಣೆಯಾಗಿದೆ. ಆದುದರಿಂದ ಇಸ್ಲಾಮ್ ಮತ್ತು ಹಝ್ರತ್ ಪೈಗಂಬರರ(ಸ) ಬಗ್ಗೆ ಹಿಂಸೆಯನ್ನು ಆರೋಪಿಸುವುದು ಮತ್ತು ದೋಷಾರೋಪಮಾಡುವುದು ಅತ್ಯಂತ ಕ್ರೂರ ಅನ್ಯಾಯವಾಗಿದೆ. ಇಂತಹ ಸುಳ್ಳು ಆರೋಪಗಳನ್ನು ಮಾಡಿದಾಗಲೆಲ್ಲ ನಮಗೆ ಬಹಳ ನೋವು ಉಂಟಾಗುತ್ತದೆ.

ನಾನು ಇನ್ನೊಮ್ಮೆ ಹೇಳಲು ಬಯಸುತ್ತೇನೆ: ಇಸ್ಲಾಮ್ ಧರ್ಮದ ಯಥಾರ್ಥ

ಶಾಂತಿ ತತ್ವಗಳಿಗೆ ಅನುಸಾರವಾಗಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಜೀವಿಸುತ್ತದೆ. ದ್ವೇಷಭರಿತ ದುಷ್ಕೃತ್ಯಗಳನ್ನು ಮಾಡುವ ಭೀಕರವಾದಿ ಸಂಘಟನೆಗಳಿಗೆ ಮತ್ತು ವ್ಯಕ್ತಿಗಳಿಗೆ ನೈಜ ಇಸ್ಲಾಮ್ ಧರ್ಮದೊಂದಿಗೆ ಯಾವ ಸಂಬಂಧವೂ ಇಲ್ಲ.

ವ್ಯಕ್ತಿಗಳು ಮತ್ತು ಸಂಘಟನೆಗಳು ಸ್ವಾರ್ಥಭರಿತರಾಗಿ ನಡೆಸುವ ದ್ವೇಷಭರಿತ ಕೆಟ್ಟ ಕೆಲಸಗಳನ್ನು ಯಾವುದೇ ಧರ್ಮದೊಂದಿಗೆ ಅನ್ವಯಿಸಿ ಹೇಳಬಾರದೆಂಬುದು ನ್ಯಾಯೋಚಿತವಾಗಿದೆ. ಇಂತಹ ದುಷ್ಟ ಕೃತ್ಯಗಳನ್ನು ನೆವನವಾಗಿಟ್ಟುಕೊಂಡು ಯಾವುದೇ ಧರ್ಮವನ್ನೂ ಅದರ ಸ್ಥಾಪಕರನ್ನೂ ಆಕ್ಷೇಪಿಸಬಾರದು. ಜಾಗತಿಕ ಶಾಂತಿಯನ್ನು ಸ್ಥಾಪಿಸಲು ಎಲ್ಲ ಜನರು ಪರಸ್ಪರ ಗೌರವಿಸಬೇಕಾದುದು ಮತ್ತು ಎಲ್ಲ ಧರ್ಮಗಳನ್ನು ಗೌರವಿಸಬೇಕಾದುದು ಈಗ ಅತ್ಯಂತ ಆವಶ್ಯಕವಾಗಿದೆ. ಇದಕ್ಕೆ ಬದಲಾಗಿ ವರ್ತಿಸಿದರೆ ಅದರ ಪರಿಣಾಮ ಭಯಾನಕವಾಗುವುದು.

ಲೋಕವು ಇಂದು ಜಾಗತಿಕ ಗ್ರಾಮವಾಗಿದೆ. ಪರಸ್ಪರ ಗೌರವ ನೀಡದಿದ್ದರೆ ಮತ್ತು ಶಾಂತಿ ಸ್ಥಾಪನೆಗೆ ಪರಸ್ಪರ ಸಹಕಾರ ನೀಡದಿದ್ದರೆ ಅದರ ಪರಿಣಾಮ ಯಾವುದೇ ಪ್ರದೇಶ, ನಗರ ಅಥವಾ ದೇಶಕ್ಕೆ ಸೀಮಿತವಾಗಲಾರದು. ಅದರ ದುಷ್ಪರಿಣಾಮದಿಂದ ಕೊನೆಗೆ ಲೋಕವನ್ನೇ ನಾಶಕ್ಕೆ ಒಯ್ಯುವುದು. ಇದರ ಮೊದಲು ನಡೆದ ಎರಡು ಜಾಗತಿಕ ಮಹಾಯುದ್ಧಗಳ ಭೀಕರ ನಾಶದ ಬಗ್ಗೆ ನಮಗೆ ಚೆನ್ನಾಗಿ ತಿಳಿದಿದೆ. ಕೆಲವು ದೇಶಗಳ ವರ್ತನೆಗಳ ಕಾರಣದಿಂದ ಇನ್ನೊಂದು ಮಹಾಯುದ್ಧದ ಚಿಹ್ನೆಗಳು ದಿಗಂತದಲ್ಲಿ ಕಾಣಿಸುತ್ತಿವೆ.

ಮಹಾಯುದ್ಧವೇನಾದರೂ ಪ್ರಾರಂಭವಾದರೆ ಪಶ್ಚಿಮದ ದೇಶಗಳು ಸಹ ಅದರ ದೂರವ್ಯಾಪಕ ವಿನಾಶಕರ ಪರಿಣಾಮಗಳಿಂದ ಬಾಧಿತವಾಗುವುವು. ನಾವು ನಮ್ಮನ್ನು ಇಂತಹ ವಿನಾಶದಿಂದ ರಕ್ಷಿಸಬೇಕು. ನಾವು ನಮ್ಮ ಮುಂದಿನ ಪೀಳಿಗೆಗಳನ್ನು ಯುದ್ಧದ ವಿನಾಶಕರವೂ ದಾರುಣವೂ ಆಗಿರುವ ಪರಿಣಾಮಗಳಿಂದ ರಕ್ಷಿಸಬೇಕು. ಅಣ್ವಸ್ತ್ರ ಯುದ್ಧವು ಅತ್ಯಂತ ಭಯಂಕರವಾಗುವುದು. ಲೋಕವು ಮುಂದೆ ಸಾಗುತ್ತಿರುವ ರೀತಿಯನ್ನು ನೋಡುವಾಗ, ಅಣ್ವಸ್ತ್ರ ಯುದ್ಧವು ಸಂಭವಿಸುವ ಅಪಾಯವಿದೆ. ಇಂತಹ ಭಯಾನಕ ಪರಿಣಾಮವನ್ನು ತಡೆಗಟ್ಟಲು ನಾವು ನ್ಯಾಯ, ಭಾವೈಕ್ಯತೆ, ಪ್ರಾಮಾಣಿಕತೆಯನ್ನು ಅವಲಂಬಿಸಬೇಕು. ದ್ವೇಷವನ್ನು ಹರಡಿ ಲೋಕದ ಶಾಂತಿಯನ್ನು ಕೆಡಿಸುವ ಗುಂಪುಗಳನ್ನು ತಡೆಯಲು ನಾವು ಒಗ್ಗೂಡಬೇಕು.

ನಾನು ಭರವಸೆಪಡುತ್ತೇನೆ ಮತ್ತು ಪ್ರಾರ್ಥಿಸುತ್ತೇನೆ: ಮಹಾಶಕ್ತಿ ರಾಷ್ಟ್ರಗಳು ತಮ್ಮ ಜವಾಬ್ದಾರಿಗಳನ್ನು ಅತ್ಯಂತ ಉತ್ತಮವಾಗಿಯೂ ನ್ಯಾಯೋಚಿತವಾಗಿಯೂ ಈಡೇರಿಸಲು ಸರ್ವಶಕ್ತನಾದ ದೇವನು ಸೌಭಾಗ್ಯ ನೀಡಲಿ – ಆಮೀನ್ (ಅಲ್ಲಾಹನು ಈ ಪ್ರಾರ್ಥನೆಯನ್ನು ಸ್ವೀಕರಿಸಲಿ). ನೀವು ಸಮಯಾವಕಾಶ ಮಾಡಿಕೊಂಡು ಇಲ್ಲಿಗೆ ಆಗಮಿಸಿದುದಕ್ಕೋಸ್ಕರ ನಿಮಗೆ ಇನ್ನೊಮ್ಮೆ ಕೃತಜ್ಞತೆ ಅರ್ಪಿಸುತ್ತೇನೆ. ಅಲ್ಲಾಹನು ನಿಮ್ಮೆಲ್ಲರನ್ನು ಅನುಗ್ರಹಿಸಲಿ.

**ನಿಮಗೆ ತುಂಬಾ ಕೃತಜ್ಞತೆಗಳು.**



# ಜಾಗತಿಕ ಶಾಂತಿ –
# ಈ ಕಾಲಘಟ್ಟದ ಆವಶ್ಯಕತೆ

ನ್ಯೂಝಿಲೇಂಡ್ ನ್ಯಾಶನಲ್ ಪಾರ್ಲಿಮೆಂಟ್
ವೆಲ್ಲಿಂಗ್‌ಟನ್, ನ್ಯೂಝಿಲೇಂಡ್, 2013







Hon Kanwaljit Singh Bakshi (MP) receiving the Holy Qur'an from Hadrat Khalifatul-Masih V[aba]



Iranian ambassador Seyed Majid Tafreshi Khameneh meeting Hadrat Khalifatul-Masih V[aba]



Det. Rakesh Naidoo meeting Hadrat Khalifatul-Masih V[aba] in representation of the Commissioner of Police New Zealand



Hadrat Khalifatul-Masih V[aba] leading silent prayers at the conclusion of the official function in the Grand Hall, New Zealand Parliament



Dr. Cam Calder MP meeting Hadrat Khalifatul-Masih V[aba]



Hadrat Khalifatul-Masih V[aba] delivering the keynote address at the Grand Hall, in the New Zealand Parliament. 4th Nov 2013



Hon. Kanwaljit Singh Bakshi (MP) with Hadrat Khalifatul-Masih V[aba] and his entourage in front of the New Zealand Parliament

# ಮುನ್ನುಡಿ

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನಾಯಕರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಪಂಚಮ ಖಲೀಫ, ಅವರು 2013 ನವೆಂಬರ್ ದಿನಾಂಕ 4ರಂದು ನ್ಯೂಝಿಲೇಂಡ್ ದೇಶದ ವೆಲ್ಲಿಂಗ್‌ಟನ್‌ನಲ್ಲಿರುವ ನ್ಯಾಶನಲ್ ಪಾರ್ಲಿಮೆಂಟ್‌ನಲ್ಲಿ ಭಾಷಣ ಮಾಡಿದರು. ಈ ಚಾರಿತ್ರಿಕ ಭಾಷಣ ನೀಡುವಾಗ ಪಾರ್ಲಿಮೆಂಟ್ ಸದಸ್ಯರು, ವಿವಿಧ ದೇಶಗಳ ರಾಯಭಾರಿಗಳು, ವಿದ್ಯಾಭ್ಯಾಸ ಪರಿಣಿತರು ಮತ್ತು ಇತರ ಗಣ್ಯರು ಹಾಜರಿದ್ದರು. ಲೋಕದ ವಿವಿಧ ಭಾಗಗಳಲ್ಲಿ ಸಂಘರ್ಷಗಳು ತಲೆದೋರಿರುವ ಪರಿಸ್ಥಿತಿಯಲ್ಲಿ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ನ್ಯಾಯಪಾಲನೆಯ ತುರ್ತು ಆವಶ್ಯಕತೆ ಇದೆ ಎಂದು ವಾಗ್ದತ್ತ ಮಸೀಹರ ಖಲೀಫರು ಪ್ರತಿಪಾದಿಸಿದರು. ಈ ಮುಖ್ಯ ಭಾಷಣದ ನಂತರ ಇತರ ಗಣ್ಯರು ಸಹ ಭಾಷಣ ಮಾಡಿದರು. ಪಾರ್ಲಿಮೆಂಟ್ ಸದಸ್ಯ ಕನ್‌ವಲ್‌ಜಿತ್ ಸಿಂಗ್ ಬಕ್ಷಿ ಹೀಗೆ ಹೇಳಿದರು: "ಪರಮ ಪವಿತ್ರ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರ ಭಾಷಣವನ್ನು ಆಲಿಸಿ ಅವರ ಬುದ್ಧಿವೈಭವವನ್ನೂ ಅವರ ವಿಚಾರಗಳನ್ನೂ ತಿಳಿಯಲು ಸಾಧ್ಯವಾದುದು ನಮಗೆ ದೊರೆತ ವಿಶೇಷ ಭಾಗ್ಯವಾಗಿದೆ."

ಪಾರ್ಲಿಮೆಂಟ್ ಸದಸ್ಯ ಡಾಕ್ಟರ್ ರಾಜೇನ್ ಪ್ರಸಾದ್ ಹೀಗೆ ಹೇಳಿದರು: "ಪರಮ ಪವಿತ್ರ ಮಹಾನುಭಾವರನ್ನು ನ್ಯೂಝಿಲೇಂಡ್ ಪಾರ್ಲಿಮೆಂಟ್‌ಗೆ ಸ್ವಾಗತಿಸಲು ಸಂತೋಷವಾಗುತ್ತದೆ. ಅಹ್ಮದೀ ಮುಸ್ಲಿಮರು ಈ ದೇಶದ ನಾಗರಿಕರಾಗಿ ತಮ್ಮ ಶಾಂತಿ ಸಂದೇಶಗಳನ್ನು ಕೃತಿರೂಪಕ್ಕೆ ತರುತ್ತಿರುವುದನ್ನು ನೋಡಿ ನಾನು ಯಾವಾಗಲೂ ಪ್ರಭಾವಿತನಾಗಿದ್ದೇನೆ." ಈ ಸಮಾರಂಭದ ಕೊನೆಗೆ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಇರಾನಿನ ಮತ್ತು ಇಸ್ರಾಯೇಲ್‌ನ ರಾಯಭಾರಿಗಳ ಸಹಿತ ಅನೇಕ ಗಣ್ಯರನ್ನು ಭೇಟಿಯಾದರು. ಅನಂತರ ಪಾರ್ಲಿಮೆಂಟ್ ಸದಸ್ಯರಾದ ಕನ್‌ವಲ್‌ಜಿತ್ ಸಿಂಗ್ ಬಕ್ಷಿ ಪಾರ್ಲಿಮೆಂಟ್ ಭವನವನ್ನು ಹಝ್ರತ್ ಖಲೀಫರಿಗೆ ತೋರಿಸಿಕೊಟ್ಟರು.

# ಜಾಗತಿಕ ಶಾಂತಿ –
# ಈ ಕಾಲಘಟ್ಟದ ಆವಶ್ಯಕತೆ

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್ –
ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ.

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ–
ಅಲ್ಲಾಹನ ಶಾಂತಿ ಮತ್ತು ಅನುಗ್ರಹಗಳು ನಿಮ್ಮ ಮೇಲಿರಲಿ.

ಮೊತ್ತ ಮೊದಲು ಈ ಸಮಾರಂಭವನ್ನು ವ್ಯವಸ್ಥೆಗೊಳಿಸಿದವರನ್ನು ಮತ್ತು ವಿಶಿಷ್ಟವಾಗಿ ಪಾರ್ಲಿಮೆಂಟ್ ಸದಸ್ಯರಾದ ಕನ್‌ವಲ್‌ಜಿತ್ ಸಿಂಗ್ ಬಕ್ಷಿಯವರಿಗೆ ಕೃತಜ್ಞತೆ ಅರ್ಪಿಸುತ್ತೇನೆ. ಅವರು ಈ ದಿನ ನಿಮ್ಮನ್ನು ಸಂಬೋಧಿಸಲು ನನಗೆ ಸಂದರ್ಭವನ್ನು ಒದಗಿಸಿದ್ದಾರೆ. ಎರಡನೆಯದಾಗಿ, ನನ್ನ ಭಾಷಣವನ್ನು ಆಲಿಸಲು ಇಲ್ಲಿಗೆ ಆಗಮಿಸಿದ ನಿಮಗೆಲ್ಲರಿಗೂ ಕೃತಜ್ಞತೆ ಅರ್ಪಿಸುತ್ತೇನೆ.

ಈ ಪಾರ್ಲಿಮೆಂಟ್ ಹೌಸಿನಲ್ಲಿ ಅನೇಕ ರಾಜಕಾರಣಿಗಳು ಮತ್ತು ಪಾರ್ಲಿಮೆಂಟ್ ಸದಸ್ಯರು ಆಗಾಗ ಜಮಾಯಿಸಿ ದೇಶದ ಅಭಿವೃದ್ಧಿಗೆ ಪೂರಕವಾದ ನಿಯಮಗಳನ್ನು ರೂಪಿಸಲು ಸಮಾಲೋಚಿಸುತ್ತಾರೆ. ಇದಲ್ಲದೆ ಅನೇಕ ಲೌಕಿಕ ನಾಯಕರು ಇಲ್ಲಿಗೆ ಆಗಮಿಸಿ ತಮ್ಮ ಜ್ಞಾನ, ನೈಪುಣ್ಯತೆ ಮತ್ತು ಅನುಭವದ ಬಗ್ಗೆ ನಿಮ್ಮನ್ನು ಸಂಬೋಧಿಸಿ ಭಾಷಣಗಳನ್ನು ಮಾಡಿರಬಹುದು, ಆದರೆ ನಿಮ್ಮನ್ನು ಧಾರ್ಮಿಕ ನಾಯಕರು, ವಿಶಿಷ್ಟವಾಗಿ ಮುಸ್ಲಿಮ್ ಧಾರ್ಮಿಕ ನಾಯಕರು ಬಹಳ ಅಪರೂಪವಾಗಿ ಸಂಬೋಧಿಸಿರಬಹುದು. ಸಂಪೂರ್ಣವಾಗಿಯೂ ಇಸ್ಲಾಮಿನ ಸಂಘಟನೆಯಾದ ಮತ್ತು ಇಸ್ಲಾಮಿನ ನೈಜ ಸಂದೇಶವನ್ನು ಪ್ರಚಾರಗೊಳಿಸುವ ಏಕಮಾತ್ರ ಉದ್ದೇಶವನ್ನು ಹೊತ್ತಿರುವ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ನಾಯಕನೆಂಬ ನೆಲೆಯಲ್ಲಿ ನನಗೆ ನಿಮ್ಮನ್ನು ಸಂಬೋಧಿಸಲು ಸಂದರ್ಭವೊದಗಿಸಿದ್ದು ನಿಮ್ಮ ವಿಶಾಲ ಹೃದಯತೆಯನ್ನೂ ನಿಮ್ಮ ಸಹಿಷ್ಣುತೆಯನ್ನೂ ಪ್ರತಿಬಿಂಬಿಸುತ್ತಿದೆ. ಆದುದರಿಂದ ನಿಮ್ಮ ಈ ನಿಲುವಿಗೆ ನಾನು ನಿಮಗೆ ಕೃತಜ್ಞನಾಗಿದ್ದೇನೆ.

ನಾನು ಈಗ ಇಸ್ಲಾಮಿನ ಸುಂದರ ಉಪದೇಶಗಳ ಬಗ್ಗೆ ಮಾತನಾಡಲು ಬಯಸುತ್ತೇನೆ. ಇಂದಿನ ಕಾಲದ ತುರ್ತು ಆವಶ್ಯಕತೆ ಜಾಗತಿಕ ಶಾಂತಿ ಸ್ಥಾಪನೆ ಆಗಿದೆ. ರಾಜಕಾರಣಿಗಳು ಮತ್ತು ವ್ಯಕ್ತಿಗಳು ಇದರ ಬಗ್ಗೆ ವೈಯಕ್ತಿಕವಾಗಿಯೂ ಸರಕಾರದ ಮೂಲಕವೂ ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ಪ್ರಯತ್ನಿಸಿರಬಹುದು. ನೀವು ಉತ್ತಮ ಉದ್ದೇಶದಿಂದ ಕಾರ್ಯನಿರತರಾಗಿರಬಹುದು ಮತ್ತು ಆ ನಿಟ್ಟಿನಲ್ಲಿ ತಕ್ಕಮಟ್ಟಿಗೆ

ಜಯಗಳಿಸಿರಬಹುದು. ನಿಮ್ಮ ಸರಕಾರ ಕಳೆದ ಹಲವು ವರ್ಷಗಳಲ್ಲಿ ಪ್ರಮುಖ ಶಕ್ತಿಶಾಲಿ ರಾಷ್ಟ್ರಗಳಿಗೆ ಲೋಕದಲ್ಲಿ ಶಾಂತಿ ಮತ್ತು ಸೌಹಾರ್ದ ಸ್ಥಾಪನೆ ಬಗ್ಗೆ ಸಲಹೆ ನೀಡಿರಲೂಬಹುದು.

ಇಂದು ಲೋಕದ ಪರಿಸ್ಥಿತಿ ಅತ್ಯಂತ ಅಪಾಯಕರವಾಗಿದೆ ಮತ್ತು ಲೋಕದಾದ್ಯಂತ ಬಹಳ ಆತಂಕವನ್ನು ಉಂಟುಮಾಡಿದೆ. ಕೆಲವು ಮುಖ್ಯ ಸಂಘರ್ಷಗಳು ಈಗ ಅರಬ್ ಲೋಕದಲ್ಲಿ ನಡೆಯುತ್ತಿವೆ. ಆದರೆ ಅಂತಹ ಸಂಘರ್ಷಗಳು ಅಲ್ಲಿಗೆಯೇ ಸೀಮಿತವಾಗಲಾರದೆಂದು ಬುದ್ಧಿಶಾಲಿಯಾದ ಯಾರಿಗಾದರೂ ಮನವರಿಕೆಯಾಗಬಹುದಾಗಿದೆ. ಒಂದು ಸರಕಾರ ಮತ್ತು ಅದರ ಪ್ರಜೆಗಳ ಮಧ್ಯೆ ಪ್ರಾರಂಭವಾಗಿರುವ ಸಂಘರ್ಷ ಭುಗಿಲೆದ್ದು ಅಂತರ್ರಾಷ್ಟ್ರೀಯ ಬಿಕ್ಕಟ್ಟಾಗಿ ಹೆಚ್ಚು ವ್ಯಾಪಕವಾಗಬಹುದಾಗಿದೆ. ಪ್ರಮುಖ ಶಕ್ತಿ ರಾಷ್ಟ್ರಗಳ ಎರಡು ಬಣಗಳು ಈಗಾಗಲೇ ರೂಪಗೊಳ್ಳುತ್ತಾ ಇವೆ. ಒಂದು ಬಣ ಸಿರಿಯಾ ಸರಕಾರವನ್ನೂ ಇನ್ನೊಂದು ಬಣ ವಿದ್ರೋಹಿಗಳನ್ನೂ ಬೆಂಬಲಿಸುತ್ತಿವೆ. ಈ ಪರಿಸ್ಥಿತಿ ಮುಸ್ಲಿಮ್ ದೇಶಗಳಿಗೆ ಬಹಳ ದೊಡ್ಡ ಬೆದರಿಕೆ ಒಡ್ಡುತ್ತಿದ್ದು ಲೋಕದ ಇತರ ಪ್ರದೇಶಗಳಿಗೂ ಬಹಳ ಅಪಾಯಕರವಾಗಿದೆ.

ಕಳೆದ ಶತಮಾನದಲ್ಲಿ ಸಂಭವಿಸಿದ ಹೃದಯ ವಿದ್ರಾವಕ ಎರಡು ಮಹಾಯುದ್ಧಗಳನ್ನು ನಾವು ಎಂದೂ ಮರೆತು ಬಿಡಬಾರದು. ಅವು ಉಂಟುಮಾಡಿದ ಮಹಾನಾಶ – ವಿಶಿಷ್ಟವಾಗಿ ದ್ವಿತೀಯ ಮಹಾಯುದ್ಧ ಉಂಟುಮಾಡಿದ ವಿನಾಶ – ಹಿಂದೆಂದೂ ಸಂಭವಿಸದಷ್ಟು ಭೀಕರವಾಗಿತ್ತು. ಪರಮಾಣ್ವೇತರ ಸಮರಾಯುಧಗಳನ್ನು ಬಳಸಿ ಜನನಿಬಿಡ ಪಟ್ಟಣಗಳನ್ನು ಸಂಪೂರ್ಣವಾಗಿ ನಾಶಗೊಳಿಸಲಾಯಿತು. ಮಿಲಿಯಗಟ್ಟಲೆ ಜನರು ಕೊಲ್ಲಲ್ಪಟ್ಟರು. ದ್ವಿತೀಯ ಮಹಾಯುದ್ಧದ ಸಂದರ್ಭದಲ್ಲಿ ಅತ್ಯಂತ ಭಯಾನಕ ಸರ್ವನಾಶವನ್ನು ಲೋಕವು ಕಂಡಿತು. ಜಪಾನ್ ದೇಶದ ಹಿರೋಶಿಮಾ ಮತ್ತು ನಾಗಸಾಕಿಗಳಿಗೆ ವರ್ಷಿಸಿದ ಅಣುಬಾಂಬ್‌ಗಳಿಂದ ಸಂಭವಿಸಿದಂತಹ ವಿನಾಶದ ಬಗ್ಗೆ ವಿವರಣೆಗಳನ್ನು ಆಲಿಸುವಾಗ ನಡುಕ ಉಂಟಾಗುತ್ತದೆ. ಆ ನಗರಗಳಲ್ಲಿ ಈಗ ಸ್ಥಾಪಿತವಾದ ಮ್ಯೂಸಿಯಮ್‌ಗಳಲ್ಲಿ ಪ್ರದರ್ಶಿಸಲಾಗುವ ಚಿತ್ರಗಳು ಅಲ್ಲಿ ಸಂಭವಿಸಿದ ಮಹಾನಾಶದ ಬಗ್ಗೆ ನಮಗೆ ನೆನಪಿಸಿಕೊಡುತ್ತವೆ.

ದ್ವಿತೀಯ ಮಹಾಯುದ್ಧದಲ್ಲಿ ಅಂದಾಜು ಎಪ್ಪತ್ತು ಮಿಲಿಯ ಜನರು ಕೊಲ್ಲಲ್ಪಟ್ಟರು. ಅವರ ಪೈಕಿ ನಲ್ವತ್ತು ಮಿಲಿಯ ಜನರು ಸೈನಿಕರಾಗಿರಲಿಲ್ಲ; ನಾಗರಿಕರಾಗಿದ್ದರು. ಈ ಮಹಾಯುದ್ಧದಲ್ಲಿ ಸೈನಿಕರಿಗಿಂತ ಹೆಚ್ಚು ಸಾಮಾನ್ಯ ಜನರು

ಬಲಿಯಾದರೆಂದು ಸ್ಪಷ್ಟವಾಗುತ್ತದೆ. ಯುದ್ಧವು ಕೊನೆಗೊಂಡ ನಂತರ ಸಹ ಮಿಲಿಯಾಂತರ ಜನರು ಮೃತರಾದರು. ಹೀಗೆ ಯುದ್ಧದ ಪರಿಣಾಮ ಅತ್ಯಂತ ಭಯಾನಕವಾಗಿತ್ತು. ಅಣುಬಾಂಬು ಪ್ರಯೋಗಿಸಿ ಅನೇಕ ವರ್ಷ ದಾಟಿಹೋದರೂ ಅದರ ದುಷ್ಪರಿಣಾಮಗಳು ನವಜಾತ ಶಿಶುಗಳಲ್ಲಿ ಕಾಣಿಸುತ್ತಾ ಇವೆ. ಆಧುನಿಕ ಲೋಕದಲ್ಲಿ ಚಿಕ್ಕ ದೇಶಗಳು ಕೂಡ ಅಣು ಬಾಂಬುಗಳನ್ನು ಹೊಂದಿವೆ. ಆ ದೇಶಗಳ ನಾಯಕರು ಯುದ್ಧ ಪ್ರಿಯರೂ ಆಗಿದ್ದಾರೆ. ಅಣು ಬಾಂಬು ಪ್ರಯೋಗಿಸಿದುದರಿಂದ ಉಂಟಾಗುವ ಮಹಾ ವಿನಾಶದ ಬಗ್ಗೆ ಅವರಿಗೆ ಪರಿವೆ ಇಲ್ಲ.

ಇಂದು ಘಟಿಸಬಹುದಾದ ಅಣ್ವಸ್ತ್ರ ಯುದ್ಧದ ಬಗ್ಗೆ ಊಹಿಸುವಾಗ ನಮಗೆ ದೊರಕುವ ಚಿತ್ರವು ಒಬ್ಬ ವ್ಯಕ್ತಿಯನ್ನು ಆಘಾತಗೊಳಿಸಿ ಸಂಪೂರ್ಣವಾಗಿ ಸ್ತಬ್ಧಗೊಳಿಸುತ್ತದೆ. ಇಂದು ಚಿಕ್ಕ ದೇಶಗಳ ಬಳಿಯಲ್ಲಿರುವ ಅಣುಬಾಂಬುಗಳು ದ್ವಿತೀಯ ಮಹಾಯುದ್ಧದಲ್ಲಿ ಬಳಸಲ್ಪಟ್ಟ ಅಣು ಬಾಂಬ್‌ಗಳಿಗಿಂತ ಹೆಚ್ಚು ಶಕ್ತಿಶಾಲಿಯಾಗಿವೆ. ಸಂಘರ್ಷ ಮತ್ತು ಅಸ್ಥಿರತೆಯ ಇಂದಿನ ವಾತಾವರಣವು ಲೋಕದಲ್ಲಿ ಶಾಂತಿ ಸ್ಥಾಪಿಸಲು ಬಯಸಿ ಅದರ ಬಗ್ಗೆ ಪ್ರಯತ್ನಿಸುವವರಿಗೆ ಬಹಳ ಆತಂಕದಾಯಕವಾಗಿದೆ.

ಇಂದು ಲೋಕದ ಸ್ಥಿತಿ ಬಹಳ ಕರುಣಾಜನಕವಾಗಿದೆ. ಜನರು ಒಂದು ಹಂತದಲ್ಲಿ ಶಾಂತಿ ಸ್ಥಾಪಿಸುವ ಬಗ್ಗೆ ಹೇಳುತ್ತಾರೆ. ಆದರೆ ಅದೇ ಜನರು ಇನ್ನೊಂದು ಹಂತದಲ್ಲಿ ಅಹಂಕಾರಭರಿತರಾಗಿ ದರ್ಪದಿಂದ ವರ್ತಿಸುತ್ತಾರೆ. ತಮ್ಮ ಮೇಲ್ಮೆಯನ್ನೂ ಶಕ್ತಿಯನ್ನೂ ಪ್ರದರ್ಶಿಸಲು ಪ್ರತಿಯೊಂದು ಶಕ್ತಿಶಾಲಿ ದೇಶದ ಸರಕಾರ ಏನನ್ನೂ ಮಾಡಲು ಹೇಸದವುಗಳಾಗಿವೆ. ದ್ವಿತೀಯ ಮಹಾಯುದ್ಧ ಕೊನೆಗೊಂಡ ನಂತರ ಲೋಕದಲ್ಲಿ ಶಾಶ್ವತ ಶಾಂತಿ ಸ್ಥಾಪಿಸಲು ಮತ್ತು ಮುಂದೆ ಯುದ್ಧಗಳಾಗದಂತೆ ಮಾಡಲು ಸಂಯುಕ್ತ ರಾಷ್ಟ್ರ ಸಂಘವನ್ನು ಸ್ಥಾಪಿಸಲಾಯಿತು. ಹಿಂದೆ ಸ್ಥಾಪಿತವಾಗಿದ್ದ ಲೀಗ್ ಆಫ್ ನೇಶನ್ಸ್ ಸೋತು ಹೋದ ಹಾಗೆ ಈಗ ಸ್ಥಾಪಿತವಾದ ಸಂಯುಕ್ತ ರಾಷ್ಟ್ರ ಸಂಘ (UNO)ದ ಸ್ಥಾನಮಾನಗಳು ಮತ್ತು ಗೌರವ ದಿನಂಪ್ರತಿ ಕುಸಿಯುತ್ತಾ ಹೋಗುತ್ತಿವೆ. ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸದಿದ್ದರೆ ಶಾಂತಿ ಸ್ಥಾಪನೆಗೋಸ್ಕರ ಎಷ್ಟು ಸಂಸ್ಥೆಗಳನ್ನು ರೂಪಿಸಿದರೂ ಅವುಗಳೆಲ್ಲವು ನಿಷ್ಫಲವಾಗುವುವು.

ಲೀಗ್ ಆಫ್ ನೇಶನ್ಸ್ ಸೋತುಹೋದ ಬಗ್ಗೆ ನಾನು ಹೇಳಿದೆ. ಪ್ರಥಮ ಮಹಾಯುದ್ಧ ಕೊನೆಗೊಂಡ ನಂತರ ಜಾಗತಿಕ ಶಾಂತಿಯನ್ನು ಸ್ಥಾಪಿಸಿ ರಕ್ಷಿಸಲು ಈ ಸಂಸ್ಥೆಯನ್ನು ರೂಪಿಸಲಾಯಿತು. ಈ ಸಂಸ್ಥೆಗೆ ದ್ವಿತೀಯ ಮಹಾಯುದ್ಧ ಪ್ರಾರಂಭವಾಗುವುದನ್ನು ತಡೆಯಲು ಸಾಧ್ಯವಾಗಲಿಲ್ಲ. ಆ ಮಹಾಯುದ್ಧ ನಾನು ಇದರ ಮೊದಲು ಹೇಳಿದ ಹಾಗೆ ಮಹಾನಾಶವನ್ನುಂಟುಮಾಡಿತು. ನ್ಯೂಝಿಲೇಂಡ್‌ನ

ಹನ್ನೊಂದು ಸಾವಿರ ಸೈನಿಕರು ಆ ಮಹಾಯುದ್ಧದಲ್ಲಿ ಕೊಲ್ಲಲ್ಪಟ್ಟರು. ನ್ಯೂಝಿಲೇಂಡ್ ಯುದ್ಧ ಕ್ಷೇತ್ರದಿಂದ ಬಹಳ ದೂರವಿದ್ದ ಕಾರಣ ದೇಶದ ಸಾಮಾನ್ಯ ಜನರು ಕೊಲ್ಲಲ್ಪಡಲಿಲ್ಲ. ನಾನು ಹಿಂದೆ ಹೇಳಿದ ಹಾಗೆ ದ್ವಿತೀಯ ಮಹಾಯುದ್ಧದಲ್ಲಿ ಕೊಲ್ಲಲ್ಪಟ್ಟ ಸೈನಿಕರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸಾಮಾನ್ಯ ನಾಗರಿಕರು ಕೊಲ್ಲಲ್ಪಟ್ಟರು. ನೀವು ಯೋಚಿಸಿರಿ; ನಿಷ್ಕಳಂಕರಾದ ಅಸಂಖ್ಯಾತ ಪುರುಷರೂ ಮಹಿಳೆಯರೂ ಮಕ್ಕಳೂ ಅವರು ಯಾವುದೇ ಅಪರಾಧ ಮಾಡಿರಲಿಲ್ಲವಾದರೂ ಕೊಲ್ಲಲ್ಪಟ್ಟರು. ಈ ಕಾರಣದಿಂದ ಯುದ್ಧ ಪೀಡಿತ ದೇಶಗಳಲ್ಲಿ ಯುದ್ಧದ ಬಗ್ಗೆ ಜನರಲ್ಲಿ ದ್ವೇಷವು ಬೇರೂರಿರುತ್ತದೆ. ಒಂದು ದೇಶವು ಆಕ್ರಮಿಸಲ್ಪಟ್ಟರೆ ಆ ದೇಶವನ್ನು ಪ್ರೀತಿಸುವ ನಾಗರಿಕನು ತನ್ನ ದೇಶವನ್ನು ಪ್ರತಿರೋಧಿಸಲು ಮತ್ತು ಶತ್ರುಗಳಿಂದ ರಕ್ಷಿಸಲು ತ್ಯಾಗಗಳನ್ನು ಮಾಡಬೇಕಾದದ್ದು ಕಡ್ಡಾಯ ಕರ್ತವ್ಯವಾಗಿದೆ. ಆದರೆ ಸಂಘರ್ಷವು ಶಾಂತಿಯುತವಾಗಿ ಸಂಧಾನ ಮಾತುಕತೆ ಮತ್ತು ರಾಜತಂತ್ರದಿಂದ ಪರಿಹರಿಸಲ್ಪಡಲು ಸಾಧ್ಯವಿದ್ದರೆ ಅನಾವಶ್ಯಕವಾಗಿ ಮೃತ್ಯುವನ್ನೂ ಕೊಲ್ಲುವುದನ್ನೂ ಆಮಂತ್ರಿಸಬಾರದು. ಹಿಂದಿನ ಕಾಲದಲ್ಲಿ ಯುದ್ಧ ನಡೆದರೆ ಹೆಚ್ಚಾಗಿ ಸೈನಿಕರೇ ಕೊಲ್ಲಲ್ಪಡುತ್ತಿದ್ದರು. ನಾಗರಿಕರು ಬಹಳ ವಿರಳವಾಗಿ ಹತರಾಗುತ್ತಿದ್ದರು. ಇಂದಿನ ಕಾಲದ ಯುದ್ಧ ಸಾಧನಗಳಲ್ಲಿ ಬಾಂಬ್ ದಾಳಿ, ವಿಷವಾಯು ಪ್ರಯೋಗ ಮತ್ತು ರಾಸಾಯನಿಕ ಅಸ್ತ್ರಗಳ ಬಳಕೆ ಒಳಪಟ್ಟಿದೆ. ಮಾತ್ರವಲ್ಲ, ನಾನು ಹಿಂದೆ ಹೇಳಿದಂತೆ, ಅತ್ಯಂತ ಭಯಾನಕವಾದ ಪರಮಾಣು ಬಾಂಬನ್ನು ಪ್ರಯೋಗಿಸ ಲಾಗುವುದು. ಈ ಕಾರಣದಿಂದ ಇಂದಿನ ಕಾಲದ ಯುದ್ಧಗಳು ಹಿಂದಿನ ಕಾಲದವುಗಳಿಗಿಂತ ಸಂಪೂರ್ಣವಾಗಿ ವಿಭಿನ್ನವಾಗಿವೆ. ಇಂದಿನ ಯುದ್ಧಗಳು ಮಾನವರನ್ನೆಲ್ಲ ಭೂಲೋಕದಿಂದ ಅಳಿಸಿಬಿಡಲು ಶಕ್ತವಾಗಿವೆ. ಈ ಸಂದರ್ಭದಲ್ಲಿ, ಲೋಕದಲ್ಲಿ ಶಾಂತಿ ಸ್ಥಾಪಿಸುವ ಬಗ್ಗೆ ಪವಿತ್ರ ಖುರ್‌ಆನಿನ ಒಂದು ಸುಂದರ ಉಪದೇಶವನ್ನು ಉಲ್ಲೇಖಿಸಲು ನಾನು ಬಯಸುತ್ತೇನೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

> **ಒಳಿತು ಮತ್ತು ಕೆಡುಕು ಸಮಾನವಲ್ಲ. ಅತಿ ಉತ್ತಮವಾದ ಒಳಿತಿನ ಮೂಲಕ ನೀನು ಕೆಡುಕನ್ನು ತಡೆ. ಆಗ ನಿನ್ನ ಮತ್ತು ಅವನ ಮಧ್ಯೆ ಇರುವ ಶತ್ರುತ್ವ ನೀಗಿ ಅವನು ನಿನ್ನ ಆಪ್ತ ಮಿತ್ರನಾಗುತ್ತಾನೆ. (41:35)**

ಹಗೆತನ ಮತ್ತು ದ್ವೇಷವನ್ನು ಸಾಧ್ಯವಾದಷ್ಟು ಮಟ್ಟಿಗೆ ಚರ್ಚೆಯ ಮೂಲಕ ನಿವಾರಿಸಲು ಪ್ರಯತ್ನಿಸಬೇಕೆಂದು ಪವಿತ್ರ ಖುರ್‌ಆನ್ ಉಪದೇಶಿಸುತ್ತಾರೆ. ದಯೆಯಿಂದಲೂ ವಿವೇಕಪೂರ್ಣವಾಗಿಯೂ ಯಾರೊಂದಿಗಾದರೂ ಮಾತನಾಡಿದರೆ, ಅದರಿಂದ ಉತ್ತಮ ಪರಿಣಾಮ ಉಂಟಾಗುವುದು; ದ್ವೇಷಭರಿತರಾದವರ ದ್ವೇಷವು

ತೊಲಗಿ ಹೋಗುವುದು.

ಇಂದಿನ ಕಾಲದಲ್ಲಿ ಜೀವಿಸುವ ನಾವು ಅತ್ಯಂತ ಪ್ರಗತಿ ಗಳಿಸಿದವರೆಂದೂ ಸುಸಂಸ್ಕೃತರೆಂದೂ ಅಭಿಮಾನಿಸುತ್ತೇವೆ. ನಾವು ಅನೇಕ ಅಂತರ್ರಾಷ್ಟ್ರೀಯ ನೆರವು ನೀಡುವ ಸಂಸ್ಥೆಗಳನ್ನು ಸ್ಥಾಪಿಸಿ ಮಕ್ಕಳಿಗೆ ವಿದ್ಯಾಭ್ಯಾಸ ನೀಡುತ್ತಿದ್ದೇವೆ ಮತ್ತು ಮಾತೆಯರಿಗೆ ಆರೋಗ್ಯ ಸೇವೆ ನೀಡುತ್ತಿದ್ದೇವೆ. ಇವುಗಳಲ್ಲದೆ ಬೇರೆ ಅಸಂಖ್ಯಾತ ಉದಾರ ಸೇವೆಗಳನ್ನು ನೀಡುವ ಸಂಸ್ಥೆಗಳಿದ್ದು ಅವು ಮಾನವರ ಹಿತಕ್ಕೋಸ್ಕರ ಕರುಣೆಯಿಂದ ಸ್ಥಾಪಿತವಾಗಿವೆ. ಮಾನವರ ಹಿತಕ್ಕೋಸ್ಕರ ಇವುಗಳನ್ನೆಲ್ಲ ಮಾಡಿರುವ ನಾವು ಈ ಕಾಲದ ತುರ್ತು ಆವಶ್ಯಕತೆ ಬಗ್ಗೆ ಕಾಳಜಿ ವಹಿಸಬೇಕು; ನಮ್ಮನ್ನೂ ಇತರರನ್ನೂ ಯುದ್ಧಗಳ ಮಹಾ ವಿನಾಶಗಳಿಂದ ರಕ್ಷಿಸುವುದು ಹೇಗೆ ಎಂಬುದರ ಬಗ್ಗೆ ಚಿಂತಿಸಬೇಕು. ಅರುವತ್ತು ಎಪ್ಪತ್ತು ವರ್ಷಗಳ ಹಿಂದೆ ಇದ್ದುದಕ್ಕಿಂತ ಲೋಕವು ಈಗ ಹೆಚ್ಚು ಸಮೀಪವಾಗಿ ಪರಿಣಮಿಸಿದೆ. ಅರುವತ್ತು ಎಪ್ಪತ್ತು ವರ್ಷಗಳ ಹಿಂದೆ ನ್ಯೂಝಿಲೇಂಡ್ ಏಶಿಯಾದಿಂದಲೂ ಯುರೋಪಿನಿಂದಲೂ ಬಹಳ ದೂರವಿದ್ದ ಒಂದು ದೇಶವಾಗಿತ್ತು. ಈಗ ಅದು ಜಾಗತಿಕ ಸಮುದಾಯದಲ್ಲಿ ಸೇರಿರುವ ಒಂದು ಅವಿಭಾಜ್ಯ ಭಾಗವಾಗಿದೆ. ಆದುದರಿಂದ ಒಂದು ಮಹಾಯುದ್ಧ ಪ್ರಾರಂಭಗೊಂಡರೆ ಯಾವ ದೇಶವೂ ಸುರಕ್ಷಿತವಾಗಿರಲಾರದು.

ನಿಮ್ಮ ನಾಯಕರೂ ನಿಮ್ಮ ರಾಜಕಾರಣಿಗಳೂ ನಿಮ್ಮ ದೇಶದ ರಕ್ಷಕರಾಗಿದ್ದಾರೆ. ದೇಶದ ಭದ್ರತೆ ಮತ್ತು ಪ್ರಗತಿಗೆ ಅವರು ಹೊಣೆಗಾರರಾಗಿದ್ದಾರೆ. ಅವರು ಯಾವಾಗಲೂ ಒಂದು ಮುಖ್ಯ ಅಂಶವನ್ನು ತಮ್ಮ ಮನಸ್ಸಿನಲ್ಲಿ ಇರಿಸುವುದು ಆವಶ್ಯಕವಾಗಿದೆ. ಸ್ಥಳೀಯವಾಗಿ ಪ್ರಾರಂಭವಾಗುವ ಯುದ್ಧಗಳು ವಿಸ್ತಾರಗೊಂಡು ವಿನಾಶವು ಎಲ್ಲ ಕಡೆಗಳಿಗೂ ವ್ಯಾಪಿಸುತ್ತದೆ. ಲೋಕದ ಮಹಾಶಕ್ತಿ ರಾಷ್ಟ್ರಗಳ ಸರಕಾರಗಳಿಗೆ ದೇವನು ಇತ್ತೀಚೆಗೆ ವಿವೇಕವನ್ನು ನೀಡಿದ್ದಕ್ಕೆ ನಾವು ಸರ್ವಶಕ್ತನಾದ ದೇವನಿಗೆ ಕೃತಜ್ಞತೆ ಅರ್ಪಿಸುತ್ತೇವೆ. ಯುದ್ಧವನ್ನು ತಡೆಗಟ್ಟಲು ಕೂಡಲೆ ಕ್ರಮ ಕೈಗೊಳ್ಳಬೇಕೆಂದು ಅವರು ನಿರ್ಧರಿಸಿದರು. ಇಲ್ಲದಿದ್ದರೆ ಮಹಾವಿನಾಶ ಸಂಭವಿಸುತ್ತಿತ್ತು. ರಷ್ಯದ ಅಧ್ಯಕ್ಷರು, ಇತರ ಶಕ್ತಿಶಾಲಿ ದೇಶಗಳು ಸಿರಿಯಾವನ್ನು ಆಕ್ರಮಿಸದಂತೆ ಬಹಳ ಯುಕ್ತತೆಯಿಂದ ತಡೆದರು. ಎಲ್ಲ ದೇಶಗಳನ್ನು ಅವು ದೊಡ್ಡದಾಗಿರಲೀ ಚಿಕ್ಕದಾಗಿರಲೀ ಅವುಗಳನ್ನೆಲ್ಲ ಸಮಾನವಾಗಿ ಕಾಣಬೇಕೆಂದು ಅವರು ಹೇಳಿದರು. ನ್ಯಾಯಪಾಲನೆ ಮಾಡದಿದ್ದರೆ ಮತ್ತು ಸಂಯುಕ್ತ ರಾಷ್ಟ್ರ ಸಂಘದ ಅನುಮತಿ ಇಲ್ಲದೆ ನೇರವಾಗಿ ಸ್ವತಂತ್ರವಾಗಿ ಕೆಲವು ದೇಶಗಳು ಯುದ್ಧ ಪ್ರಾರಂಭಿಸಿದರೆ ಸಂಯುಕ್ತ ರಾಷ್ಟ್ರ ಸಂಘವು ಲೀಗ್ ಆಫ್ ನೇಶನ್ಸ್‌ನ ಗತಿಯನ್ನು ಹೊಂದುವುದೆಂದು ಅವರು ಎಚ್ಚರಿಸಿದರು. ಅವರ ಈ ವಿಶ್ಲೇಷಣೆ ಸಂಪೂರ್ಣವಾಗಿ

ಸರಿಯಾಗಿದೆ ಎಂದು ನಾನು ನಂಬುತ್ತೇನೆ. ಅವರ ಎಲ್ಲ ಧೋರಣೆಗಳನ್ನು ನಾನು ಅಂಗೀಕರಿಸುವುದಿಲ್ಲವಾದರೂ ಅವರ ವಿವೇಕಭರಿತ ಸಲಹೆಯನ್ನು ಅಂಗೀಕರಿಸಬೇಕು. ಅವರು ಒಂದು ಹೆಜ್ಜೆ ಮುಂದೆ ಹೋಗಿ ಭದ್ರತಾ ಮಂಡಳಿಯ ಐದು ಸ್ಥಿರ ಮಹಾಶಕ್ತಿ ದೇಶಗಳ ವೀಟೋ ಅಧಿಕಾರ ಕೊನೆಗೊಳಿಸಬೇಕೆಂದೂ ಎಲ್ಲ ದೇಶಗಳ ಮಧ್ಯೆ ನ್ಯಾಯ ಮತ್ತು ಸಮಾನತೆ ಸ್ಥಾಪಿಸಬೇಕೆಂದೂ ಹೇಳಬೇಕೆಂದು ನಾನು ಆಶಿಸುತ್ತೇನೆ.

ಕಳೆದ ವರ್ಷ ಅಮೇರಿಕದ ವಾಶಿಂಗ್ಟನ್ ಡಿ.ಸಿ. ಯ ಕ್ಯಾಪಿಟೋಲ್ ಹಿಲ್‌ನಲ್ಲಿ ಭಾಷಣ ಮಾಡುವ ಸಂದರ್ಭ ನನಗೆ ಲಭಿಸಿತು. ಅನೇಕ ಸೆನೆಟರ್‌ಗಳು, ಕಾಂಗ್ರೆಸ್ ಸಭೆಯ ಸದಸ್ಯರು, ಬುದ್ಧಿಶಾಲಿಗಳ ಕೂಟದ ಸದಸ್ಯರು, ಸಮಾಜದ ವಿವಿಧ ಕ್ಷೇತ್ರಗಳ ಇತರ ವಿದ್ಯಾಸಂಪನ್ನ ಗಣ್ಯರು ಭಾಗವಹಿಸಿದ್ದರು. ಎಲ್ಲ ಪಕ್ಷಗಳನ್ನೂ ಎಲ್ಲ ಜನರನ್ನೂ ಸಮಾನವಾಗಿ ಕಂಡು ಅವರೊಂದಿಗೆ ವರ್ತಿಸಿದರೆ ಮಾತ್ರ ನ್ಯಾಯಪಾಲನೆಯ ಕರ್ತವ್ಯ ಪೂರ್ಣಗೊಳ್ಳುವುದೆಂದು ನಾನು ಅವರೊಂದಿಗೆ ಸ್ಪಷ್ಟವಾಗಿ ಹೇಳಿದೆ. ನೀವು ದೊಡ್ಡ ಮತ್ತು ಚಿಕ್ಕ ದೇಶಗಳ ಮಧ್ಯೆ ತಾರತಮತೆಯಿಂದ ವರ್ತಿಸುವುದಾದರೆ, ಶ್ರೀಮಂತ ಮತ್ತು ಬಡದೇಶಗಳೊಂದಿಗೆ ತಾರತಮತೆಯಿಂದ ವರ್ತಿಸುವುದಾದರೆ, ನೀವು ವೀಟೋ ಅಧಿಕಾರವೆಂಬ ಅನ್ಯಾಯವನ್ನು ಮುಂದುವರಿಸುವುದಾದರೆ, ಲೋಕದಲ್ಲಿ ಅಶಾಂತಿಯೂ ಆತಂಕವೂ ವರ್ಧಿಸುವುವು. ಇದರ ಪರಿಣಾಮಗಳನ್ನು ನಾವು ಈಗಾಗಲೇ ಲೋಕದಲ್ಲಿ ಕಾಣುತ್ತಿದ್ದೇವೆ.

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋನ್ನತ ನಾಯಕನೆಂಬ ನೆಲೆಯಲ್ಲಿ ನನಗೆ ಲೋಕದ ಗಮನವನ್ನು ಶಾಂತಿ ಸ್ಥಾಪನೆಯ ಕಡೆಗೆ ಹರಿಸುವ ಕರ್ತವ್ಯವಿದೆ. ಇಸ್ಲಾಮ್ ಎಂಬ ಪದದ ಅರ್ಥ ಶಾಂತಿ ಮತ್ತು ಭದ್ರತೆ ಎಂದಾಗಿದೆ. ಆದುದರಿಂದ ಶಾಂತಿ ಕಡೆಗೆ ಕರೆ ನೀಡುವುದು ನನ್ನ ಹೊಣೆಗಾರಿಕೆಯಾಗಿದೆ. ಕೆಲವು ಮುಸ್ಲಿಮ್ ದೇಶಗಳು ದ್ವೇಷಭರಿತ ತೀವ್ರವಾದವನ್ನು ಪ್ರೋತ್ಸಾಹಿಸುವುದಾದರೆ ಆ ಕಾರಣದಿಂದ ಇಸ್ಲಾಮ್ ಅಶಾಂತಿಯನ್ನೂ ಸಂಘರ್ಷವನ್ನೂ ಪ್ರೋತ್ಸಾಹಿಸುತ್ತದೆ ಎಂದು ನಿರ್ಧರಿಸಬಾರದು. ನಾನು ಈಗಾಗಲೇ ಉಲ್ಲೇಖಿಸಿದ ಪವಿತ್ರ ಖುರ್‌ಆನಿನ ವಚನದಲ್ಲಿ ಶಾಂತಿ ಹೇಗೆ ಸ್ಥಾಪಿಸಬಹುದು ಎಂಬುದರ ಬಗ್ಗೆ ಮಾರ್ಗದರ್ಶನ ಇದೆ.

ಇಸ್ಲಾಮ್ ಧರ್ಮದ ಪ್ರವಾದಿ ಹಝ್‌ರತ್ ಮುಹಮ್ಮದ್ ಪೈಗಂಬರರು(ಸ) ಯಾವಾಗಲೂ **"ಸಲಾಮ್"** ಎಂದು ಅಭಿವಂದಿಸಿ ಶಾಂತಿಯನ್ನು ಹರಡಲು ಹೇಳಿರುವರು. ಅವರು ಮುಸ್ಲಿಮೇತರರಾದ ಯಹೂದಿಯರಿಗೂ ಕ್ರೈಸ್ತರಿಗೂ ಇತರ ಧರ್ಮದವರಿಗೂ "ಸಲಾಮ್" (ಶಾಂತಿ) ಎಂದು ಹೇಳಿ ಅಭಿವಂದಿಸುತ್ತಿದ್ದರು. ಅವರು ಹೀಗೆ ವರ್ತಿಸಿದುದು ಎಲ್ಲ ಮನುಷ್ಯರು ಏಕದೇವನ ಸೃಷ್ಟಿಗಳೆಂದು ಮನವರಿಕೆ ಮಾಡಿಕೊಂಡುದರಿಂದಾಗಿದೆ. ದೇವನ ಒಂದು ಗುಣನಾಮ **"ಅಸ್ಸಲಾಮ್"** (ಶಾಂತಿಯ

ಉದ್ಭವಸ್ಥಾನ) ಎಂದಾಗಿದೆ. ದೇವನು ಎಲ್ಲರಿಗೂ ಶಾಂತಿಯನ್ನೂ ಭದ್ರತೆಯನ್ನೂ ಬಯಸುತ್ತಾನೆ.

ಶಾಂತಿಗೆ ಸಂಬಂಧಿಸಿ ಕೆಲವು ಅಂಶಗಳನ್ನು ಇಸ್ಲಾಮ್ ಧರ್ಮ ತತ್ವಗಳಿಂದ ನಾನು ನಿಮಗೆ ವಿವರಿಸಿದೆನು. ಆದರೆ ಸಮಯದ ಕೊರತೆಯ ಕಾರಣ ನಾನು ಕೆಲವು ಅಂಶಗಳನ್ನು ಮಾತ್ರ ವಿಶದೀಕರಿಸಿದೆನು. ಇಸ್ಲಾಮ್ ಎಲ್ಲ ಜನರಿಗೂ ಶಾಂತಿ ಮತ್ತು ಭದ್ರತೆ ಒದಗಿಸುವ ಬಗ್ಗೆ ಅನೇಕ ಉಪದೇಶಗಳನ್ನೂ ಆಜ್ಞೆಗಳನ್ನೂ ನೀಡಿದೆ. ನ್ಯಾಯಪಾಲನೆಗೆ ಸಂಬಂಧಿಸಿ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**ಎಲೈ ವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದೆಲ್ಲ ಬಲ್ಲವನಾಗಿದ್ದಾನೆ. (5:9)**

ಈ ವಚನದಲ್ಲಿ ಪವಿತ್ರ ಖುರ್‌ಆನ್ ನ್ಯಾಯಪಾಲನೆಯ ಅತ್ಯಂತ ಉನ್ನತ ಮಟ್ಟದ ಬಗ್ಗೆ ಆಜ್ಞಾಪಿಸಿದೆ. ತಮ್ಮನ್ನು ಮುಸ್ಲಿಮರೆಂದು ಹೇಳಿಕೊಳ್ಳುವವರಿಗೆ ಭೀಕರ ಕ್ರೂರಕೃತ್ಯಗಳನ್ನು ಮಾಡಲು ಈ ಆಜ್ಞೆ ಯಾವ ಅವಕಾಶವನ್ನೂ ನೀಡುವುದಿಲ್ಲ. ಇಸ್ಲಾಮ್ ಹಿಂಸಾಚಾರಿ ತೀವ್ರ ಧರ್ಮವೆಂದು ಚಿತ್ರಿಸುವವರಿಗೆ ಸಹ ಯಾವುದೇ ಅವಕಾಶ ಈ ವಚನ ನೀಡುವುದಿಲ್ಲ. ಪವಿತ್ರ ಖುರ್‌ಆನ್ ಅತ್ಯಂತ ಉನ್ನತ ಮಟ್ಟದ ನ್ಯಾಯಪಾಲನೆ ಮತ್ತು ವರ್ತನೆಯನ್ನು ಪ್ರತಿಪಾದಿಸಿದೆ. ಅದು ಹೀಗೆ ಹೇಳಿದೆ:

**ಎಲೈ ವಿಶ್ವಾಸಿಗಳೇ, ನೀವು ಪರಿಪೂರ್ಣವಾದ ನ್ಯಾಯ ನಿಷ್ಠೆಯುಳ್ಳವರೂ ಅಲ್ಲಾಹನಿಗೋಸ್ಕರ ಸಾಕ್ಷ್ಯವಹಿಸುವವರೂ ಆಗಿರಿ; ಅದು ನಿಮಗೆ ಅಥವಾ (ನಿಮ್ಮ) ಮಾತಾಪಿತರಿಗೆ ಅಥವಾ ನಿಕಟ ಬಂಧುಗಳಿಗೆ ವಿರುದ್ಧವಾಗಿದ್ದರೂ ಸರಿ. ಅವನು ಧನಿಕನಾಗಿರಲಿ ಯಾ ದರಿದ್ರನಾಗಿರಲಿ, ಅಲ್ಲಾಹನು ನಿಮಗಿಂತ ಹೆಚ್ಚಾಗಿ ಅವರೀರ್ವರ ಒಳಿತನ್ನು ಬಯಸುತ್ತಾನೆ. ಆದುದರಿಂದ ನೀವು ಯಾವುದೇ ನಿಕೃಷ್ಟ ಆಶೆಯನ್ನು ಹೊಂದದೆ ನ್ಯಾಯದಿಂದ ವರ್ತಿಸಿರಿ. ನೀವು (ಸತ್ಯವನ್ನು) ಮರೆಮಾಚಿದರೆ ಅಥವಾ (ಅದನ್ನು ಬಹಿರಂಗ ಪಡಿಸದೆ)ನುಣುಚಿಕೊಂಡರೆ (ತಿಳಿದುಕೊಳ್ಳಿರಿ) ನಿಮ್ಮ ವರ್ತನೆಯ ಕುರಿತು ಅಲ್ಲಾಹನು ಚೆನ್ನಾಗಿ ತಿಳಿದವನಾಗಿದ್ದಾನೆ. (4:136)**

ಇಂತಹ ತತ್ವಾಧಾರಿತ ಶ್ರೇಷ್ಠ ಮಟ್ಟದ ನ್ಯಾಯಪಾಲನೆಯಿಂದ ಮಾತ್ರ ತಳಮಟ್ಟದಿಂದ ಅಂತರ್ರಾಷ್ಟ್ರಿಯ ಮಟ್ಟದ ತನಕ ಶಾಂತಿ ಸ್ಥಾಪನೆ ಮಾಡಲು

ಸಾಧ್ಯವಾಗುವುದು. ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಈ ತತ್ವವನ್ನು ಅನುಸರಿಸಿ ಎಲ್ಲ ಕಡೆಗೂ ಅದನ್ನು ವ್ಯಾಪಿಸಿದರೆಂದು ಚರಿತ್ರೆ ಸಾಕ್ಷ್ಯ ವಹಿಸುತ್ತದೆ. ಈ ಕಾಲಘಟ್ಟದಲ್ಲಿ ಹಝ್ರತ್ ಪೈಗಂಬರರ[ಸ] ನೈಜ ಶಿಷ್ಯನಾದ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಸ್ಥಾಪಕ ಖಾದಿಯಾನಿನ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಅವರು ಈ ತತ್ವಗಳನ್ನು ಪ್ರಚಾರಗೊಳಿಸಿದರು ಮತ್ತು ತನ್ನ ಅನುಯಾಯಿಗಳು ಈ ತತ್ವಗಳನ್ನು ಪ್ರಚಾರಗೊಳಿಸಿ ಶಾಂತಿಯನ್ನು ಹರಡಲು ಆದೇಶಿಸಿದರು. ಸೃಷ್ಟಿಕರ್ತನ ಹಕ್ಕುಗಳನ್ನೂ ಅವನ ಸೃಷ್ಟಿಗಳ ಹಕ್ಕುಗಳನ್ನೂ ಈಡೇರಿಸುವ ಬಗ್ಗೆ ಲೋಕದ ಜನರಿಗೆ ಮನವರಿಕೆ ಮಾಡಿಕೊಡಲು ತನ್ನ ಅನುಯಾಯಿಗಳಿಗೆ ಅವರು ಉಪದೇಶಿಸಿದರು. ಇದೇ ಕಾರಣದಿಂದ ಅಹ್ಮದಿಯಾ ಜಮಾಅತ್ ಅಲ್ಲಾಹನ ಹಕ್ಕುಗಳನ್ನೂ ಅವನ ಸೃಷ್ಟಿಗಳ ಹಕ್ಕುಗಳನ್ನೂ ಈಡೇರಿಸುವ ಬಗ್ಗೆ ಮತ್ತು ನ್ಯಾಯಪಾಲನೆಯ ಉನ್ನತ ಮಟ್ಟವನ್ನು ಸ್ಥಾಪಿಸಲು ಒತ್ತಿ ಹೇಳುತ್ತಿದೆ.

ನಮ್ಮ ಪೈಕಿ ಪ್ರತಿಯೊಬ್ಬನು ನಮ್ಮ ಧರ್ಮ ಮತ್ತು ವಿಶ್ವಾಸ ಯಾವುದೆಂದು ಪರಿಗಣಿಸದೆ ಪರಸ್ಪರ ಒಬ್ಬರಿನ್ನೊಬ್ಬನ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಲಕ್ಷ್ಯ ನೀಡುವವರಾಗಲಿ ಮತ್ತು ಆ ಮೂಲಕ ಲೋಕವು ಶಾಂತಿ ಮತ್ತು ಸೌಹಾರ್ದದ ಧಾಮವಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ನಾನು ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತಾ, ನೀವು ನನ್ನನ್ನು ಆಮಂತ್ರಿಸಿದುದಕ್ಕೋಸ್ಕರ ಮತ್ತು ನನ್ನ ಮಾತುಗಳನ್ನು ಆಲಿಸಿದುದಕ್ಕೋಸ್ಕರ ಇನ್ನೊಮ್ಮೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

**ನಿಮಗೆ ತುಂಬಾ ಕೃತಜ್ಞತೆಗಳು**



# ಜಾಗತಿಕ ಶಾಂತಿ ಮತ್ತು ಸುರಕ್ಷೆ – ನಮ್ಮ ಕಾಲದಲ್ಲಿ ಗಂಭೀರವಾಗಿ ಪರಿಗಣಿಸಬೇಕಾದ ವಿಷಯಗಳಾಗಿವೆ

ಡಚ್ ನ್ಯಾಶನಲ್ ಪಾರ್ಲಿಮೆಂಟ್
ಬಿನ್ನೆನ್‌ಹೊಫ್, ದಿ ಹೇಗ್, ನೆದರ್‌ಲ್ಯಾಂಡ್, 2015





Ḥaḍrat Khalīfatul-Masīḥ V[aba] at a special session of the Standing Committee for Foreign Affairs at the Netherlands National Parliament.



Members of the Standing Committee for Foreign Affairs at the Netherlands National Parliament with Ḥaḍrat Khalīfatul-Masīḥ V[aba]




Ḥaḍrat Khalīfatul-Masīḥ V[aba] delivering his historic address at a special session of the Standing Committee for Foreign Affairs at the Netherlands National Parliament.



Ḥaḍrat Khalīfatul-Masīḥ V[aba] answering a question about a range of political and religious issues.

# ಮುನ್ನುಡಿ

2015 ಅಕ್ಟೋಬರ್ ದಿನಾಂಕ 6ರಂದು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನಾಯಕ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸ್ಟಾಂಡಿಂಗ್ ಕಮಿಟಿ ಫೋರ್ ಫೋರಿನ್ ಎಫೇರ್ಸಿನ ವಿಶೇಷ ಅಧಿವೇಶನವನ್ನು ಸಂಬೋಧಿಸಿ ನೆದರ್‌ಲ್ಯಾಂಡ್ ನೇಶನಲ್ ಪಾರ್ಲಿಮೆಂಟಿನಲ್ಲಿ ಭಾಷಣ ಮಾಡಿದರು. ನೆದರ್‌ಲ್ಯಾಂಡಿನ ರಾಜಧಾನಿಯಾದ ದಿ ಹೇಗ್‌ನಲ್ಲಿ ನೂರಕ್ಕಿಂತ ಹೆಚ್ಚು ಗಣ್ಯ ಅತಿಥಿಗಳನ್ನು ಸಂಬೋಧಿಸಿ ಮಾಡಿದ ಭಾಷಣ ಇದಾಗಿದೆ.

ಮಿಸ್ಟರ್ ವಾನ್ ಬೊಮ್ಮೆಲ್ ಹಝ್ರತ್ ಖಲೀಫರನ್ನು ಪಾರ್ಲಿಮೆಂಟಿಗೆ ಸ್ವಾಗತಿಸಿದರು ಮತ್ತು ಫೋರಿನ್ ಎಫೈರ್ಸ್ ಸಮಿತಿಯ ಸದಸ್ಯರನ್ನು ಪರಿಚಯಿಸಿಕೊಟ್ಟರು. ಅನಂತರ ಅಲ್‌ಬೇನಿಯಾ, ಕ್ರೊವೇಶಿಯಾ, ಅಯರ್‌ಲೇಂಡ್, ಮೊಂಟೆನಿಗ್ರೋ, ಸ್ಪೇನ್ ಮತ್ತು ಸ್ವೀಡನ್ ದೇಶಗಳ ರಾಯಭಾರಿಗಳನ್ನೂ ಇತರ ಗಣ್ಯರನ್ನೂ ಸ್ವಾಗತಿಸಿದರು.

# ಜಾಗತಿಕ ಶಾಂತಿ ಮತ್ತು ಸುರಕ್ಷೆ ನಮ್ಮ ಕಾಲದಲ್ಲಿ ಗಂಭೀರವಾಗಿ ಪರಿಗಣಿಸಬೇಕಾದ ವಿಷಯಗಳಾಗಿವೆ

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್ – ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ (ಪ್ರಾರಂಭಿಸುತ್ತೇನೆ). ಎಲ್ಲ ಗಣ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು – ಅಲ್ಲಾಹನ ಶಾಂತಿ ಮತ್ತು ಅನುಗ್ರಹ ನಿಮ್ಮೆಲ್ಲರ ಮೇಲೆ ಇರಲಿ.

ಈ ದಿನದ ಕಾರ್ಯಕ್ರಮವನ್ನು ಏರ್ಪಡಿಸಿ ನನ್ನನ್ನು ಭಾಷಣ ಮಾಡಲು ಆಮಂತ್ರಿಸಿದವರಿಗೆ ನಾನು ಮೊತ್ತಮೊದಲು ಹೃತ್ಪೂರ್ವಕ ಕೃತಜ್ಞತೆ ಅರ್ಪಿಸುತ್ತೇನೆ.

ಇಂದಿನ ಕಾಲಘಟ್ಟದಲ್ಲಿ ಕೆಲವು ವಿಷಯಗಳನ್ನು ನಿರಂತರವಾಗಿ ಜನರ ಮುಂದೆ ಎತ್ತಿ ಹಿಡಿದು ಅವುಗಳು ನಮ್ಮ ಕಾಲಘಟ್ಟದ ಪ್ರಮುಖ ವಿಷಯಗಳೆಂದು ಪ್ರಸ್ತಾಪಿಸಲ್ಪಡುತ್ತವೆ. ಉದಾಹರಣೆಗೆ, ಕೆಲವು ಜನರು ಜಾಗತಿಕ ತಾಪಮಾನ ವರ್ಧನೆಯ ಅಪಾಯದ ಬಗ್ಗೆ ಮತ್ತು ಹವಾಮಾನದ ಬದಲಾವಣೆ ಬಗ್ಗೆ ಒತ್ತಿ ಹೇಳುತ್ತಾ ಇರುತ್ತಾರೆ. ಆದರೆ ಬೇರೆ ಕೆಲವರು ಲೋಕದಲ್ಲಿ ವಿವಿಧ ರೀತಿಗಳ ಸಂಘರ್ಷಗಳ ವರ್ಧನೆ ಮತ್ತು ಲೋಕದ ಚಂಚಲ ಪರಿಸ್ಥಿತಿ ಬಗ್ಗೆ ಅತ್ಯಂತ ಆತಂಕಗೊಂಡಿರುತ್ತಾರೆ. ನಾವು ಲೋಕದ ಇಂದಿನ ಸ್ಥಿತಿಯನ್ನು ನಿಷ್ಪಕ್ಷವಾಗಿ ವಿಶ್ಲೇಷಿಸುವುದಾದರೆ ಜಾಗತಿಕ ಶಾಂತಿ ಮತ್ತು ಸುರಕ್ಷೆ ಇಂದಿನ ಕಾಲದಲ್ಲಿ ಗಂಭೀರವಾಗಿ ಚಿಂತಿಸಬೇಕಾದ ವಿಷಯವೆಂದು ಮನವರಿಕೆ ಮಾಡಿಕೊಳ್ಳುವೆವು. ದಿನಗಳೆದಂತೆ ಲೋಕವು ಹೆಚ್ಚು ಅಸ್ಥಿರವೂ ಅಪಾಯಭರಿತವೂ ಆಗುತ್ತಿದೆ ಮತ್ತು ಇದಕ್ಕೆ ಹಲವಾರು ಸಂಭಾವ್ಯ ಕಾರಣಗಳಿವೆ. ಉದಾಹರಣೆಗೆ, ಆರ್ಥಿಕ ಮುಗ್ಗಟ್ಟು, ಆರ್ಥಿಕ ಅಸ್ಥಿರತೆ ಲೋಕದ ಅನೇಕ ಭಾಗಗಳಲ್ಲಿ ಪರಿಣಾಮ ಬೀರಿರುವುದು ಒಂದು ಮುಖ್ಯ ಕಾರಣವಾಗಿರಬಹುದು.

ಇನ್ನೊಂದು ಸಂಭಾವ್ಯ ಕಾರಣ ಕೆಲವು ಜಾಗತಿಕ ನಾಯಕರು ತಮ್ಮ ಜನರೊಂದಿಗೆ ಮತ್ತು ಅನ್ಯರೊಂದಿಗೆ ಅನ್ಯಾಯದಿಂದ ವರ್ತಿಸುವುದಾಗಿದೆ. ಮತ್ತೊಂದು ಕಾರಣ, ಕೆಲವು ಧಾರ್ಮಿಕ ನಾಯಕರು ಸಾಮೂಹಿಕ ಹಿತಾಸಕ್ತಿಗಳಿಗೆ ಎದುರಾಗಿ ತಮ್ಮ ಸ್ವಾರ್ಥ ಹಿತಾಸಕ್ತಿಗಳಿಗೆ ಆದ್ಯತೆ ನೀಡುವುದು ಮತ್ತು ತಮ್ಮ ಹೊಣೆಗಾರಿಕೆಗಳನ್ನು ಪ್ರಾಮಾಣಿಕತೆಯಿಂದ ಈಡೇರಿಸದಿರುವುದಾಗಿದೆ. ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ಸಂಘರ್ಷಗಳಿಗೆ ಮುಖ್ಯ ಕಾರಣವಾಗುವುದು ಶ್ರೀಮಂತ ಮತ್ತು ಬಡ ದೇಶಗಳ ಮಧ್ಯೆ ಇರುವ ಭಿನ್ನತೆಯಾಗಿದೆ.

ಶಕ್ತಿಶಾಲಿ ದೇಶಗಳು ಬಡ ದೇಶಗಳ ನೈಸರ್ಗಿಕ ಸಂಪತ್ತಿನಿಂದ ಲಾಭ

ಪಡೆಯಲು ಪ್ರಯತ್ನಿಸುತ್ತಾ ಇರುತ್ತವೆ ಎಂದೂ ಆ ಬಡ ದೇಶಗಳಿಗೆ ಅವರ ಸಂಪತ್ತಿನ ಅರ್ಹ ಪಾಲು ನೀಡುವುದಿಲ್ಲ ಎಂದೂ ವೀಕ್ಷಿಸಲಾಗಿದೆ. ಆದುದರಿಂದ, ಲೋಕದಲ್ಲಿ ಶಾಂತಿಯು ಕೆಟ್ಟು ಹೋಗಲಿರುವ ಕಾರಣಗಳ ದೀರ್ಘವಾದ ಪಟ್ಟಿಯೇ ಇದೆ. ಅವುಗಳಲ್ಲಿ ಕೆಲವನ್ನು ಮಾತ್ರ ನಾನು ಪ್ರಸ್ತಾಪಿಸಿದ್ದೇನೆ. ಕಾರಣಗಳು ಏನೇ ಇರಲಿ, ಲೋಕ ಅಶಾಂತಿಯಿಂದ ಕೂಡಿರುವುದು ನನ್ನ ಅಭಿಪ್ರಾಯದಲ್ಲಿ ಈ ಪೀಳಿಗೆಯ ಅತ್ಯಂತ ಅಪಾಯಕರವಾದ ಸನ್ನಿವೇಶವಾಗಿದೆ.

ನನ್ನ ಮಾತನ್ನು ಆಲಿಸಿ ನಿಮ್ಮ ಪೈಕಿ ಬಹಳ ಜನರು ಹೀಗೆ ಹೇಳಬಹುದು: ಮುಸ್ಲಿಮ್ ದೇಶಗಳಲ್ಲಿ ಹೆಚ್ಚು ಅಸ್ಥಿರತೆ ಕಾಣಿಸುತ್ತಾ ಇದೆ. ಮುಸ್ಲಿಮ್ ಲೋಕದಲ್ಲಿ ಕಾಣಿಸುತ್ತಿರುವ ಅಸ್ಥಿರತೆಯೇ ಲೋಕದಲ್ಲಿ ಅಶಾಂತಿಗೆ ಮೂಲ ಕಾರಣವಾಗಿದೆ.

ನಾನು ಜಗತ್ತಿನಾದ್ಯಂತ ಇರುವ ಮುಸ್ಲಿಮ್ ಜಮಾಅತುಗಳ ಪೈಕಿ ಒಂದಾಗಿರುವ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ನೇತಾರನಾಗಿರುವುದರಿಂದ ನಾನು ಸಹ ಪ್ರಾಯಶಃ ಈ ಅಸ್ಥಿರತೆಗೆ ಸ್ವಲ್ಪಮಟ್ಟಿಗೆ ಹೊಣೆಯಾಗಿರಬಹುದೆಂದು ನೀವು ಯೋಚಿಸಬಹುದು. ತೀವ್ರವಾದಿ ಗುಂಪುಗಳ ಹುಟ್ಟುವಿಕೆ ಮತ್ತು ಭೀಕರ ಕೃತ್ಯಗಳು ವಾಸ್ತವಿಕವಾಗಿ ಇಸ್ಲಾಮ್ ಧರ್ಮ ತತ್ವಗಳಿಂದ ಪ್ರೇರೇಪಿಸಲ್ಪಟ್ಟಿರಬಹುದು ಎಂದು ಸಹ ನೀವು ನಂಬಿರಬಹುದು. ಆದರೆ ಅಶಾಂತಿ ಮತ್ತು ದ್ವೇಷವನ್ನು ಇಸ್ಲಾಮಿನೊಂದಿಗೆ ಜೋಡಿಸಿ ಹೇಳುವುದು ಅತ್ಯಂತ ಅನ್ಯಾಯಕರವಾಗಿದೆ.

ಧರ್ಮಗಳ ಚರಿತ್ರೆ ಬಗ್ಗೆ ವಿಶದವಾಗಿ ಪ್ರಸ್ತಾಪಿಸುವ ಆವಶ್ಯಕತೆ ಈಗ ಇಲ್ಲ. ಆದರೆ ನಾವು ಧರ್ಮಗಳ ಚರಿತ್ರೆಯನ್ನು ನಿಷ್ಪಕ್ಷವಾಗಿ ನೋಡುವುದಾದರೆ, ಕಾಲ ದಾಟಿಹೋದಂತೆ, ಪ್ರತಿಯೊಂದು ಧರ್ಮದ ಅನುಯಾಯಿಗಳು ತಮ್ಮ ಧರ್ಮದ ಮೂಲ ತತ್ವಗಳಿಂದ ದೂರಸರಿದುಹೋದ ಕಾರಣದಿಂದ ಆಂತರಿಕ ಭಿನ್ನತೆಗಳೂ ಸಂಘರ್ಷಗಳೂ ತಲೆದೋರಿದುವು. ಜನರನ್ನು ಕೊಲ್ಲಲಾಯಿತು ಮತ್ತು ಜನರ ವಿರುದ್ಧ ಘೋರ ಕ್ರೂರಕೃತ್ಯಗಳನ್ನು ನಡೆಸಲಾಗಿತ್ತು.

ಈ ವಿಷಯವನ್ನು ದೃಷ್ಟಿಯಲ್ಲಿರಿಸಿಕೊಂಡು ನಾನು ಹೀಗೆ ಹೇಳಲು ಬಯಸುತ್ತೇನೆ: ಕಾಲ ದಾಟಿಹೋದಂತೆ ಮುಸ್ಲಿಮರು ಸಹ ಇಸ್ಲಾಮ್ ಧರ್ಮದ ಮೂಲ ತತ್ವಗಳಿಂದ ದೂರಸರಿದು ಹೋದರು. ಈ ಕಾರಣದಿಂದ ಆಶಾಭಂಗ ಮತ್ತು ಪ್ರತಿಸ್ಪರ್ಧೆಗಳು ತಲೆದೋರಿದುವು ಹಾಗೂ ಪಂಗಡಗಳು ಸ್ಥಾಪಿಸಲ್ಪಟ್ಟು ದೌರ್ಜನ್ಯ ಮತ್ತು ಅನ್ಯಾಯ ಪ್ರಾರಂಭವಾದುವು. ಆದರೆ ಇಸ್ಲಾಮ್ ಧರ್ಮದ ಇಂದಿನ ಹತಾಶ ಪರಿಸ್ಥಿತಿಯನ್ನು ಒಬ್ಬ ನೈಜ ಮುಸ್ಲಿಮನ ದೃಷ್ಟಿಕೋನದಿಂದ ನೋಡುವಾಗ ನನ್ನ ಧಾರ್ಮಿಕ ವಿಶ್ವಾಸ ಕುಂದಿ ಹೋಗುವುದಿಲ್ಲ.

ಇದಕ್ಕೆ ಕಾರಣವೇನೆಂದರೆ 1400 ವರ್ಷಗಳ ಹಿಂದೆ ಇಸ್ಲಾಮ್ ಧರ್ಮದ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಹೀಗೆ ಭವಿಷ್ಯ ನುಡಿದಿದ್ದರು: ಇಸ್ಲಾಮ್ ಧರ್ಮತತ್ವಗಳು ಕ್ರಮೇಣ ಭ್ರಷ್ಟಗೊಳಿಸಲ್ಪಡುವುವು ಮತ್ತು ಮುಸ್ಲಿಮರು

ನೈತಿಕವಾಗಿ ಅಧಃಪತನ ಹೊಂದುವರು. ಅವರು ಹೀಗೆಯೂ ಭವಿಷ್ಯ ನುಡಿದಿದ್ದರು: ನೈತಿಕ ಅಧಃಪತನದ ಅಂತಹ ಕಾಲಘಟ್ಟದಲ್ಲಿ ಸರ್ವಶಕ್ತನಾದ ದೇವನು ಒಬ್ಬ ಸುಧಾರಕನನ್ನು ವಾಗ್ದತ್ತ ಮಸೀಹ್ ಮತ್ತು ಇಮಾಮ್ ಮಹ್‌ದಿಯಾಗಿ ಲೋಕಕ್ಕೆ ಕಳುಹಿಸಿಕೊಡುವನು. ಅವರು ಇಸ್ಲಾಮ್ ಧರ್ಮದ ಸತ್ಯವಾದ ಶಾಂತಿ ತತ್ವಗಳ ಕಡೆಗೆ ಮಾನವರಿಗೆ ಮಾರ್ಗದರ್ಶನ ನೀಡುವರು.

ಇಸ್ಲಾಮ್ ಧರ್ಮದ ಪುಣ್ಯ ಪೈಗಂಬರರು[ಸ] ಭವಿಷ್ಯ ನುಡಿದ ಹಾಗೆ ವಾಗ್ದತ್ತ ಮಸೀಹರು[ಅ] ಆಗಮಿಸಿ ಇಸ್ಲಾಮ್ ಧರ್ಮದ ನೈಜ ಮತ್ತು ಸಂಪೂರ್ಣವಾದ ಶಾಂತಿ ತತ್ವಗಳನ್ನು ನಮಗೆ ಕಲಿಸಿದರು. ಆದುದರಿಂದ ಅಹ್ಮದೀ ಮುಸ್ಲಿಮರಾದ ನಾವು ಇಂದು ಲೋಕದಲ್ಲಿ ತಲೆದೋರಿರುವ ಅಸ್ತವ್ಯಸ್ತಗಳನ್ನು ಸೃಷ್ಟಿಸುವವರಲ್ಲಿ ಸೇರಿಲ್ಲ ಮತ್ತು ಅವುಗಳಲ್ಲಿ ಭಾಗವಹಿಸುವುದೂ ಇಲ್ಲ. ನಾವು ಲೋಕದಲ್ಲಿ ಶಾಂತಿಯನ್ನು ಹಾರೈಸುವ ಜನರಾಗಿದ್ದೇವೆ.

ನಾವು ಲೋಕಕ್ಕೆ ರೋಗೋಪಶಮನವನ್ನು ಬಯಸುವವರಾಗಿದ್ದೇವೆ. ನಾವು ಲೋಕದ ಜನರನ್ನು ಒಗ್ಗೂಡಿಸಲು ಬಯಸುವವರಾಗಿದ್ದೇವೆ. ಎಲ್ಲ ವಿಧಗಳ ದ್ವೇಷ ಮತ್ತು ಹಗೆತನವನ್ನು ಪ್ರೀತಿ ಮತ್ತು ವಾತ್ಸಲ್ಯಕ್ಕೆ ಬದಲಾಯಿಸುವುದನ್ನು ಬಯಸುವವರು ನಾವಾಗಿದ್ದೇವೆ. ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ನಮಗೆ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುವವರು ನಿಶ್ಚಯವಾಗಿಯೂ ನಾವಾಗಿದ್ದೇವೆ. ಒಬ್ಬ ಧಾರ್ಮಿಕ ನಾಯಕನೆಂಬ ನೆಲೆಯಲ್ಲಿ ನಾನು ಹೇಳಲು ಬಯಸುವುದೇನೆಂದರೆ, ಒಬ್ಬರಿನ್ನೊಬ್ಬರನ್ನು ದೂಷಿಸುವುದಕ್ಕೆ ಮತ್ತು ಉದ್ರೇಕಿಸುವುದಕ್ಕೆ ಬದಲಾಗಿ ನಾವು ಸ್ಥಿರವಾಗಿ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸುವ ಬಗ್ಗೆ ನಮ್ಮ ಪ್ರಯತ್ನಗಳನ್ನು ಕೇಂದ್ರೀಕರಿಸಬೇಕಾಗಿದೆ.

ಇದರ ಬಗ್ಗೆ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರು ಅತಿ ಮುಖ್ಯವಾದ ಒಂದು ತತ್ವವನ್ನು ಉಪದೇಶಿಸಿದ್ದಾರೆ. ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಮನುಷ್ಯರು ಸರ್ವಶಕ್ತನಾದ ದೇವನ ಗುಣಗಳನ್ನು ಹೊಂದಲು ತಮ್ಮ ಕೈಲಾದಷ್ಟು ಪ್ರಯತ್ನಿಸಬೇಕೆಂದು ಅವರು ಹೇಳಿದರು. ಮಾನವರ ಹಿತವನ್ನು ಸ್ಥಿರವಾಗಿ ಮುಂದುವರಿಸಲು ಇದೇ ದಾರಿಯಾಗಿದೆ ಹಾಗೂ ನಿಶ್ಚಯವಾಗಿಯೂ ಮಾನವರ ದೈಹಿಕವೂ ಆಧ್ಯಾತ್ಮಿಕವೂ ಆದ ಸುಖ ಮತ್ತು ಸಮೃದ್ಧಿ ದೇವಗುಣಗಳ ಪಾಲನೆಯೊಂದಿಗೆ ಸಂಬಂಧಿಸಿದೆ. ಏಕೆಂದರೆ ಅವನ ಗುಣಗಳ ಮೂಲಕವೇ ಎಲ್ಲ ರೀತಿಗಳ ಶಾಂತಿಯು ಉದ್ಭವಿಸುತ್ತದೆ ಎಂದು ಅವರು ಹೇಳಿದರು.

ಪವಿತ್ರ ಖುರ್‌ಆನಿನ ಪ್ರಥಮ ವಚನದಲ್ಲಿಯೇ ಇದು ಪ್ರತಿಬಿಂಬಿಸುತ್ತದೆ. ಅದರಲ್ಲಿ ಹೀಗೆ ಹೇಳಲಾಗಿದೆ: ಅಲ್ಲಾಹನು ಸರ್ವಲೋಕ ಪರಿಪಾಲಕನಾಗಿದ್ದಾನೆ. ಇದರ ಅರ್ಥವೇನೆಂದರೆ, ಅಲ್ಲಾಹನು ಪ್ರತಿಯೊಂದು ವ್ಯಕ್ತಿಯ ಮತ್ತು ಎಲ್ಲ ಸೃಷ್ಟಿಗಳ ಪಾಲಕ, ಪೋಷಕ ಮತ್ತು ಒಡೆಯನು. ಅವನು ಮುಸ್ಲಿಮರ ಮಾತ್ರ ಒಡೆಯನಲ್ಲ. ಅವನು ಕ್ರೈಸ್ತರ, ಯಹೂದಿಯರ, ಹಿಂದುಗಳ ಹಾಗೂ ನಿಶ್ಚಯವಾಗಿಯೂ ಎಲ್ಲ ಜನರ

ಒಡೆಯನಾಗಿರುವನು. ಅವರು ಯಾವ ಧರ್ಮ ಅಥವಾ ವಿಶ್ವಾಸ ಹೊಂದಿದ್ದವರು ಆದರೂ ಸರಿ.

ದೇವನಿಗೆ ತನ್ನ ಸೃಷ್ಟಿಗಳ ಬಗ್ಗೆ ಇರುವ ಪ್ರೀತಿ ಮತ್ತು ವಾತ್ಸಲ್ಯ ಅನುಪಮೇಯವೂ ಅನನ್ಯವೂ ಆಗಿದೆ. ಅವನು ದಯಾವಂತನೂ ಕಾರುಣ್ಯನಿಧಿಯೂ ಆಗಿದ್ದಾನೆ. ಅವನು ಶಾಂತಿಯ ಉಗಮಸ್ಥಾನವಾಗಿದ್ದಾನೆ. ಆದುದರಿಂದ ಇಸ್ಲಾಮ್ ಧರ್ಮ ಮುಸ್ಲಿಮನೊಂದಿಗೆ ಸರ್ವಶಕ್ತನಾದ ದೇವನ ಗುಣಗಳನ್ನು ಹೊಂದಬೇಕೆಂದು ಆದೇಶಿಸುವಾಗ ಒಬ್ಬ ನೈಜ ಮುಸ್ಲಿಮನಿಗೆ, ಅನ್ಯರಿಗೆ ಹಾನಿಯನ್ನು ಉಂಟುಮಾಡುವುದು ಅಸಾಧ್ಯವಾಗುತ್ತದೆ. ಮಾತ್ರವಲ್ಲ, ನೈಜ ಮುಸ್ಲಿಮನ ಧಾರ್ಮಿಕ ವಿಶ್ವಾಸ, ಅವನನ್ನು ಎಲ್ಲ ಮನುಷ್ಯರನ್ನು ಪ್ರೀತಿಸಲು ಮತ್ತು ಪ್ರತಿಯೊಬ್ಬನೊಂದಿಗೆ ಗೌರವ, ಕರುಣೆ ಮತ್ತು ಸಹಾನುಭೂತಿಯಿಂದ ವರ್ತಿಸಲು ನಿರ್ಬಂಧಿಸುತ್ತದೆ.

ಇಸ್ಲಾಮ್ ಶಾಂತಿಯ ಧರ್ಮವಾಗಿದ್ದರೆ ಪವಿತ್ರ ಖುರ್‌ಆನ್ ಯುದ್ಧ ಮಾಡಲು ಅನುಮತಿಯನ್ನು ಏಕೆ ನೀಡಿದೆ ಎಂದು ಪದೇ ಪದೇ ಪ್ರಶ್ನಿಸಲಾಗುತ್ತದೆ. ಆದರೆ ಈ ಅನುಮತಿ ನೀಡಿದುದನ್ನೂ ಅದು ನೀಡಿದ ಸಂದರ್ಭವನ್ನೂ ಪರಿಗಣಿಸಿ ನೋಡಬೇಕು. ಮುಖ್ಯ ವಿಷಯ ದೀರ್ಘಕಾಲ ಬಾಕಿಯಾಗಿ ಉಳಿಯಬೇಕಾದ ಶಾಂತಿ ಸ್ಥಾಪನೆಯಾಗಿರುತ್ತದೆ. ಆದುದರಿಂದ ಕೆಲವು ಸಂದರ್ಭಗಳಲ್ಲಿ ಶಿಕ್ಷೆ ನೀಡುವುದು ಮತ್ತು ಮುನ್ನೆಚ್ಚರಿಕೆ ನೀಡುವುದು ದೀರ್ಘಕಾಲ ಶಾಂತಿ ಸ್ಥಾಪಿತವಾಗಿರಲು ಆವಶ್ಯಕವಾಗಿದೆ.

ಸರ್ವಶಕ್ತನಾದ ಅಲ್ಲಾಹನು ಯುದ್ಧ ಮಾಡಲು ಅನುಮತಿ ನೀಡಿದ್ದು ಶಾಂತಿಯನ್ನು ಪುನಃ ಸ್ಥಾಪಿಸಲು ಮತ್ತು ಪ್ರತಿರೋಧಾತ್ಮಕವಾಗಿ ಮಾತ್ರವಾಗಿತ್ತು. ಆದುದರಿಂದ ಕೆಲವು ಗುಂಪುಗಳು ಮತ್ತು ವ್ಯಕ್ತಿಗಳು ಹಿಂಸಾಚಾರ ಮತ್ತು ಕ್ರೌರ್ಯದೊಂದಿಗೆ ಪವಿತ್ರ ಖುರ್‌ಆನನ್ನು ಮತ್ತು ಇಸ್ಲಾಮಿನ ಪಾವನ ಪೈಗಂಬರರನ್ನು[ಸ] ಜೊತೆ ಸೇರಿಸಲು ಪ್ರಯತ್ನಿಸುವುದು ಅತ್ಯಂತ ಅನ್ಯಾಯ ಭರಿತ ವರ್ತನೆಯಾಗಿದೆ. ನಾವು ಪವಿತ್ರ ಖುರ್‌ಆನನ್ನು ಮತ್ತು ಪವಿತ್ರ ಪೈಗಂಬರರ[ಸ] ಜೀವಿತವನ್ನು ನಿಷ್ಪಕ್ಷವಾಗಿ ಅಧ್ಯಯನ ಮಾಡುವುದಾದರೆ ಇಸ್ಲಾಮ್ ಧರ್ಮ ಎಲ್ಲ ವಿಧಗಳ ಉಗ್ರಗಾಮಿ ಚಟುವಟಿಕೆಗಳಿಗೆ ಮತ್ತು ರಕ್ತಪಾತಕ್ಕೆ ವಿರುದ್ಧವಾಗಿದೆ ಎಂದು ನಾವು ಕಾಣಬಹುದು.

ಸಮಯದ ಕೊರತೆಯ ಕಾರಣ ನಾನು ದೀರ್ಘ ವಿವರಣೆ ನೀಡಲಾರೆ. ಆದರೆ ನಾನು ಇಸ್ಲಾಮಿನ ಕೆಲವು ಮೂಲ ತತ್ವಗಳನ್ನು ವಿವರಿಸುವೆನು. ಅವು ಇಸ್ಲಾಮ್ ಶಾಂತಿ ಪ್ರತಿಪಾದಕ ಧರ್ಮವೆಂದು ಸಂಶಯಾತೀತವಾಗಿ ಸಾಬೀತುಗೊಳಿಸುವುವು. ಇದರ ಮೊದಲು ಹೇಳಿದ ಹಾಗೆ ಇಸ್ಲಾಮ್ ಧರ್ಮ ತೀವ್ರವಾದ ಮತ್ತು ಯುದ್ಧವನ್ನು ಪ್ರೋತ್ಸಾಹಿಸುತ್ತದೆ ಎಂದು ಇಸ್ಲಾಮಿನ ವಿರುದ್ಧ ಆಕ್ಷೇಪಿಸಲಾಗುತ್ತದೆ. ಆದರೆ ಈ ಆಕ್ಷೇಪ ಸಂಪೂರ್ಣ ಸುಳ್ಳಾಗಿದೆ.

ಯುದ್ಧವನ್ನು ಪ್ರತಿರೋಧಕ್ಕಾಗಿ ಮಾಡಲು ಮಾತ್ರ ಅನುಮತಿಸಲಾಗಿದೆ ಎಂದು ಪವಿತ್ರ ಖುರ್‌ಆನಿನ ಅಧ್ಯಾಯ 2 ವಚನ 191ರಲ್ಲಿ ಅಲ್ಲಾಹನು ಹೇಳಿದ್ದಾನೆ. ಈ ವಿಷಯವನ್ನು ಅಧ್ಯಾಯ22 ವಚನ 40ರಲ್ಲಿ ಪುನಾರಾವರ್ತಿಸಿ ಹೀಗೆ ಸ್ಪಷ್ಟವಾಗಿ

ಹೇಳಲಾಗಿದೆ: ಯಾರನ್ನು ಆಕ್ರಮಿಸಲಾಗಿದೆಯೋ ಮತ್ತು ಯುದ್ಧವನ್ನು ಹೇರಲಾಗಿದೆಯೋ ಅವರಿಗೆ ಪ್ರತಿರೋಧ ಮಾಡಲು ಅನುಮತಿಸಲಾಗಿದೆ. ಸರ್ವಶಕ್ತನಾದ ಅಲ್ಲಾಹನು ಮುಸ್ಲಿಮ್ ಸರಕಾರಗಳಿಗೆ ಅನುಮತಿ ನೀಡಿದ್ದು ಧಾರ್ಮಿಕ ಸ್ವಾತಂತ್ರ್ಯವನ್ನು ಮತ್ತು ನಂಬಿಕೆಯ ಸ್ವಾತಂತ್ರ್ಯವನ್ನು ಕಾಪಾಡಲಿಕ್ಕಾಗಿದೆ. ಧಾರ್ಮಿಕ ಸ್ವಾತಂತ್ರ್ಯ ಈಗಾಗಲೇ ಇರುವಲ್ಲಿ ಮುಸ್ಲಿಮರಿಗೆ ಯುದ್ಧ ಮಾಡಲು ಅನುಮತಿ ನೀಡಲಾಗಿಲ್ಲ ಎಂದು ಪವಿತ್ರ ಖುರ್‌ಆನಿನ ಅಧ್ಯಾಯ 2 ವಚನ 194ರಲ್ಲಿ ಮುಸ್ಲಿಮರಿಗೆ ತಿಳಿಸಲಾಗಿದೆ.

ಆದುದರಿಂದ, ಯಾವುದೇ ಮುಸ್ಲಿಮ್ ದೇಶಕ್ಕೆ, ಗುಂಪಿಗೆ ಅಥವಾ ವ್ಯಕ್ತಿಗೆ ಯಾವುದೇ ರೀತಿಯ ಹಿಂಸೆ, ಯುದ್ಧ, ಕಾನೂನುಭಂಗ ಮೊದಲಾದುವುಗಳನ್ನು ಯಾವುದೇ ದೇಶ ಅಥವಾ ಅದರ ಜನತೆಯ ವಿರುದ್ಧ ಮಾಡುವ ಅಧಿಕಾರವಿಲ್ಲ. ಯುರೋಪಿನಲ್ಲಿ ಮತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ಸರಕಾರಗಳು ಜಾತ್ಯತೀಯವಾಗಿವೆ. ಆದುದರಿಂದ ಒಬ್ಬ ಮುಸ್ಲಿಮನಿಗೆ ದೇಶದ ನಿಯಮಗಳಿಗೆ ಭಂಗ ಉಂಟುಮಾಡಲು, ಸರಕಾರವನ್ನು ಹಿಂಸಾಚಾರದೊಂದಿಗೆ ವಿರೋಧಿಸಲು ಅಥವಾ ಯಾವುದೇ ರೀತಿಯ ವಿದ್ರೋಹವನ್ನು ಉತ್ತೇಜಿಸಲು ಅಧಿಕಾರವಿರುವುದಿಲ್ಲ.

ವಾಸ್ತವದಲ್ಲಿ, ಇಸ್ಲಾಮಿನ ನೈಜ ತತ್ವಗಳ ಪ್ರಕಾರ ಒಬ್ಬ ಮುಸ್ಲಿಮ್ ಪುರುಷ ಅಥವಾ ಮಹಿಳೆ ತನಗೆ ನೈಜವಾದ ಧಾರ್ಮಿಕ ಸ್ವಾತಂತ್ರ್ಯ ಇಲ್ಲ ಎಂದು ಒಂದು ಮುಸ್ಲಿಮೇತರ ದೇಶದಲ್ಲಿ ವಾಸಿಸುವಾಗ ಭಾವಿಸುವುದಾದರೆ ಅವರು ಪ್ರತಿಭಟನೆ ಮತ್ತು ಕಾನೂನು ಭಂಗಕ್ಕೆ ಪ್ರಯತ್ನಿಸಬಾರದು. ಅದಕ್ಕೆ ಬದಲಾಗಿ ಅವರು ಆ ದೇಶವನ್ನು ಬಿಟ್ಟು ತಮಗೆ ಅನುಕೂಲ ಸ್ಥಿತಿ ಲಭಿಸಬಹುದಾದ ದೇಶಕ್ಕೆ ವಲಸೆ ಹೋಗಬೇಕು.

ಪವಿತ್ರ ಖುರ್‌ಆನ್ ಅಧ್ಯಾಯ 16 ವಚನ 127ರಲ್ಲಿ ಮುಸ್ಲಿಮ್ ಸರಕಾರಗಳಿಗೆ ಹೀಗೆ ಆಜ್ಞಾಪಿಸಲಾಗಿದೆ: ಅವರು ಆಕ್ರಮಿಸಲ್ಪಟ್ಟರೆ ಅವರು ಆಕ್ರಮಣಕ್ಕೆ ಸಮವಾಗಿ ಮಾತ್ರ ಪ್ರತಿರೋಧಿಸಬೇಕು. ಪವಿತ್ರ ಖುರ್‌ಆನ್ ಹೇಳುವುದೇನೆಂದರೆ ಶಿಕ್ಷೆ ಅಪರಾಧಕ್ಕೆ ಸಮವಾಗಿರಬೇಕು.

ಪವಿತ್ರ ಖುರ್‌ಆನ್ ಅಧ್ಯಾಯ 8 ವಚನ 62ರಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ: ನಿಮ್ಮ ವಿರೋಧಿಗಳು ನಿಮಗೆ ಹಾನಿಮಾಡುವ ಉದ್ದೇಶ ಹೊಂದಿದ ನಂತರ ಹಾಗೆ ಮಾಡದೆ ಹಿಂದೆ ಸರಿದರೆ ಮತ್ತು ರಾಜಿಯಾಗಲು ಒಲವು ಪ್ರಕಟಿಸಿದರೆ ನೀವು ಕೂಡಲೆ ಅವರ ನಿಲುವನ್ನು ಅಂಗೀಕರಿಸಿ ಶಾಂತಿಗೆ ಪ್ರಯತ್ನಿಸಬೇಕು. ಅವರ ಉದ್ದೇಶವೇನೆಂದು ನೋಡಬೇಕಾಗಿಲ್ಲ.

ಪವಿತ್ರ ಖುರ್‌ಆನಿನ ಈ ಉಪದೇಶ ಜಾಗತಿಕ ಶಾಂತಿ ಮತ್ತು ಸುರಕ್ಷೆ ಕಾಪಾಡಲು ಇರುವ ಕೀಲಿಗೈ ಆಗಿದೆ. ಅನ್ಯರ ಸಂಭಾವ್ಯ ಶತ್ರುತ್ವದ ವಿರುದ್ಧ ಆಕ್ರಮಣಕಾರಿ ಧೋರಣೆಯನ್ನು ಹಲವು ದೇಶಗಳು ಹೊಂದುತ್ತಿರುವುದಕ್ಕೆ ಅನೇಕ ಉದಾಹರಣೆಗಳು ಇಂದು ಲೋಕದಲ್ಲಿ ಕಾಣಬಹುದಾಗಿದೆ. “ಅವರು ನಮ್ಮನ್ನು ನಾಶ ಮಾಡುವ ಮೊದಲು

ನಾವು ಅವರನ್ನು ನಾಶ ಮಾಡುವುದು ಉತ್ತಮ" ಎಂಬ ತತ್ವವನ್ನು ಅವರು ಪಾಲಿಸುತ್ತಿದ್ದಾರೆ ಎಂದು ತೋರುತ್ತದೆ.

ಆದರೆ ಇಸ್ಲಾಮ್ ಹೇಳುವುದೇನೆಂದರೆ, ಶಾಂತಿ ಸ್ಥಾಪನೆ ಮಾಡುವ ಯಾವ ಸಂದರ್ಭವನ್ನೂ ಕಳೆದುಕೊಳ್ಳಬಾರದು. ಆದುದರಿಂದ ಪ್ರತೀಕ್ಷೆಯ ಒಂದು ಮಿಣುಕು ಕಂಡರೂ ಅದನ್ನು ಗಳಿಸಲು ಯತ್ನಿಸಬೇಕು. ಪವಿತ್ರ ಖುರ್‌ಆನ್ ಅಧ್ಯಾಯ 5 ವಚನ 9ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಘೋಷಿಸಿದ್ದಾನೆ: ಒಂದು ಜನಾಂಗದ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. ಇಸ್ಲಾಮ್ ಉಪದೇಶಿಸುವುದೇನೆಂದರೆ, ಎಲ್ಲ ಸಂದರ್ಭಗಳಲ್ಲಿಯೂ ಎಷ್ಟು ಕಷ್ಟವಾದರೂ ನೀವು ನ್ಯಾಯ ಮತ್ತು ಸತ್ಯಕ್ಕೆ ಬದ್ಧರಾಗಿರಬೇಕು. ಆದುದರಿಂದ ಯುದ್ಧ ಕಾಲದಲ್ಲಿಯೂ ನ್ಯಾಯಪಾಲನೆ ಅತ್ಯಂತ ಮುಖ್ಯವಾಗಿದೆ. ಯುದ್ಧ ಕೊನೆಗೊಂಡಾಗ ಜಯಶಾಲಿಯಾದವನು ನ್ಯಾಯಯುತವಾಗಿ ವರ್ತಿಸಬೇಕು ಮತ್ತು ಕ್ರೌರ್ಯಭಾವದಿಂದ ವರ್ತಿಸಬಾರದು.

ಆದರೆ ಇಂದಿನ ಲೋಕದಲ್ಲಿ ಇಂತಹ ಉನ್ನತ ನೈತಿಕ ಮತ್ತು ಸತ್ಯದ ಮಟ್ಟವನ್ನು ಕಾಣಲಾರೆವು. ಈಗಿನ ಕಾಲದಲ್ಲಿ ಯುದ್ಧಗಳು ಕೊನೆಗೊಂಡಾಗ ಜಯಗಳಿಸಿದ ದೇಶಗಳು ಸೋತ ದೇಶಗಳ ವಿರುದ್ಧ ಪ್ರತಿಬಂಧಗಳನ್ನು ಹೇರುತ್ತವೆ ಮತ್ತು ಅವು ನೈಜ ಸ್ವಾತಂತ್ರ್ಯ ಗಳಿಸುವುದನ್ನು ತಡೆಯುತ್ತವೆ. ಇಂತಹ ಧೋರಣೆಗಳು ಅಂತರ್‍ರಾಷ್ಟ್ರೀಯ ಸಂಬಂಧಗಳನ್ನು ಹಾನಿಗೊಳಿಸುತ್ತವೆ ಮತ್ತು ಸೋತ ದೇಶಗಳ ಹತಾಶ ಭಾವನೆಗಳನ್ನು ವರ್ಧಿಸುತ್ತವೆ ಮತ್ತು ಹಾನಿಕಾರಕ ಪರಿಣಾಮವನ್ನುಂಟು ಮಾಡುತ್ತವೆ.

ವಾಸ್ತವದಲ್ಲಿ, ಸಮಾಜದ ಪ್ರತಿಯೊಂದು ಹಂತದಲ್ಲೂ ನ್ಯಾಯಪಾಲನೆ ಯಾಗದಿದ್ದರೆ ಸ್ಥಿರವಾದ ಶಾಂತಿ ಸ್ಥಾಪನೆಯಾಗುವುದು ಎಂದೂ ಸಾಧ್ಯವಾಗದು.

ಪವಿತ್ರ ಖುರ್‌ಆನ್ ಅಧ್ಯಾಯ 8 ವಚನ 68ರಲ್ಲಿ ಇಸ್ಲಾಮಿನ ಇನ್ನೊಂದು ಮುಖ್ಯ ತತ್ವವನ್ನು ವಿವರಿಸಲಾಗಿದೆ. ಯುದ್ಧ ಕಾಲದಲ್ಲಿ ಹೊರತು ಬೇರೆ ಸಂದರ್ಭಗಳಲ್ಲಿ ಜನರನ್ನು ಸೆರೆ ಹಿಡಿಯುವುದನ್ನು ಮುಸ್ಲಿಮರಿಗೆ ಅನುಮತಿಸಲಾಗಿಲ್ಲ. ಆದರೆ ತೀವ್ರವಾದಿಗಳು ಮತ್ತು ಭೀಕರ ಗುಂಪುಗಳು ಯಾವುದೇ ಕಾರಣವಿಲ್ಲದೆ ಜನರನ್ನು ಸೆರೆ ಹಿಡಿಯುತ್ತಿರುವುದು ಇಸ್ಲಾಮ್ ಧರ್ಮ ತತ್ವಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿದೆ. ವರದಿಗಳ ಪ್ರಕಾರ ಈ ಗುಂಪುಗಳು ಜನರನ್ನು ಸೆರೆ ಹಿಡಿಯುತ್ತವೆಯಲ್ಲದೆ ಅವರ ವಿರುದ್ಧ ಬರ್ಬರ ಹಿಂಸಾಚಾರಗಳನ್ನು ಜಾರಿಗೊಳಿಸುತ್ತಿವೆ.

ಈ ಭೀಕರವಾದಿ ಗುಂಪುಗಳು ಮಾಡುತ್ತಿರುವ ಕೃತ್ಯಗಳನ್ನು ಅತ್ಯಂತ ಕಟುವಾದ ಭಾಷೆಯಲ್ಲಿ ಮಾತ್ರ ಖಂಡಿಸಲು ಸಾಧ್ಯ. ಆದರೆ ಪವಿತ್ರ ಖುರ್‌ಆನ್ ಹೇಳುವುದೇನೆಂದರೆ, ಯಾರನ್ನಾದರೂ ನ್ಯಾಯಬದ್ಧವಾಗಿ ಸೆರೆ ಹಿಡಿದರೂ ಅವರ ಮೇಲೆ ದಯೆದೋರಬೇಕು ಮತ್ತು ಅವರನ್ನು ವಿಮೋಚಿಸಲು ಸಾಧ್ಯವಿರುವಲ್ಲೆಲ್ಲ ಪ್ರಯತ್ನಿಸಬೇಕು.

ಶಾಂತಿ ಸ್ಥಾಪನೆ ಮಾಡುವ ಒಂದು ಸುವರ್ಣ ತತ್ವ ಪವಿತ್ರ ಖುರ್‌ಆನ್ ಅಧ್ಯಾಯ 49 ವಚನ 10ರಲ್ಲಿದೆ. ಅದರಲ್ಲಿ ಹೀಗೆ ಹೇಳಲಾಗಿದೆ: ದೇಶಗಳ ಅಥವಾ ಜನಾಂಗಗಳ ಮಧ್ಯೆ ಸಂಘರ್ಷ ಉಂಟಾದರೆ ಮೂರನೆಯ ಪಕ್ಷದವರು ಮಧ್ಯಸ್ಥರಾಗಿ ರಾಜಿಗೆ ಮತ್ತು ಸಂಘರ್ಷ ಶಾಂತಿಯುತವಾಗಿ ಪರಿಹರಿಸಲ್ಪಡಲು ಪ್ರಯತ್ನಿಸಬೇಕು.

ಒಪ್ಪಂದ ಮಾಡಿಕೊಂಡ ನಂತರ ಒಂದು ಪಕ್ಷದವರು ಇನ್ನೊಂದನ್ನು ಅನ್ಯಾಯವಾಗಿ ಅಧೀನಕ್ಕೊಳಪಡಿಸಲು ಪ್ರಯತ್ನಿಸುವುದಾದರೆ ಅಥವಾ ಒಪ್ಪಂದಕ್ಕೆ ಭಂಗವುಂಟುಮಾಡಲು ಪ್ರಯತ್ನಿಸುವುದಾದರೆ ದೇಶಗಳು ಒಗ್ಗೂಡಿ ಆಕ್ರಮಣಗಾರನ ವಿರುದ್ಧ, ಆವಶ್ಯಕವಾದರೆ ಯುದ್ಧ ಮಾಡಬೇಕು. ಆಕ್ರಮಣ ಮಾಡಿದ ಪಕ್ಷ ಹಿಂದೆ ಸರಿದರೆ ಅದನ್ನು ಹೀನೈಸಬಾರದು ಅಥವಾ ಅನಾವಶ್ಯಕವಾಗಿ ನಿರ್ಬಂಧ ಹೇರಬಾರದು. ಅವರು ಸ್ವತಂತ್ರ ದೇಶವಾಗಿ ಮತ್ತು ಸ್ವತಂತ್ರ ಸಮಾಜವಾಗಿ ಅಭಿವೃದ್ಧಿ ಹೊಂದಲು ಅನುಮತಿಸಬೇಕು. ಈ ತತ್ವ ಇಂದಿನ ಲೋಕಕ್ಕೆ ಅನುಸರಿಸಲು ಯೋಗ್ಯವಾದ ಮಹತ್ವಪೂರ್ಣ ತತ್ವವಾಗಿದೆ. ಮಹಾಶಕ್ತಿ ರಾಷ್ಟ್ರಗಳ ಮತ್ತು ಸಂಯುಕ್ತ ರಾಷ್ಟ್ರ ಸಂಘ ಮೊದಲಾದುವು ಈ ತತ್ವವನ್ನು ಪಾಲಿಸಿ ಕ್ರಮ ಕೈಗೊಳ್ಳಬಹುದಾಗಿದೆ.

ಜಾಗತಿಕ ಶಾಂತಿಯನ್ನು ಸ್ಥಾಪಿಸಲು ಅತ್ಯಂತ ಮಹತ್ವಪೂರ್ಣ ತತ್ವವನ್ನು ಪವಿತ್ರ ಖುರ್‌ಆನ್ ಅಧ್ಯಾಯ 22 ವಚನ 41ರಲ್ಲಿ ಪ್ರತಿಪಾದಿಸಲಾಗಿದೆ. ಅದರಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಬಗ್ಗೆ ಹೇಳಲಾಗಿದೆ. ಪವಿತ್ರ ಖುರ್‌ಆನ್ ಈ ವಚನದಲ್ಲಿ ಹೇಳುವುದೇನೆಂದರೆ, ಯುದ್ಧ ಮಾಡಲು ಅನುಮತಿ ನೀಡದಿರುತ್ತಿದ್ದರೆ ಮಸೀದಿಗಳ ಜೊತೆ ಚರ್ಚ್‌ಗಳು, ಯಹೂದಿ ದೇವಾಲಯಗಳು, ಇತರ ದೇವಾಲಯಗಳು ಮತ್ತು ಎಲ್ಲ ಧರ್ಮಗಳ ಆರಾಧನೆಯ ಸ್ಥಳಗಳು ನಾಶವಾಗುವ ಅಪಾಯವನ್ನು ಹೊಂದಿರಬಹುದಾಗಿತ್ತು. ಆದುದರಿಂದ ಸರ್ವಶಕ್ತನಾದ ಅಲ್ಲಾಹನು ಬಲಪ್ರಯೋಗ ಮಾಡಲು ಅನುಮತಿಸಿದ್ದು ಕೇವಲ ಇಸ್ಲಾಮ್ ಧರ್ಮವನ್ನು ರಕ್ಷಿಸಲು ಮಾತ್ರವಲ್ಲ, ಎಲ್ಲ ಧರ್ಮಗಳನ್ನು ರಕ್ಷಿಸಲು ಸಹ ಆಗಿದೆ.

ವಾಸ್ತವದಲ್ಲಿ, ಇಸ್ಲಾಮ್ ಎಲ್ಲ ಧರ್ಮಗಳ ಜನರಿಗೆ ಸ್ವಾತಂತ್ರ್ಯ ಮತ್ತು ಸಂರಕ್ಷಣೆಯ ಖಾತರಿ ನೀಡುತ್ತದೆ. ಇಸ್ಲಾಮ್ ಪ್ರತಿಯೊಬ್ಬ ವ್ಯಕ್ತಿಗೆ ಅವನು ಆಯ್ಕೆ ಮಾಡುವ ದಾರಿ ಅಥವಾ ವಿಶ್ವಾಸವನ್ನು ಅನುಸರಿಸುವ ಅಧಿಕಾರವನ್ನು ಸಂರಕ್ಷಿಸುತ್ತದೆ. ಸಮಾಜದ ಎಲ್ಲ ಹಂತಗಳಲ್ಲೂ ಲೋಕದಾದ್ಯಂತ ಮಾನವರಲ್ಲಿ ಐಕ್ಯತೆಯನ್ನು ಬೆಳೆಸಲು ಪವಿತ್ರ ಖುರ್‌ಆನ್ ಪ್ರತಿಪಾದಿಸಿದ ತತ್ವಗಳಲ್ಲಿರುವ ಕೆಲವು ಅಂಶಗಳನ್ನು ಮಾತ್ರ ನಿಮ್ಮ ಮುಂದೆ ವಿವರಿಸಿದ್ದೇನೆ. ಇವು ಪವಿತ್ರ ಖುರ್‌ಆನ್ ಶಾಂತಿ ಸ್ಥಾಪಿಸಲು ಲೋಕದ ಜನರಿಗೆ ನೀಡಿದ ಸುವರ್ಣ ಕೀಲಿಗೈಗಳಾಗಿವೆ.

ಇಸ್ಲಾಮ್ ಧರ್ಮದ ಈ ಉಪದೇಶಗಳನ್ನು, ಇಸ್ಲಾಮ್ ಧರ್ಮದ ಪವಿತ್ರ ಪೈಗಂಬರರು[ಸ] ಮತ್ತು ಅವರ ಶಿಷ್ಯರು ಪರಿಪೂರ್ಣವಾಗಿ ಅನುಸರಿಸಿದರು. ಲೋಕಕ್ಕೆ ಶಾಂತಿ ಮತ್ತು ಸುರಕ್ಷೆಯ ಅತ್ಯಂತ ಹೆಚ್ಚು ಆವಶ್ಯಕತೆ ಇದೆ ಎಂದು ನಾನು ಇನ್ನೊಮ್ಮೆ

ಹೇಳಬಯಸುತ್ತೇನೆ. ಇದು ಈಗಿನ ಕಾಲದ ಅತ್ಯಂತ ತುರ್ತು ಆವಶ್ಯಕತೆಯಾಗಿದೆ.

ಎಲ್ಲರ ಹಿತಕ್ಕೋಸ್ಕರ ಐಕ್ಯದಿಂದ ಎಲ್ಲ ರೂಪದ ಕ್ರೌರ್ಯ ಕೃತ್ಯಗಳನ್ನು, ಹಿಂಸಾಚಾರಗಳನ್ನು, ಅನ್ಯಾಯಗಳನ್ನು ಧರ್ಮದ ಹೆಸರಲ್ಲಿ ಅಥವಾ ಬೇರೆ ವಿಧದಲ್ಲಿ ಜಾರಿಗೊಳಿಸುವುದನ್ನು ತಡೆಗಟ್ಟಲು ಎಲ್ಲ ದೇಶಗಳು ಮತ್ತು ಎಲ್ಲ ಜನರು ಒಗ್ಗೂಡಬೇಕು. ಇಂತಹ ಹೀನ ಕೃತ್ಯಗಳಲ್ಲಿ ಧರ್ಮವನ್ನು ಅಪಹಾಸ್ಯ ಮಾಡುವುದು ಸಹ ಸೇರಿದೆ. ಇದರಿಂದ ಹತಾಶಭಾವನೆ ಮತ್ತು ಕ್ರೋಧ ಉತ್ಪತ್ತಿಯಾಗುತ್ತದೆ. ಭೀಕರವಾದಿ ಗುಂಪುಗಳ ದುಸ್ಸಹವಾದ ಚಟುವಟಿಕೆಗಳು ಮತ್ತು ತಮ್ಮ ಕುಕೃತ್ಯಗಳನ್ನು ಧರ್ಮದ ಹೆಸರಿನಲ್ಲಿ ಸಮರ್ಥಿಸುವುದು ಸಹ ಇದರಲ್ಲಿ ಸೇರಿದೆ.

ಇದಲ್ಲದೆ ನಾವು ಎಲ್ಲ ದೇಶಗಳೊಂದಿಗೆ ಪ್ರಾಮಾಣಿಕತೆಯಿಂದ ವರ್ತಿಸಬೇಕು ಮತ್ತು ಅವರಿಗೆ ಸಹಾಯ ನೀಡಲು ಪ್ರಯತ್ನಿಸಬೇಕು. ಈ ರೀತಿ ಪ್ರತಿಯೊಂದು ದೇಶ ಅಭಿವೃದ್ಧಿ ಹೊಂದಬಹುದು ಮತ್ತು ತನ್ನ ಪ್ರಗತಿಯ ಸಾಧ್ಯತೆಗಳನ್ನು ಅರಿತುಕೊಳ್ಳುವುದು. ನಾವು ಲೋಕದಲ್ಲಿ ಕಾಣುವ ದ್ವೇಷಾಸೂಯೆಗಳಿಗೆ ಮತ್ತು ಪ್ರತಿಸ್ಪರ್ಧೆಗಳಿಗೆ ಕಾರಣ ಸಂಪತ್ತು ಗಳಿಸುವ ಬಗ್ಗೆ ಇರುವ ಹುಚ್ಚು ಹಸಿವಾಗಿದೆ. ಒಬ್ಬನು ಇನ್ನೊಬ್ಬನ ಸಂಪತ್ತನ್ನು ದುರಾಶೆಯಿಂದ ದಿಟ್ಟಿಸಿ ನೋಡಬಾರದೆಂಬ ಸುವರ್ಣ ತತ್ವವನ್ನು ಇದಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನ್ ಪ್ರತಿಪಾದಿಸಿದೆ. ಈ ತತ್ವವನ್ನು ಅನುಸರಿಸಿದರೆ ನಾವು ಜಾಗತಿಕ ಶಾಂತಿಯನ್ನು ಉತ್ತೇಜಿಸಲು ಸಾಧ್ಯವಾಗುವುದು.

ಸಮಾಜದ ಎಲ್ಲ ಹಂತಗಳಲ್ಲೂ ನ್ಯಾಯ ಪಾಲನೆಯ ಆವಶ್ಯಕತೆಗಳನ್ನು ಈಡೇರಿಸಬೇಕು. ಆ ಮೂಲಕ ಪ್ರತಿಯೊಬ್ಬನು, ಅವನು ಯಾವ ಧರ್ಮ, ಜಾತಿ ಅಥವಾ ವರ್ಣದವನಾದರೂ ತನ್ನ ಸ್ವಂತ ಕಾಲುಗಳಲ್ಲಿ ಘನತೆಯಿಂದಲೂ ಗೌರವದಿಂದಲೂ ನಿಲ್ಲಲು ಸಮರ್ಥನಾಗಬೇಕು. ಇಂದಿನ ಕಾಲದಲ್ಲಿ ಅನೇಕ ಪ್ರಥಮ – ಲೋಕ ದೇಶಗಳು ತಮ್ಮ ಭಂಡವಾಳ ಹೂಡಿಕೆಗಳನ್ನು ಬಡ ಮತ್ತು ಅಭಿವೃದ್ಧಿಶೀಲ ದೇಶಗಳಲ್ಲಿ ವರ್ಧಿಸುತ್ತಾ ಇರುವುದನ್ನು ಕಾಣಬಹುದು.

ಈ ಶ್ರೀಮಂತ ದೇಶಗಳು ನ್ಯಾಯಬದ್ಧವಾಗಿ ವರ್ತಿಸುವುದು ಅನಿವಾರ್ಯವಾಗಿದೆ. ಅವರು ಬಡ ದೇಶಗಳ ಸಂಪನ್ಮೂಲಗಳನ್ನು ಮತ್ತು ಅಗ್ಗದ ಕಾರ್ಮಿಕ ಶಕ್ತಿಯನ್ನು ತಮ್ಮ ಸ್ವಂತ ರಾಷ್ಟ್ರೀಯ ಲಾಭಕ್ಕೆ ಬಳಸುವ ಲಾಭಕೋರರಾಗಬಾರದು. ಅವರು ಬಡದೇಶಗಳಲ್ಲಿ ಗಳಿಸುವ ಸಂಪತ್ತಿನ ಬಹು ಭಾಗವನ್ನು ಆ ದೇಶಗಳಲ್ಲಿ ಮರು ಹೂಡಿಕೆ ಮಾಡಿ ಅಲ್ಲಿನ ಜನರು ಆರ್ಥಿಕವಾಗಿ ಅಭಿವೃದ್ಧಿ ಹೊಂದುವಂತೆ ಮಾಡಬೇಕು.

ಬಡದೇಶಗಳಿಗೆ ಸಹಾಯ ನೀಡಲು ಅಭಿವೃದ್ಧಿ ಹೊಂದಿದ ದೇಶಗಳು ನಾನು ಮೇಲೆ ಹೇಳಿದಂತೆ ಕಾರ್ಯೋನ್ಮುಖವಾದರೆ ಬಡ ದೇಶಗಳಿಗೆ ಸಹಾಯ ಮಾಡಿದಂತೆ ಆಗುವುದು ಮಾತ್ರವಲ್ಲ, ಅದು ಪರಸ್ಪರ ಲಾಭಕರವೂ ಆಗುವುದು. ಅದರಿಂದ ಬಡದೇಶಗಳಲ್ಲಿ ವಿಶ್ವಾಸವು ಮತ್ತು ಆತ್ಮಧೈರ್ಯವು ವರ್ಧಿಸುವುದಲ್ಲದೆ ಬೆಳೆಯುತ್ತಿರುವ

ಹತಾಶ ಮನೋಭಾವ ನೀಗುವುದು.

ಶ್ರೀಮಂತ ದೇಶಗಳು ಕೇವಲ ತಮ್ಮ ಸ್ವಂತ ಹಿತಾಸಕ್ತಿ ಬಗ್ಗೆ ಕಾಳಜಿವಹಿಸುತ್ತವೆ ಮತ್ತು ಬಡವರಿಗೆ ಅವರ ದೇಶದಲ್ಲಿರುವ ಸಂಪನ್ಮೂಲಗಳ ಲಾಭ ದೊರೆಯದಂತೆ ಮಾಡುತ್ತವೆ ಎಂಬ ಭಾವನೆ ಮೇಲಿನಂತೆ ವರ್ತಿಸಿದರೆ ದೂರೀಕರಿಸಲ್ಪಡುವುದು. ಅದಲ್ಲದೆ ಅದರ ಮೂಲಕ ದೇಶಗಳ ಆರ್ಥಿಕ ವ್ಯವಸ್ಥೆ ಸುಧಾರಣೆಯಾಗುವುದು ಮಾತ್ರವಲ್ಲ, ಜಾಗತಿಕ ಆರ್ಥಿಕ ವ್ಯವಸ್ಥೆಯ ಆರೋಗ್ಯ ಸಹ ಉತ್ತಮಗೊಳ್ಳುವುದು.

ಅದು ಜಾಗತಿಕ ಸಮಾಜ, ಕರುಣೆ ಮತ್ತು ಮಾನವೀಯತೆ ಭಾವನೆಯನ್ನು ಸ್ಥಾಪಿಸುವ ಮಾರ್ಗವಾಗುವುದು. ಅದು ಲೋಕದಲ್ಲಿ ನಿಜವಾದ ಶಾಂತಿಯನ್ನು ಸ್ಥಾಪಿಸಲು ಅಸ್ತಿಭಾರವಾಗುವುದು. ನಾವು ಈ ವಿಷಯದ ಬಗ್ಗೆ ಲಕ್ಷ್ಯ ನೀಡದಿದ್ದರೆ ಇಂದಿನ ಲೋಕದ ಪರಿಸ್ಥಿತಿಯೂ ವಿನಾಶಕಾರಿ ಜಾಗತಿಕ ಮಹಾಯುದ್ಧಕ್ಕೆ ಒಯ್ಯುವುದು. ಅಂತಹ ಯುದ್ಧ ಸಂಭವಿಸಿದರೆ ಅದರ ದೋಷ ಫಲಗಳನ್ನು ಮುಂದಿನ ಪೀಳಿಗೆಗಳು ಅನುಭವಿಸುವುವು ಮತ್ತು ಅವರು ನಮ್ಮನ್ನು ಕ್ಷಮಿಸಲಾರರು.

ಇಷ್ಟು ಹೇಳಿ ನಾನು ವಿರಮಿಸಲು ನಿಮ್ಮಿಂದ ಅನುಮತಿ ಕೋರುತ್ತೇನೆ. ಲೋಕದಲ್ಲಿ ನೈಜ ಶಾಂತಿ ಸ್ಥಾಪನೆ ಸಾಧ್ಯವಾಗುವಂತೆ ಅಲ್ಲಾಹನು ಮಾಡಲಿ ಎಂದು ಪ್ರಾರ್ಥಿಸುತ್ತೇನೆ.

**ನಿಮಗೆ ತುಂಬಾ ಧನ್ಯವಾದಗಳು.**




# ಜಾಗತಿಕ ಅಸ್ತವ್ಯಸ್ತತೆಯ ಕಾಲದಲ್ಲಿ ಶಾಂತಿ ಸ್ಥಾಪನೆಗಿರುವ ಕೀಲಿಗೈಗಳು

ಟೋಕಿಯೋ, ಜಪಾನ್, 2015





Ḥaḍrat Khalīfatul-Masīḥ V[aba] leading silent prayer at a special reception in Tokyo, Japan.





Ḥaḍrat Khalīfatul-Masīḥ V[aba] watering a plant at a special reception in Tokyo, Japan.



Ḥaḍrat Khalīfatul-Masīḥ V[aba] delivering keynote address at a special reception in Tokyo, Japan.

# ಮುನ್ನುಡಿ

2015 ನವೆಂಬರ್ ದಿನಾಂಕ 23ರಂದು ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನೇತಾರ ಮತ್ತು ಪಂಚಮ ಖಲೀಫರು ಜಪಾನಿನ ಟೋಕಿಯೋ ನಗರದಲ್ಲಿ ಜರಗಿಸಲಾದ ಸ್ವಾಗತ ಸಮಾರಂಭದಲ್ಲಿ ಮಾಡಿದ ಭಾಷಣ. ತನ್ನ ಭಾಷಣದಲ್ಲಿ ಖಲೀಫರು 70 ವರ್ಷಗಳ ಮೊದಲು ಹಿರೋಶಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ನಡೆದ ಅಣ್ವಾಯುಧ ದಾಳಿ ಬಗ್ಗೆ ಪ್ರಸ್ತಾಪಿಸಿ ಅಂತಹ ದುರಂತಗಳು ಭವಿಷ್ಯದಲ್ಲಿ ನಡೆಯುವುದನ್ನು ಹೇಗೆ ತಡೆಯಬಹುದೆಂದು ಹೇಳಿದರು.

# ಜಾಗತಿಕ ಅಸ್ತವ್ಯಸ್ತತೆಯ ಕಾಲದಲ್ಲಿ ಶಾಂತಿ ಸ್ಥಾಪನೆಗಿರುವ ಕೀಲಿಗೈಗಳು

ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಮಾಡಿದ ನಂತರ ಹಝ್ರತ್ ಖಲೀಫರು ಹೀಗೆ ಹೇಳಿದರು: ಎಲ್ಲ ಗಣ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹಿ ವಬರಕಾತುಹು – ನಿಮ್ಮ ಮೇಲೆ ಅಲ್ಲಾಹನು ಶಾಂತಿ ಮತ್ತು ಅನುಗ್ರಹ ವರ್ಷಿಸಲಿ.

ಮೊದಲನೆಯದಾಗಿ, ನಮ್ಮ ಆಹ್ವಾನವನ್ನು ಸ್ವೀಕರಿಸಿ ಇಲ್ಲಿಗೆ ಆಗಮಿಸಿದ ಎಲ್ಲ ಅತಿಥಿಗಳಿಗೆ ನಾನು ಕೃತಜ್ಞತೆ ಅರ್ಪಿಸುತ್ತೇನೆ. ನಾವು ಈಗ ಅತ್ಯಂತ ಅಸ್ಥಿರವೂ ಭಯಾನಕವೂ ಆಗಿರುವ ಕಾಲದಲ್ಲಿ ಜೀವಿಸುತ್ತಿದ್ದೇವೆ. ಲೋಕದ ಸ್ಥಿತಿ ಬಹಳ ಆತಂಕಮಯವಾಗಿದೆ. ಸಂಘರ್ಷಗಳು ಮತ್ತು ಅಸ್ತವ್ಯಸ್ತತೆಗಳು ಲೋಕವನ್ನು ಹಾಳುಗೆಡವುತ್ತಿದ್ದು ಜಾಗತಿಕ ಶಾಂತಿ ಮತ್ತು ಭದ್ರತೆಗೆ ಬೆದರಿಕೆ ಒಡ್ಡುತ್ತಿದೆ.

ನಾವು ಮುಸ್ಲಿಮ್ ಲೋಕದ ಕಡೆಗೆ ನೋಡುವಾಗ ಅನೇಕ ಮುಸ್ಲಿಮ್ ದೇಶಗಳಲ್ಲಿ ಸರಕಾರಗಳು ತಮ್ಮ ಪ್ರಜೆಗಳ ವಿರುದ್ಧ ಕ್ರೌರ್ಯಭರಿತ ಯುದ್ಧ ಮಾಡುವುದರಲ್ಲಿ ನಿರತವಾಗಿವೆ. ರಕ್ತಪಾತ ಮತ್ತು ನಿಷ್ಕರುಣ ಹಿಂಸಾಚಾರ ಆ ದೇಶಗಳ ರಚನೆಯನ್ನೇ ನಾಶಗೊಳಿಸುತ್ತಿವೆ. ಭಯೋತ್ಪಾದಕ ಗುಂಪುಗಳು ಸರಕಾರಿ ಆಡಳಿತೆ ನಿಷ್ಕ್ರಿಯವಾಗಿರುವ ಪ್ರದೇಶಗಳನ್ನು ವಶಪಡಿಸಿಕೊಂಡು ಅಲ್ಲಿ ತಮ್ಮ ತಥಾಕಥಿತ ಸರಕಾರಗಳನ್ನು ಸ್ಥಾಪಿಸಿ ಆಳುತ್ತಿವೆ. ಅವರು ಅತ್ಯಂತ ಹೇಯ ವಿಧಾನದಲ್ಲಿ ವರ್ತಿಸಿ ಅತ್ಯಂತ ಬರ್ಬರ ಕ್ರೌರ್ಯಭರಿತ ಕೃತ್ಯಗಳನ್ನು ತಮ್ಮ ದೇಶಗಳಲ್ಲಿ ನಡೆಸುತ್ತಿದ್ದಾರೆ. ಮಾತ್ರವಲ್ಲ, ಅವರು ಈಗ ಯುರೋಪನ್ನೂ ತಲಪಿದ್ದಾರೆ. ಅವರ ಕ್ರೌರ್ಯ ಕೃತ್ಯಗಳ ಇತ್ತೀಚೆಗಿನ ಉದಾಹರಣೆ ಪ್ಯಾರಿಸ್ ನಗರದಲ್ಲಿ ಅವರು ನಡೆಸಿದ ಆಕ್ರಮಣವಾಗಿದೆ.

ಪೂರ್ವ ಯುರೋಪಿನಲ್ಲಿ ರಶ್ಯ ಮತ್ತು ಉಕ್ರೈನ್ ಹಾಗೂ ಇತರ ಯುರೋಪಿಯನ್ ದೇಶಗಳೊಂದಿಗೆ ಸಂಘರ್ಷ ಪ್ರಜ್ವಲಿಸುತ್ತಾ ಇದೆ. ಇದಲ್ಲದೆ ಇತ್ತೀಚೆಗೆ ಅಮೇರಿಕದ ಯುದ್ಧ ಹಡಗು ದಕ್ಷಿಣ ಚೀನಾ ಸಮುದ್ರವನ್ನು ಅಕ್ರಮ ಪ್ರವೇಶ ಮಾಡಿದ ಬಗ್ಗೆ ಯುನೈಟೆಡ್ ಸ್ಟೇಟ್ಸ್ ಮತ್ತು ಚೀನಾ ಮಧ್ಯೆ ಬಿಗುವಿನ ಪರಿಸ್ಥಿತಿ ವರ್ಧಿಸಿದೆ. ವಿವಾದಿತ ದ್ವೀಪಗಳ ಬಗ್ಗೆ ಚೀನಾ ಮತ್ತು ಜಪಾನ್ ದೇಶಗಳ ಮಧ್ಯೆ ಪ್ರಾದೇಶಿಕ ಸಂಘರ್ಷ ದೀರ್ಘ ಕಾಲದಿಂದ ಜಾರಿಯಲ್ಲಿದೆ.

ಕಾಶ್ಮೀರಕ್ಕೆ ಸಂಬಂಧಿಸಿ ಭಾರತ ಮತ್ತು ಪಾಕಿಸ್ಥಾನ ಮಧ್ಯೆ ಜಗಳ ಮುಂದುವರಿಯುತ್ತಾ ಇದೆ. ಅದು ಕೊನೆಗೊಳ್ಳುವ ಚಿಹ್ನೆಗಳು ಕಾಣುವುದಿಲ್ಲ. ಇದೇ ರೀತಿ ಇಸ್ರಾಯೇಲ್ ಮತ್ತು ಫೆಲೆಸ್ತೀನ್ ಮಧ್ಯೆ ಪ್ರಕ್ಷುಬ್ಧತೆ ಆ ಪ್ರದೇಶದ ಶಾಂತಿಯನ್ನು ನಾಶಪಡಿಸಿದೆ. ಆಫ್ರಿಕದಲ್ಲಿ ಭಯೋತ್ಪಾದಕ ಗುಂಪುಗಳು ಕೆಲವು ಪ್ರದೇಶಗಳಲ್ಲಿ ಅಧಿಕಾರ ಗಳಿಸಿದೆ. ಅವರು ಅಲ್ಲಿ ವ್ಯಾಪಕವಾದ ನಾಶವನ್ನು ಮಾಡುತ್ತಿದ್ದಾರೆ.

ನಾನು ಕೇವಲ ಕೆಲವು ವಿಷಯಗಳನ್ನು ಮಾತ್ರ ಪ್ರಸ್ತಾಪಿಸಿದ್ದೇನೆ. ಲೋಕದಲ್ಲಿ ಬೇರೆ ಅನೇಕ ಅಶಾಂತಿ ಮತ್ತು ಕ್ಷೋಭೆಯ ಉದಾಹರಣೆಗಳಿವೆ. ಆದುದರಿಂದ ನಾವು ತೀರ್ಮಾನಿಸಬಹುದಾದ ವಿಷಯವೇನೆಂದರೆ, ಲೋಕವು ಈಗ ಹಿಂಸಾಚಾರ ಮತ್ತು ಅವ್ಯವಸ್ಥೆಯಿಂದ ಆವರಿಸಲ್ಪಡುತ್ತಿದೆ. ಆಧುನಿಕ ಲೋಕದಲ್ಲಿ ಹಿಂದಿನ ಶತಮಾನಗಳಿಗಿಂತ ಹೆಚ್ಚಿನ ಮಟ್ಟದಲ್ಲಿ ಯುದ್ಧದ ಸಾಧ್ಯತೆಗಳು ಇವೆ. ಲೋಕದ ಒಂದು ಭಾಗದಲ್ಲಿ ಪ್ರಾರಂಭವಾಗುವ ಸಂಘರ್ಷ ಅಲ್ಲಿಗೆ ಸೀಮಿತವಾಗಿರುವುದಿಲ್ಲ. ಅದರ ಪರಿಣಾಮ ವ್ಯಾಪಕವಾಗಿ ಹಬ್ಬುತ್ತದೆ.

ಸಂಪರ್ಕ ಮಾಧ್ಯಮಗಳ ಆಧಿಕ್ಯ ಮತ್ತು ತ್ವರಿತ ವಾರ್ತಾವಿನಿಮಯದ ಅನುಕೂಲತೆಗಳು ಲೋಕವನ್ನು ಒಂದು ಜಾಗತಿಕ ಗ್ರಾಮವಾಗಿ ಪರಿವರ್ತಿಸಿದೆ. ಹಿಂದಿನ ಕಾಲದ ಒಂದು ಯುದ್ಧವು ಅದರಲ್ಲಿ ನೇರವಾಗಿ ಭಾಗವಹಿಸುವ ತಂಡಗಳಿಗೆ ಸೀಮಿತವಾಗಿದ್ದಿತು. ಆದರೆ ಈಗ ಪ್ರತಿಯೊಂದು ಸಂಘರ್ಷ ಮತ್ತು ಯುದ್ಧದ ಪರಿಣಾಮ ನಿಜವಾಗಿಯೂ ಜಾಗತಿಕವಾಗಿರುತ್ತದೆ. ಒಂದು ಪ್ರದೇಶದಲ್ಲಿ ಪ್ರಾರಂಭವಾದ ಯುದ್ಧದ ದುಷ್ಪರಿಣಾಮಗಳು ಲೋಕದ ಇತರ ಭಾಗಗಳ ಶಾಂತಿ ಮತ್ತು ಸೌಹಾರ್ದವನ್ನು ಕೆಡಿಸುವುದೆಂದು ನಾನು ಹಲವು ವರ್ಷಗಳಿಂದ ಲೋಕಕ್ಕೆ ಎಚ್ಚರಿಕೆ ನೀಡುತ್ತಿದ್ದೇನೆ.

ಇಪ್ಪತ್ತನೇ ಶತಮಾನದಲ್ಲಿ ನಡೆದ ಎರಡು ಜಾಗತಿಕ ಯುದ್ಧಗಳ ಚರಿತ್ರೆಯ ಕಡೆಗೆ ನೋಡುವುದಾದರೆ, ಆ ಕಾಲಘಟ್ಟದಲ್ಲಿ ಲಭ್ಯವಾಗಿದ್ದ ಆಯುಧಗಳು ಅಭಿವೃದ್ಧಿಗೊಂಡ ಇಂದಿನ ಮಾರಕ ಶಸ್ತ್ರಗಳ ಸಮೀಪ ಕೂಡ ಬರಲಾರವು. ಹೀಗಿದ್ದರೂ ದ್ವಿತೀಯ ಜಾಗತಿಕ ಯುದ್ಧದಲ್ಲಿ ಮಾತ್ರ ಎಪ್ಪತ್ತು ಮಿಲಿಯ ಜನರು ಕೊಲ್ಲಲ್ಪಟ್ಟರು ಎಂದು ವರದಿಯಾಗಿದೆ. ಹೀಗೆ ಕೊಲ್ಲಲ್ಪಟ್ಟವರಲ್ಲಿ ಬಹುಸಂಖ್ಯಾತರು ನಿಷ್ಕಳಂಕ ನಾಗರಿಕರಾಗಿದ್ದರು. ಆದುದರಿಂದ ಇಂದಿನ ಕಾಲದಲ್ಲಿ ಸಂಭವಿಸಲಿರುವ ನಾಶದ ಪರಿಮಾಣ ಊಹಾತೀತವಾಗಿರುವುದು.

ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಯುನೈಟೆಡ್ ಸ್ಟೇಟ್ಸ್ ಅಣು ಅಣ್ವಸ್ತ್ರಗಳನ್ನು ಹೊಂದಿತ್ತು. ಅವು ಅತ್ಯಂತ ವಿನಾಶಕಾರಿಗಳಾಗಿದ್ದರೂ ಇಂದಿನ ಕಾಲದ ಅಣ್ವಸ್ತ್ರ ಶಕ್ತಿಗೆ ಹೋಲಿಸಿದರೆ ಅವುಗಳ ಶಕ್ತಿ ಏನೂ ಇಲ್ಲ. ಇನ್ನೊಂದು ವಿಷಯವೇನೆಂದರೆ, ಇಂದಿನ ಕಾಲದಲ್ಲಿ ಪ್ರಮುಖ ಶಕ್ತಿಶಾಲಿ ರಾಷ್ಟ್ರಗಳು ಮಾತ್ರವಲ್ಲ ಅನೇಕ ಚಿಕ್ಕ ದೇಶಗಳು ಕೂಡ ಅಣ್ವಸ್ತ್ರಗಳನ್ನು ಹೊಂದಿವೆ.

ಪ್ರಾಯಶಃ ಪ್ರಮುಖ ಶಕ್ತಿ ರಾಷ್ಟ್ರಗಳು ಇಂತಹ ಆಯುಧಗಳನ್ನು ತಮ್ಮನ್ನು ಆಕ್ರಮಿಸುವವರಿಗೆ ತಡೆಯೊಡ್ಡಲು ಬಳಸುತ್ತಿರಬಹುದಾದರೂ ಚಿಕ್ಕ ದೇಶಗಳು ಇಂತಹ ನಿಯಂತ್ರಣವನ್ನು ಕಾಪಾಡುವರೆಂಬುದಕ್ಕೆ ಯಾವುದೇ ಖಾತರಿ ಇಲ್ಲ. ಈ ದೇಶಗಳು ಎಂದೂ ಅಣ್ವಸ್ತ್ರಗಳನ್ನು ಬಳಸಲಾರದೆಂದು ಭಾವಿಸಬಾರದು. ಒಟ್ಟಿನಲ್ಲಿ, ಲೋಕವು ವಿನಾಶದ ಅಂಚಿನಲ್ಲಿದೆ ಎಂದು ಇದರಿಂದ ಸ್ಪಷ್ಟವಾಗುತ್ತದೆ.

ದ್ವಿತೀಯ ಮಹಾಯುದ್ಧದ ಅಂತ್ಯಕಾಲದಲ್ಲಿ ನಿಮ್ಮ ದೇಶ ಅತ್ಯಂತ ಭಯಾನಕ

ವಿನಾಶವನ್ನು ಮತ್ತು ದುಃಖವನ್ನು ಅನುಭವಿಸಿತು. ನಿಮ್ಮ ದೇಶದ ಲಕ್ಷಗಟ್ಟಲೆ ಜನರು ನಿರ್ದಯವಾಗಿ ಕೊಲ್ಲಲ್ಪಟ್ಟರು. ನಿಮ್ಮ ಎರಡು ನಗರಗಳು ಅಣು ಬಾಂಬು ವರ್ಷಿಸಿ ನಾಶಗೊಳಿಸಲ್ಪಟ್ಟು ಮಾನವೀಯತೆಗೆ ನಾಚಿಕೆ ಉಚಿಟುಮಾಡಲ್ಪಟ್ಟವು.

ಇಂತಹ ವಿಧ್ವಂಸಕರ ದಾರುಣ ದುರಂತವನ್ನು ಕಂಡು ಅನುಭವಿಸಿದ ಜಪಾನಿ ಜನತೆ ಅಂತಹ ಆಕ್ರಮಣ ಪುನಃ ಜಪಾನಿನಲ್ಲಿ ಅಥವಾ ಲೋಕದ ಬೇರೆ ಎಲ್ಲಿಯಾದರೂ ಸಂಭವಿಸುವುದನ್ನು ಎಂದೂ ಇಚ್ಛಿಸಲಾರದು. ಅಣ್ವಸ್ತ್ರ ಯುದ್ಧದ ಭಯಾನಕ ವಿನಾಶದ ಬಗ್ಗೆ ಸರಿಯಾಗಿ ಮನವರಿಕೆ ಮಾಡಿಕೊಂಡ ಜನತೆ ನೀವಾಗಿರುವಿರಿ. ಅಂತಹ ಆಯುಧಗಳ ಬಳಕೆಯಿಂದ ಸಂಭವಿಸಲಿರುವ ದೂರಗಾಮಿ ಪರಿಣಾಮ ಒಂದು ಪೀಳಿಗೆಗೆ ಸೀಮಿತವಾಗದೆ ಮುಂದಿನ ಪೀಳಿಗೆಗಳಲ್ಲಿ ಮುಂದುವರಿಯುವುದು ಎಂದು ತಿಳಿದುಕೊಂಡ ಜನತೆ ನೀವಾಗಿರುವಿರಿ. ಅಣ್ವಸ್ತ್ರಗಳ ಅಭೂತಪೂರ್ವ ಕೆಡುಕುಗಳ ಬಗ್ಗೆ ಸಾಕ್ಷ್ಯ ನೀಡಬಲ್ಲವರು ನೀವಾಗಿರುವಿರಿ. ಆದುದರಿಂದ ಜಪಾನಿ ಜನತೆಗಿಂತ ಶಾಂತಿ ಮತ್ತು ಭದ್ರತೆ ಬಗ್ಗೆ ಚೆನ್ನಾಗಿ ತಿಳಿದವರು ಬೇರೆ ಯಾರೂ ಪ್ರಾಯಶಃ ಇಲ್ಲ.

ಜಪಾನ್ ವಿನಾಶದಿಂದ ವಿಮುಕ್ತಿ ಗಳಿಸಿದ ಬಗ್ಗೆ ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಈಗ ನೀವು ಅತ್ಯಂತ ಅಭಿವೃದ್ಧಿ ಹೊಂದಿದ ದೇಶವಾಗಿರುವಿರಿ. ನಿಮ್ಮ ಹಿಂದಿನ ಚರಿತ್ರೆಯನ್ನು ಗಮನದಲ್ಲಿರಿಸಿಕೊಂಡು ಜಪಾನಿನ ಜನತೆ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ತನ್ನ ಪಾತ್ರ ವಹಿಸಬೇಕು.

ದ್ವಿತೀಯ ಮಹಾಯುದ್ಧ ಕೊನೆಗೊಂಡ ನಂತರ ಕೆಲವು ನಿಯಂತ್ರಣಗಳನ್ನು ಮತ್ತು ಪ್ರತಿಬಂಧಗಳನ್ನು ಜಪಾನಿನ ಮೇಲೆ ಹೇರಿದ್ದು ದುಃಖಕರ. ಆ ಕಾರಣದಿಂದ ನಿಮ್ಮ ದೇಶ ಬೃಹತ್ ಹೆಜ್ಜೆ ಹಾಕಲು ಮತ್ತು ಲೋಕದ ವ್ಯವಸ್ಥೆಯನ್ನು ರೂಪಿಸುವುದರಲ್ಲಿ ಭಾಗವಹಿಸುವುದು ಕಷ್ಟಕರವಾಗಿರಬಹುದು.

ಆದರೆ ನಿಮ್ಮ ದೇಶ ಈಗ ಜಾಗತಿಕ ವ್ಯವಹಾರದಲ್ಲಿ ಮುಖ್ಯ ಪಾತ್ರ ವಹಿಸುತ್ತಿದೆ. ನೀವು ನಿಮ್ಮ ಪ್ರಭಾವವನ್ನು ಅತ್ಯುತ್ತಮವಾಗಿ ಬಳಸಿ ದೇಶಗಳ ಮತ್ತು ಜನತೆಗಳ ಮಧ್ಯೆ ಶಾಂತಿ ಸೌಹಾರ್ದಗಳು ಮೂಡಿಬರಲು ಚೆನ್ನಾಗಿ ಪ್ರಯತ್ನಿಸಬೇಕು.

ಹಿರೋಶಿಮ ಮತ್ತು ನಾಗಸಾಕಿ ಮೇಲೆ ಅಣುಬಾಂಬು ದಾಳಿ ನಡೆಸಿ ಅತ್ಯಧಿಕ ವಿನಾಶವನ್ನೂ ಕಷ್ಟವನ್ನೂ ನೋವನ್ನೂ ಉಂಟುಮಾಡಿದ ಘಟನೆ ಸಂಭವಿಸಿ ಎಪ್ಪತ್ತು ವರ್ಷಗಳು ದಾಟಿವೆ ಹೋಗಿವೆ.

ನೀವು ಅಣ್ವಸ್ತ್ರ ದಾಳಿಯ ವಿನಾಶವನ್ನು ಮತ್ತು ಅದರಿಂದ ಉಂಟಾದ ಮಾನವ ಹತ್ಯೆ ಹಾಗೂ ಇಂದಿನ ತನಕ ಬಾಕಿಯಾಗಿ ಉಳಿದಿರುವ ಅದರ ದೂರಗಾಮಿ ಪರಿಣಾಮಗಳನ್ನು ಚಿತ್ರಿಸುವ ಮ್ಯೂಸಿಯಮ್ ನಿರ್ಮಿಸಿರುವಿರಿ. ಯುದ್ಧ ಮತ್ತು ಸಂಘರ್ಷದ ಪರಿಣಾಮದ ಬಗ್ಗೆ ಜಪಾನಿ ಜನತೆ ಚೆನ್ನಾಗಿ ಮನವರಿಕೆ ಮಾಡಿಕೊಂಡಿದೆ ಎಂದು ಇದರಿಂದ ಸ್ಪಷ್ಟವಾಗುತ್ತದೆ.

ನಾನು ಹಿಂದೆ ಹೇಳಿದ ಹಾಗೆ, ಯುದ್ಧ ಕೊನೆಗೊಂಡ ನಂತರ ಕ್ರೂರ ಮತ್ತು

ಅನಾವಶ್ಯಕ ನಿರ್ಬಂಧಗಳನ್ನು ಜಪಾನಿನ ಮೇಲೆ ಹೆಚ್ಚುವರಿಯಾಗಿ ಹೇರಲಾಯಿತು. ದಶಕಗಳು ಹಾದು ಹೋಗುವುದರೊಂದಿಗೆ ಈ ನಿರ್ಬಂಧಗಳು ಸಹ ಯುದ್ಧಗಳ ವಿನಾಶದ ಪರಿಣಾಮಗಳನ್ನು ನಿಮ್ಮನ್ನು ನಿರಂತರ ನೆನಪಿಸುತಿದ್ದುವು.

ಜಪಾನಿನ ಮೇಲೆ ಅಣುಬಾಂಬು ದಾಳಿ ನಡೆದಾಗ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಅಂದಿನ ಜಾಗತಿಕ ಸರ್ವೋಚ್ಛ ನಾಯಕರಾಗಿದ್ದ ದ್ವಿತೀಯ ಖಲೀಫರು ಬಾಂಬ್ ದಾಳಿಯನ್ನು ತೀವ್ರವಾಗಿ ಖಂಡಿಸಿ ಹೀಗೆ ಹೇಳಿಕೆ ನೀಡಿದರು:

"ನಮ್ಮ ಧಾರ್ಮಿಕ ಮತ್ತು ನೈತಿಕ ತತ್ವಗಳು ನಾವು ಜಗತ್ತಿನೆದುರಿಗೆ ಹೀಗೆ ಘೋಷಿಸಲು ನಮ್ಮೊಂದಿಗೆ ಆವಶ್ಯಪಡುತ್ತವೆ. ಈ ಭಯಾನಕ ಕೃತ್ಯ ಮತ್ತು ರಕ್ತಪಾತವನ್ನು ಯಾವ ರೀತಿಯಲ್ಲಿಯೂ ಸಮರ್ಥಿಸಲು ಸಾಧ್ಯವಾಗದು. ಕೆಲವು ಸರಕಾರಗಳು ನಾನು ಹೇಳಿದ್ದನ್ನು ಇಷ್ಟಪಡುವುದಿಲ್ಲವಾದರೆ ನನಗೆ ಅದರ ಬಗ್ಗೆ ಯಾವ ಕಾಳಜಿಯೂ ಇಲ್ಲ."

"ಯುದ್ಧಗಳು ಕೊನೆಗೊಳ್ಳುವುವು ಎಂದು ನನಗೆ ತೋರುವುದಿಲ್ಲ. ಸಂಘರ್ಷಗಳು ಮತ್ತು ಹಿಂಸಾಚಾರಗಳು ವರ್ಧಿಸುತ್ತಾ ಹೋಗುತ್ತಿರುವುದಾಗಿ ನಾನು ನೋಡುತ್ತಿದ್ದೇನೆ" ಎಂದೂ ಅವರು ಹೇಳಿದರು.

ಇಂದು ಅವರ ಮುನ್ನೆಚ್ಚರಿಕೆಗಳು ಸಂಪೂರ್ಣ ಸತ್ಯವೆಂದು ಸಾಬೀತಾಗಿವೆ. ತೃತೀಯ ಮಹಾಯುದ್ಧವನ್ನು ಅಧಿಕೃತವಾಗಿ ಘೋಷಿಸಿಲ್ಲವಾದರೂ ಜಾಗತಿಕ ಯುದ್ಧ ಈಗಲೇ ನಡೆಯುತ್ತಿದೆ. ಲೋಕದಾದ್ಯಂತ ಪುರುಷರು, ಮಹಿಳೆಯರು ಮತ್ತು ಮಕ್ಕಳು ಕೊಲ್ಲಲ್ಪಡುತ್ತಿದ್ದಾರೆ, ಹಿಂಸಾಚಾರಗಳಿಗೆ ಗುರಿಪಡಿಸಲ್ಪಡುತ್ತಿದ್ದಾರೆ ಮತ್ತು ಅತ್ಯಂತ ಹೃದ್ರಾವಕ ಕ್ರೌರ್ಯಗಳಿಗೆ ಗುರಿಯಾಗುತ್ತಿದ್ದಾರೆ.

ಅಹ್ಮದಿಯಾ ಮುಸ್ಲಿಮ್ ಸಂಘಟನೆಗೆ ಸೇರಿದ ನಮ್ಮ ಬಗ್ಗೆ ಹೇಳುವುದಾದರೆ, ನಾವು ಎಲ್ಲ ರೀತಿಯ ಕ್ರೌರ್ಯಕೃತ್ಯಗಳನ್ನು ಯಾವಾಗಲೂ ಖಂಡಿಸುತ್ತಾ ಬಂದಿದ್ದೇವೆ. ಅವು ಎಲ್ಲಿ ನಡೆಯುವುದಾದರೂ ನಾವು ಖಂಡಿಸುತ್ತಿರುವುದು ಏಕೆಂದರೆ ಇಸ್ಲಾಮ್ ಧರ್ಮ ತತ್ವಗಳು ಅನ್ಯಾಯ ವರ್ತನೆಯನ್ನು ಖಂಡಿಸಲು ಮತ್ತು ಆವಶ್ಯವಿರುವವರಿಗೆ ಸಹಾಯ ಮಾಡಲು ಮತ್ತು ಪೀಡಿತರಿಗೆ ನೆರವು ನೀಡಲು ಉಪದೇಶಿಸುತ್ತವೆ. ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಜಪಾನಿನ ಮೇಲೆ ಅಣುಬಾಂಬ್ ದಾಳಿ ನಡೆದಾಗ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋಚ್ಚ ನಾಯಕರು ಅದನ್ನು ಖಂಡಿಸಿದ ಬಗ್ಗೆ ಇದರ ಮೊದಲು ಪ್ರಸ್ತಾಪಿಸಿದ್ದೇನೆ.

ಇದಲ್ಲದೆ, ಲೋಕದಲ್ಲಿ ಬಹಳ ಉತ್ತಮ ಪ್ರಭಾವ ಬೀರಿದ ಒಬ್ಬ ಪ್ರಮುಖ ಮತ್ತು ಪ್ರಸಿದ್ಧ ಅಹ್ಮದಿ ಮುಸ್ಲಿಮ್ ಜಪಾನ್ ಮತ್ತು ಅದರ ಜನತೆಯನ್ನು ಬೆಂಬಲಿಸಿ ಮಾತನಾಡಿದ್ದರು. ನಾನು ಸರ್ ಚೌಧರಿ ಮುಹಮ್ಮದ್ ಝುಫರುಲ್ಲಾ ಖಾನ್ ಬಗ್ಗೆ ಪ್ರಸ್ತಾಪಿಸುತ್ತಿದ್ದೇನೆ. ಅವರು ಅನೇಕ ಅಂತರ್ರಾಷ್ಟ್ರೀಯ ಹುದ್ದೆಗಳನ್ನು ಹೊಂದಿದ್ದರು. ಮಾತ್ರವಲ್ಲ, ಅವರು ಪಾಕಿಸ್ಥಾನದ ವಿದೇಶಕಾರ್ಯ ಸಚಿವರೂ ಯುನೈಟೆಡ್ ನೇಶನ್ಸ್ ಆರ್ಗನೈಝೇಶನಿನ ಜನರಲ್ ಎಸೆಂಬ್ಲಿಯ ಅಧ್ಯಕ್ಷರೂ ಆಗಿದ್ದರು. ಎರಡನೆಯ ಮಹಾಯುದ್ಧ ಕೊನೆಗೊಂಡ ನಂತರ ಕೆಲವು ಶಕ್ತಿಶಾಲಿ ದೇಶಗಳು ಜಪಾನಿನ ಮೇಲೆ

ನಿರ್ಬಂಧಗಳನ್ನು ಹೇರಲು ಪ್ರಯತ್ನಿಸುವುದನ್ನು ಖಂಡಿಸಿ ಅವರು ಭಾಷಣ ಮಾಡಿದ್ದರು.

1951ರಲ್ಲಿ ಸಾನ್‌ಫ್ರಾನ್ಸಿಸ್ಕೋ ಪೀಸ್ ಸಮ್ಮಿಟ್ ಸಭೆಯಲ್ಲಿ ಪಾಕಿಸ್ಥಾನದ ಪ್ರತಿನಿಧಿ ಸಂಘದ ಮುಖ್ಯಸ್ಥನಾಗಿ ಚೌಧರಿ ಝಫರುಲ್ಲಾ ಖಾನ್ ಹೇಳಿದರು: "ಜಪಾನಿನೊಂದಿಗೆ ಶಾಂತಿಸ್ಥಾಪನೆಯ ಅಸ್ತಿಭಾರವೂ ನ್ಯಾಯಪಾಲನೆ ಮತ್ತು ರಾಜಿ ಮೂಲಕ ಆಗಬೇಕೇ ಹೊರತು ಪ್ರತಿಕಾರ ಮತ್ತು ದಬ್ಬಾಳಿಕೆಯ ಮೂಲಕವಲ್ಲ. ಜಪಾನಿನಲ್ಲಿ ಪ್ರಾರಂಭಿಸಲಾದ ರಾಜಕೀಯ ಮತ್ತು ಸಾಮಾಜಿಕ ಸುಧಾರಣೆಯ ಪರಿಣಾಮವಾಗಿ ಭವಿಷ್ಯತ್‌ಕಾಲದಲ್ಲಿ ಜಪಾನ್ ಬಹಳ ಮುಖ್ಯವಾದ ಪಾತ್ರವಹಿಸುವುದು. ಅದು ಅಭಿವೃದ್ಧಿಯ ಪ್ರಕಾಶಮಾನವಾದ ವಾಗ್ದಾನವನ್ನು ನೀಡುತ್ತಿದೆ ಮತ್ತು ಶಾಂತಿಪ್ರಿಯ ದೇಶಗಳೊಂದಿಗೆ ಸಮಾನ ಸದಸ್ಯತ್ವ ಪಡೆಯುವುದಕ್ಕೆ ಅರ್ಹತೆ ಗಳಿಸುವುದು."

ಅವರ ಭಾಷಣ ಪವಿತ್ರ ಖುರ್‌ಆನಿನ ಉಪದೇಶಗಳನ್ನು ಮತ್ತು ಇಸ್ಲಾಮಿನ ಮಹಾನ್ ಪೈಗಂಬರರ(ಸ) ಜೀವಿತವನ್ನು ಆಧಾರವಾಗಿರಿಸಿ ಕೊಂಡದ್ದಾಗಿತ್ತು. ಯುದ್ಧದಲ್ಲಿ ಜಯಗಳಿಸಿದವನು ಸೋತವನೊಂದಿಗೆ ಅನ್ಯಾಯದಿಂದ ವರ್ತಿಸಬಾರದು ಮತ್ತು ಸೋತವರ ಅಭಿವೃದ್ಧಿಯನ್ನು ತಡೆಗಟ್ಟುವ ಯಾವುದೇ ನಿರ್ಬಂಧವನ್ನು ಹೇರಬಾರದು ಎಂದು ಇಸ್ಲಾಮ್ ಧರ್ಮದ ನೈಜ ತತ್ವಗಳ ಪ್ರಕಾರ ಅವರು ಹೇಳಿದರು.

ಚೌಧರಿ ಝಫರುಲ್ಲಾ ಖಾನರು ಜಪಾನನ್ನು ಬೆಂಬಲಿಸಿ ಹೀಗೆ ಚಾರಿತ್ರಿಕ ಭಾಷಣ ನೀಡಲು ಕಾರಣವೇನೆಂದರೆ, ಅವರು ಅಹ್ಮದಿ ಮುಸ್ಲಿಮರಾಗಿದ್ದರು. ಅವರು ಕೇವಲ ಪಾಕಿಸ್ಥಾನವನ್ನು ಪ್ರತಿನಿಧಿಕರಿಸುತ್ತಿರಲಿಲ್ಲ; ಎಲ್ಲದಕ್ಕಿಂತಲೂ ಮಿಗಿಲಾಗಿ ಇಸ್ಲಾಮಿನ ಶ್ರೇಷ್ಠ ತತ್ವಗಳನ್ನು ಪ್ರತಿನಿಧೀಕರಿಸುತ್ತಿದ್ದರು.

ನಾನು ಹಿಂದೆ ಹೇಳಿದ ಹಾಗೆ ಯುದ್ಧ ಮತ್ತು ಕ್ರೌರ್ಯಗಳ ಪರಿಣಾಮಗಳನ್ನು ಇತರರಿಗಿಂತ ಹೆಚ್ಚಿನ ಮಟ್ಟದಲ್ಲಿ ಮನವರಿಕೆ ಮಾಡಿಕೊಂಡವರು ನೀವಾಗಿರುವಿರಿ. ಆದುದರಿಂದ ಪ್ರತಿಯೊಂದು ಹಂತದಲ್ಲೂ ಪ್ರತಿಯೊಂದು ರೀತಿಯಲ್ಲೂ ಜಪಾನಿನ ಸರಕಾರ ಎಲ್ಲ ವಿಧಗಳ ಅಮಾನವೀಯ ಕೃತ್ಯಗಳನ್ನು, ಹಿಂಸಾಚಾರವನ್ನು ಮತ್ತು ಅನ್ಯಾಯವನ್ನು ಎದುರಿಸಲು ಮತ್ತು ತಡೆಗಟ್ಟಲು ಪ್ರಯತ್ನಿಸಬೇಕು. ಅವರು ಎದುರಿಸಿದ ಹೇಯ ಆಕ್ರಮಣ ಲೋಕದಲ್ಲಿ ಎಲ್ಲಿಯೂ ಮುಂದೆ ಪುನರಾವರ್ತಿಸಲ್ಪಡದಂತೆ ನಿಗಾವಹಿಸಬೇಕು.

ಎಲ್ಲೆಲ್ಲ ಯುದ್ಧದ ಬೆಂಕಿಯನ್ನು ಹೊತ್ತಿಸಲಾಗುತ್ತಿದೆಯೋ, ಅಲ್ಲಿ ಸಂಘರ್ಷ ನಿವಾರಿಸಲು ಮತ್ತು ಶಾಂತಿ ಸ್ಥಾಪಿಸಲು ಜಪಾನಿನ ನಾಯಕರು ಮತ್ತು ಜನರು ತಮ್ಮ ಪಾತ್ರ ವಹಿಸಬೇಕು. ಇಸ್ಲಾಮಿನ ಬಗ್ಗೆ ಕೆಲವರು ಅದೊಂದು ಬರ್ಬರತೆಯ ಮತ್ತು ಹಿಂಸಕ ಧರ್ಮವೆಂದು ಗಣಿಸುತ್ತಾರೆ. ಮುಸ್ಲಿಮ್ ಲೋಕದಲ್ಲಿ ಜಾರಿಯಲ್ಲಿರುವ ಭಯೋತ್ಪಾದಕ ಕೃತ್ಯಗಳನ್ನು ಮತ್ತು ಯುದ್ಧಗಳನ್ನು ಅವರ ವಾದಕ್ಕೆ ಸಮರ್ಥನೆಯಾಗಿ ಪ್ರಸ್ತಾಪಿಸುತ್ತಾರೆ.

ಆದರೆ ಅವರ ಅಭಿಪ್ರಾಯ ಸಂಪೂರ್ಣ ತಪ್ಪಾಗಿದೆ. ವಾಸ್ತವದಲ್ಲಿ ಶಾಂತಿಯ

ಬಗ್ಗೆ ಇಸ್ಲಾಮಿನ ಉಪದೇಶಗಳು ಲೋಕ ಚರಿತ್ರೆಯಲ್ಲೇ ಅತುಲ್ಯವಾದುದಾಗಿವೆ. ನಮ್ಮ ದ್ವಿತೀಯ ಖಲೀಫರು ಮತ್ತು ಚೌಧರಿ ಝುಫರುಲ್ಲಾ ಖಾನರು ನಿಮ್ಮ ದೇಶದ ವಿರುದ್ಧ ಪಾಶವಿಕ ಕೃತ್ಯಗಳನ್ನು ತೀವ್ರವಾಗಿ ಖಂಡಿಸಿದ್ದು ಇದೇ ಕಾರಣದಿಂದಾಗಿದೆ. ಇಸ್ಲಾಮ್ ಧರ್ಮ ತತ್ವಗಳೇನೆಂದು ನಾನು ಸಂಕ್ಷಿಪ್ತವಾಗಿ ವಿವರಿಸುವೆನು.

ಭೂಮಿ ವಶಪಡಿಸಿಕೊಳ್ಳಲು ಅಥವಾ ಆರ್ಥಿಕ ಲಾಭಗಳಿಸಲು ಮತ್ತು ಅನ್ಯದೇಶಗಳ ನೈಸರ್ಗಿಕ ಸಂಪತ್ತನ್ನು ವಶಕ್ಕೆ ತೆಗೆದುಕೊಳ್ಳಲು ಯುದ್ಧ ಮಾಡುವುದು ಸಮರ್ಥನೀಯವಲ್ಲವೆಂದು ಇಸ್ಲಾಮ್ ಮೂಲತತ್ವವಾಗಿ ಹೇಳುತ್ತದೆ. ಪವಿತ್ರ ಖುರ್‌ಆನ್ ಅಧ್ಯಾಯ 16 ವಚನ 127ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳಿದ್ದಾನೆ: ಯುದ್ಧ ವೇಳೆಯಲ್ಲಿ ನಿಮ್ಮ ಪ್ರತಿಕಾರ ನಿಮ್ಮ ಮೇಲೆ ಉಂಟಾದ ಅಕ್ರಮಕ್ಕೆ ಸಮಾನವಾದಷ್ಟು ಮಾತ್ರವಾಗಿರಬೇಕು. ನೀವು ಮಿತಿಮೀರಬಾರದು. ಯುದ್ಧ ಮುಗಿದ ನಂತರ ಕ್ಷಮಿಸುವುದು ಮತ್ತು ಸಹನೆದೋರುವುದು ಉತ್ತಮವಾಗಿದೆ.

ಇದೇ ರೀತಿ ಅಧ್ಯಾಯ 8 ವಚನ 62ರಲ್ಲಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: ಎರಡು ಪಕ್ಷಗಳ ಮಧ್ಯೆ ಸಂಬಂಧ ಮುರಿದು ಹೋದರೆ ಮತ್ತು ಯುದ್ಧ ಮಾಡಲು ಸಿದ್ಧತೆ ನಡೆಸುವಾಗ ವಿರೋಧ ಪಕ್ಷದವರು ಶಾಂತಿಯೆಡೆಗೆ ವಾಲಿದರೆ ಅದಕ್ಕೆ ಒಪ್ಪಿಗೆ ನೀಡಿ ಅಲ್ಲಾಹನ ಮೇಲೆ ಭರವಸೆ ಇಡಬೇಕು. ಪವಿತ್ರ ಖುರ್‌ಆನ್ ಹೇಳುವುದೇನೆಂದರೆ, ವಿರೋಧಿ ಪಕ್ಷದವರ ಉದ್ದೇಶ ಮತ್ತು ಪ್ರಾಮಾಣಿಕತೆ ಬಗ್ಗೆ ಸಂಶಯಪಡಬಾರದು. ಯಾವಾಗಲೂ ಶಾಂತಿಗೋಸ್ಕರ ಪ್ರಯತ್ನಿಸಬೇಕು. ಈ ತತ್ವ ಜಾಗತಿಕ ಶಾಂತಿ ಮತ್ತು ಭದ್ರತೆ ಸ್ಥಾಪಿಸಲು ಕೀಲಿಗೈ ಆತದೆ.

ಪವಿತ್ರ ಖುರ್‌ಆನ್ ಅಧ್ಯಾಯ 5 ವಚನ 9ರಲ್ಲಿ ಸರ್ವಶಕ್ತನಾದ ಅಲ್ಲಾಹನು ಘೋಷಿಸುತ್ತಾನೆ: "ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. ನೀವು ನ್ಯಾಯಯುತವಾಗಿ ವರ್ತಿಸಿರಿ."

ಇಸ್ಲಾಮ್ ಉಪದೇಶಿಸುವುದೇನೆಂದರೆ, ಎಲ್ಲ ಸಂದರ್ಭಗಳಲ್ಲಿಯೂ ಅವು ಎಷ್ಟು ಕಷ್ಟಕರವಾದದ್ದು ಆಗಿದ್ದರೂ ನ್ಯಾಯ ತತ್ವಗಳಿಗೆ ಬದ್ಧರಾಗಿರಬೇಕು. ಸಂಬಂಧ ಸುಧಾರಣೆ ಮಾಡಲು, ಆಶಾಭಂಗ ಕೊನೆಗೊಳಿಸಲು, ಯುದ್ಧ ಕಾರಣಗಳನ್ನು ನಿವಾರಿಸಲು ನಿಶ್ಚಯವಾಗಿಯೂ ನ್ಯಾಯಪಾಲನೆ ಮಾಡುವುದೇ ಮಾರ್ಗವಾಗಿದೆ.

ಪವಿತ್ರ ಖುರ್‌ಆನ್ ಅಧ್ಯಾಯ 24 ವಚನ 34ರಲ್ಲಿ ಹೀಗೆ ಹೇಳಲಾಗಿದೆ: ಯುದ್ಧದ ನಂತರ ಸೆರೆ ಹಿಡಿಯಲ್ಪಟ್ಟವರ ಬಿಡುಗಡೆಗೆ ನೀವು ಆರ್ಥಿಕ ಸಂಬಂಧವಾದ ಶರತ್ತುಗಳನ್ನು ವಿಧಿಸುವಿರಾದರೆ ನೀವು ವಿಧಿಸುವ ಶರತ್ತುಗಳು ನ್ಯಾಯೋಚಿತ ವಾಗಿರಬೇಕು. ಅವರಿಗೆ ಅದನ್ನು ಪಾವತಿ ಮಾಡಲು ಸಾಧ್ಯವಾಗುವಂತಿರಬೇಕು. ಕಂತಿನಲ್ಲಿ ನೀಡಲು ಅವರಿಗೆ ಅನುಮತಿ ನೀಡುವುದು ಉತ್ತಮ.

ಶಾಂತಿ ಸ್ಥಾಪಿಸಲು ಒಂದು ಸುವರ್ಣ ತತ್ವವನ್ನು ಪವಿತ್ರ ಖುರ್‌ಆನ್ ಅಧ್ಯಾಯ 49 ವಚನ 10ರಲ್ಲಿ ಪ್ರಸ್ತಾಪಿಸಲಾಗಿದೆ. ಅಂದರೆ, ಎರಡು ದೇಶಗಳ ಅಥವಾ ಗುಂಪುಗಳ

ಮಧ್ಯೆ ಜಗಳವುಂಟಾದರೆ ಮೂರನೆಯ ಪಕ್ಷದವರು ರಾಜಿ ಸಂಧಾನ ನಡೆಸಬೇಕು ಮತ್ತು ಶಾಂತಿಯುತವಾಗಿ ಜಗಳವನ್ನು ನಿವಾರಿಸಬೇಕು.

ಒಪ್ಪಂದವಾದ ನಂತರ ಯಾವುದಾದರೊಂದು ಪಕ್ಷದವರು ಒಪ್ಪಂದದ ಶರತ್ತುಗಳಿಗೆ ಭಂಗ ಉಂಟುಮಾಡುವರಾದರೆ ಒಪ್ಪಂದ ಮಾಡಿಸಿದ ದೇಶಗಳು ಒಟ್ಟಿಗೆ ಸೇರಿ, ಅವಶ್ಯವೆಂದು ತೋರುವುದಾದರೆ ಬಲಪ್ರಯೋಗಿಸಿ ಅತಿಕ್ರಮಣಕಾರರನ್ನು ತಡೆಯಬೇಕು. ಆದರೆ ಅತಿಕ್ರಮಣಕಾರರು ಹಿಂದೆ ಸರಿದರೆ, ಅವರ ಮೇಲೆ ಅನಾವಶ್ಯಕ ನಿರ್ಬಂಧಗಳನ್ನು ಹೇರಬಾರದು. ಅವರು ಸ್ವತಂತ್ರರಾಗಿ ಮುಂದುವರಿಯಲು ಅನುಮತಿಸಬೇಕು.

ಈ ತತ್ವ ಅತ್ಯಂತ ಮಹತ್ವದ್ದಾಗಿದ್ದು ಶಕ್ತಿಶಾಲಿ ರಾಷ್ಟ್ರಗಳು ಮತ್ತು ಸಂಯುಕ್ತ ರಾಷ್ಟ್ರ ಸಂಘ ಇದರ ಪ್ರಕಾರ ವರ್ತಿಸಬೇಕು. ಈ ಮಾರ್ಗದರ್ಶನ ಪ್ರಕಾರ ನಡೆಯುವುದಾದರೆ ಲೋಕದಲ್ಲಿ ಸತ್ಯವಾದ ಶಾಂತಿ ಮತ್ತು ನ್ಯಾಯ ಸ್ಥಾಪಿತವಾಗುವುದು ಮತ್ತು ಅನಾವಶ್ಯಕ ಆತಂಕಗಳು ಕೊನೆಗೊಳ್ಳುವುವು.

ಇದೇ ರೀತಿ ಲೋಕದಲ್ಲಿ ಶಾಂತಿ ಸ್ಥಾಪನೆ ಬಗ್ಗೆ ಮತ್ತು ಯುದ್ಧಗಳನ್ನು ಕೊನೆಗೊಳಿಸುವ ಬಗ್ಗೆ ಅನೇಕ ಇತರ ಆಜ್ಞೆಗಳು ಪವಿತ್ರ ಖುರ್‌ಆನಿನಲ್ಲಿ ಇವೆ. ಪರಮದಯಾವಂತನೂ ಕಾರುಣ್ಯ ನಿಧಿಯೂ ಆಗಿರುವ ಸರ್ವಶಕ್ತನಾದ ಅಲ್ಲಾಹನು ಶಾಂತಿ ಸ್ಥಾಪನೆಗಿರುವ ಕೀಲಿಗೈಗಳನ್ನು ನಮಗೆ ನೀಡಿರುವನು. ಏಕೆಂದರೆ ತನ್ನ ಸೃಷ್ಟಿಗಳು ಒಟ್ಟಿಗೆ ಸೌಹಾರ್ದದಿಂದ ಹಾಗೂ ದ್ವೇಷ ಮತ್ತು ತಿಕ್ಕಾಟವಿಲ್ಲದೆ ಬಾಳಬೇಕು ಎಂದು ಅವನು ಬಯಸುತ್ತಾನೆ.

ಇಷ್ಟು ಹೇಳಿದ ನಂತರ ನಾನು ನಿಮ್ಮೊಂದಿಗೆ ಅಪೇಕ್ಷಿಸುವುದೇನೆಂದರೆ, ಲೋಕದಲ್ಲಿ ಶಾಂತಿಯನ್ನೂ ಸೌಹಾರ್ದವನ್ನೂ ಹರಡಲು ನೀವು ನಿಮ್ಮ ಪ್ರಭಾವವನ್ನು ಬಳಸಬೇಕು. ಲೋಕದಲ್ಲಿ ಎಲ್ಲಿಯಾದರೂ ಸಂಘರ್ಷ ಮತ್ತು ಅಸ್ತವ್ಯಸ್ತತೆ ತಲೆದೋರಿದರೆ ನಮ್ಮ ಸಾಮೂಹಿಕ ಹೊಣೆಗಾರಿಕೆ ಏನೆಂದರೆ ನಾವು ನ್ಯಾಯಕ್ಕೋಸ್ಕರ ಎದ್ದು ನಿಂತು ಶಾಂತಿ ಸ್ಥಾಪನೆಗೆ ಪ್ರಯತ್ನಿಸಬೇಕು. ಹೀಗೆ ಮಾಡುವುದಾದರೆ, ಎಪ್ಪತ್ತು ವರ್ಷಗಳ ಹಿಂದೆ ಸಂಭವಿಸಿದ ಭಯಾನಕ ಯುದ್ಧವು ಪುನರಾವರ್ತಿಸುವುದರಿಂದ ನಾವು ರಕ್ಷಿಸಲ್ಪಡುವೆವು. ಆ ಯುದ್ಧದ ವಿನಾಶಕಾರಿ ಪರಿಣಾಮಗಳು ದಶಕಗಳ ಕಾಲ ಮುಂದುವರಿದುವು ಮತ್ತು ಪ್ರಾಯಶಃ ಈಗ ಸಹ ಮುಂದುವರಿಯುತ್ತಿವೆ.

ಚಿಕ್ಕ ಪ್ರಮಾಣದಲ್ಲಿ ಇನ್ನೊಂದು ಜಾಗತಿಕ ಯುದ್ಧ ಇಷ್ಟರಲ್ಲಿಯೇ ಆರಂಭವಾಗಿದೆ. ನಾವು ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸಬೇಕು ಮತ್ತು ಪರಿಸ್ಥಿತಿ ಬಿಗಡಾಯಿಸಿ ಲೋಕವನ್ನು ಆವರಿಸುವ ಮೊದಲು ಶಾಂತಿ ಸ್ಥಾಪನೆಗೋಸ್ಕರ ಪ್ರಯತ್ನಿಸಬೇಕು. ನಮ್ಮ ಮುಂದಿನ ಪೀಳಿಗೆಗಳನ್ನು ನಾಶಮಾಡುವಂತಹ ಘೋರ ಆಯುಧಗಳು ಪ್ರಯೋಗಿಸಲ್ಪಡುವ ಮೊದಲೇ ನಾವು ಕಾರ್ಯನಿರತರಾಗಬೇಕು.

ನಾವು ನಮ್ಮ ಕರ್ತವ್ಯಗಳನ್ನು ಈಡೇರಿಸಲು ಒಟ್ಟಿಗೆ ಸೇರಿ

ಕಾರ್ಯನಿರತರಾಗೋಣ. ಪರಸ್ಪರ ವಿರೋಧಿಸುವ ಎರಡು ಬಣಗಳೊಂದಿಗೆ ಸೇರಿಕೊಳ್ಳದೆ ನಾವು ಎಲ್ಲರೂ ಐಕ್ಯತೆಯಿಂದ ವರ್ತಿಸಿ ಪರಸ್ಪರ ಸಹಕಾರ ನೀಡಬೇಕು. ನಮಗೆ ಬೇರೆ ಯಾವುದೇ ಉತ್ತಮ ಆಯ್ಕೆ ಮಾಡಲಿಕ್ಕಿಲ್ಲ. ಏಕೆಂದರೆ ಪೂರ್ಣ ರೂಪದ ತೃತೀಯ ಜಾಗತಿಕ ಯುದ್ಧ ಸಂಭವಿಸಿದರೆ ಅದರಿಂದ ಉಂಟಾಗುವ ವಿನಾಶವು ಊಹಾತೀತವಾಗುವುದು. ಅಂತಹ ಸಂದರ್ಭದಲ್ಲಿ, ಹಿಂದೆ ನಡೆದ ಯುದ್ಧಗಳು ಅದಕ್ಕೆ ಹೋಲಿಸಿ ನೋಡುವುದಾದರೆ ಬಹಳ ಚಿಕ್ಕ ಮಟ್ಟದ್ದು ಎಂದು ಗಣಿಸುವೆವು.

ಲೋಕವು ಈ ಗಂಭೀರ ಪರಿಸ್ಥಿತಿಯ ಬಗ್ಗೆ ಬೇಗನೆ ಅರಿತುಕೊಳ್ಳಲಿ; ಮಾನವರು ಸರ್ವಶಕ್ತನಾದ ದೇವನ ಮುಂದೆ ಬಾಗಿಕೊಂಡು ಅವನಿಗೆ ಸಲ್ಲಬೇಕಾದ ಹಕ್ಕುಗಳನ್ನು ಸಲ್ಲಿಸಲಿ ಮತ್ತು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಿ ಕೊಡಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಧರ್ಮದ ಹೆಸರಲ್ಲಿ ಸಂಘರ್ಷವನ್ನು ಸೃಷ್ಟಿಸುತ್ತಿರುವವರಿಗೆ ಮತ್ತು ಭೂಮಿ ಹಾಗೂ ಆರ್ಥಿಕ ಲಾಭ ಗಳಿಸಲು ಯುದ್ಧ ಮಾಡುವವರಿಗೆ ಅಲ್ಲಾಹನು ಬುದ್ಧಿಯನ್ನು ನೀಡಲಿ. ಅವರ ಕೃತ್ಯಗಳು ಎಷ್ಟು ವಿನಾಶಕರವಾಗಿವೆ ಎಂದು ಅವರು ಮನಗಾಣುವಂತಾಗಲಿ.

ನಿಜವಾದ ಮತ್ತು ದೀರ್ಘಕಾಲೀನ ಶಾಂತಿ ಲೋಕದ ಎಲ್ಲ ಭಾಗಗಳಲ್ಲೂ ಸ್ಥಾಪಿತವಾಗುವಂತೆ ಅಲ್ಲಾಹನು ಮಾಡಲಿ – ಆಮೀನ್.

ಈ ಮಾತುಗಳೊಂದಿಗೆ ನಾನು ನನ್ನ ಭಾಷಣ ಮುಕ್ತಾಯಗೊಳಿಸುತ್ತಿದ್ದೇನೆ. ನೀವು ಈ ಸಮಾರಂಭದಲ್ಲಿ ಭಾಗವಹಿಸಿದುದಕ್ಕೆ ಇನ್ನೊಮ್ಮೆ ಕೃತಜ್ಞತೆ ಸಲ್ಲಿಸುತ್ತೇನೆ.

**ನಿಮಗೆ ತುಂಬಾ ಧನ್ಯವಾದಗಳು.**

# ಜಾಗತಿಕ ನಾಯಕರಿಗೆ ಪತ್ರಗಳು

# ಪೋಪ್ ಬೆನಡಿಕ್ಟ್ XVIರಿಗೆ ಬರೆದ ಪತ್ರ

MIRZA MASROOR AHMAD
HEAD OF THE AHMADIYYA COMMUNITY
IN ISLAM

بسم الله الرحمن الرحيم
نحمده و نصلي على رسوله الكريم
وعلى عبده المسيح الموعود
خدا کے فضل اور رحم کے ساتھ
هو الناصر

16 Gressenhall Road
Southfields, London
SW185QL, UK

31 ಅಕ್ಟೋಬರ್ 2011

ಹಿಸ್ ಹೋಲಿನೆಸ್ ಪೋಪ್ ಬೆನಡಿಕ್ಟ್ XVI ಅವರಿಗೆ,

ಸರ್ವಶಕ್ತನಾದ ಅಲ್ಲಾಹನು ತನ್ನ ಕರುಣೆಯನ್ನೂ ಅನುಗ್ರಹವನ್ನೂ ತಮಗೆ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋನ್ನತ ನೇತಾರನೆಂಬ ನೆಲೆಯಲ್ಲಿ ನಾನು ಹಿಸ್ ಹೋಲಿನೆಸ್ ಪೋಪ್ ಅವರಿಗೆ ಪವಿತ್ರ ಖುರ್‌ಆನಿನ ಈ ಕೆಳಗಿನ ಸಂದೇಶ ತಲುಪಿಸಲು ಬಯಸುತ್ತೇನೆ: "ಹೇಳು: 'ಎಲೈ ಗ್ರಂಥದವರೇ, ನಮಗೂ ನಿಮಗೂ ಮಧ್ಯೆ ಸಮಾನವಾಗಿರುವ ವಿಚಾರದೆಡೆಗೆ – (ಅಂದರೆ) ಏಕದೇವನಲ್ಲದೆ ಯಾರನ್ನೂ ನಾವು ಆರಾಧಿಸುವುದಿಲ್ಲ, ಅವನಿಗೆ ಯಾರನ್ನೂ ಸಹಭಾಗಿಯಾಗಿ ಕಲ್ಪಿಸಲಿಕ್ಕಿಲ್ಲ, ಅವನನ್ನು ಹೊರತು ನಮ್ಮಲ್ಲಿ ಕೆಲವರು ಬೇರೆ ಕೆಲವರನ್ನು ಒಡೆಯರನ್ನಾಗಿ ಪರಿಗಣಿಸಲಿಕ್ಕಿಲ್ಲ ಎಂಬ ವಿಚಾರದೆಡೆಗೆ – ಬನ್ನಿರಿ.' " (3:65)

ಇಸ್ಲಾಮ್ ಇಂದಿನ ದಿನಗಳಲ್ಲಿ ಲೋಕದ ಗಮನ ಸೆಳೆಯುತ್ತಿದೆ. ಆಗಾಗ ಕೆಟ್ಟ ಆರೋಪಗಳನ್ನು ಅದರ ವಿರುದ್ಧ ಹೊರಿಸಲಾಗುತ್ತಿದೆ. ಆದರೆ ಹೀಗೆ ಆಕ್ಷೇಪ ಮಾಡುವವರು ಇಸ್ಲಾಮಿನ ನೈಜ ಉಪದೇಶಗಳಲ್ಲಿ ಯಾವುದನ್ನೂ ಅಧ್ಯಯನ ಮಾಡಿರುವುದಿಲ್ಲ. ದುರದೃಷ್ಟಕರವಾಗಿ, ಕೆಲವು ಮುಸ್ಲಿಮ್ ಸಂಘಟನೆಗಳು ತಮ್ಮ ಸ್ವಾರ್ಥ ಹಿತಾಸಕ್ತಿಗೋಸ್ಕರ ಇಸ್ಲಾಮ್ ಧರ್ಮವನ್ನು ಸಂಪೂರ್ಣ ತಪ್ಪಾದ ರೀತಿಯಲ್ಲಿ ಚಿತ್ರಿಸಿವೆ. ಇದರ ಪರಿಣಾಮವಾಗಿ ಪಶ್ಚಿಮದ ಮತ್ತು ಇತರ ಮುಸ್ಲಿಮೇತರ ದೇಶಗಳ ಜನರ ಹೃದಯಗಳಲ್ಲಿ ಮುಸ್ಲಿಮರ ಬಗ್ಗೆ ಅಪನಂಬಿಕೆ ಎಷ್ಟರ ಮಟ್ಟಿಗೆ ವರ್ಧಿಸಿದೆ ಎಂದರೆ ಅತ್ಯಂತ ವಿದ್ಯಾವಂತರಾದ ಜನರು ಕೂಡ ನಿರಾಧಾರ ಆಕ್ಷೇಪಗಳನ್ನು ಇಸ್ಲಾಮಿನ ಪವಿತ್ರ ಪ್ರವಾದಿ ಮುಹಮ್ಮದ್[ಸ] ವಿರುದ್ಧ ಮಾಡುತ್ತಾರೆ.

ಪ್ರತಿಯೊಂದು ಧರ್ಮದ ಉದ್ದೇಶಲಕ್ಷ್ಯ ಜನರನ್ನು ದೇವನ ಸಮೀಪಕ್ಕೆ ತರುವುದು ಮತ್ತು ಮಾನವೀಯ ಮೌಲ್ಯಗಳನ್ನು ಲೋಕದಲ್ಲಿ ಸ್ಥಾಪಿಸುವುದಾಗಿದೆ. ಯಾವುದೇ ಧರ್ಮದ ಸ್ಥಾಪಕ, ಅನ್ಯರ ಹಕ್ಕುಗಳನ್ನು ಕಿತ್ತುಕೊಳ್ಳಬೇಕೆಂದು ಮತ್ತು ಕ್ರೂರತೆಯಿಂದ ವರ್ತಿಸಬೇಕೆಂದು ಎಂದೂ ಉಪದೇಶಿಸಲಿಲ್ಲ. ಆದುದರಿಂದ ತಪ್ಪು ಮಾರ್ಗದರ್ಶನ ಪಡೆದ ಅಲ್ಪ ಸಂಖ್ಯೆಯಲ್ಲಿರುವ ಮುಸ್ಲಿಮರ ವರ್ತನೆಗಳನ್ನು ನೆವನವಾಗಿಟ್ಟುಕೊಂಡು ಇಸ್ಲಾಮನ್ನು ಮತ್ತು ಇಸ್ಲಾಮಿನ ಪ್ರವಾದಿಯನ್ನು ದೂಷಿಸಬಾರದು. ಎಲ್ಲ ಧರ್ಮಗಳ ಪ್ರವಾದಿಗಳನ್ನು ಗೌರವಿಸಬೇಕೆಂದು ಇಸ್ಲಾಮ್

ಕಲಿಸುತ್ತದೆ. ಆದುದರಿಂದ ಪವಿತ್ರ ಬೈಬಲ್‌ನಲ್ಲಿ ಮತ್ತು ಪವಿತ್ರ ಖುರ್‌ಆನ್‌ನಲ್ಲಿ ಪ್ರಸ್ತಾಪಿಸಲಾದ ಯೇಸುಕ್ರಿಸ್ತರ[ಅ] ಸಹಿತ ಎಲ್ಲ ಪ್ರವಾದಿಗಳನ್ನು ನಂಬುವುದು ಮುಸ್ಲಿಮರಿಗೆ ಕಡ್ಡಾಯವಾಗಿದೆ.

ನಾವು ಮುಹಮ್ಮದ್ ಪೈಗಂಬರರ[ಸ] ವಿನೀತ ದಾಸರಾಗಿದ್ದೇವೆ. ನಮ್ಮ ಪ್ರವಾದಿಯ ವಿರುದ್ಧ ದೂಷಣೆ ಮಾಡುವಾಗ ನಮಗೆ ತುಂಬಾ ದುಃಖವಾಗುತ್ತದೆ. ಆದರೆ ನಾವು ಪ್ರತಿಕ್ರಿಯೆ ನೀಡುವುದು ಪ್ರವಾದಿಯವರ ಉದಾತ್ತ ಸದ್ಗುಣಗಳನ್ನು ಲೋಕದ ಮುಂದೆ ಇರಿಸುತ್ತಾ ಪವಿತ್ರ ಖುರ್‌ಆನಿನ ಸುಂದರ ತತ್ವಗಳನ್ನು ಲೋಕದಲ್ಲಿ ಪ್ರಚಾರ ಮಾಡುವ ಮೂಲಕವಾಗಿದೆ.

ಒಬ್ಬ ವ್ಯಕ್ತಿ ತಾನು ಒಂದು ಧರ್ಮದ ಅನುಯಾಯಿ ಎಂದು ಹೇಳುತ್ತಾ ಆ ಧರ್ಮದ ಉಪದೇಶಗಳನ್ನು ಸರಿಯಾಗಿ ಅನುಷ್ಠಾನಕ್ಕೆ ತರದಿದ್ದರೆ ದೂಷಿಸಬೇಕಾದುದು ಆ ವ್ಯಕ್ತಿಯನ್ನೇ ಹೊರತು ಆ ಧರ್ಮ ತತ್ವಗಳನ್ನಲ್ಲ. ಇಸ್ಲಾಮ್ ಎಂಬ ಪದದ ಅರ್ಥ ಶಾಂತಿ, ಪ್ರೀತಿ, ಮತ್ತು ಸಂರಕ್ಷಣೆ ಎಂದಾಗಿದೆ. "ಧರ್ಮದ ವಿಚಾರದಲ್ಲಿ ಯಾವುದೇ ರೀತಿಯ ಬಲಪ್ರಯೋಗವಿಲ್ಲ" ಎಂದು ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಘೋಷಿಸಿದೆ. ಪವಿತ್ರ ಖುರ್‌ಆನ್ ಪ್ರಾರಂಭದಿಂದ ಅಂತ್ಯ ಭಾಗದ ತನಕ ಪ್ರೀತಿ, ವಾತ್ಸಲ್ಯ, ಸೌಹಾರ್ದ ಮತ್ತು ತ್ಯಾಗ ಮನೋಭಾವವನ್ನು ಪ್ರತಿಪಾದಿಸುತ್ತಿದೆ. ಸಾತ್ವಿಕತೆಯನ್ನು ಪರಿಗ್ರಹಿಸದವನು ಅಲ್ಲಾಹನಿಂದಲೂ ಇಸ್ಲಾಮ್ ಧರ್ಮ ತತ್ವಗಳಿಂದಲೂ ಬಹಳ ದೂರಸರಿದು ಹೋದವನೆಂದು ಪವಿತ್ರ ಖುರ್‌ಆನ್ ಪದೇ ಪದೇ ಉಪದೇಶಿಸುತ್ತಿದೆ. ಆದುದರಿಂದ ಯಾರಾದರೂ ಇಸ್ಲಾಮ್ ಧರ್ಮವನ್ನು ಉಗ್ರವಾದುದೆಂದೂ ಅದು ಹಿಂಸೆಯನ್ನೂ ರಕ್ತಪಾತವನ್ನೂ ಪ್ರತಿಪಾದಿಸುವ ಧರ್ಮವೆಂದೂ ಚಿತ್ರಿಸುವುದಾದರೆ ಆ ಚಿತ್ರಣಕ್ಕೆ ನೈಜ ಇಸ್ಲಾಮಿನೊಂದಿಗೆ ಯಾವ ಸಂಬಂಧವೂ ಇಲ್ಲ.

ಅಹ್ಮದಿಯಾ ಮುಸ್ಲಿಮ್ ಜಮಾಅತ್ ನೈಜ ಇಸ್ಲಾಮ್ ಧರ್ಮವನ್ನು ಮಾತ್ರ ಅನುಷ್ಠಾನಕ್ಕೆ ತರುತ್ತಿದೆ. ಅದು ಸರ್ವಶಕ್ತನಾದ ಅಲ್ಲಾಹನ ಪ್ರೀತಿಯನ್ನು ಗಳಿಸಲು ಮಾತ್ರ ಕಾರ್ಯಗಳನ್ನು ನಿರ್ವಹಿಸುತ್ತದೆ. ಯಾವುದೇ ಚರ್ಚ್ ಅಥವಾ ಆರಾಧನಾಲಯಕ್ಕೆ ಸಂರಕ್ಷಣೆ ಆವಶ್ಯಕವಾದರೆ ನಾವು ಅವುಗಳ ಸಂರಕ್ಷಣೆಗೆ ಅವರೊಂದಿಗೆ ಭುಜಕ್ಕೆ ಭುಜ ಕೊಟ್ಟು ನಿಲ್ಲುವೆವು. ನಮ್ಮ ಮಸೀದಿಗಳಿಂದ ಪ್ರತಿಧ್ವನಿಸುವ ಸಂದೇಶ: ಅಲ್ಲಾಹನು ಎಲ್ಲರಿಗಿಂತಲೂ ದೊಡ್ಡವನು. ಅವನ ಹೊರತು ಆರಾಧ್ಯನೆಗೆ ಅರ್ಹ ಬೇರೆ ಯಾರೂ ಇಲ್ಲ ಎಂದು ನಾವು ಸಾಕ್ಷ್ಯ ಹೇಳುತ್ತೇವೆ ಮತ್ತು ಮುಹಮ್ಮದ್[ಸ] ಅಲ್ಲಾಹನ ಸಂದೇಶವಾಹಕ ಎಂದು ನಾವು ಸಾಕ್ಷ್ಯ ಹೇಳುತ್ತೇವೆ ಎಂದಾಗಿದೆ.

ಲೋಕದ ಶಾಂತಿಯನ್ನು ಕೆಡಿಸಲು ಒಂದು ಮುಖ್ಯ ಕಾರಣವೇನೆಂದರೆ, ಕೆಲವು ಜನರು ತಮ್ಮನ್ನು ಬುದ್ಧಿವಂತರೆಂದೂ ಚೆನ್ನಾಗಿ ವಿದ್ಯಾಭ್ಯಾಸ ಗಳಿಸಿದವರೆಂದೂ ಸ್ವತಂತ್ರರೆಂದೂ ಭಾವಿಸಿ, ತಮಗೆ ಧರ್ಮಗಳ ಸ್ಥಾಪಕರನ್ನು ಅಪಹಾಸ್ಯ ಮಾಡಲು, ನಿಂದಿಸಲು ಸ್ವಾತಂತ್ರ್ಯವಿದೆ ಎಂದು ಯೋಚಿಸುತ್ತಾರೆ. ಸಮಾಜದಲ್ಲಿ ಶಾಂತಿಯನ್ನು ಕಾಪಾಡಲು ಎಲ್ಲ ವಿಧ ದ್ವೇಷಗಳನ್ನು ಹೃದಯದಿಂದ ನಿವಾರಿಸಬೇಕಾದುದು ಮತ್ತು ಸಹಿಷ್ಣುತಾ ಮನೋಭಾವವನ್ನು ಬೆಳೆಸುವುದು ಆವಶ್ಯಕವಾಗಿದೆ. ಪರಸ್ಪರ ಪ್ರವಾದಿಗಳನ್ನು

ಗೌರವಿಸುವುದು ಮತ್ತು ಅವರ ಗೌರವಕ್ಕೆ ಕುಂದುಂಟಾಗದಂತೆ ಪ್ರತಿರೋಧಿಸುವುದು ಆವಶ್ಯಕವಾಗಿದೆ. ಲೋಕವು ಈಗ ಆತಂಕಭರಿತ ಸ್ಥಿತಿಯನ್ನು ದಾಟಿಹೋಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಪ್ರೀತಿ ಮತ್ತು ವಾತ್ಸಲ್ಯಗಳ ವಾತಾವರಣವನ್ನು ಸ್ಥಾಪಿಸಿ, ಆತಂಕ ಮತ್ತು ಭಯದ ಸ್ಥಿತಿಯನ್ನು ನಿವಾರಿಸಿ ನಮ್ಮ ಸುತ್ತಮುತ್ತಲೂ ಇರುವವರಿಗೆ ಪ್ರೀತಿ ಮತ್ತು ಶಾಂತಿಯ ಸಂದೇಶವನ್ನು ತಲುಪಿಸುವುದು ಆವಶ್ಯಕವಾಗಿದೆ. ನಾವು ಹಿಂದೆ ಇದ್ದುದಕ್ಕಿಂತಲೂ ಹೆಚ್ಚು ಸೌಹಾರ್ದದಿಂದ ಜೀವಿಸಬೇಕು ಮತ್ತು ನಾವು ಮಾನವೀಯ ಮೌಲ್ಯಗಳನ್ನು ಅಂಗೀಕರಿಸಬೇಕು.

ಇಂದು ಚಿಕ್ಕ ಮಟ್ಟದ ಯುದ್ಧಗಳು ಸ್ಫೋಟಿಸುತ್ತಿವೆ. ಮಹಾ ಶಕ್ತಿಶಾಲಿ ದೇಶಗಳು ಶಾಂತಿ ಸ್ಥಾಪಿಸಲು ಪ್ರಯತ್ನಿಸುವುದಾಗಿ ಹೇಳಿಕೊಳ್ಳುತ್ತಿವೆ. ಅವು ಬಹಿರಂಗವಾಗಿ ಒಂದು ವಿಷಯ ಹೇಳಿದರೆ, ಪರದೆಯ ಹಿಂದೆ ಯಥಾರ್ಥ ಆದ್ಯತೆಗಳನ್ನು ಮತ್ತು ಧೋರಣೆಗಳನ್ನು ರಹಸ್ಯವಾಗಿ ಈಡೇರಿಸಿಕೊಳ್ಳಲಾಗುತ್ತಿದೆ ಎಂಬುದು ರಹಸ್ಯವಾದುದೇನೂ ಅಲ್ಲ. ಇಂತಹ ಪರಿಸ್ಥಿತಿಯಲ್ಲಿ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಸಾಧ್ಯವೇ ಎಂಬುದು ಮುಖ್ಯ ಪ್ರಶ್ನೆಯಾಗಿದೆ. ಇಂದಿನ ಪರಿಸ್ಥಿತಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವುದಾದರೆ ಇನ್ನೊಂದು ಮಹಾಯುದ್ಧಕ್ಕೆ ಅಸ್ತಿಭಾರವನ್ನು ಹಾಕಲಾಗಿದೆ ಎಂಬುದನ್ನು ಕಾಣುತ್ತಿರುವುದು ಖೇದಕರವಾಗಿದೆ.

ದ್ವಿತೀಯ ಮಹಾಯುದ್ಧದ ನಂತರ ನೀತಿಯನ್ನೂ ನ್ಯಾಯಪಾಲನೆಯನ್ನೂ ಅನುಸರಿಸಿರುತ್ತಿದ್ದರೆ ನಾವು ಲೋಕವನ್ನು ಇಂದಿನ ಸ್ಥಿತಿಯಲ್ಲಿ ಕಾಣುತ್ತಿರಲಿಲ್ಲ. ಲೋಕವು ಇಂದು ಯುದ್ಧ ಜ್ವಾಲೆಗಳಿಂದ ಸುತ್ತುವರಿಯಲ್ಪಟ್ಟಿದೆ. ಅನೇಕ ದೇಶಗಳು ಅಣು ಆಯುಧಗಳನ್ನು ಹೊಂದಿವೆ. ದ್ವೇಷಗಳು ವರ್ಧಿಸುತ್ತಾ ಇವೆ. ಲೋಕವು ವಿನಾಶದ ಅಂಚಿನಲ್ಲಿದೆ. ಮಹಾ ವಿನಾಶಕಾರಿಗಳಾದ ಬಾಂಬ್‌ಗಳು ಸ್ಫೋಟಿಸಿದರೆ ಮುಂದಿನ ಅನೇಕ ಪೀಳಿಗೆಗಳು ನಮ್ಮನ್ನು ಎಂದೂ ಕ್ಷಮಿಸಲಾರವು – ಅವರಿಗೆ ಶಾಶ್ವತ ಅಂಗವಿಕಲತೆಗಳನ್ನು ಉಂಟು ಮಾಡುವುದರಿಂದ. ಸರ್ವಶಕ್ತನಾದ ದೇವನ ಹಕ್ಕುಗಳ ಬಗ್ಗೆ ಮತ್ತು ಅವನ ಸೃಷ್ಟಿಗಳ ಹಕ್ಕುಗಳ ಬಗ್ಗೆ ಗಮನಹರಿಸಲು ಲೋಕಕ್ಕೆ ಇನ್ನೂ ಸಮಯ ಲಭ್ಯವಿದೆ.

ನಾವು ನಮ್ಮ ಗಮನವನ್ನು ಲೋಕದ ಪ್ರಗತಿ ಬಗ್ಗೆ ಕೇಂದ್ರಿಕರಿಸುವುದಕ್ಕಿಂತ ಹೆಚ್ಚಾಗಿ ಲೋಕವನ್ನು ರಕ್ಷಿಸುವ ಬಗ್ಗೆ ಪ್ರಯತ್ನಪಡುವುದು ಆವಶ್ಯಕವೆಂದು ನಾನು ನಂಬುತ್ತೇನೆ. ಮಾನವರು ತಮ್ಮ ಸೃಷ್ಟಿಕರ್ತನನ್ನು ಅರಿತುಕೊಳ್ಳುವುದು ತುರ್ತಾಗಿ ಆವಶ್ಯಕವಾಗಿದೆ. ಮಾನವ ವರ್ಗವು ಬದುಕಿ ಉಳಿಯುವುದಕ್ಕೆ ಖಾತರಿಯಾಗಿ ಇರುವುದು ಅದು ಮಾತ್ರವಾಗಿದೆ. ಹೀಗೆ ಮಾಡದಿದರೆ ಲೋಕವು ನಾಶದ ಕಡೆಗೆ ವೇಗವಾಗಿ ಸಾಗುವುದು. ಮನುಷ್ಯನು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ನಿಜವಾಗಿಯೂ ಬಯಸುವುದಾದರೆ, ಅವನು ಅನ್ಯರ ತಪ್ಪುಗಳನ್ನು ಕಂಡು ಹಿಡಿಯಲು ಮುಂದಾಗುವುದಕ್ಕೆ ಬದಲಾಗಿ ತನ್ನೊಳಗೆ ಇರುವ ಸೈತಾನನನ್ನು ಹತೋಟಿಗೆ ತರಲು ಪ್ರಯತ್ನಿಸಬೇಕು. ತನ್ನೊಳಗೆ ಇರುವ ಕೆಡುಕುಗಳನ್ನು ನಿವಾರಿಸಿ, ನ್ಯಾಯಪಾಲನೆಯ ಅದ್ಭುತಕರ ಉದಾಹರಣೆಯನ್ನು ಪ್ರಕಟಿಸಬೇಕು. ಅನ್ಯರ ಬಗ್ಗೆ ಅತ್ಯಂತ ಹೆಚ್ಚು ಹಗೆತನ

ಮಾನವ ಮೌಲ್ಯಗಳನ್ನು ಕಿತ್ತುಕೊಳ್ಳುತ್ತದೆ ಮತ್ತು ಲೋಕವನ್ನು ವಿನಾಶದ ಕಡೆಗೆ ಒಯ್ಯುತ್ತದೆ ಎಂದು ನಾನು ಲೋಕಕ್ಕೆ ನೆನಪಿಸುತ್ತಾ ಇದ್ದೇನೆ.

ತಮಗೆ ಲೋಕದಲ್ಲಿ ಪ್ರಭಾವಶಾಲಿ ಧ್ವನಿ ಇರುವುದರಿಂದ ನಾನು ತಮ್ಮನ್ನು ಅಪೇಕ್ಷಿಸುತ್ತೇನೆ. ದೇವನು ಸ್ಥಾಪಿಸಿದ ಸಹಜ ಸಮತೋಲನ ವ್ಯವಸ್ಥೆಯನ್ನು ಭಂಗಪಡಿಸಲು ಮಾಡುವ ಪ್ರಯತ್ನಗಳು ಲೋಕವನ್ನು ಸರ್ವನಾಶಕ್ಕೊಯ್ಯುವುದೆಂದು ತಾವು ತಿಳಿಸಬೇಕು. ಈ ಸಂದೇಶವನ್ನು ಮೊದಲಿಗಿಂತ ವಿಸ್ತೃತವಾಗಿ ಹೆಚ್ಚು ಮಹತ್ವ ನೀಡಿ ತಲುಪಿಸುವುದು ಆವಶ್ಯಕವಾಗಿದೆ.

ಲೋಕದ ಎಲ್ಲ ಧರ್ಮಗಳಿಗೆ ಧಾರ್ಮಿಕ ಸೌಹಾರ್ದ ಆವಶ್ಯಕವಾಗಿದೆ. ಲೋಕದ ಎಲ್ಲ ಜನರಲ್ಲಿ ಪ್ರೀತಿ, ವಾತ್ಸಲ್ಯ, ಭ್ರಾತೃತ್ವದ ಭಾವನೆಗಳು ಸೃಷ್ಟಿಸಲ್ಪಡಬೇಕಾಗಿದೆ. ನಾವು ನಮ್ಮ ಹೊಣೆಗಾರಿಕೆಗಳನ್ನು ಅರಿತುಕೊಂಡು ಲೋಕದಲ್ಲಿ ಶಾಂತಿ, ಪ್ರೀತಿ ಸ್ಥಾಪಿಸಲು ಮತ್ತು ಲೋಕವು ಸೃಷ್ಟಿಕರ್ತನನ್ನು ಗುರುತಿಸುವಂತೆ ಮಾಡಲು ನಮ್ಮ ಪಾತ್ರವನ್ನು ನಿರ್ವಹಿಸುವಂತಾಗಲಿ ನಾನು ಪ್ರಾರ್ಥನೆ ಮಾಡುತ್ತೇನೆ. ಈ ಲೋಕದ ವಿನಾಶವನ್ನು ರಕ್ಷಿಸಲು ನಾವೆಲ್ಲರೂ ಪ್ರಾರ್ಥಿಸೋಣ.

ನಮ್ಮನ್ನು ಎದುರು ನೋಡುತ್ತಿರುವ ನಾಶದಿಂದ ದೇವನು ನಮ್ಮನ್ನು ರಕ್ಷಿಸಲಿ ಎಂದು ಪ್ರಾರ್ಥಿಸುತ್ತೇನೆ.

ಹೃತ್ಪೂರ್ವಕವಾಗಿ,



**ಮಿರ್ಝಾ ಮಸ್‌ರೂರ್ ಅಹ್ಮದ್**
ಪಂಚಮ ಖಲೀಫ,
ಜಾಗತಿಕ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ
ಸರ್ವೋಚ್ಚ ನಾಯಕ

# ಇಸ್ರಾಯೇಲ್ ಪ್ರಧಾನ ಮಂತ್ರಿ
# ಬೆಂಜಮಿನ್ ನೆತನ್ಯಾಹೂರಿಗೆ ಪತ್ರ

بسم الله الرحمن الرحيم
نحمده و نصلي على رسوله الكريم
وعلى عبده المسيح الموعود
خدا کے فضل اور رحم کے ساتھ
هو الناصر

MIRZA MASROOR AHMAD
HEAD OF THE AHMADIYYA COMMUNITY
IN ISLAM

16 Gressenhall Road
Southfields, London
SW185QL, UK

26 ಫೆಬ್ರವರಿ2012

ಪ್ರಿಯ ಪ್ರಧಾನ ಮಂತ್ರಿಯವರೇ,

ಇತ್ತೀಚೆಗೆ ನಾನು ಒಂದು ಪತ್ರವನ್ನು ಇಸ್ರಾಯೇಲ್ ಪ್ರೆಸಿಡೆಂಟ್ ಸನ್ಮಾನ್ಯ ಶಿಮೊನ್ ಪೇರೆಸ್‌ರಿಗೆ, ಲೋಕದಲ್ಲಿ ಸಂಭವಿಸುತ್ತಿರುವ ಅಪಾಯಕಾರಿ ಸನ್ನಿವೇಶಗಳ ಬಗ್ಗೆ ಬರೆದಿದ್ದೆನು. ಬೇಗ ಬೇಗನೆ ಬದಲಾಗುತ್ತಿರುವ ಸನ್ನಿವೇಶಗಳ ಕಾರಣದಿಂದ ನಿಮ್ಮ ದೇಶದ ಸರಕಾರದ ಮುಖ್ಯಸ್ಥರಾದ ನಿಮಗೆ ಸಹ ಪತ್ರ ಬರೆಯುವುದು ಆವಶ್ಯಕವಾಗಿದೆ ಎಂದು ನಾನು ಮನವರಿಕೆ ಮಾಡಿರುವೆನು.

ನಿಮ್ಮ ಜನಾಂಗದ ಚರಿತ್ರೆ ಪ್ರವಾದಿಗಳೊಂದಿಗೆ ಮತ್ತು ದೇವಸಂದೇಶ ಗಳೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ. ಇಸ್ರಾಯೇಲ್ ಸಂತತಿಗಳಲ್ಲಿ ಆಗಮಿಸಿದ ಪ್ರವಾದಿಗಳು ನಿಮ್ಮ ಜನಾಂಗದ ಭವಿಷ್ಯದ ಬಗ್ಗೆ ಸ್ಪಷ್ಟ ಭವಿಷ್ಯವಾಣಿಗಳನ್ನು ನುಡಿದಿದ್ದಾರೆ. ಪ್ರವಾದಿಗಳ ಉಪದೇಶಗಳಿಗೆ ಅವಿಧೇಯರಾದುದರಿಂದಲೂ ಅವರ ಭವಿಷ್ಯವಾಣಿಗಳ ಬಗ್ಗೆ ನಿರ್ಲಕ್ಷತೆಯನ್ನು ಹೊಂದಿದುದರಿಂದಲೂ ಇಸ್ರಾಯೇಲ್ ಸಂತತಿಗಳು ಕಷ್ಟಗಳನ್ನೂ ಪರೀಕ್ಷೆಗಳನ್ನೂ ಎದುರಿಸಬೇಕಾಯಿತು. ನಿಮ್ಮ ಜನಾಂಗದ ನಾಯಕರು ಪ್ರವಾದಿಗಳನ್ನು ಅನುಸರಿಸುವುದರಲ್ಲಿ ನಿಷ್ಠಾವಂತರಾಗಿಯೂ ಸ್ಥಿರವಾಗಿಯೂ ಇದ್ದಿದ್ದರೆ ಅವರು ಅನೇಕ ದೌರ್ಭಾಗ್ಯಪೂರ್ಣ ಕಷ್ಟಗಳಿಂದ ರಕ್ಷಿಸಲ್ಪಡುತ್ತಿದ್ದರು. ಆದುದರಿಂದ ನೀವು ನಿಮ್ಮ ಜನಾಂಗದ ಪ್ರವಾದಿಗಳ ಭವಿಷ್ಯವಾಣಿಗಳ ಬಗ್ಗೆ ಮತ್ತು ಆಜ್ಞೆಗಳ ಬಗ್ಗೆ ಇತರರಿಗಿಂತ ಹೆಚ್ಚು ಲಕ್ಷ್ಯನೀಡುವುದು ನಿಮ್ಮ ಕರ್ತವ್ಯವಾಗಿರುತ್ತದೆ.

ಪ್ರವಾದಿ ಮುಹಮ್ಮದ್‌ರ[ಸ] ದಾಸನಾಗಿ ದೇವನಿಂದ ನೇಮಿಸಲ್ಪಟ್ಟ ವಾಗ್ದತ್ತ ಮಸೀಹ್ ಮತ್ತು ಮಹ್‌ದಿಯರ ಖಲೀಫ ಎಂಬ ನೆಲೆಯಲ್ಲಿ ನಾನು ನಿಮ್ಮನ್ನು ಸಂಬೋಧಿಸುತ್ತಿದ್ದೇನೆ. ಪ್ರವಾದಿ ಮುಹಮ್ಮದ್‌ರನ್ನು[ಸ] ಇಸ್ರಾಯೇಲ್ ಸಂತತಿಗಳ ಸಹೋದರ ಜನಾಂಗದಲ್ಲಿ ಮೋಶೆ ಪ್ರವಾದಿಗೆ ಹೋಲಿಕೆ ಹೊಂದಿದವರನ್ನಾಗಿ ಮಾಡಿ ಕಳುಹಿಸಲಾಯಿತು. (ಧರ್ಮೋಪದೇಶ ಕಾಂಡ 18:18 ನೋಡಿರಿ). ಅವರು ಸರ್ವ ಮಾನವರಿಗೆ ಅನುಗ್ರಹದಾಯಕರಾಗಿರುವರು. ಆದುದರಿಂದ, ದೇವ ಸಂದೇಶದ ಬಗ್ಗೆ ನಿಮಗೆ ಮುನ್ನೆಚ್ಚರಿಕೆ ನೀಡುವುದು ನನ್ನ ಕರ್ತವ್ಯವಾಗಿದೆ. ನೀವು ದೇವನ ಕರೆಗೆ ಓಗೊಡುವವರೂ ಸರ್ವಶಕ್ತನೂ ಭೂಮ್ಯಾಕಾಶಗಳ ಒಡೆಯನೂ ಆಗಿರುವ ದೇವನ ಮಾರ್ಗದರ್ಶನವನ್ನು ಕಂಡುಕೊಳ್ಳುವುದರಲ್ಲಿ ಜಯಶಾಲಿಗಳೂ ಆಗಿರುವವರ ಗುಂಪಿಗೆ ಸೇರಿದವರೂ ಆಗಿರುವಿರಿ ಎಂದು ನಾನು ಪ್ರತೀಕ್ಷಿಸುತ್ತೇನೆ.

ನೀವು ಇರಾನನ್ನು ಆಕ್ರಮಿಸುವುದಕ್ಕಾಗಿ ಸಿದ್ಧತೆಗಳನ್ನು ಮಾಡುತ್ತಿರುವಿರಿ ಎಂದು ಇಂದಿನ ದಿನಗಳಲ್ಲಿ ವಾರ್ತೆಗಳನ್ನು ಆಲಿಸುತ್ತಿದ್ದೇವೆ. ಜಾಗತಿಕ ಮಹಾಯುದ್ಧದ ಭೀಕರ ಪರಿಣಾಮಗಳು ನಿಮ್ಮ ಮುಂದಿವೆ. ದ್ವಿತೀಯ ಮಹಾಯುದ್ಧದಲ್ಲಿ ಮಿಲಿಯಗಟ್ಟಲೆ ಜನರು ಕೊಲ್ಲಲ್ಪಟ್ಟರು. ಅವರ ಪೈಕಿ ಲಕ್ಷಾಂತರ ಜನರು ಯಹೂದಿಯರಾಗಿದ್ದರು. ಪ್ರಧಾನ ಮಂತ್ರಿಯಾದ ನೀವು ನಿಮ್ಮ ದೇಶದ ಜನರ ಜೀವವನ್ನು ರಕ್ಷಿಸಬೇಕಾದ ಹೊಣೆಗಾರಿಕೆಯನ್ನು ಹೊಂದಿರುವಿರಿ. ಇಂದಿನ ಜಾಗತಿಕ ಪರಿಸ್ಥಿತಿಯಲ್ಲಿ ಜಾಗತಿಕ ಮಹಾಯುದ್ಧವು ಕೇವಲ ಎರಡು ದೇಶಗಳ ಮಧ್ಯೆ ಮಾತ್ರ ನಡೆಯಲಾರದು. ಯುದ್ಧಮಾಡುವ ದೇಶಗಳ ಪರಸ್ಪರ ವಿರೋಧಿಸುವ ಎರಡು ಗುಂಪುಗಳು ಅಸ್ತಿತ್ವಕ್ಕೆ ಬರುವುವು. ಜಾಗತಿಕ ಮಹಾಯುದ್ಧವು ಪ್ರಾರಂಭವಾಗುವ ಬೆದರಿಕೆಯು ಈಗ ಬಹಳ ತೀವ್ರವಾಗಿದೆ. ಮುಸ್ಲಿಮರ, ಕ್ರೈಸ್ತರ, ಯಹೂದಿಯರ ಮತ್ತು ಇತರರ ಜೀವಿತವು ಅದರಿಂದ ಅಪಾಯಕ್ಕೊಳಪಡುವುದು. ಅಂತಹ ಯುದ್ಧವೇನಾದರೂ ಘಟಿಸುವುದಾದರೆ ಮಾನವರ ಧ್ವಂಸದ ಸರಪಳಿಯಾಗಿ ಪರಿಣಮಿಸುವುದು. ಈ ಅನಾಹುತದ ಪರಿಣಾಮಗಳನ್ನು ಮುಂದಿನ ಪೀಳಿಗೆಗಳು ಅನುಭವಿಸಬೇಕಾಗುವುದು. ಅವರು ಅಂಗವಿಕಲರಾಗಿ ಅಥವಾ ಅಂಗಹೀನರಾಗಿ ಜನಿಸುವರು. ಏಕೆಂದರೆ ನಿಶ್ಚಯವಾಗಿಯೂ ಇಂತಹ ಯುದ್ಧದಲ್ಲಿ ಅಣ್ವಾಯುಧಗಳು ಬಳಸಲ್ಪಡುವುವು. ಆದುದರಿಂದ, ನಾನು ನಿಮ್ಮೊಂದಿಗೆ ಅಪೇಕ್ಷಿಸುವುದೇನೆಂದರೆ, ಲೋಕವನ್ನು ಜಾಗತಿಕ ಮಹಾಯುದ್ಧದ ಮುಷ್ಟಿಯ ಹಿಡಿತಕ್ಕೊಳಪಡಿಸಲು ಕೊಂಡೊಯ್ಯುವುದಕ್ಕೆ ಪ್ರತಿಯಾಗಿ ಲೋಕವನ್ನು ಈ ಜಾಗತಿಕ ಅನಾಹುತದಿಂದ ರಕ್ಷಿಸಲು ಗರಿಷ್ಠ ಪ್ರಯತ್ನ ಮಾಡಬೇಕು. ಬಲಪ್ರಯೋಗಿಸಿ ಬಿಕ್ಕಟ್ಟುಗಳನ್ನು ಪರಿಹರಿಸುವುದಕ್ಕೆ ಬದಲಾಗಿ ಚರ್ಚೆಯ ಮೂಲಕ ಪರಿಹರಿಸಲು ಪ್ರಯತ್ನಿಸಬೇಕು. ಹಾಗೆ ಮಾಡಿದರೆ ನೀವು ನಮ್ಮ ಮುಂದಿನ ಪೀಳಿಗೆಗಳಿಗೆ ಅಂಗವಿಕಲತೆ ಮತ್ತು ಅಂಗಹೀನತೆಯ "ಕೊಡುಗೆ"ಯ ಬದಲಾಗಿ ಪ್ರಕಾಶಮಾನವಾದ ಭಾವೀ ಜೀವಿತವನ್ನು ನೀಡುವವರಾಗುವೆವು. ನಿಮ್ಮ ಧರ್ಮದ ಉಪದೇಶಗಳನ್ನು ಉಲ್ಲೇಖಿಸಿ ನನ್ನ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಲು ಬಯಸುತ್ತೇನೆ. ನಿಮ್ಮ ಧಾರ್ಮಿಕ ಗ್ರಂಥವಾದ ಝುಬೂರ್‌ನಲ್ಲಿ (ಕೀರ್ತನೆಗಳು) ಹೀಗೆ ಹೇಳಲಾಗಿದೆ:

"ಕೆಟ್ಟ ನಡತೆಯವರನ್ನು ನೋಡಿ ಉರಿಗೊಳ್ಳಬೇಡ. ದುರಾಚಾರಿಗಳಿಗೋಸ್ಕರ ಹೊಟ್ಟೆಕಿಚ್ಚುಪಡಬೇಡ. ಅವರು ಹುಲ್ಲಿನಂತೆ ಬೇಗ ಒಣಗಿ ಹೋಗುವರು; ಸೊಪ್ಪಿನ ಪಲ್ಯದಂತೆ ಬಾಡಿಹೋಗುವರು. ಕರ್ತನಲ್ಲಿ ಭರವಸವಿಟ್ಟು ಒಳ್ಳೆಯದನ್ನು ಮಾಡು; ದೇಶದಲ್ಲಿ ವಾಸವಾಗಿದ್ದು ನಂಬಿಕೆಯನ್ನು ಅನುಸರಿಸು. ಆಗ ಕರ್ತನಲ್ಲಿ ಸಂತೋಷಿಸುವಿ; ಮತ್ತು ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು. ನಿನ್ನ ಭೂಯಾತ್ರೆಯ ಚಿಂತೆಯನ್ನು ಕರ್ತನಿಗೆ ವಹಿಸಿಬಿಟ್ಟು ಭರವಸದಿಂದಿರು; ಆತನೇ ಅದನ್ನು ಸಾಗಿಸುವನು. ಆತನು ನಿನ್ನ ನೀತಿಯನ್ನು ಉದಯದ ಬೆಳಕಿನಂತೆಯೂ ನಿನ್ನ ನ್ಯಾಯವನ್ನು ಮಧ್ಯಾಹ್ನದ ತೇಜಸ್ಸಿನಂತೆಯೂ ಪ್ರಕಾಶಗೊಳಿಸುವನು. ಕರ್ತನ ಸನ್ನಿಧಿಯಲ್ಲಿ

ಶಾಂತನಾಗಿ ಆತನಿಗೋಸ್ಕರ ಕಾದಿರು; ಕುಯುಕ್ತಿಗಳನ್ನು ನೆರವೇರಿಸಿಕೊಂಡು ಅಭಿವೃದ್ಧಿ ಹೊಂದುವವರನ್ನು ನೋಡಿ ಉರಿಗೊಳ್ಳಬೇಡ. ಕೋಪವನ್ನು ಅಣಗಿಸಿಕೋ; ರೋಷವನ್ನು ಬಿಡು. ಉರಿಗೊಳ್ಳಬೇಡ; ಕೆಡುಕಿಗೆ ಕಾರಣವಾದೀತು. ಕೆಡುಕರು ತೆಗೆದು ಹಾಕಲ್ಪಡುವರು; ಕರ್ತನನ್ನು ನಿರೀಕ್ಷಿಸುವವರೇ ದೇಶವನ್ನು ಅನುಭವಿಸುವರು. ಇನ್ನು ಸ್ವಲ್ಪ ಕಾಲದೊಳಗೆ ದುಷ್ಟನು ಕಾಣಿಸದೆ ಹೋಗುವನು; ಅವನಿದ್ದ ಸ್ಥಳದಲ್ಲಿ ಎಷ್ಟು ವಿಚಾರಿಸಿದರೂ ಅವನು ಸಿಕ್ಕುವದೇ ಇಲ್ಲ. ಆದರೆ ದೀನರು ದೇಶವನ್ನು ಅನುಭವಿಸುವರು; ಅವರು ಮಹಾಸೌಖ್ಯದಿಂದ ಆನಂದಿಸುವರು." **(ಕೀರ್ತನೆಗಳು 37:1–11)**

ಇದೇ ರೀತಿ ಧರ್ಮೋಪದೇಶಕಾಂಡದಲ್ಲಿ ಹೀಗೆ ನಾವು ಕಾಣುತ್ತೇವೆ:

"ಹೆಚ್ಚುಕಡಮೆಯಾಗಿರುವ ಎರಡು ವಿಧವಾದ ತೂಕದ ಕಲ್ಲುಗಳನ್ನು ನಿಮ್ಮ ಚೀಲದಲ್ಲಿಟ್ಟುಕೊಳ್ಳಬಾರದು. ಹೆಚ್ಚು ಕಡಮೆಯಾದ ಎರಡು ವಿಧವಾದ ಸೇರುಗಳು ನಿಮ್ಮ ಮನೆಯಲ್ಲಿರಬಾರದು. ನಿಮ್ಮ ತೂಕದ ಕಲ್ಲೂ ನಿಮ್ಮ ಅಳತೆಯ ಸೇರೂ ನ್ಯಾಯವಾಗಿಯೇ ಇರಬೇಕು. ನೀವು ಹೀಗೆ ನಡೆದುಕೊಂಡರೆ ನಿಮ್ಮ ದೇವರಾದ ಕರ್ತನು ನಿಮಗೆ ಕೊಡುವ ದೇಶದಲ್ಲಿ ಬಹುಕಾಲ ಬಾಳುವಿರಿ. ನ್ಯಾಯವಿರುದ್ಧವಾದ ಅಳತೆ ತೂಕಗಳನ್ನು ಮಾಡುವವರೆಲ್ಲರೂ ನಿಮ್ಮ ದೇವರಾದ ಕರ್ತನಿಗೆ ಹೇಯವಾಗಿದ್ದಾರೆ."

**(ಧರ್ಮೋಪದೇಶ ಕಾಂಡ 25:13–16)**

ಆದುದರಿಂದ ಜಾಗತಿಕ ನಾಯಕರು ಮತ್ತು ವಿಶಿಷ್ಟವಾಗಿ ನೀವು ಬಲಪ್ರಯೋಗದಿಂದ ಆಡಳಿತೆ ನಡೆಸುವ ನಿಲುವನ್ನು ತ್ಯಜಿಸಬೇಕು ಮತ್ತು ಬಲಹೀನರನ್ನು ದೌರ್ಜನ್ಯಕ್ಕೆ ಗುರಿಪಡಿಸುವುದನ್ನು ಬಿಟ್ಟುಬಿಡಬೇಕು. ಇದಕ್ಕೆ ಬದಲಾಗಿ ನ್ಯಾಯ ಮತ್ತು ಶಾಂತಿಯನ್ನು ಸ್ಥಾಪಿಸಲು ಮತ್ತು ಪ್ರೋತ್ಸಾಹಿಸಲು ಪ್ರಯತ್ನಿಸಬೇಕು. ಹೀಗೆ ನೀವು ಮಾಡಿದರೆ ನೀವೆಲ್ಲರೂ ಶಾಂತಿಯಲ್ಲಿ ಇದ್ದು ಶಕ್ತಿಗಳಿಸುವಿರಿ ಮತ್ತು ಜಾಗತಿಕ ಶಾಂತಿಯೂ ಸ್ಥಾಪಿಸಲ್ಪಡುವುದು. ನೀವು ಮತ್ತು ಜಾಗತಿಕ ನಾಯಕರು ನನ್ನ ಸಂದೇಶವನ್ನು ಮನವರಿಕೆ ಮಾಡಿಕೊಂಡು ನಿಮ್ಮೆಲ್ಲರ ಸ್ಥಾನಗಳನ್ನು ಅರಿತುಕೊಂಡು ನಿಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವವರಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ನಿಮ್ಮೊಂದಿಗೆ ಸ್ನೇಹಪೂರ್ವಕ,



**ಮಿರ್ಝಾ ಮಸ್‌ರೂರ್ ಅಹ್ಮದ್,**
ಪಂಚಮ ಖಲೀಫ
ಜಾಗತಿಕ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ
ಸರ್ವೋಚ್ಚ ನಾಯಕ

# ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಅಧ್ಯಕ್ಷ ಮಹ್ಮೂದ್ ಅಹ್ಮದಿನೆಜಾದ್‌ರಿಗೆ ಪತ್ರ

بسم الله الرحمن الرحيم
نحمده و نصلي على رسوله الكريم
وعلى عبده المسيح الموعود
خدا کے فضل اور رحم کے ساتھ
هو الناصر

MIRZA MASROOR AHMAD
HEAD OF THE AHMADIYYA COMMUNITY
IN ISLAM

16 Gressenhall Road
Southfields, London
SW185QL, UK

7ಮಾರ್ಚ್ 2012

ಪ್ರಿಯ ಅಧ್ಯಕ್ಷರೇ,

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ.

ಲೋಕದಲ್ಲಿ ಕಂಡುಬರುತ್ತಿರುವ ಭಯಾನಕ ಪರಿಸ್ಥಿತಿಯ ಕಾರಣದಿಂದ ಇರಾನಿನ ಅಧ್ಯಕ್ಷರಾದ ನಿಮಗೆ ಪತ್ರ ಬರೆಯಬೇಕಾದುದು ಆವಶ್ಯಕವಾಗಿದೆ ಎಂದು ನಾನು ಭಾವಿಸಿದೆ. ಏಕೆಂದರೆ ನಿಮ್ಮ ದೇಶ ಮತ್ತು ಲೋಕಕ್ಕೆ ಸಂಬಂಧಿಸಿ ನಿರ್ಧಾರಗಳನ್ನು ಮಾಡುವ ಅಧಿಕಾರವನ್ನು ನೀವು ಹೊಂದಿರುವಿರಿ. ಈಗ ಲೋಕದಲ್ಲಿ ಬಹಳ ಕೋಲಾಹಲ ಮತ್ತು ಆತಂಕವು ವ್ಯಾಪಿಸಿದೆ. ಕೆಲವು ಪ್ರದೇಶಗಳಲ್ಲಿ ಚಿಕ್ಕಮಟ್ಟದಲ್ಲಿ ಯುದ್ಧಗಳು ಪ್ರಾರಂಭವಾಗಿವೆ. ಬೇರೆ ಕೆಲವು ಪ್ರದೇಶಗಳಲ್ಲಿ ಪ್ರಬಲ ರಾಷ್ಟ್ರಗಳು ಶಾಂತಿ ಸ್ಥಾಪಿಸುವ ನೆವನದಲ್ಲಿ ಯುದ್ಧನಿರತವಾಗಿವೆ. ಪ್ರತಿಯೊಂದು ದೇಶ ಇತರ ದೇಶಗಳಿಗೆ ನೆರವು ನೀಡಲು ಅಥವಾ ಎದುರಿಸಲು ಕಾರ್ಯನಿರತವಾಗಿವೆ. ಆದರೆ ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸುತ್ತಾ ಇಲ್ಲ. ಲೋಕದಲ್ಲಿ ಈಗಿರುವ ಸನ್ನಿವೇಶಗಳನ್ನು ವೀಕ್ಷಿಸುವುದಾದರೆ, ಇನ್ನೊಂದು ಜಾಗತಿಕ ಮಹಾಯುದ್ಧಕ್ಕೆ ಅಸ್ತಿಭಾರವನ್ನು ಈಗಾಗಲೇ ಹಾಕಲಾಗಿದೆ ಎಂದು ನಾವು ಖೇದಪೂರ್ವಕವಾಗಿ ಕಾಣುತ್ತೇವೆ. ದೊಡ್ಡ ಮತ್ತು ಚಿಕ್ಕ ಅನೇಕ ದೇಶಗಳು ಅಣ್ವಸ್ತ್ರಗಳನ್ನು ಹೊಂದಿರುವುದರಿಂದ ಪರಸ್ಪರ ದ್ವೇಷ ಮತ್ತು ಹಗೆತನ ವರ್ಧಿಸುತ್ತಾ ಇರುತ್ತವೆ. ಇಂತಹ ದುಸ್ಥಿತಿಯಲ್ಲಿ ಮೂರನೆಯ ಜಾಗತಿಕ ಮಹಾಯುದ್ಧವು ನಿಶ್ಚಯವಾಗಿಯೂ ನಮ್ಮ ಮುಂದೆ ಕಾಣಿಸುತ್ತಾ ಇದೆ. ಅಣುಬಾಂಬುಗಳನ್ನು ಅನೇಕ ದೇಶಗಳು ಹೊಂದಿರುವುದರಿಂದ ಮೂರನೆಯ ಜಾಗತಿಕ ಮಹಾಯುದ್ಧವು ಅಣುಬಾಂಬು ವರ್ಷಿಸುವ ಯುದ್ಧವಾಗುವುದು. ಇದರ ಪರಿಣಾಮ ಬಹಳ ದಾರುಣ ವಿಪತ್ತಾಗುವುದು. ಇಂತಹ ಯುದ್ಧಗಳ ದೀರ್ಘಕಾಲೀನ ಪರಿಣಾಮದಿಂದಾಗಿ ಮುಂದಿನ ಪೀಳಿಗೆಗಳು ಅಂಗವಿಕಲರಾಗಿ ಮತ್ತು ಅಂಗಹೀನರಾಗಿ ಜನಿಸುವರು.

ನನ್ನ ನಂಬಿಕೆ, ಏನೆಂದರೆ ಹಝ್ರತ್ ಪ್ರವಾದಿ ಮುಹಮ್ಮದ್‌ರನ್ನು(ಸ) ಶಾಂತಿಯನ್ನು ಸ್ಥಾಪಿಸಲು ಕಳುಹಿಸಲಾಗಿದ್ದು ಅವರು ರಹ್ಮತುಲ್ಲಿಲ್‌ಆಲಮೀನ್ – ಸಕಲ ಮಾನವರಿಗೂ ಅನುಗ್ರಹದಾಯಕರಾಗಿದ್ದಾರೆ. ಅವರ ಅನುಯಾಯಿಗಳಾಗಿರುವ ನಾವು ಲೋಕವು ಇಂತಹ ನಾಶಕ್ಕೆ ಗುರಿಯಾಗಬೇಕೆಂದು ಆಶಿಸಲಾರೆವು. ಇರಾನ್

ಜಗತ್ತಿನಲ್ಲಿರುವ ವಿಶಿಷ್ಟ ಶಕ್ತಿ ಗಳಿಸಿದ ರಾಷ್ಟ್ರಗಳಲ್ಲಿ ಒಂದಾದುದರಿಂದ ಅದು ಮೂರನೆಯ ಜಾಗತಿಕ ಮಹಾಯುದ್ಧವನ್ನು ತಡೆಯಲು ತನ್ನ ಪಾತ್ರವನ್ನು ನಿರ್ವಹಿಸಬೇಕು. ಲೋಕದ ಮಹಾಶಕ್ತಿ ರಾಷ್ಟ್ರಗಳು ದ್ವಿಮುಖ ಧೋರಣೆಯಿಂದ ವರ್ತಿಸುತ್ತಿವೆ ಎಂಬುದು ನಿರಾಕರಿಸಲಾಗದ ಸತ್ಯವಾಗಿದೆ. ಅವರ ಅನ್ಯಾಯಭರಿತ ವರ್ತನೆ ಲೋಕದಲ್ಲೆಲ್ಲ ಆತಂಕವನ್ನೂ ಅಸ್ತವ್ಯಸ್ತತೆಯನ್ನೂ ಉಚಿಟುಮಾಡಿದೆ.

ಆದರೆ ಕೆಲವು ಮುಸ್ಲಿಮ್ ಗುಂಪುಗಳು ಇಸ್ಲಾಮಿನ ಉಪದೇಶಗಳಿಗೆ ವಿರುದ್ಧವಾಗಿ ಅನುಚಿತವಾಗಿ ವರ್ತಿಸುತ್ತಿವೆ ಎಂಬುದನ್ನು ಸಹ ನಾವು ನಿರ್ಲಕ್ಷಿಸಲು ಸಾಧ್ಯವಿಲ್ಲ. ಲೋಕದಲ್ಲಿ ಶಕ್ತಿಶಾಲಿಗಳಾದ ಪ್ರಬಲ ರಾಷ್ಟ್ರಗಳು ಇದನ್ನು ತಮ್ಮ ಸ್ವಾರ್ಥ ಸಾಧನೆಗೋಸ್ಕರ ಬಡ ಮುಸ್ಲಿಮ್ ದೇಶಗಳ ವಿರುದ್ಧ ವರ್ತಿಸಲು ನೆವನವನ್ನಾಗಿ ಮಾಡಿಕೊಂಡಿವೆ.

ನೀವು ನಿಮ್ಮ ಎಲ್ಲ ಶಕ್ತಿಗಳನ್ನೂ ಪ್ರಯತ್ನಗಳನ್ನೂ ವಿಶ್ವವನ್ನು ಮೂರನೆಯ ಜಾಗತಿಕ ಮಹಾ ಯುದ್ಧದಿಂದ ರಕ್ಷಿಸಲು ಕೇಂದ್ರೀಕರಿಸಬೇಕೆಂದು ನಾನು ನಿಮ್ಮನ್ನು ಇನ್ನೊಮ್ಮೆ ಅಪೇಕ್ಷಿಸುತ್ತೇನೆ. ಯಾವುದೇ ಜನಾಂಗದ ವಿರುದ್ಧವಾಗಿರುವ ಹಗೆತನವು ನ್ಯಾಯಯುತವಾಗಿ ವರ್ತಿಸುವುದನ್ನು ತಡೆಗಟ್ಟಬಾರದೆಂದು ಪವಿತ್ರ ಖುರ್‌ಆನ್ ಮುಸ್ಲಿಮರಿಗೆ ಕಲಿಸುತ್ತದೆ. ಪವಿತ್ರ ಖುರ್‌ಆನಿನ ಸೂರಃ ಅಲ್‌ಮಾಇದದಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳಿರುತ್ತಾನೆ:

**"ಒಂದು ಜನತೆಯವರು ನಿಮ್ಮನ್ನು ಪವಿತ್ರ ಮಸೀದಿಯಿಂದ ತಡೆಗಟ್ಟಿ (ನಿಮ್ಮೊಡನೆ) ತೋರಿಸಿದ ವಿರೋಧವು ಅವರೊಡನೆ ಅನ್ಯಾಯದಿಂದ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. ಸತ್ಕರ್ಮಗಳಲ್ಲಿ ಮತ್ತು ಅಲ್ಲಾಹನ ಆಜ್ಞೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರಲ್ಲಿ ನೀವು ಪರಸ್ಪರ ಸಹಕರಿಸಿರಿ. (ಆದರೆ) ಪಾಪಕರ್ಮ ಮತ್ತು ಅನ್ಯಾಯವೆಸಗುವುದರಲ್ಲಿ ನೀವು ಅನ್ಯೋನ್ಯ ಸಹಕರಿಸಬಾರದು. ಅಲ್ಲಾಹನ ಭಯ ಭಕ್ತಿಯಿರಿಸಿಕೊಳ್ಳಿರಿ. ಖಂಡಿತವಾಗಿಯೂ ಅಲ್ಲಾಹನು ಕಠಿಣವಾಗಿ ಶಿಕ್ಷಿಸುವವನಾಗಿದ್ದಾನೆ."**

**(5:3)**

ಪವಿತ್ರ ಖುರ್‌ಆನಿನ ಇದೇ ಅಧ್ಯಾಯದಲ್ಲಿ ಅಲ್ಲಾಹನು ಮುಸ್ಲಿಮರಿಗೆ ನೀಡಿದ ಈ ಕೆಳಗಿನ ಆಜ್ಞೆಯನ್ನು ಸಹ ಕಾಣುತ್ತೇವೆ:

**"ಎಲೈ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವ ರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯದಿಂದ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ." (5:9)**


ಆದುದರಿಂದ, ನೀವು ಇನ್ನೊಂದು ದೇಶವನ್ನು ದ್ವೇಷ ಮತ್ತು ಹಗೆತನದ ಕಾರಣದಿಂದ ವಿರೋಧಿಸಬಾರದು. ಇಸ್ರಾಯೇಲ್ ತನ್ನ ಪರಿಮಿತಿಯನ್ನು

ದಾಟಿಹೋಗಿದೆ ಮತ್ತು ತನ್ನ ದೃಷ್ಟಿಯನ್ನು ಇರಾನಿನ ಮೇಲಿರಿಸಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾವುದಾದರೂ ದೇಶ ನಿಮ್ಮ ದೇಶದ ವಿರುದ್ಧ ಆಕ್ರಮಣ ಮಾಡಿದರೆ ಸಹಜವಾಗಿಯೂ ಅದನ್ನು ಪ್ರತಿರೋಧಿಸುವ ಹಕ್ಕು ನಿಮಗಿರುತ್ತದೆ. ಆದರೆ ಸಾಧ್ಯವಿರುವಷ್ಟು ಮಟ್ಟಿಗೆ ಜಗಳಗಳನ್ನು ರಾಜಕೀಯ ಚರ್ಚೆ ಮತ್ತು ಮಾತುಕತೆಗಳ ಮೂಲಕ ಪರಿಹರಿಸಲು ಪ್ರಯತ್ನಿಸಬೇಕು. ಶಕ್ತಿ ಪ್ರಯೋಗದ ಬದಲಿಗೆ ಮಾತುಕತೆ ಮೂಲಕ ಸಮಸ್ಯೆಗಳನ್ನು ಪರಿಹರಿಸಬೇಕೆಂದು ನಾನು ನಿಮ್ಮನ್ನು ವಿನೀತವಾಗಿ ಅಪೇಕ್ಷಿಸುತ್ತೇನೆ. ನಾನು ನಿಮ್ಮೊಂದಿಗೆ ಈ ಅಪೇಕ್ಷೆ ಮಾಡಿದುದೇಕೆಂದರೆ ನಾನು ಅಲ್ಲಾಹನಿಂದ ಆಯ್ಕೆಗೊಂಡ ಮಹಾನುಭಾವರ ಅನುಯಾಯಿಯಾಗಿದ್ದೇನೆ. ಅವರು ಈ ಕಾಲಘಟ್ಟದಲ್ಲಿ ಪ್ರವಾದಿ ಮುಹಮ್ಮದ್‌ರ[ಸ] ನಿಜವಾದ ದಾಸನಾಗಿ ಆಗಮಿಸಿ ತಾನು ವಾಗ್ದತ್ತ ಮಸೀಹ್ ಮತ್ತು ಇಮಾಮ್ ಮಹ್‌ದೀ ಎಂದು ವಾದಿಸಿದರು. ಅವರ ಆಗಮನದ ಉದ್ದೇಶ ಮಾನವರನ್ನು ಅಲ್ಲಾಹನಿಗೆ ಹೆಚ್ಚು ಸಮೀಪಗೊಳಿಸುವುದು ಮತ್ತು ನಮ್ಮ ಯಜಮಾನರೂ ನಮ್ಮ ಮಾರ್ಗದರ್ಶಕರೂ ಆಗಿರುವ ಸಕಲ ಲೋಕಗಳಿಗೂ ಅನುಗ್ರಹದಾಯಕರಾಗಿರುವ ಹಝ್‌ರತ್ ಪ್ರವಾದಿ[ಸ] ನಮಗೆ ತೋರಿಸಿಕೊಟ್ಟ ರೀತಿಯಲ್ಲಿ ಮಾನವರ ಹಕ್ಕುಗಳನ್ನು ಸ್ಥಾಪಿಸುವುದಾಗಿದೆ.

ಸರ್ವೋನ್ನತನಾದ ಅಲ್ಲಾಹನು ಮುಸ್ಲಿಮ್ ಸಮುದಾಯಕ್ಕೆ ಈ ಸುಂದರ ಉಪದೇಶಗಳನ್ನು ಮನವರಿಕೆ ಮಾಡಿಕೊಳ್ಳುವ ಸೌಭಾಗ್ಯವನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ.

ವಸ್ಸಲಾಮ್,

ನಿಮ್ಮೊಂದಿಗೆ ಸ್ನೇಹಪೂರ್ವಕ,



**ಮಿರ್ಝಾ ಮಸ್‌ರೂರ್ ಅಹ್ಮದ್,**

ಪಂಚಮ ಖಲೀಫ

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ

ಸರ್ವೋಚ್ಚ ನಾಯಕ

# ಯು.ಎಸ್.ಎ. ಪ್ರೆಸಿಡೆಂಟ್
# ಬರಾಕ್ ಒಬಾಮರಿಗೆ ಪತ್ರ

MIRZA MASROOR AHMAD
HEAD OF THE AHMADIYYA COMMUNITY
IN ISLAM

بسم الله الرحمن الرحيم
نحمده و نصلي على رسوله الكريم
وعلى عبده المسيح الموعود
خدا کے فضل اور رحم کے ساتھ
هو الناصر

16 Gressenhall Road
Southfields, London
SW185QL, UK

8 ಮಾರ್ಚ್ 2012

ಪ್ರಿಯ ಅಧ್ಯಕ್ಷರೇ,

ಲೋಕದಲ್ಲಿ ಸಂಭವಿಸುತ್ತಿರುವ ಆತಂಕಕಾರಿ ಬೆಳವಣಿಗೆಗಳ ಕಾರಣ ನಿಮಗೆ ಪತ್ರ ಬರೆಯುವುದು ಆವಶ್ಯಕವೆಂದು ನಾನು ಭಾವಿಸಿದೆ. ಜಾಗತಿಕ ಮಹಾಶಕ್ತಿ ರಾಷ್ಟ್ರವಾದ ಅಮೇರಿಕದ ಅಧ್ಯಕ್ಷರಾದ ನೀವು ನಿಮ್ಮ ದೇಶ ಮತ್ತು ಲೋಕದ ಭವಿಷ್ಯವನ್ನು ಬಾಧಿಸುವಂತಹ ನಿರ್ಧಾರಗಳನ್ನು ಮಾಡುವ ಅಧಿಕಾರವನ್ನು ಹೊಂದಿರುವಿರಿ.

ಈಗಿನ ಕಾಲದಲ್ಲಿ ಲೋಕದಾದ್ಯಂತ ಕ್ಷೋಭೆ ಮತ್ತು ಆತಂಕ ವ್ಯಾಪಕವಾಗಿ ಹರಡಿವೆ. ಕೆಲವು ಪ್ರದೇಶಗಳಲ್ಲಿ ಚಿಕ್ಕ ಮಟ್ಟದ ಯುದ್ಧಗಳು ನಡೆಯುತ್ತಿವೆ. ದುರದೃಷ್ಟಕರವಾಗಿ, ಮಹಾಶಕ್ತಿ ರಾಷ್ಟ್ರಗಳು ಸಂಘರ್ಷಭರಿತ ಪ್ರದೇಶಗಳಲ್ಲಿ ಶಾಂತಿಯನ್ನು ಸ್ಥಾಪಿಸಲು ಮಾಡಿದ ಪ್ರಯತ್ನಗಳು ಪ್ರತೀಕ್ಷಿಸಿದ ರೀತಿಯಲ್ಲಿ ಫಲಕಾರಿಯಾಗಲಿಲ್ಲ. ಜಾಗತಿಕವಾಗಿ ನೋಡಿದರೆ ಹೆಚ್ಚು ಕಮ್ಮಿ ಪ್ರತಿಯೊಂದು ದೇಶವು ಇತರ ದೇಶಗಳನ್ನು ಬೆಂಬಲಿಸುವ ಅಥವಾ ವಿರೋಧಿಸುವ ಚಟುವಟಿಕೆಗಳಲ್ಲಿ ನಿರತವಾಗಿವೆ. ಆದರೆ ನ್ಯಾಯಪಾಲನೆಯ ಆವಶ್ಯಕತೆಗಳು ಈಡೇರಿಸಲ್ಪಡುವುದಿಲ್ಲ. ನಾವು ಲೋಕದ ಈಗಿನ ಸ್ಥಿತಿಗತಿಗಳನ್ನು ವೀಕ್ಷಿಸುವುದಾದರೆ, ಇನ್ನೊಂದು ಜಾಗತಿಕ ಮಹಾಯುದ್ಧಕ್ಕೋಸ್ಕರ ಅಸ್ತಿಭಾರವನ್ನು ಇಷ್ಟರಲ್ಲಿಯೇ ಹಾಕಲಾಗಿದೆ ಎಂದು ಖೇದಪೂರ್ವಕವಾಗಿ ನಾವು ಕಾಣುತ್ತೇವೆ. ಅನೇಕ ದೊಡ್ಡ ಮತ್ತು ಚಿಕ್ಕ ದೇಶಗಳು ಅಣುಬಾಂಬುಗಳನ್ನು ಹೊಂದಿರುವುದರಿಂದ ದ್ವೇಷ ಮತ್ತು ಹಗೆತನ ವಿವಿಧ ದೇಶಗಳ ಮಧ್ಯೆ ವರ್ಧಿಸುತ್ತಾ ಇವೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಮೂರನೆಯ ಜಾಗತಿಕ ಮಹಾಯುದ್ಧ ನಮ್ಮ ಮುಂದೆ ನಿಶ್ಚಯವಾಗಿಯೂ ಕಾಣಿಸುತ್ತಾ ಇದೆ. ಅಂತಹ ಯುದ್ಧ ನಿಶ್ಚಯವಾಗಿಯೂ ಅಣುಬಾಂಬು ವರ್ಷಿಸುವ ಯುದ್ಧವಾಗುವುದು. ಆದುದರಿಂದ ಲೋಕವು ದಾರುಣ ನಾಶದ ಕಡೆಗೆ ಸಾಗುವುದನ್ನು ನಾವು ಕಾಣುತ್ತೇವೆ. ಎರಡನೆಯ ಜಾಗತಿಕ ಮಹಾಯುದ್ಧದ ನಂತರ ಸಮತೆ ಮತ್ತು ನ್ಯಾಯದ ಮಾರ್ಗವನ್ನು ಅನುಸರಿಸಿದ್ದರೆ ನಾವು ಲೋಕವನ್ನು ಇಂದಿನ ಸ್ಥಿತಿಯಲ್ಲಿ, ಎಂದರೆ ಯುದ್ಧದ ಜ್ವಾಲೆಗಳಿಂದ ಪುನಃ ಆವೃತವಾಗಿ ಕಾಣುತ್ತಿರಲಿಲ್ಲ.

ನಮಗೆಲ್ಲರಿಗೂ ತಿಳಿದಿರುವಂತೆ ಎರಡನೆಯ ಜಾಗತಿಕ ಮಹಾಯುದ್ಧವು ಪ್ರಾರಂಭವಾಗಲು ಕಾರಣ ಲೀಗ್ ಆಫ್ ನೇಶನ್ಸ್ ತನ್ನ ಸ್ಥಾಪನೆಯ ಉದ್ದೇಶವನ್ನು

ತಲಪಲು ವಿಫಲವಾದುದು ಮತ್ತು 1932ರಲ್ಲಿ ಆರಂಭವಾದ ಆರ್ಥಿಕ ಮುಗ್ಗಟ್ಟಾಗಿದೆ. ಈಗ ಪ್ರಸಿದ್ಧ ಅರ್ಥ ಶಾಸ್ತ್ರಜ್ಞರು ಈಗಿನ ಆರ್ಥಿಕ ಮುಗ್ಗಟ್ಟು 1932ರ ಆರ್ಥಿಕ ಮುಗ್ಗಟ್ಟಿಗೆ ಹಲವಾರು ವಿಷಯಗಳಲ್ಲಿ ಸಮಾನತೆ ಹೊಂದಿದೆ ಎಂದು ಹೇಳುತ್ತಾರೆ. ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳು ಚಿಕ್ಕ ದೇಶಗಳ ಮಧ್ಯೆ ಯುದ್ಧ ಪ್ರಾರಂಭವಾಗಲು ಕಾರಣಗಳಾಗಿವೆ ಎಂದು ನಾವು ನೋಡುತ್ತಿದ್ದೇವೆ. ಆಂತರಿಕೆ ಕ್ಷೋಭೆ ಮತ್ತು ಅತೃಪ್ತಿ ಈ ದೇಶಗಳಲ್ಲಿ ವರ್ಧಿಸುತ್ತಾ ಇವೆ. ಈ ಕಾರಣಗಳಿಂದ ಕೆಲವು ಶಕ್ತಿಗಳು ಅಧಿಕಾರಕ್ಕೆ ಬರುವುವು. ಅಂತಹ ಶಕ್ತಿಗಳು ನಮ್ಮನ್ನು ಜಾಗತಿಕ ಮಹಾಯುದ್ಧಕ್ಕೆ ಕೊಂಡೊಯ್ಯುವುವು. ಚಿಕ್ಕ ದೇಶಗಳಲ್ಲಿ ಜಗಳಗಳು ರಾಜಕೀಯವಾಗಿ ಅಥವಾ ರಾಜಕೀಯ ತಂತ್ರಗಳ ಮೂಲಕ ಪರಿಹರಿಸದಿದ್ದರೆ ಲೋಕದಲ್ಲಿ ದೇಶಗಳು ಒಗ್ಗೂಡಿದ ಹೊಸ ಗುಂಪುಗಳು ಸ್ಥಾಪಿಸಲ್ಪಡುವುವು. ಇದು ಮೂರನೆಯ ಜಾಗತಿಕ ಮಹಾಯುದ್ಧವು ಪ್ರಾರಂಭವಾಗುವುದಕ್ಕೆ ಮುನ್ನುಡಿಯಾಗುವುದು. ಈಗ ನಾವು ಲೋಕವನ್ನು ಆರ್ಥಿಕ ಅಭಿವೃದ್ಧಿಗೊಯ್ಯುವ ಬಗ್ಗೆ ನಮ್ಮ ಚಿಂತೆಯನ್ನು ಕೇಂದ್ರೀಕರಿಸುವುದಕ್ಕೆ ಬದಲಾಗಿ ಲೋಕವನ್ನು ನಾಶದಿಂದ ರಕ್ಷಿಸುವ ಬಗ್ಗೆ ಕೂಡಲೇ ನಮ್ಮ ಪ್ರಯತ್ನಗಳನ್ನು ವೃದ್ಧಿಗೊಳಿಸಲು ತೊಡಗುವುದು ಅತ್ಯಾವಶ್ಯಕವಾಗಿದೆ. ಮಾನವರು ತಮ್ಮ ಸೃಷ್ಟಿಕರ್ತನಾದ ಏಕದೇವನನ್ನು ಗುರುತಿಸುವುದು ಅತ್ಯಾವಶ್ಯಕವಾಗಿದೆ. ಹೀಗೆ ಮಾಡಿದರೆ ಮಾತ್ರ ಮಾನವತೆಯು ರಕ್ಷಿಸಲ್ಪಡುವುದು ಖಾತರಿಗೊಳಿಸಲ್ಪಡುವುದು. ಇಲ್ಲದಿದ್ದರೆ ಲೋಕವು ವೇಗವಾಗಿ ಸ್ವಯಂ ನಾಶದ ಕಡೆಗೆ ಸಾಗುತ್ತಾ ಹೋಗುವುದು.

ನಿಮ್ಮೊಂದಿಗೆ ಮತ್ತು ಎಲ್ಲ ಜಾಗತಿಕ ನಾಯಕರೊಂದಿಗೆ ನಾನು ಅಪೇಕ್ಷಿಸುವುದೇನೆಂದರೆ, ಇತರ ದೇಶಗಳನ್ನು ಬಲಪ್ರಯೋಗಿಸಿ ಅದುಮಿ ಹಾಕುವುದಕ್ಕೆ ಬದಲಾಗಿ ರಾಜತಂತ್ರಗಳನ್ನೂ ಮಾತುಕತೆಗಳನ್ನೂ ವಿವೇಕವನ್ನೂ ಬಳಸಬೇಕು. ಯುನೈಟೆಡ್ ಸ್ಟೇಟ್ಸ್ ಮೊದಲಾದ ಪ್ರಬಲ ಶಕ್ತಿಶಾಲಿ ರಾಷ್ಟ್ರಗಳು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ತಕ್ಕುದಾದ ಕ್ರಮಗಳನ್ನು ಕೈಗೊಳ್ಳಬೇಕು. ಚಿಕ್ಕ ದೇಶಗಳು ಮಾಡಿದ ಕೃತ್ಯಗಳನ್ನು ಜಾಗತಿಕ ಸೌಹಾರ್ದವನ್ನು ಕೆಡಿಸಲು ನೆವನವನ್ನಾಗಿ ಪ್ರಬಲ ಶಕ್ತಿಶಾಲಿ ರಾಷ್ಟ್ರಗಳು ಮಾಡಬಾರದು. ಈಗ ಅಣು ಆಯುಧಗಳನ್ನು ಯುನೈಟೆಡ್ ಸ್ಟೇಟ್ಸ್ ಮತ್ತು ಇತರ ಪ್ರಬಲ ದೇಶಗಳು ಮಾತ್ರವಲ್ಲ, ಕೆಲವು ಚಿಕ್ಕ ದೇಶಗಳು ಸಹ ಅಂತಹ ವಿನಾಶಕಾರಿ ಅಣು ಅಸ್ತ್ರಗಳನ್ನು ಹೊಂದಿದ್ದು, ಅಂತಹ ದೇಶಗಳ ಯುದ್ಧಪ್ರಿಯರಾದ ನಾಯಕರು ಯಾವುದನ್ನೂ ಯೋಚಿಸದೆ, ವಿಶ್ಲೇಷಿಸದೆ ಕಾರ್ಯಪ್ರವೃತ್ತರಾಗುವವರಾಗಿದ್ದಾರೆ. ಆದುದರಿಂದ ನಾನು ನಿಮ್ಮೊಂದಿಗೆ ವಿನೀತನಾಗಿ ಅಪೇಕ್ಷಿಸುವುದೇನೆಂದರೆ, ಪ್ರಬಲ ರಾಷ್ಟ್ರಗಳು ಮತ್ತು ಚಿಕ್ಕ ರಾಷ್ಟ್ರಗಳಿಂದ ಮೂರನೆಯ ಜಾಗತಿಕ ಮಹಾಯುದ್ಧ ಸ್ಫೋಟಿಸದಂತೆ ತಡೆಯಲು ನಿಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಬಳಸಬೇಕು. ನಾವು ಶಾಂತಿ ಸ್ಥಾಪನೆ ಮಾಡುವ ಪ್ರಯತ್ನದಲ್ಲಿ ಸೋತು ಹೋದರೆ ಜಾಗತಿಕ ಮಹಾ ಯುದ್ಧದ ಪರಿಣಾಮಗಳು ಏಶಿಯಾದ ಬಡ ರಾಷ್ಟ್ರಗಳಿಗೂ

ಯುರೋಪು ಮತ್ತು ಅಮೇರಿಕದ ದೇಶಗಳಿಗೂ ಸೀಮಿತವಾಗಿರಲಾರವು. ನಮ್ಮ ಮುಂದಿನ ಪೀಳಿಗೆಗಳು ನಮ್ಮ ಕೃತ್ಯಗಳ ಭೀಕರ ಪರಿಣಾಮಗಳನ್ನು ಅನುಭವಿಸಬೇಕಾಗುವುದು ಮತ್ತು ಲೋಕದಲ್ಲೆಡೆಗಳಲ್ಲೂ ಮಕ್ಕಳು ಅಂಗವಿಕಲ ರಾಗಿಯೂ ಅಂಗಹೀನರಾಗಿಯೂ ಜನಿಸುವರು. ಜಾಗತಿಕ ಅನಾಹುತಕ್ಕೆ ಲೋಕವನ್ನು ಕೊಂಡೊಯ್ದ ಅವರ ಹಿರಿಯರನ್ನು ಅವರು ಎಂದೂ ಕ್ಷಮಿಸಲಾರರು. ನಾವು ನಮ್ಮ ಸ್ವಾರ್ಥ ಹಿತಾಸಕ್ತಿಗಳ ಬಗ್ಗೆ ಮಾತ್ರ ಚಿಂತಿಸದೆ, ನಮ್ಮ ಮುಂದಿನ ಪೀಳಿಗೆಗಳ ಬಗ್ಗೆ ಚಿಂತಿಸಿ ಅವರಿಗೆ ಪ್ರಕಾಶಮಾನವಾದ ಭವಿಷ್ಯತ್ ಕಾಲವನ್ನು ಸೃಷ್ಟಿಸಲು ಕಠಿಣ ಪರಿಶ್ರಮ ಮಾಡಬೇಕಾಗಿದೆ. ಸರ್ವೋನ್ನತನಾದ ಸೃಷ್ಟಿಕರ್ತನು ಈ ಸಂದೇಶವನ್ನು ನೀವು ಮತ್ತು ಇತರ ಜಾಗತಿಕ ನಾಯಕರು ಮನವರಿಕೆ ಮಾಡಿಕೊಳ್ಳುವ ಸೌಭಾಗ್ಯ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ.

ನಿಮ್ಮೊಂದಿಗೆ ಸ್ನೇಹಪೂರ್ವಕ,



**ಮಿರ್ಝಾ ಮಸ್‌ರೂರ್ ಅಹ್ಮದ್,**
ಪಂಚಮ ಖಲೀಫ
ಜಾಗತಿಕ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ
ಸರ್ವೋಚ್ಚ ನಾಯಕ

# ಕೆನಡದ ಪ್ರಧಾನ ಮಂತ್ರಿ
# ಸ್ಟೀಫನ್ ಹಾರ್ಪರ್‌ರಿಗೆ ಬರೆದ ಪತ್ರ

MIRZA MASROOR AHMAD
HEAD OF THE AHMADIYYA COMMUNITY
IN ISLAM

بسم الله الرحمن الرحيم
نحمده و نصلي على رسوله الكريم
وعلى عبده المسيح الموعود
خدا کے فضل اور رحم کے ساتھ
هو الناصر

16 Gressenhall Road
Southfields, London
SW185QL, UK

8 ಮಾರ್ಚ್ 2012.

ಪ್ರಿಯ ಪ್ರಧಾನ ಮಂತ್ರಿಯವರೇ,

ಲೋಕದಲ್ಲಿ ವರ್ಧಿಸುತ್ತಿರುವ ಇಂದಿನ ವಿಪತ್ಕಾರಕ ಪರಿಸ್ಥಿತಿಯಲ್ಲಿ ನಿಮಗೆ ಪತ್ರ ಬರೆಯಬೇಕೆಂದು ನಾನು ಭಾವಿಸಿದೆ. ನೀವು ಕೆನಡದ ಪ್ರಧಾನಮಂತ್ರಿಯಾಗಿರುವುದರಿಂದ ನೀವು ನಿಮ್ಮ ದೇಶ ಮತ್ತು ಲೋಕದ ಭವಿಷ್ಯವನ್ನು ಬಾಧಿಸುವಂತಹ ನಿರ್ಧಾರಗಳನ್ನು ಮಾಡುವ ಅಧಿಕಾರ ಹೊಂದಿರುವಿರಿ. ಈಗ ಲೋಕದಲ್ಲಿ ವ್ಯಾಪಕ ಕ್ಷೋಭೆ ಮತ್ತು ಪ್ರಕ್ಷುಬ್ಧತೆಯ ಪರಿಸ್ಥಿತಿ ಇದೆ. ಕೆಲವು ಪ್ರದೇಶಗಳಲ್ಲಿ ಚಿಕ್ಕ ಪ್ರಮಾಣದಲ್ಲಿ ಯುದ್ಧಗಳು ಪ್ರಾರಂಭವಾಗಿವೆ. ದುರದೃಷ್ಟಕರವಾಗಿ, ಮಹಾಶಕ್ತಿ ರಾಷ್ಟ್ರಗಳು ಇಂತಹ ಸಂಘರ್ಷಭರಿತ ಪ್ರದೇಶಗಳಲ್ಲಿ ಶಾಂತಿಯನ್ನು ಸ್ಥಾಪಿಸಲು ಪ್ರತೀಕ್ಷಿಸಿದ ರೀತಿಯಲ್ಲಿ ಯಶಸ್ವಿಗಳಿಸಿಲ್ಲ. ಲೋಕದ ದೇಶಗಳನ್ನು ಪರಿಗಣಿಸುವುದಾದರೆ ಪ್ರತಿಯೊಂದು ದೇಶ ಇತರ ದೇಶಗಳಿಗೆ ಬೆಂಬಲ ನೀಡುತ್ತದೆ ಅಥವಾ ವಿರೋಧಿಸುತ್ತದೆ. ಆದರೆ ನ್ಯಾಯಪಾಲನೆ ಮಾಡುವ ಆವಶ್ಯಕತೆಯನ್ನು ಅವು ಈಡೇರಿಸುವುದಿಲ್ಲ. ಖೇದಕರವಾದುದೇನೆಂದರೆ, ನಾವು ಲೋಕದ ಇಂದಿನ ಪರಿಸ್ಥಿತಿಯನ್ನು ವೀಕ್ಷಿಸುವುದಾದರೆ ಇನ್ನೊಂದು ಮಹಾ ಯುದ್ಧಕ್ಕೆ ಅಸ್ತಿಭಾರವನ್ನು ಈಗಾಗಲೇ ಹಾಕಲಾಗಿದೆ ಎಂದು ತಿಳಿಯುತ್ತದೆ. ಚಿಕ್ಕ ಮತ್ತು ದೊಡ್ಡ ಅನೇಕ ದೇಶಗಳು ಅಣು ಅಸ್ತ್ರಗಳನ್ನು ಹೊಂದಿವೆ ಮತ್ತು ಅವುಗಳ ಮಧ್ಯೆ ಹಗೆತನ ಮತ್ತು ಸಂಘರ್ಷ ವರ್ಧಿಸುತ್ತಿವೆ. ಇಂತಹ ದುರವಸ್ಥೆಯಲ್ಲಿ ತೃತೀಯ ಮಹಾ ಯುದ್ಧದ ಬೆದರಿಕೆ ನಮ್ಮ ಮುಂದೆ ಖಂಡಿತವಾಗಿಯೂ ಇದೆ. ಅಂತಹ ಯುದ್ಧ ಪ್ರಾರಂಭವಾದರೆ ಅದು ಅಣು ಅಸ್ತ್ರ ಪ್ರಯೋಗಿಸಲ್ಪಡುವ ಯುದ್ಧವಾಗುವುದು. ಹಾಗೆ ಲೋಕವು ಮಹಾ ವಿನಾಶದ ಕಡೆಗೆ ಸಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ದ್ವಿತೀಯ ಮಹಾ ಯುದ್ಧದ ನಂತರ ನೀತಿ ಮತ್ತು ನ್ಯಾಯಪಾಲನೆಯ ಮಾರ್ಗವನ್ನು ಅವಲಂಬಿಸಿರುತ್ತಿದ್ದರೆ ನಾವು ಲೋಕದಲ್ಲಿ ಇಂದಿನ ಪರಿಸ್ಥಿತಿಯನ್ನು ಕಾಣುತ್ತಿರಲಿಲ್ಲ ಮತ್ತು ಲೋಕವು ಇನ್ನೊಮ್ಮೆ ಯುದ್ಧದ ಜ್ವಾಲೆಯಿಂದ ಆವರಿಸಲ್ಪಡುತ್ತಿರಲಿಲ್ಲ.

ನಮಗೆಲ್ಲರಿಗೂ ತಿಳಿದಿರುವಂತೆ ದ್ವಿತೀಯ ಮಹಾ ಯುದ್ಧ ಪ್ರಾರಂಭವಾಗಲು ಕಾರಣ "ಲೀಗ್ ಆಫ್ ನೇಶನ್ಸ್" ತನ್ನ ಸ್ಥಾಪನೆಯ ಉದ್ದೇಶವನ್ನು ಈಡೇರಿಸುವುದರಲ್ಲಿ ಸೋತು ಹೋದುದರಿಂದಲೂ 1932ರಲ್ಲಿ ಪ್ರಾರಂಭವಾದ ಆರ್ಥಿಕ ಮುಗ್ಗಟಿನ ಕಾರಣದಿಂದಲೂ ಆಗಿದೆ. ಈಗ ಅನೇಕ ಆರ್ಥಿಕ ಶಾಸ್ತ್ರಜ್ಞರು ಹೇಳುವುದೇನೆಂದರೆ, ಇಂದಿನ ಆರ್ಥಿಕ ವಿಷಮ ಪರಿಸ್ಥಿತಿಗೂ 1932ರ ಆರ್ಥಿಕ ಮುಗ್ಗಟ್ಟಿಗೂ ಸಮಾನ

ಹೋಲಿಕೆಗಳಿವೆ. ನಾವು ಕಾಣುವುದೇನೆಂದರೆ, ರಾಜಕೀಯ ಮತ್ತು ಆರ್ಥಿಕ ಕಾರಣಗಳಿಂದ ಚಿಕ್ಕ ದೇಶಗಳು ಪರಸ್ಪರ ವಿರುದ್ಧ ಯುದ್ಧಗಳನ್ನು ಪ್ರಾರಂಭಿಸಿವೆ ಹಾಗೂ ಆ ದೇಶಗಳೊಳಗೆ ಭಿನ್ನಾಭಿಪ್ರಾಯಗಳೂ ಸಂಘರ್ಷಗಳೂ ಆರಂಭವಾಗಿವೆ. ಇದರ ಪರಿಣಾಮವಾಗಿ ಕೆಲವು ಶಕ್ತಿಗಳು ಅಲ್ಲಿ ಅಧಿಕಾರಕ್ಕೆ ಬರುವುವು. ಅವು ನಮ್ಮನ್ನು ಜಾಗತಿಕ ಮಹಾ ಯುದ್ಧಕ್ಕೆ ಕೊಂಡೊಯ್ಯುವುವು. ಚಿಕ್ಕ ದೇಶಗಳಲ್ಲಿ ಸಂಘರ್ಷಗಳನ್ನು ರಾಜಕೀಯವಾಗಿ ಅಥವಾ ರಾಯಭಾರಿ ತಂತ್ರಗಳ ಮೂಲಕ ಪರಿಹರಿಸದಿದ್ದರೆ ಲೋಕದಲ್ಲಿ ದೇಶಗಳ ಹೊಸ ಬಣಗಳೂ ಗುಂಪುಗಳೂ ಸ್ಥಾಪಿಸಲ್ಪಡುವುವು. ಇದು ಮೂರನೆಯ ಜಾಗತಿಕ ಮಹಾ ಯುದ್ಧ ಪ್ರಾರಂಭವಾಗುವುದಕ್ಕೆ ನಾಂದಿಯಾಗುವುದು. ನಾನು ನಂಬುವುದೇನೆಂದರೆ, ನಾವು ಈಗ ನಮ್ಮ ಶ್ರದ್ಧೆಯನ್ನು ಲೋಕದ ಅಭಿವೃದ್ಧಿ ಕಡೆಗೆ ಕೇಂದ್ರೀಕರಿಸುವುದಕ್ಕಿಂತ ಹೆಚ್ಚಾಗಿ, ಲೋಕವನ್ನು ಹೇಗೆ ರಕ್ಷಿಸುವುದು ಎಂಬುದರ ಬಗ್ಗೆ ಕೇಂದ್ರೀಕರಿಸುವುದು ಮತ್ತು ಅದರ ಬಗ್ಗೆ ತುರ್ತಾಗಿ ನಮ್ಮ ಪ್ರಯತ್ನಗಳನ್ನು ವರ್ಧಿಸುವುದು ಅತ್ಯಾವಶ್ಯಕವಾಗಿದೆ. ಸರ್ವರನ್ನೂ ಸೃಷ್ಟಿಸಿದ ಏಕ ದೇವನನ್ನು ಮಾನವರು ಗುರುತಿಸುವುದು ಈಗ ಬಹಳ ಆವಶ್ಯಕವಾಗಿದೆ. ಹೀಗೆ ಮಾಡಿದರೆ ಮಾತ್ರ ಮಾನವರು ಬದುಕಿ ಉಳಿಯುವ ಖಾತರಿ ದೊರಕುವುದು. ಇಲ್ಲದಿದ್ದರೆ ಲೋಕವು ವೇಗವಾಗಿ ನಾಶದ ಕಡೆಗೆ ಸಾಗುತ್ತಾ ಹೋಗುವುದು.

ಕೆನಡವು ಅತ್ಯಂತ ನ್ಯಾಯನಿಷ್ಠೆಯಿಂದ ವರ್ತಿಸುವ ಲೋಕದ ದೇಶಗಳಲ್ಲಿ ಒಂದೆಂದು ವ್ಯಾಪಕವಾಗಿ ಗಣಿಸಲಾಗುತ್ತಿದೆ. ನಿಮ್ಮ ದೇಶ ಸಾಮಾನ್ಯವಾಗಿ ಅನ್ಯ ದೇಶಗಳ ಆಂತರಿಕ ಸಮಸ್ಯೆಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಅಹ್ಮದಿಯಾ ಮುಸ್ಲಿಮ್ ಸಂಘಟನೆಗೆ ಸೇರಿದ ನಮಗೆ ಕೆನಡದ ಜನತೆಯೊಂದಿಗೆ ವಿಶಿಷ್ಟವಾದ ಸ್ನೇಹ ಸಂಬಂಧವಿದೆ. ನಾನು ನಿಮ್ಮೊಂದಿಗೆ ಅಪೇಕ್ಷಿಸುವುದೇನೆಂದರೆ, ದೊಡ್ಡ ಮತ್ತು ಚಿಕ್ಕ ದೇಶಗಳು ವಿನಾಶಕಾರಿ ಮೂರನೆಯ ಮಹಾ ಯುದ್ಧಕ್ಕೆ ನಮ್ಮನ್ನು ಕೊಂಡೊಯ್ಯುವುದನ್ನು ತಡೆಗಟ್ಟಲು ನೀವು ಅತ್ಯಂತ ಹೆಚ್ಚು ಪ್ರಯತ್ನಿಸಬೇಕು.

ನಾನು ನಿಮ್ಮೊಂದಿಗೆ ಮತ್ತು ಇತರ ಎಲ್ಲ ಜಾಗತಿಕ ನಾಯಕರೊಂದಿಗೆ ಅಪೇಕ್ಷಿಸುವುದೇನೆಂದರೆ, ಇತರ ದೇಶಗಳನ್ನು ಹತೋಟಿಗೆ ತರಲು ಬಲಪ್ರಯೋಗಿಸುವುದಕ್ಕೆ ಬದಲಾಗಿ ರಾಜತಂತ್ರಗಳನ್ನೂ ಚರ್ಚೆಗಳನ್ನೂ ವಿವೇಕವನ್ನೂ ಬಳಸಿರಿ. ಕೆನಡದ ಹಾಗಿರುವ ಪ್ರಮುಖ ದೇಶಗಳು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ತಮ್ಮ ಪಾತ್ರವನ್ನು ನಿರ್ವಹಿಸಬೇಕು. ಚಿಕ್ಕ ದೇಶಗಳು ಕೈಗೊಂಡ ಕ್ರಮಗಳನ್ನು ನೆವನವಾಗಿಟ್ಟುಕೊಂಡು ಜಾಗತಿಕ ಶಾಂತಿಯನ್ನೂ ಸೌಹಾರ್ದವನ್ನೂ ಕೆಡಿಸಬಾರದು. ಈಗ ಅಣ್ವಾಯುಧಗಳು ಪ್ರಬಲ ದೇಶಗಳಲ್ಲಿ ಮಾತ್ರವಲ್ಲ, ಚಿಕ್ಕ ದೇಶಗಳೂ ಸಾಮೂಹಿಕವಾಗಿ ಜನರನ್ನು ನಾಶ ಮಾಡಬಲ್ಲ ಅಂತಹ ಆಯುಧಗಳನ್ನು ಹೊಂದಿವೆ. ಅಂತಹ ದೇಶಗಳಲ್ಲಿರುವ ನಾಯಕರು ಯುದ್ಧ ಪ್ರೇಮಿಗಳಾಗಿದ್ದು ಯಾವುದೇ ಯೋಚನೆ ಮಾಡದೆ, ವಿಶ್ಲೇಷಿಸದೆ ಕಾರ್ಯಪ್ರವೃತ್ತರಾಗುವವರಾಗಿದ್ದಾರೆ. ತೃತೀಯ ಜಾಗತಿಕ ಮಹಾಯುದ್ಧ ಪ್ರಾರಂಭವಾಗದಂತೆ ನೀವು ನಿಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ವಿನಿಯೋಗಿಸಬೇಕೆಂದು ನಿಮ್ಮೊಂದಿಗೆ ವಿನೀತನಾಗಿ ಅಪೇಕ್ಷಿಸುತ್ತೇನೆ. ನಮ್ಮ ಮನಸ್ಸಿನಲ್ಲಿ

ಒಂದು ವಿಷಯದ ಬಗ್ಗೆ ಯಾವುದೇ ಸಂಶಯವಿರಬಾರದು. ನಾವು ಯುದ್ಧವು ಸ್ಫೋಟಿಸುವುದನ್ನು ತಡೆಯುವುದರಲ್ಲಿ ಸೋತು ಹೋದರೆ, ಅಂತಹ ಮಹಾ ಯುದ್ಧದ ದುಷ್ಪರಿಣಾಮಗಳು ಏಶಿಯಾದ ಬಡರಾಷ್ಟ್ರಗಳಿಗೂ ಯುರೋಪು ಮತ್ತು ಅಮೇರಿಕದ ದೇಶಗಳಿಗೂ ಮಾತ್ರ ಸೀಮಿತವಾಗಿರಲಾರವು. ನಮ್ಮ ಮುಂದಿನ ಪೀಳಿಗೆಗಳು ನಮ್ಮ ಕೃತ್ಯಗಳ ಭೀಕರ ಪರಿಣಾಮಗಳನ್ನು ಅನುಭವಿಸಬೇಕಾಗುವುದು. ಲೋಕದಲ್ಲಿ ಎಲ್ಲ ಕಡೆಗಳಲ್ಲೂ ಮಕ್ಕಳು ಅಂಗವಿಕಲರಾಗಿ ಅಥವಾ ಅಂಗಹೀನರಾಗಿ ಜನಿಸುವರು. ಜಾಗತಿಕ ಅನಾಹುತಕ್ಕೆ ಲೋಕವನ್ನು ಕೊಂಡೊಯ್ದ ಅವರ ಹಿರಿಯರನ್ನು ಅವರು ಎಂದೂ ಕ್ಷಮಿಸಲಾರರು. ನಾವು ನಮ್ಮ ಸ್ವಾರ್ಥ ಹಿತಾಸಕ್ತಿಗಳಿಗೋಸ್ಕರ ಮಾತ್ರ ಚಿಂತಿಸದೆ, ನಮ್ಮ ಮುಂದಿನ ಪೀಳಿಗೆಗಳ ಬಗ್ಗೆ ಚಿಂತಿಸಿ ಅವರಿಗೆ ಪ್ರಕಾಶಮಾನವಾದ ಭವಿಷ್ಯತ್‌ಕಾಲವನ್ನು ಸೃಷ್ಟಿಸಲು ಕಠಿಣ ಪರಿಶ್ರಮ ಮಾಡಬೇಕಾಗಿದೆ. ಮಹೋನ್ನತನಾದ ದೇವನು ಈ ಸಂದೇಶವನ್ನು ನೀವು ಮತ್ತು ಇತರ ಜಾಗತಿಕ ನಾಯಕರು ಮನವರಿಕೆ ಮಾಡಿಕೊಳ್ಳುವ ಸೌಭಾಗ್ಯ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ.

ನಿಮ್ಮೊಂದಿಗೆ ಸ್ನೇಹ ಪೂರ್ವಕವಾಗಿ,



**ಮಿರ್ಝಾ ಮಸ್‌ರೂರ್ ಅಹ್ಮದ್**
ಪಂಚಮ ಖಲೀಫ
ಜಾಗತಿಕ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ
ಸರ್ವೋಚ್ಚ ನಾಯಕ

# ಸೌದಿ ಅರೇಬಿಯಾದ ದೊರೆ ಅಬ್ದುಲ್ಲಾ ಬಿನ್ ಅಬ್ದುಲ್ ಅಝೀಝ್ ಅಸ್ಸೌದ್‌ರಿಗೆ ಪತ್ರ

MIRZA MASROOR AHMAD
HEAD OF THE AHMADIYYA COMMUNITY
IN ISLAM

بسم الله الرحمن الرحيم
نحمده و نصلي على رسوله الكريم
وعلى عبده المسيح الموعود
خدا کے فضل اور رحم کے ساتھ
هو الناصر

16 Gressenhall Road
Southfields, London
SW185QL, UK

28 ಮಾರ್ಚ್ 2012

ಬಹುಮಾನ್ಯರಾದ ದೊರೆ ಅಬ್ದುಲ್ಲಾರಿಗೆ,
ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ.

ಇಸ್ಲಾಮಿನ ಎರಡು ಪವಿತ್ರ ಕ್ಷೇತ್ರಗಳ ಪರಿಪಾಲಕರಾದ ನೀವು ಮುಸ್ಲಿಮ್ ಸಮುದಾಯದಲ್ಲಿ ಬಹಳ ಉನ್ನತ ಸ್ಥಾನವನ್ನು ಹೊಂದಿರುವಿರಿ. ನಾನು ನಿಮಗೆ ಒಂದು ಮುಖ್ಯ ವಿಷಯದ ಬಗ್ಗೆ ಬರೆಯಲು ಇಚ್ಛಿಸುತ್ತಿದ್ದೇನೆ. ನಿಮ್ಮ ದೇಶದಲ್ಲಿ ಮುಸ್ಲಿಮರ ಎರಡು ಪವಿತ್ರ ಕ್ಷೇತ್ರಗಳಾದ ಮಕ್ಕತುಲ್ ಮುಕರ್ರಮ ಮತ್ತು ಮದೀನತುಲ್ ಮುನವ್ವರ ಇವೆ. ಅವುಗಳನ್ನು ಪ್ರೀತಿಯಿಂದ ಕಾಣುವುದು ಮುಸ್ಲಿಮರ ವಿಶ್ವಾಸದ ಭಾಗವಾಗಿದೆ. ಇವೆರಡು ಕ್ಷೇತ್ರಗಳು ಮುಸ್ಲಿಮರ ಆಧ್ಯಾತ್ಮಿಕ ಅಭಿವೃದ್ಧಿಯ ಕೇಂದ್ರಗಳಾಗಿದ್ದು ಇವುಗಳನ್ನು ಮುಸ್ಲಿಮರು ಬಹಳ ಆದರ ಭಾವದಿಂದ ಕಾಣುತ್ತಾರೆ. ಈ ಕಾರಣದಿಂದ ಎಲ್ಲ ಮುಸ್ಲಿಮರು ಮತ್ತು ಮುಸ್ಲಿಮ್ ದೇಶಗಳ ಸರಕಾರಗಳು ನಿಮಗೆ ಉನ್ನತ ಪದವಿಯನ್ನು ನೀಡಿರುತ್ತಾರೆ. ಈ ಪದವಿಯನ್ನು ಹೊಂದಿದ ನೀವು ಮುಸ್ಲಿಮ್ ಸಮುದಾಯಕ್ಕೆ ಸರಿಯಾದ ಮಾರ್ಗದರ್ಶನದ ನೀಡುವ ಮತ್ತು ಮುಸ್ಲಿಮ್ ದೇಶಗಳಲ್ಲಿ ಶಾಂತಿ ಮತ್ತು ಸೌಹಾರ್ದದ ವಾತಾವರಣವನ್ನು ಉಂಟುಮಾಡಲು ಪ್ರಯತ್ನಿಸುವ ಜವಾಬ್ದಾರಿಯನ್ನು ಹೊಂದಿರುವಿರಿ. ಮುಸ್ಲಿಮರು ಪರಸ್ಪರ ಪ್ರೀತಿ ಮತ್ತು ಸಹಾನುಭೂತಿಯಿಂದ ವರ್ತಿಸುವಂತೆ ಮಾಡಲು ಮತ್ತು ಪವಿತ್ರ ಖುರ್‌ಆನ್ ವಿವರಿಸಿದ ಹಾಗೆ **"ರುಹಮಾಉ ಬೈನಹುಮ್"** – ಪರಸ್ಪರ ದಯೆದೋರುವವರಾಗಿ ವರ್ತಿಸುವಂತೆ ಮಾಡಲು ಸಹ ನೀವು ಪ್ರಯತ್ನಿಸಬೇಕು.

ಎಲ್ಲಕ್ಕಿಂತ ಮಿಗಿಲಾಗಿ, ಲೋಕದಾದ್ಯಂತ ಶಾಂತಿಯನ್ನು ಮಾನವರ ಹಿತಕ್ಕೋಸ್ಕರ ಸ್ಥಾಪಿಸಲು ಸಹ ನೀವು ಪ್ರಯತ್ನಿಸಬೇಕು. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ನೇತಾರನೂ ವಾಗ್ದತ್ತ ಮಸೀಹರ ಮತ್ತು ಇಮಾಮ್ ಮಹ್‌ದಿಯ[ಅ] ಖಲೀಫನಾದ ನಾನು ನಿಮ್ಮೊಂದಿಗೆ ಅಪೇಕ್ಷಿಸುವುದೇನೆಂದರೆ, ಅಹ್ಮದಿಯಾ ಮುಸ್ಲಿಮ್ ಜಮಾಅತ್ ಮತ್ತು ಇತರ ಮುಸ್ಲಿಮರ ಮಧ್ಯೆ ಧಾರ್ಮಿಕ ವಿಶ್ವಾಸಗಳ ಬಗ್ಗೆ ಅಭಿಪ್ರಾಯ ವ್ಯತ್ಯಾಸಗಳಿದ್ದರೂ ಮುಸ್ಲಿಮ್ ಸಮುದಾಯಕ್ಕೆ ಸೇರಿದ ನಾವೆಲ್ಲರೂ ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ಒಗ್ಗೂಡಬೇಕು. ಪ್ರೀತಿ ಮತ್ತು

ಶಾಂತಿಯನ್ನು ಪ್ರತಿಪಾದಿಸುವ ನೈಜ ಇಸ್ಲಾಮೀ ತತ್ವಗಳನ್ನು ಲೋಕದ ಜನರಿಗೆ ತಿಳಿಸಿಕೊಡಲು ನಾವು ನಮ್ಮ ಸಾಮರ್ಥ್ಯಗಳನ್ನು ಚೆನ್ನಾಗಿ ಬಳಸಿ ಪ್ರಯತ್ನ ಮಾಡಬೇಕು. ನಾವು ಈ ರೀತಿ ವರ್ತಿಸಿ ಪಶ್ಚಿಮ ದೇಶಗಳಲ್ಲೂ ಲೋಕದ ಇತರೆಡೆಗಳಲ್ಲೂ ಇರುವ ಜನರು ಇಸ್ಲಾಮಿನ ಬಗ್ಗೆ ಹೊಂದಿರುವ ತಪ್ಪುಗ್ರಹಿಕೆಗಳನ್ನು ದೂರೀಕರಿಸಬಹುದು. ಇತರ ದೇಶಗಳ ಅಥವಾ ಗುಂಪುಗಳ ವಿರುದ್ಧ ಇರುವ ಹಗೆತನವು ನಮ್ಮನ್ನು ನ್ಯಾಯರಹಿತವಾಗಿ ವರ್ತಿಸಲು ಪ್ರೇರೇಪಿಸಬಾರದು. ಪವಿತ್ರ ಖುರ್‌ಆನಿನ ಅಲ್‌ಮಾಯಿದ ಅಧ್ಯಾಯದಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳುತ್ತಾನೆ:

**"ಒಂದು ಜನತೆ ನಿಮ್ಮನ್ನು ಪವಿತ್ರ ಮಸೀದಿಯಿಂದ ತಡೆಗಟ್ಟಿ ನಿಮ್ಮೊಡನೆ ತೋರಿಸಿದ ವಿರೋಧವು ಅವರೊಡನೆ ಅನ್ಯಾಯದಿಂದ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. ಸತ್ಕರ್ಮಗಳಲ್ಲಿ ಮತ್ತು ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದರಲ್ಲಿ ನೀವು ಪರಸ್ಪರ ಸಹಕರಿಸಿರಿ. ಆದರೆ ಪಾಪಕರ್ಮ ಮತ್ತು ಅನ್ಯಾಯವೆಸಗುವುದರಲ್ಲಿ ನೀವು ಅನ್ಯೋನ್ಯ ಸಹಕರಿಸಬಾರದು. ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ಖಂಡಿತವಾಗಿಯೂ ಅಲ್ಲಾಹನು ಕಠಿಣವಾಗಿ ಶಿಕ್ಷಿಸುವವನಾಗಿದ್ದಾನೆ." (5:3)**


ಇದು ನಾವು ಯಾವಾಗಲೂ ನಮ್ಮ ದೃಷ್ಟಿಯ ಮುಂದಿರಿಸಬೇಕಾದ ಮಾರ್ಗದರ್ಶಕ ತತ್ವವಾಗಿದ್ದು ಇದರ ಮೂಲಕ ನಾವು ಇಸ್ಲಾಮಿನ ಸುಂದರ ಚಿತ್ರವನ್ನು ಲೋಕದ ಮುಂದಿರಿಸಬಹುದಾಗಿದೆ. ಹೃತ್ಪೂರ್ವಕ ಪ್ರೀತಿ ಮತ್ತು ಎಲ್ಲ ಮುಸ್ಲಿಮರ ಬಗ್ಗೆ ತೀವ್ರ ಅನುಕಂಪವನ್ನು ಹೊಂದಿ ನಾನು ನಿಮ್ಮೊಂದಿಗೆ ಇದರ ಬಗ್ಗೆ ನಿಮ್ಮ ಜವಾಬ್ದಾರಿ ನಿರ್ವಹಿಸಲು ಅಪೇಕ್ಷಿಸುತ್ತಾ ಇದ್ದೇನೆ.

ಇಂದಿನ ಕಾಲದಲ್ಲಿ ಲೋಕದಲ್ಲಿ ಕೆಲವು ರಾಜಕಾರಣಿಗಳು ಮತ್ತು ವಿದ್ವಾಂಸರೆಂದು ಹೇಳಿಕೊಳ್ಳುವವರು ಹಝ್ರತ್ ಪ್ರವಾದಿಯವರನ್ನು[ಸ] ಅಪಮಾನಿಸಿ ಇಸ್ಲಾಮಿನ ವಿರುದ್ಧ ದ್ವೇಷದ ಬೀಜಗಳನ್ನು ಬಿತ್ತುತ್ತಾ ಇದ್ದಾರೆ. ಅವರು ತಮ್ಮ ಗುರಿಯನ್ನು ಸಾಧಿಸಲು ಪವಿತ್ರ ಖುರ್‌ಆನಿನ ಉಪದೇಶಗಳ ಬಗ್ಗೆ ಸಂಪೂರ್ಣ ವಿಕೃತವಾದ ವ್ಯಾಖ್ಯಾನಗಳನ್ನು ನೀಡುತ್ತಾ ಇದ್ದಾರೆ. ಇದಲ್ಲದೆ ಪಾಲೆಸ್ತೀನ್ ಮತ್ತು ಇಸ್ರಾಯೇಲ್ ಮಧ್ಯೆ ಸಂಘರ್ಷಗಳು ವರ್ಧಿಸುತ್ತಾ ಇವೆ. ಮಾತ್ರವಲ್ಲ, ಇಸ್ರಾಯೇಲ್ ಮತ್ತು ಇರಾನಿನ ಮಧ್ಯೆ ಹಗೆತನವು ವರ್ಧಿಸಿ ಅವರ ಪರಸ್ಪರ ಸಂಬಂಧವು ತೀವ್ರವಾಗಿ ಮುರಿದು ಹಾಕಲ್ಪಟ್ಟಿದೆ. ಇಂತಹ ಸಂದರ್ಭದಲ್ಲಿ ಮುಸ್ಲಿಮ್ ಸಮುದಾಯದ ಅತ್ಯಂತ ಪ್ರಮುಖ ನೇತಾರರಾದ ನೀವು ಈ ಜಗಳಗಳನ್ನು ನ್ಯಾಯ ಮತ್ತು ಸಮತೋಲನ ದೃಷ್ಟಿಯಿಂದ ಬಗೆಹರಿಸಲು ಪ್ರತಿಯೊಂದು ರೀತಿಯ ಪ್ರಯತ್ನಗಳನ್ನು ಮಾಡಬೇಕು. ಇಸ್ಲಾಮ್ ವಿರುದ್ಧ ಎಲ್ಲೆಲ್ಲಿ ದ್ವೇಷವು ಪ್ರಕಟಗೊಳ್ಳುತ್ತಿದೆಯೋ ಅಲ್ಲೆಲ್ಲ ಅದನ್ನು ನಿವಾರಿಸಲು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಪ್ರಯತ್ನಿಸುತ್ತಾ ಇರುತ್ತದೆ. ಮುಸ್ಲಿಮರು ಎಲ್ಲರೂ ಒಗ್ಗೂಡಿ ಇದರ ಬಗ್ಗೆ ಪ್ರಯತ್ನ ಮಾಡಲು ಮುಂದಾಗದಿದ್ದರೆ ಲೋಕದಲ್ಲಿ ಶಾಂತಿಯು ಎಂದೂ ಸ್ಥಾಪಿತವಾಗಲಾರದು.

ನೀವು ಇದರ ಬಗ್ಗೆ ನಿಮಗೆ ಸಾಧ್ಯವಿರುವಷ್ಟು ಪ್ರಯತ್ನಿಸಬೇಕೆಂದು ನಾನು ನಿಮ್ಮನ್ನು ಅಪೇಕ್ಷಿಸುತ್ತೇನೆ. ತೃತೀಯ ಜಾಗತಿಕ ಮಹಾಯುದ್ಧವು ವಿಧಿಸಲ್ಪಟ್ಟಿದ್ದರೆ ಅದು ಯಾವುದೇ ಮುಸ್ಲಿಮ್ ದೇಶದಲ್ಲಿ ಆರಂಭವಾಗದಿರಲು ನಾವು ಪ್ರಯತ್ನಿಸಬೇಕು. ಮುಸ್ಲಿಮ್ ದೇಶ ಅಥವಾ ಮುಸ್ಲಿಮ್ ವ್ಯಕ್ತಿ ಲೋಕದಲ್ಲಿ ಎಲ್ಲಿಯಾದರೂ ಇಂದು ಅಥವಾ ಮುಂದಿನ ಕಾಲದಲ್ಲಿ ಮಹಾಯುದ್ಧದ ಕಿಡಿ ಹೊತ್ತಿಸಿದುದರ ಅಪವಾದದ ಜವಾಬ್ದಾರಿಯನ್ನು ಹೊರಲು ಇಚ್ಛಿಸಲಾರನು. ಮಹಾಯುದ್ಧವು ಪ್ರಾರಂಭ ವಾಗುವುದಾದರೆ ಅಣ್ವಸ್ತ್ರಗಳು ಬಳಸಲ್ಪಡುವುವು ಮತ್ತು ಅದರ ಪರಿಣಾಮವಾಗಿ ಮುಂದಿನ ಪೀಳಿಗೆಗಳು ಅಂಗವಿಕಲರಾಗಿ ಜನಿಸುವುವು. ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಜಪಾನಿನ ಎರಡು ನಗರಗಳ ಮೇಲೆ ಅಣು ಬಾಂಬು ದಾಳಿಯಿಂದ ಉಂಟಾದ ಘೋರ ವಿನಾಶನ ಬಗ್ಗೆ ನಾವು ಅರಿತಿರುವೆವು.

ಆದುದರಿಂದ ಸೌದಿ ಅರೇಬಿಯಾದ ದೊರೆಯವರೇ, ನೀವು ನಿಮ್ಮ ಎಲ್ಲ ಶಕ್ತಿ ಮತ್ತು ಪ್ರಭಾವವನ್ನು ಬಳಸಿ ಲೋಕವನ್ನು ಈ ಸಂಪೂರ್ಣ ವಿನಾಶದಿಂದ ರಕ್ಷಿಸಲು ಪ್ರಯತ್ನಿಸಿರಿ. ಸರ್ವಶಕ್ತನಾದ ಅಲ್ಲಾಹನು ನಿಮಗೆ ಸಹಾಯವನ್ನೂ ಅನುಗ್ರಹವನ್ನೂ ನೀಡಲಿ. ಆಮೀನ್.

ನಿಮಗೆ ಮತ್ತು ಸರ್ವ ಮುಸ್ಲಿಮರಿಗೂ ಪ್ರಾರ್ಥನೆಯೊಂದಿಗೆ;
ಹೇ ಅಲ್ಲಾಹ್, ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು.
ವಸ್ಸಲಾಮ್
ನಿಮ್ಮೊಂದಿಗೆ ಸ್ನೇಹ ಪೂರ್ವಕ,



**ಮಿರ್ಝಾ ಮಸ್‌ರೂರ್ ಅಹ್ಮದ್**
ಪಂಚಮ ಖಲೀಫ
ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ
ಸರ್ವೋಚ್ಚ ನಾಯಕ

# ಚೀನದ ಪ್ರಧಾನ ಮಂತ್ರಿ
# ವೆನ್ ಜಿಯಬಾವ್ರೋರಿಗೆ ಪತ್ರ

MIRZA MASROOR AHMAD
HEAD OF THE AHMADIYYA COMMUNITY
IN ISLAM

بسم الله الرحمن الرحيم
نحمده و نصلي على رسوله الكريم
وعلى عبده المسيح الموعود
خدا کے فضل اور رحم کے ساتھ
هو الناصر

16 Gressenhall Road
Southfields, London
SW185QL, UK

9 ಎಪ್ರಿಲ್ 2012

ಪ್ರಿಯ ಪ್ರಧಾನಮಂತ್ರಿಯವರೇ,

ನಾನು ಈ ಪತ್ರವನ್ನು ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ನಮ್ಮ ಒಬ್ಬ ಪ್ರತಿನಿಧಿ ಮೂಲಕ ನಿಮಗೆ ಕಳುಹಿಸುತ್ತಿದ್ದೇನೆ. ಅವರು ಇಸ್ರಾಯೇಲ್ ದೇಶದ ಕಬಾಬೀರ್‌ನಲ್ಲಿರುವ ನಮ್ಮ ಜಮಾಅತ್ ಶಾಖೆಯ ಅಧ್ಯಕ್ಷರಾಗಿದ್ದಾರೆ. ಅವರನ್ನು ಚೀನದ ಅಲ್ಪಸಂಖ್ಯಾತರ ಖಾತೆಯ ಮಂತ್ರಿ ಚೀನಕ್ಕೆ ಆಮಂತ್ರಿಸಿದ್ದಾರೆ. ಚೀನದಿಂದ ಇಸ್ರಾಯೇಲ್‌ಗೆ ಬಂದ ಒಂದು ಪ್ರತಿನಿಧಿ ಸಂಘದಲ್ಲಿ ಚೀನದ ಅಲ್ಪಸಂಖ್ಯಾತರ ಖಾತೆಯ ಉಪಮಂತ್ರಿ ಸಹ ಇದ್ದರು. ಆ ಪ್ರತಿನಿಧಿ ಸಂಘ ಕಬಾಬೀರ್‌ನಲ್ಲಿರುವ ನಮ್ಮ ಮಿಶನ್ ಹೌಸನ್ನು ಸಂದರ್ಶಿಸಿತ್ತು. ನಾನು ಬರೆದ ಪತ್ರವನ್ನು ನಿಮಗೆ ತಲಪಿಸುವ ವ್ಯಕ್ತಿಯನ್ನು ಆ ಪ್ರತಿನಿಧಿ ಸಂಘಕ್ಕೆ ಪರಿಚಯಿಸಲಾಗಿತ್ತು.

ಅಹ್ಮದಿಯಾ ಮುಸ್ಲಿಮ್ ಸಂಘಟನೆ ಇಸ್ಲಾಮ್ ಧರ್ಮಕ್ಕೆ ಸೇರಿದ ಒಂದು ಪಂಗಡವಾಗಿದೆ. ಮುಸ್ಲಿಮರಿಗೆ ಮಾರ್ಗದರ್ಶನ ನೀಡಲು ಮಹ್‌ದಿಯಾಗಿ, ಕ್ರೈಸ್ತರಿಗೆ ಮಾರ್ಗದರ್ಶನ ನೀಡಲು ಮಸೀಹರಾಗಿ ಮತ್ತು ಮಾನವರೆಲ್ಲರಿಗೂ ಮಾರ್ಗದರ್ಶಕರಾಗಿ ಒಬ್ಬ ಮಹಾಪುರುಷರು ಆಗಮಿಸುವರೆಂದು ಪುಣ್ಯ ಪ್ರವಾದಿ ಮುಹಮ್ಮದ್‌ರು(ಸ) ಭವಿಷ್ಯ ನುಡಿದ ಹಾಗೆ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರು(ಅ) ಭಾರತದ ಖಾದಿಯಾನ್‌ನಲ್ಲಿ ಆಗಮಿಸಿದರೆಂದು ನಾವು ನಂಬುತ್ತೇವೆ. ಸರ್ವಶಕ್ತನಾದ ಸೃಷ್ಟಿಕರ್ತನ ಆಜ್ಞೆ ಪ್ರಕಾರ ಅವರು 1889ರಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತನ್ನು ಸ್ಥಾಪಿಸಿದರು. ಅವರು ಮೃತರಾಗುವುದರೊಳಗೆ ಲಕ್ಷಾಂತರ ಜನರು ಅವರು ಸ್ಥಾಪಿಸಿದ ಜಮಾಅತಿಗೆ ಸೇರಿದರು. ಅವರು ನಿಧನ ಹೊಂದಿದ ನಂತರ ಖಿಲಾಫತ್ ವ್ಯವಸ್ಥೆ ಈ ಜಮಾಅತಿನಲ್ಲಿ ಸ್ಥಾಪಿತವಾಯಿತು. ನಾವು ಈಗ ಪಂಚಮ ಖಿಲಾಫತಿನ ಕಾಲಘಟ್ಟದಲ್ಲಿದ್ದೇವೆ. ನಾನು ವಾಗ್ದತ್ತ ಮಸೀಹರ ಪಂಚಮ ಖಲೀಫ ಆಗಿರುವೆನು. ಅತ್ಯಂತ ಮುಖ್ಯವಾದ ಮತ್ತು ಮೂಲಭೂತವಾದ ನಮ್ಮ ತತ್ವವೇನೆಂದರೆ, ಧಾರ್ಮಿಕ ಯುದ್ಧಗಳು ಕೊನೆಗೊಳ್ಳಬೇಕು. ಯಾರಾದರೂ ಒಂದು ಉಪದೇಶವನ್ನು ತಲಪಿಸಲು ಅಥವಾ ಪ್ರಚಾರ ಮಾಡಲು ಬಯಸುವುದಾದರೆ ಅವನು ಪ್ರೀತಿಯಿಂದಲೂ ಅನುಕಂಪಭರಿತವಾಗಿಯೂ ಭ್ರಾತೃತ್ವಭಾವನೆಯಿಂದಲೂ ಹಾಗೆ ಮಾಡಿ ಅವನು ಶಾಂತಿ, ಸಾಮರಸ್ಯ ಮತ್ತು ಸೌಹಾರ್ದವನ್ನು ಸ್ಥಾಪಿಸುವವನಾಗಬೇಕು ಎಂದು ನಾವು

ನಂಬುತ್ತೇವೆ. ಇಸ್ಲಾಮ್ ಧರ್ಮದ ಸತ್ಯವಾದ ಉಪದೇಶಗಳನ್ನು ಆಧಾರವಾಗಿಟ್ಟುಕೊಂಡು ಕೈಗೊಂಡ ಈ ನಿಲುವನ್ನು ಅಹ್ಮದಿಯಾ ಮುಸ್ಲಿಮ್ ಸಂಘಟನೆ ಲೋಕದಾದ್ಯಂತ ಪ್ರಚಾರ ಮಾಡುತ್ತಾ ಇದೆ. ಈ ಸಂಘಟನೆ ಈಗ ಇನ್ನೂರಕ್ಕಿಂತ ಹೆಚ್ಚು ದೇಶಗಳಲ್ಲಿ ಸ್ಥಾಪಿತವಾಗಿದ್ದು ಮಿಲಿಯಗಟ್ಟಲೆ ಅನುಯಾಯಿಗಳನ್ನು ಹೊಂದಿರುತ್ತದೆ.

ನಾನು ನಿಮಗೆ ಹೀಗೆ ಸಂದೇಶ ನೀಡಲು ಬಯಸುತ್ತೇನೆ: ಲೋಕವು ಈಗ ಅತ್ಯಂತ ಕಠಿಣ ಮತ್ತು ಅಪಾಯಕರ ಸ್ಥಿತಿಯಲ್ಲಿದೆ. ನಾವು ಇನ್ನೊಂದು ಜಾಗತಿಕ ಮಹಾಯುದ್ಧದ ಕಡೆಗೆ ವೇಗವಾಗಿ ಸಮೀಪಿಸುತ್ತಿರುವ ಹಾಗೆ ತೋರುತ್ತದೆ. ನೀವು ಒಂದು ಮಹಾಶಕ್ತಿ ರಾಷ್ಟ್ರದ ನೇತಾರರಾಗಿರುವಿರಿ. ಅಲ್ಲದೆ ಲೋಕದ ಜನಸಂಖ್ಯೆಯ ಬಹಳ ದೊಡ್ಡ ಒಂದು ಭಾಗ ನಿಮ್ಮ ದೇಶದಲ್ಲಿದೆ. ನೀವು ಯುನೈಟೆಡ್ ನೇಶನ್ಸ್ ಸಂಸ್ಥೆಯಲ್ಲಿ ವೀಟೋ ಅಧಿಕಾರ ಸಹ ಹೊಂದಿರುವಿರಿ. ಆದುದರಿಂದ ನಮ್ಮೆದುರು ಕಾಣಿಸುತ್ತಿರುವ ವಿನಾಶದಿಂದ ಲೋಕವನ್ನು ರಕ್ಷಿಸಲು ನೀವು ಪ್ರಯತ್ನ ಮಾಡಬೇಕು ಎಂದು ನಾನು ನಿಮ್ಮನ್ನು ಅಪೇಕ್ಷಿಸುತ್ತೇನೆ. ರಾಷ್ಟ್ರೀಯತೆ, ಧರ್ಮ, ಜಾತಿ ಮತ್ತು ವಿಶ್ವಾಸಗಳು ಹೇಗೆಯೇ ಇದ್ದರೂ ನಾವೆಲ್ಲರೂ ಒಗ್ಗೂಡಿ ಮಾನವರನ್ನು ರಕ್ಷಿಸಲು ಪರಿಶ್ರಮಪಡಬೇಕು.

ಚೀನದಲ್ಲಿ ಕ್ರಾಂತಿಯ ನಂತರ ಬಹಳ ಅಭಿವೃದ್ಧಿ ಮತ್ತು ಬದಲಾವಣೆಗಳು ಉಂಟಾಗಿವೆ. ನಿಮ್ಮ ಮಹಾ ನಾಯಕರಾದ ಮಾವೋ ತ್ಸೆ ತುಂಗ್ ಉನ್ನತ ನೈತಿಕ ಮಟ್ಟಕ್ಕೋಸ್ಕರ ಅಸ್ತಿಭಾರ ಹಾಕಿದ್ದರು. ಅದನ್ನು ಮಾನವೀಯ ಮೌಲ್ಯಗಳ ಅತ್ಯುತ್ಕೃಷ್ಟ ಮಟ್ಟ ಎಂದು ವರ್ಣಿಸಬಹುದು. ನೀವು ದೇವನ ಅಸ್ತಿತ್ವದ ಬಗ್ಗೆ ನಂಬಿಕೆ ಹೊಂದಿಲ್ಲವಾದರೂ ನೀವು ನೈತಿಕತೆಯ ಮೇಲೆ ನಿಮ್ಮ ಸಿದ್ಧಾಂತಗಳನ್ನು ರೂಪಿಸಿರುವಿರಿ. ಇಸ್ಲಾಮ್ ಧರ್ಮವು ಚಿತ್ರಿಸುವ ನಮ್ಮ ದೇವನು ಮಾನವರಿಗೆ ಪವಿತ್ರ ಖುರ್‌ಆನನ್ನು ಮಾರ್ಗದರ್ಶನವಾಗಿ ಅವತೀರ್ಣಗೊಳಿಸಿರುವನು. ನೀವು ಅನುಸರಿಸುವ ನೈತಿಕ ತತ್ವಗಳನ್ನು ಪವಿತ್ರ ಖುರ್‌ಆನ್ ಪ್ರತಿಪಾದಿಸುತ್ತದೆ. ಅವುಗಳಿಗಿಂತ ಹೆಚ್ಚು ಮಾರ್ಗದರ್ಶನಗಳನ್ನು ಅದು ನೀಡುತ್ತಿದೆ. ಮಾನವರ ಸುಸ್ಥಿರತೆಗೆ ಇರುವ ಮಾರ್ಗ ಮತ್ತು ಮಾನವೀಯ ಮೌಲ್ಯಗಳ ಸ್ಥಾಪನೆಯ ಬಗ್ಗೆ ಅದು ಸುಂದರವಾದ ಉಪದೇಶಗಳನ್ನು ನೀಡುತ್ತದೆ. ಲೋಕವು – ವಿಶಿಷ್ಟವಾಗಿ ಮುಸ್ಲಿಮ್ ಲೋಕ – ಪವಿತ್ರ ಖುರ್‌ಆನಿನ ಉಪದೇಶಗಳನ್ನು ಅನುಸರಿಸುವುದಾದರೆ ಎಲ್ಲ ಸಮಸ್ಯೆಗಳೂ ಸಂಘರ್ಷಗಳೂ ಪರಿಹರಿಸಲ್ಪಡುವುವು ಮತ್ತು ಶಾಂತಿ ಹಾಗೂ ಸೌಹಾರ್ದದ ವಾತಾವರಣವು ಪೋಷಿಸಲ್ಪಡುವುದು.

ಇಂದಿನ ಕಾಲದಲ್ಲಿ ಅಹ್ಮದಿಯಾ ಮುಸ್ಲಿಮ್ ಸಂಘಟನೆ ಈ ಉದ್ದೇಶಲಕ್ಷ್ಯಗಳನ್ನು ಈಡೇರಿಸಲು ಲೋಕದ ಪ್ರತಿಯೊಂದು ಪ್ರದೇಶದಲ್ಲಿ ಕಾರ್ಯನಿರತವಾಗಿದೆ. ನಮ್ಮ ಶಾಂತಿ ವಿಚಾರಗೋಷ್ಠಿಗಳ ಮೂಲಕ ಮತ್ತು ವಿವಿಧ ಶ್ರೇಣಿಯ ಜನರೊಂದಿಗೆ ಹಾಗೂ

ವಿವಿಧ ಉದ್ಯೋಗಗಳ ಜನರೊಂದಿಗೆ ನಾನು ಏರ್ಪಡಿಸಿದ ಸಭೆಗಳಲ್ಲಿ ನಾನು ಲೋಕದ ಜನರಿಗೆ ಈ ಮುಖ್ಯ ಉದ್ದೇಶಲಕ್ಷ್ಯದ ಬಗ್ಗೆ ನೆನಪಿಸಿಕೊಡುತ್ತಿದ್ದೇನೆ. ಲೋಕದ ವಿವಿಧ ದೇಶಗಳ ನಾಯಕರು ವಿವೇಕದಿಂದ ವರ್ತಿಸುವವರಾಗಬೇಕೆಂದೂ ದೇಶಗಳ ಮತ್ತು ಜನಾಂಗಗಳ ಮಧ್ಯೆ ತಲೆದೋರಿರುವ ಚಿಕ್ಕ ಸಂಘರ್ಷಗಳು ಜಾಗತಿಕ ಸಂಘರ್ಷವಾಗಿ ಸ್ಫೋಟಿಸದಿರಲಿ ಎಂದೂ ನಾನು ಪ್ರಾರ್ಥಿಸುತ್ತೇನೆ. ಲೋಕದ ಬಹಳ ದೊಡ್ಡ ಶಕ್ತಿ ರಾಷ್ಟ್ರವಾದ ನೀವು ಜಾಗತಿಕ ಶಾಂತಿ ಸ್ಥಾಪನೆಗೆ ಪ್ರಯತ್ನಿಸಬೇಕೆಂದು ನಾನು ನಿಮ್ಮನ್ನು ಕೋರುತ್ತೇನೆ. ಒಂದು ಜಾಗತಿಕ ಮಹಾಯುದ್ಧದ ಭೀಕರ ಪರಿಣಾಮಗಳಿಂದ ನೀವು ಲೋಕವನ್ನು ರಕ್ಷಿಸಿರಿ. ಅಂತಹ ಯುದ್ಧ ಪ್ರಾರಂಭವಾದರೆ ಅದು ಅಣು ಅಸ್ತ್ರಗಳನ್ನು ಬಳಸಿ ಕೊನೆಗೊಳ್ಳುವುದು. ಅಣು ಬಾಂಬು ಬಳಸಿದರೆ ಕೆಲವು ದೇಶಗಳ ಪ್ರದೇಶಗಳೇ ಭೂಮಿಯಿಂದ ಅಳಿಸಿ ಹೋಗುವುವು. ಅಣು ಅಸ್ತ್ರ ಬಳಸಲಾದ ಯುದ್ಧದ ಪರಿಣಾಮ ಆ ಕಾಲಘಟ್ಟದ ವಿನಾಶಕ್ಕೆ ಸೀಮಿತವಾಗಿರದೆ ಅದರ ದೂರಗಾಮಿ ಪರಿಣಾಮದಿಂದ ಮುಂದಿನ ಪೀಳಿಗೆಗಳು ಅಂಗವಿಕಲರಾಗಿ ಜನಿಸುವುವು. ಆದುದರಿಂದ ನೀವು ನಿಮ್ಮ ಶಕ್ತಿ ಸಾಮರ್ಥ್ಯಗಳನ್ನೂ ಸಂಪನ್ಮೂಲಗಳನ್ನೂ ಮಾನವರನ್ನು ಇಂತಹ ಭಯಾನಕ ಪರಿಣಾಮಗಳಿಂದ ರಕ್ಷಿಸಲು ವಿನಿಯೋಗಿಸಿರಿ. ನೀವು ಹೀಗೆ ವರ್ತಿಸಿದರೆ ಅದು ನಿಮ್ಮ ದೇಶಕ್ಕೆ ಸಹ ಹಿತಕಾರಿಯಾಗುವುದು. ಲೋಕದ ಚಿಕ್ಕ ಮತ್ತು ದೊಡ್ಡದಾದ ಎಲ್ಲ ದೇಶಗಳು ನನ್ನ ಈ ಸಂದೇಶವನ್ನು ಮನವರಿಕೆ ಮಾಡುವಂತಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಶುಭಾಶಯಗಳು ಮತ್ತು ಪ್ರಾರ್ಥನೆಯೊಂದಿಗೆ



**ಮಿರ್ಝಾ ಮಸ್‌ರೂರ್ ಅಹ್ಮದ್,**

ಪಂಚಮ ಖಲೀಫ

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ

ಸರ್ವೋಚ್ಚ ನಾಯಕ

# ಯುನೈಟೆಡ್ ಕಿಂಗ್‌ಡಮ್ ಪ್ರಧಾನ ಮಂತ್ರಿ

MIRZA MASROOR AHMAD
HEAD OF THE AHMADIYYA COMMUNITY
IN ISLAM

بسم الله الرحمن الرحيم
نحمده و نصلي على رسوله الكريم
وعلى عبده المسيح الموعود
خدا کے فضل اور رحم کے ساتھ
هو الناصر

16 Gressenhall Road
Southfields, London
SW185QL, UK

15 ಎಪ್ರಿಲ್ 2012

ಪ್ರಿಯ ಪ್ರಧಾನ ಮಂತ್ರಿಯವರೇ,

ಲೋಕವು ಇಂದು ದಾಟಿಹೋಗುತ್ತಿರುವ ಅಪಾಯಕರ ಮತ್ತು ವಿಪತ್ತು ಭರಿತ ಸನ್ನಿವೇಶಗಳ ಬೆಳಕಿನಲ್ಲಿ ನಿಮಗೆ ಪತ್ರ ಬರೆಯುವುದು ಆವಶ್ಯಕವಾಗಿದೆ ಎಂದು ನಾನು ಭಾವಿಸಿದೆ. ಯುನೈಟೆಡ್ ಕಿಂಗ್‌ಡಮ್‌ನ ಪ್ರಧಾನ ಮಂತ್ರಿಯಾದ ನೀವು ನಿಮ್ಮ ದೇಶದ ಮತ್ತು ಸಂಪೂರ್ಣ ವಿಶ್ವದ ಮುಂದಿನ ಸ್ಥಿತಿಯನ್ನು ಪ್ರಭಾವಿಸಲು ಶಕ್ತವಾದ ತೀರ್ಮಾನಗಳನ್ನು ಮಾಡಲು ಅಧಿಕಾರವನ್ನು ಹೊಂದಿರುವಿರಿ. ಈಗ ವಿಶ್ವದಲ್ಲಿ ಶಾಂತಿ ಸ್ಥಾಪಿಸುವುದು ಅತ್ಯಾವಶ್ಯಕವಾಗಿದೆ. ಏಕೆಂದರೆ ಯುದ್ಧದ ಕಿಡಿಗಳು ಲೋಕದಾದ್ಯಂತ ಕಾಣಿಸಿಕೊಳ್ಳುತ್ತಾ ಇವೆ. ದೇಶಗಳ ಮಧ್ಯೆ ನಡೆಯುತ್ತಿರುವ ಕಿರಿದಾದ ಸಂಘರ್ಷಗಳು ಜಾಗತಿಕ ಸಂಘರ್ಷಕ್ಕೊಯ್ಯಬಹುದೆಂಬ ಬೆದರಿಕೆಗಳಿವೆ. ಲೋಕದ ಇಂದಿನ ಸ್ಥಿತಿ 1932ರ ಸ್ಥಿತಿಗೆ ಆರ್ಥಿಕವಾಗಿಯೂ ರಾಜಕೀಯವಾಗಿಯೂ ಸಮಾನತೆ ಹೊಂದಿದೆ ಎಂದು ನಾವು ಕಾಣುತ್ತೇವೆ. ಬೇರೆ ಅನೇಕ ಸಮಾನ ಸ್ಥಿತಿಗಳು ಸಹ ಇವೆ. ಇವುಗಳೆಲ್ಲ ಒಗ್ಗೂಡುವಾಗ ದ್ವಿತೀಯ ಮಹಾಯುದ್ದವು ಪ್ರಾರಂಭಗೊಳ್ಳುವಾಗ ಇದ್ದ ಲೋಕದ ಸ್ಥಿತಿಗೆ ಸಮಾನವಾದ ಚಿತ್ರಣವು ಕಾಣಿಸುತ್ತದೆ. ಈ ಕಿಡಿಗಳು ಎಂದಾದರೂ ಬೆಂಕಿ ಹಚ್ಚುವುದಾದರೆ ನಾವು ತೃತೀಯ ಮಹಾಯುದ್ಧದ ಭೀಕರ ದೃಶ್ಯಗಳನ್ನು ನಮ್ಮ ಮುಂದೆ ಕಾಣುವೆವು. ಚಿಕ್ಕ ಮತ್ತು ದೊಡ್ಡ ಅನೇಕ ದೇಶಗಳು ಅಣು ಆಯುಧಗಳನ್ನು ಹೊಂದಿರುವುದರಿಂದ ಮುಂದೆ ಸಂಭವಿಸಬಹುದಾದ ಮಹಾಯುದ್ಧವು ನಿಸ್ಸಂಶಯವಾಗಿಯೂ ಅಣು ಅಸ್ತ್ರಗಳನ್ನು ಪ್ರಯೋಗಿಸುವಂತಹದಾಗುವುದು. ಇಂದು ದೇಶಗಳು ಹೊಂದಿರುವ ಅಣು ಅಸ್ತ್ರಗಳು ಎಷ್ಟು ಹಾನಿಕರವಾಗಿವೆ ಎಂದರೆ ಮುಂದಿನ ಅನೇಕ ಪೀಳಿಗೆಗಳಲ್ಲಿ ಮಕ್ಕಳು ತೀವ್ರ ವಂಶವಾಹಿ ಮತ್ತು ಶಾರೀರಿಕ ವಿಕಲತೆಗಳನ್ನು ಹೊಂದಿ ಜನಿಸುವರು. ಜಪಾನ್ ದೇಶವು ಅಣುಬಾಂಬಿನ ದಾಳಿಗೊಳಪಟ್ಟು ಅಸಹ್ಯ ಪರಿಣಾಮಗಳಿಗೆ ಗುರಿಯಾದ ದೇಶವಾಗಿದ್ದು ದ್ವಿತೀಯ ಮಹಾ ಯುದ್ಧದ ಕಾಲದಲ್ಲಿ ಅದರ ಎರಡು ನಗರಗಳು ಧ್ವಂಸಗೊಂಡವು. ಹೀಗಿದ್ದರೂ ವ್ಯಾಪಕ ವಿನಾಶ

ಉಂಟುಮಾಡಿದ ಆಗಿನ ಕಾಲದ ಅಣುಬಾಂಬುಗಳು ಈಗಿನ ಕಾಲದಲ್ಲಿ ಕೆಲವು ಚಿಕ್ಕ ದೇಶಗಳು ಹೊಂದಿರುವ ಅಣುಬಾಂಬುಗಳಿಗಿಂತ ಕಡಿಮೆ ಶಕ್ತಿಶಾಲಿಗಳಾಗಿದ್ದವು. ಆದುದರಿಂದ ಲೋಕದ ಮಹಾಶಕ್ತಿ ರಾಷ್ಟ್ರಗಳು ಒಟ್ಟಿಗೆ ಸೇರಿಕೊಂಡು ಮಾನವರನ್ನು ವಿನಾಶದ ಅಂಚಿನಿಂದ ರಕ್ಷಿಸುವುದು ಹೇಗೆಂಬುದನ್ನು ಪರಾಮರ್ಶಿಸುವುದು ಅವರ ಕರ್ತವ್ಯವಾಗಿದೆ.

ಅತ್ಯಂತ ಭಯ ಉಂಟುಮಾಡುವ ವಿಷಯವೇನೆಂದರೆ, ಕೆಲವು ಚಿಕ್ಕ ದೇಶಗಳಲ್ಲಿರುವ ಅಣು ಅಸ್ತ್ರಗಳು ಕೆಲವು ಯುದ್ಧ ಪ್ರಿಯರಾದ ಜನರ ಕೈಗೆ ಬರಬಹುದು. ಅವರಿಗೆ ತಮ್ಮ ಕೃತ್ಯಗಳ ಪರಿಣಾಮಗಳ ಬಗ್ಗೆ ಚಿಂತಿಸುವ ಸಾಮರ್ಥ್ಯವಿರುವುದಿಲ್ಲ ಅಥವಾ ಅವರು ಅದರ ಬಗ್ಗೆ ಚಿಂತಿಸಲು ಇಚ್ಛಿಸುವುದೂ ಇಲ್ಲ. ಪ್ರಧಾನ ಶಕ್ತಿಶಾಲಿ ದೇಶಗಳು ನ್ಯಾಯಪಾಲನೆ ಮಾಡದಿದ್ದರೆ, ಚಿಕ್ಕ ದೇಶಗಳ ಅತೃಪ್ತಿಯನ್ನು ಕೊನೆಗೊಳಿಸಲು ಪ್ರಯತ್ನಿಸದಿದ್ದರೆ, ಮಹತ್ತಾದ ಮತ್ತು ವಿವೇಕಭರಿತವಾದ ಧೋರಣೆಗಳನ್ನು ಕೈಗೊಳ್ಳದಿದ್ದರೆ ಲೋಕದ ಪರಿಸ್ಥಿತಿಯು ನಿಯಂತ್ರಣಾತೀತವಾಗುವುದು ಮತ್ತು ನಾವು ಊಹಿಸದಂತಹ ವಿನಾಶಗಳು ಸಂಭವಿಸುವುವು. ಲೋಕದ ಜನಸಂಖ್ಯೆಯಲ್ಲಿ ಬಹುಸಂಖ್ಯಾತರು ಶಾಂತಿಯನ್ನು ಬಯಸುವವರಾದರೂ ಅವರು ಸಹ ವಿನಾಶಕ್ಕೆ ತುತ್ತಾಗುವರು.

ನನ್ನ ಹೃತ್ಪೂರ್ವಕ ಇಚ್ಛೆ ಮತ್ತು ಪ್ರಾರ್ಥನೆ ಏನೆಂದರೆ, ನೀವು ಮತ್ತು ಮಹಾಶಕ್ತಿ ರಾಷ್ಟ್ರಗಳ ನಾಯಕರೆಲ್ಲರೂ ಈ ಭಯಾನಕ ವಾಸ್ತವಿಕತೆಯನ್ನು ಮನಗಾಣಬೇಕು. ಆಕ್ರಮಣಕಾರಿ ಧೋರಣೆಗಳನ್ನು ಕೈಗೊಂಡು ನಿಮ್ಮ ಉದ್ದೇಶ ಲಕ್ಷ್ಯಗಳನ್ನು ಈಡೇರಿಸಲು ಬಲಪ್ರಯೋಗ ಮಾಡುವುದನ್ನು ಕೈಬಿಟ್ಟು ಲೋಕದಲ್ಲಿ ನ್ಯಾಯಪಾಲನೆ ಮಾಡುವುದಕ್ಕೋಸ್ಕರ ಕ್ರಮಗಳನ್ನು ಕೈಗೊಳ್ಳಬೇಕು.

ನಾವು ಇತ್ತೀಚೆಗಿನ ಚರಿತ್ರೆಯ ಕಡೆಗೆ ನೋಡುವುದಾದರೆ, ಬ್ರಿಟನ್ ಅನೇಕ ದೇಶಗಳಲ್ಲಿ ಆಡಳಿತೆ ನಡೆಸಿ ಅಲ್ಲೆಲ್ಲ ಮತ್ತು ವಿಶಿಷ್ಟವಾಗಿ ಭಾರತ – ಪಾಕಿಸ್ತಾನ ಉಪಭೂಖಂಡದಲ್ಲಿ ನ್ಯಾಯ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಉನ್ನತ ಮಟ್ಟವನ್ನು ಸ್ಥಾಪಿಸಿದ್ದಿತು. ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರು ಘನವೆತ್ತ ವಿಕ್ಟೋರಿಯಾ ಮಹಾರಾಣಿಯನ್ನು ಅವರ ವಜ್ರ ಜೂಬಿಲಿ ಸಮಾರಂಭದ ಕಾಲದಲ್ಲಿ ಅಭಿನಂದಿಸಿ ಇಸ್ಲಾಮಿನ ಸಂದೇಶವನ್ನು ತಲುಪಿಸಿ ನ್ಯಾಯನಿಷ್ಠೆಯಿಂದ ಆಡಳಿತೆ ನಡೆಸುತ್ತಿದ್ದ ಬ್ರಿಟಿಷ್ ಸರಕಾರವನ್ನು ಅನುಗ್ರಹಿಸಲು ದೇವನೊಂದಿಗೆ ಪ್ರಾರ್ಥಿಸಿದ್ದರು. ಅವರು, ಧಾರ್ಮಿಕ ಸ್ವಾತಂತ್ರ್ಯ ನೀಡಿದುಕ್ಕೋಸ್ಕರ ಬ್ರಿಟಿಷ್ ಸರಕಾರವನ್ನು ಬಹಳ

ಶ್ಲಾಘಿಸಿದ್ದರು. ಇಂದು ಬ್ರಿಟಿಷ್ ಸರಕಾರವು ಭಾರತ – ಪಾಕಿಸ್ತಾನ ಉಪಖಂಡದಲ್ಲಿ ಆಡಳಿತೆ ನಡೆಸುತ್ತಾ ಇಲ್ಲವಾದರೂ ಧಾರ್ಮಿಕ ಸ್ವಾತಂತ್ರ್ಯದ ತತ್ವಗಳು ಬ್ರಿಟಿಷ್ ಸಮಾಜದಲ್ಲಿ ಮತ್ತು ಅದರ ನಿಯಮಗಳಲ್ಲಿ ಆಳವಾಗಿ ಬೇರೂರಿದ್ದು ಬ್ರಿಟನ್‌ನಲ್ಲಿರುವ ಪ್ರತಿಯೊಬ್ಬನಿಗೆ ಧಾರ್ಮಿಕ ಸ್ವಾತಂತ್ರ್ಯ ಮತ್ತು ಸಮಾನ ಹಕ್ಕುಗಳನ್ನು ನೀಡಲಾಗಿದೆ. ಈ ವರ್ಷ ಘನವೆತ್ತ ಮಹಾರಾಣಿ ಎಲಿಝಬೆತ್ ದ್ವಿತೀಯರವರ ವಜ್ರ ಜೂಬಿಲಿ ಸಮಾರಂಭಗಳು ನಡೆಯುತ್ತಾ ಇವೆ. ಬ್ರಿಟನ್ ತನ್ನ ನ್ಯಾಯಪಾಲನೆ ಮತ್ತು ನಿಷ್ಕಳಂಕತೆಯ ಮಟ್ಟವನ್ನು ಲೋಕದ ಮುಂದಿಡಲು ಇದು ಉತ್ತಮ ಸಂದರ್ಭವನ್ನು ಒದಗಿಸಿಕೊಡುತ್ತಿದೆ. ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಚರಿತ್ರೆ ತೋರಿಸಿಕೊಡುವುದೇನೆಂದರೆ, ಬ್ರಿಟನ್ ತನ್ನ ನ್ಯಾಯನಿಷ್ಠೆಯನ್ನು ಪ್ರದರ್ಶಿಸಿದಾಗೆಲ್ಲ ನಾವು ಅದನ್ನು ಗುರುತಿಸಿದ್ದೇವೆ. ಇನ್ನು ಮುಂದೆ ಸಹ ನ್ಯಾಯಪಾಲನೆ ಬ್ರಿಟಿಷ್ ಸರಕಾರದ ವೈಶಿಷ್ಟ್ಯವಾಗುವುದೆಂದು ನಾವು ಪ್ರತೀಕ್ಷಿಸುತ್ತೇವೆ. ಧಾರ್ಮಿಕ ಸ್ವಾತಂತ್ರ್ಯದ ವಿಷಯದಲ್ಲಿ ಮಾತ್ರವಲ್ಲ, ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ ನೀವು ನಿಮ್ಮ ಜನಾಂಗದ ಶ್ರೇಷ್ಠವಾದ ಉತ್ತಮ ಗುಣಗಳನ್ನು ಮರೆತು ಬಿಡದೆ ಇಂದಿನ ಜಾಗತಿಕ ಪರಿಸ್ಥಿತಿಯಲ್ಲಿ ಬ್ರಿಟನ್ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ತನ್ನ ಪಾತ್ರವನ್ನು ನಿರ್ವಹಿಸಬೇಕು.

ನನ್ನ ಕೋರಿಕೆ ಏನೆಂದರೆ, ಪ್ರತಿಯೊಂದು ಹಂತದಲ್ಲಿಯೂ ಪ್ರತಿಯೊಂದು ದಿಸೆಯಲ್ಲಿಯೂ ದ್ವೇಷಾಗ್ನಿಯನ್ನು ನಂದಿಸಲು ನಾವು ಸಾಧ್ಯವಿರುವಷ್ಟು ಉತ್ತಮವಾಗಿ ಪ್ರಯತ್ನಿಸಬೇಕು. ನಾವು ನಮ್ಮ ಈ ಪ್ರಯತ್ನದಲ್ಲಿ ಜಯಶಾಲಿಗಳಾದರೆ ಮಾತ್ರ ನಾವು ಮುಂದಿನ ನಮ್ಮ ಪೀಳಿಗೆಗಳಿಗೆ ಪ್ರಕಾಶಮಾನವಾದ ಭವಿಷ್ಯವನ್ನು ಖಾತರಿ ನೀಡಲು ಶಕ್ತರಾಗುವೆವು. ನಾವು ನಮ್ಮ ಪ್ರಯತ್ನಗಳಲ್ಲಿ ಸೋತುಹೋಗುವುದಾದರೆ, ಮುಂದೆ ಸಂಭವಿಸುವ ಅಣು ಅಸ್ತ್ರಗಳು ಬಳಸಲ್ಪಡುವ ಯುದ್ಧದ ಕಾರಣದಿಂದ ನಮ್ಮ ಮುಂದಿನ ಪೀಳಿಗೆಗಳು ಎಲ್ಲ ಸ್ಥಳಗಳಲ್ಲೂ ನಮ್ಮ ಕೃತ್ಯಗಳ ಭಯಾನಕ ಪರಿಣಾಮಗಳನ್ನು ಅನುಭವಿಸುವರು ಮತ್ತು ಜಾಗತಿಕ ವಿನಾಶಕ್ಕೊಯ್ದ ತಮ್ಮ ಹಿರಿಯರನ್ನು ಅವರು ಎಂದೂ ಮರೆತುಬಿಡಲಾರರು ಎಂಬುದರ ಬಗ್ಗೆ ಶಂಕಿಸಬೇಕಾಗಿಲ್ಲ. ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳ ಮೇಲೆ ಪ್ರಭಾವ ಬೀರ ಬಲ್ಲ ದೇಶಗಳಲ್ಲಿ ಬ್ರಿಟನ್ ಒಂದಾಗಿದೆ ಎಂದು ನಾನು ನಿಮಗೆ ಇನ್ನೊಮ್ಮೆ ನೆನಪಿಸಿಕೊಡಲು ಬಯಸುತ್ತೇನೆ. ನೀವು ಇಚ್ಛಿಸುವುದಾದರೆ ಸಮತೆ ಮತ್ತು ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸಿಕೊಂಡು ನೀವು ಲೋಕಕ್ಕೆ ಮಾರ್ಗದರ್ಶನ ನೀಡಬಲ್ಲಿರಿ. ಬ್ರಿಟನ್ ಮತ್ತು ಇತರ

ಪ್ರಧಾನ ಶಕ್ತಿರಾಷ್ಟ್ರಗಳು ಲೋಕದಲ್ಲಿ ಶಾಂತಿ ಸ್ಥಾಪಿಸಲು ತಮ್ಮ ಪಾತ್ರವನ್ನು ನಿರ್ವಹಿಸಬೇಕು. ನೀವು ಮತ್ತು ಇತರ ಜಾಗತಿಕ ನಾಯಕರು ಈ ಸಂದೇಶವನ್ನು ಮನವರಿಕೆ ಮಾಡಿಕೊಳ್ಳುವಂತೆ ಸರ್ವಶಕ್ತನಾದ ದೇವನು ಮಾಡಲಿ.

ಶುಭಾಶಯಗಳು ಮತ್ತು ಪ್ರಾರ್ಥನೆಗಳೊಂದಿಗೆ,



**ಮಿರ್ಝಾ ಮಸ್‌ರೂರ್ ಅಹ್ಮದ್,**

ಪಂಚಮ ಖಲೀಫ

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ

ಸರ್ವೋಚ್ಚ ನಾಯಕ

# ಜರ್ಮನಿಯ ಪ್ರಧಾನ ಮಂತ್ರಿ ಏಂಜೆಲಾ ಮೆರ್ಕಲ್‌ರಿಗೆ ಪತ್ರ

MIRZA MASROOR AHMAD
HEAD OF THE AHMADIYYA COMMUNITY
IN ISLAM

بسم الله الرحمن الرحيم
نحمده و نصلی علی رسوله الکریم
وعلی عبده المسیح الموعود
خدا کے فضل اور رحم کے ساتھ
هو الناصر

16 Gressenhall Road
Southfields, London
SW185QL, UK

15 ಎಪ್ರಿಲ್ 2012

ಪ್ರಿಯ ಚಾನ್ಸಿಲ್‌ರವರೇ,

ಲೋಕದ ಅಪಾಯಕರ ಮತ್ತು ಅತ್ಯಂತ ಚಿಂತಾಜನಕವಾದ ಇಂದಿನ ಪರಿಸ್ಥಿತಿಯ ಬೆಳಕಿನಲ್ಲಿ ನಿಮಗೆ ಪತ್ರ ಬರೆಯುವುದು ಆವಶ್ಯಕವಾಗಿದೆ ಎಂದು ನಾನು ಗಣಿಸಿದೆ. ಲೋಕದ ಶಕ್ತಿರಾಷ್ಟ್ರಗಳಲ್ಲಿ ಒಂದಾಗಿರುವ ಮತ್ತು ಪ್ರಭಾವಶಾಲಿಯಾದ ಜರ್ಮನಿಯ ಚಾನ್ಸಿಲರಾದ ನಿಮಗೆ ನಿಮ್ಮ ದೇಶದ ಮೇಲೆ ಮತ್ತು ಲೋಕದ ಇತರ ದೇಶಗಳ ಮೇಲೆ ಪರಿಣಾಮ ಬೀರಬಲ್ಲ ತೀರ್ಮಾನಗಳನ್ನು ಮಾಡಲು ಅಧಿಕಾರವಿದೆ. ಇಂದಿನ ಕಾಲದಲ್ಲಿ ಲೋಕದ ದೇಶಗಳು ವಿವಿಧ ಗುಂಪುಗಳಾಗಿ ವಿಭಜಿಸಲ್ಪಟ್ಟಿವೆ. ತೀವ್ರವಾದವು ವರ್ಧಿಸುತ್ತಾ ಇದೆ. ಆರ್ಥಿಕ, ರಾಜಕೀಯ, ಸಾಂಪತ್ತಿಕ ಸ್ಥಿತಿ ಕೆಟ್ಟು ಹೋಗುತ್ತಾ ಇದೆ. ಹೀಗಿರುವಾಗ ಶಾಂತಿಯ ಅಸ್ತಿಭಾರ ಹಾಕಲು ಎಲ್ಲ ರೀತಿಯ ದ್ವೇಷಾಗ್ನಿಗಳನ್ನು ನಂದಿಸಬೇಕಾಗಿದೆ. ಪ್ರತಿಯೊಬ್ಬ ವ್ಯಕ್ತಿಯ ಎಲ್ಲ ಭಾವನೆಗಳನ್ನು ಗೌರವಿಸುವ ಮೂಲಕ ಮಾತ್ರ ಇದನ್ನು ಸಾಧಿಸಬಹುದಾಗಿದೆ. ಆದರೆ ಸರಿಯಾಗಿಯೂ ಪ್ರಾಮಾಣಿಕವಾಗಿಯೂ ನೈತಿಕವಾಗಿಯೂ ಇದನ್ನು ಕಾರ್ಯಗತಗೊಳಿಸದ ಕಾರಣದಿಂದ ಲೋಕದ ಸ್ಥಿತಿಯು ವೇಗವಾಗಿ ನಿಯಂತ್ರಣಾತೀತವಾಗಿ ಕೆಟ್ಟು ಹೋಗುತ್ತಾ ಇದೆ. ಬಹುತೇಕ ದೇಶಗಳು ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸುವುದಿಲ್ಲ ಎಂದು ನಾವು ಕಾಣುತ್ತೇವೆ. ಇದರ ಪರಿಣಾಮವಾಗಿ ಇನ್ನೊಂದು ಲೋಕ ಮಹಾಯುದ್ಧಕ್ಕೆ ಅಸ್ತಿಭಾರವನ್ನು ಈಗಾಗಲೇ ಹಾಕಲಾಗಿದೆ. ಈಗ ಚಿಕ್ಕ ಮತ್ತು ದೊಡ್ಡ ಅನೇಕ ದೇಶಗಳು ಅಣು ಅಸ್ತ್ರಗಳನ್ನು ಹೊಂದಿವೆ. ಆದುದರಿಂದ ಒಂದು ಮಹಾಯುದ್ಧ ಈಗ ಪ್ರಾರಂಭಗೊಳ್ಳುವುದಾದರೆ, ಆ ಯುದ್ಧ ಸಾಂಪ್ರದಾಯಿಕ ಆಯುಧಗಳನ್ನು ಬಳಸುವಂಥದ್ದು ಆಗಲಾರದು. ಆ ಯುದ್ಧದಲ್ಲಿ ಅಣ್ವಸ್ತ್ರಗಳು ಪ್ರಯೋಗಿಸಲ್ಪಡುವುವು. ಅಣು ಅಸ್ತ್ರಗಳನ್ನು ಬಳಸಿ ಮಾಡುವ ಯುದ್ಧವು ಅತ್ಯಂತ ವಿನಾಶಕರವಾಗುವುದು. ಅದರ ಪರಿಣಾಮವು ಅದಕ್ಕೆ ಸಮೀಪ ಕಾಲಕ್ಕೆ ಮಾತ್ರ ಸೀಮಿತವಾಗಿರದೆ ಅನೇಕ ಪೀಳಿಗೆಗಳು ಅದರ ದೀರ್ಘಕಾಲೀನ ಪರಿಣಾಮಗಳಿಂದ ಪೀಡಿತವಾಗುವುವು. ಮಕ್ಕಳು ಅಂಗವಿಕಲರಾಗಿ ಜನಿಸುವರು.

ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸಲು ನ್ಯಾಯಪಾಲನೆಯು ಅತ್ಯಾವಶ್ಯಕವಾಗಿದೆಯಲ್ಲದೆ ಎಲ್ಲ ಜನರ ಧಾರ್ಮಿಕ ಭಾವನೆಗಳನ್ನು ಮತ್ತು ಅನುಷ್ಠಾನ


ಕರ್ಮಗಳನ್ನು ಗೌರವಿಸಬೇಕು ಎಂದು ನಾನು ನಂಬುತ್ತೇನೆ. ಬಡ ಮತ್ತು ಅಭಿವೃದ್ಧಿ ಹೊಂದಿದ ದೇಶಗಳ ಜನರು ಅಲ್ಲಿಂದ ಬಂದು ತಮ್ಮ ದೇಶಗಳಲ್ಲಿ ವಾಸಿಸಲು ಅನೇಕ ಪಾಶ್ಚಿಮಾತ್ಯ ದೇಶಗಳು ಔದಾರ್ಯಪೂರ್ಣವಾಗಿ ಅನುಮತಿಸಿದುದನ್ನು ನಾನು ಅನುಮೋದಿಸುತ್ತೇನೆ. ವಲಸೆ ಬಂದ ಜನರಲ್ಲಿ ಮುಸ್ಲಿಮರು ಸಹ ಸೇರಿದ್ದಾರೆ. ಮುಸ್ಲಿಮರೆಂದು ಹೇಳಿಕೊಳ್ಳುವ ಒಂದು ಚಿಕ್ಕ ಗುಂಪು ಸಂಪೂರ್ಣವಾಗಿ ಅನುಚಿತವಾಗಿ ವರ್ತಿಸಿ ಪಾಶ್ಚಿಮಾತ್ಯ ದೇಶಗಳ ಜನರ ಹೃದಯಗಳಲ್ಲಿ ನಿಸ್ಸಂಶಯವಾಗಿಯೂ ಅಪನಂಬಿಕೆಗಳನ್ನು ಸೃಷ್ಟಿಸುತ್ತಿದ್ದಾರೆ. ಆದರೆ ಅವರ ಕೃತ್ಯಗಳಿಗೆ ಇಸ್ಲಾಮ್ ಧರ್ಮದೊಂದಿಗೆ ಯಾವ ಸಂಬಂಧವೂ ಇಲ್ಲವೆಂದು ಸ್ಪಷ್ಟಪಡಿಸುತ್ತೇನೆ. ಲೋಕಕ್ಕೆ ಶಾಂತಿ, ಪ್ರೀತಿ ಮತ್ತು ಸೌಹಾರ್ದ ಸಂದೇಶವನ್ನು ತಂದ ಪುಣ್ಯ ಪ್ರವಾದಿ ಮುಹಮ್ಮದ್‌ರನ್ನು(ಸ) ಅಂತಹ ತೀವ್ರವಾದಿಗಳು ನಿಜವಾಗಿಯೂ ಪ್ರೀತಿಸುವವರಲ್ಲ. ಬೆರಳೆಣಿಕೆಯ ಸಂಖ್ಯೆಯಲ್ಲಿರುವ ಜನರ ದಾರಿ ತಪ್ಪಿದ ದುಷ್ಕೃತ್ಯಗಳನ್ನು, ನಮ್ಮ ಧರ್ಮವನ್ನು ಆಕ್ಷೇಪಿಸಲು ಮತ್ತು ನಿಷ್ಕಳಂಕರೂ ನಿರಪರಾಧಿಗಳೂ ಆಗಿರುವ ಬಹುಸಂಖ್ಯಾತ ಮುಸ್ಲಿಮರ ಭಾವನೆಗಳಿಗೆ ನೋವುಂಟು ಮಾಡುವುದಕ್ಕೆ ಸಾಕ್ಷ್ಯಾಧಾರವನ್ನಾಗಿ ಮಾಡಬಾರದು. ಸಮಾಜದಲ್ಲಿ ಶಾಂತಿ ಸ್ಥಾಪನೆಗೆ ಇಬ್ಬಗೆಯ ಮಾರ್ಗವಿರಬೇಕು. ಎಲ್ಲ ಪಕ್ಷಗಳ ಜನರು ಒಗ್ಗೂಡಿ ಪರಸ್ಪರ ಸೌಹಾರ್ದಕ್ಕೆ ಪ್ರಯತ್ನ ಮಾಡುವುದಾದರೆ ಮಾತ್ರ ಶಾಂತಿಯು ಸ್ಥಾಪಿಸಲ್ಪಡುವುದು. ಪಶ್ಚಿಮ ದೇಶಗಳ ಜನರಲ್ಲಿರುವ ಅಪನಂಬಿಕೆಯ ಕಾರಣದಿಂದ ದೇಶಗಳ ಮತ್ತು ಜನರ ಮಧ್ಯೆ ಸಂಬಂಧ ಸುಧಾರಣೆಯಾಗುವುದಕ್ಕೆ ಬದಲಾಗಿ, ಕೆಲವು ಮುಸ್ಲಿಮೇತರರ ಪ್ರತಿಕ್ರಿಯೆ ಕೆಟ್ಟದಾಗುತ್ತಾ ಹೋಗುತ್ತಿದೆ ಮತ್ತು ಮುಸ್ಲಿಮ್ ಮತ್ತು ಮುಸ್ಲಿಮೇತರರ ಮಧ್ಯೆ ಒಡಕು ಸೃಷ್ಟಿಸಲ್ಪಡುತ್ತದೆ.

ಮುಸ್ಲಿಮರ ಕೆಲವು ಗುಂಪುಗಳ ಮತ್ತು ದೇಶಗಳ ತಪ್ಪಾದ ಕೃತ್ಯಗಳ ಕಾರಣದಿಂದ ಕೆಲವು ಶಕ್ತಿಶಾಲಿ ರಾಷ್ಟ್ರಗಳು ತಮ್ಮ ಸ್ವಾರ್ಥ ಹಿತಾಸಕ್ತಿಗೆ ಪ್ರಾಮಾಣಿಕತೆ ಮತ್ತು ನ್ಯಾಯದ ಮೇಲೆ ಆದ್ಯತೆ ನೀಡಿವೆ. ಕೆಲವು ದೇಶಗಳ ಸಂಪತ್ತು ಮತ್ತು ಸಂಪನ್ಮೂಲಗಳನ್ನು ಸುಲಭವಾಗಿ ವಶಪಡಿಸಿಕೊಳ್ಳಲು ಮತ್ತು ಸ್ಪರ್ಧಿಸುವ ದೇಶಗಳನ್ನು ಅವುಗಳಿಂದ ದೂರ ಸರಿಸಲು ಕೆಲವು ಶಕ್ತಿಶಾಲಿ ರಾಷ್ಟ್ರಗಳು ಕಾರ್ಯನಿರತವಾಗುತ್ತವೆ. ಇಂದಿನ ರಾಜಕೀಯ ಸಂಭವಗಳಿಗೆ ಮುಖ್ಯ ಕಾರಣ ಆರ್ಥಿಕ ಹಿನ್ನಡೆಯಾಗಿದ್ದು ಅದು ನಮ್ಮನ್ನು ಇನ್ನೊಂದು ಮಹಾಯುದ್ಧದ ಕಡೆಗೆ ಸೆಳೆಯುತ್ತಾ ಇದೆ. ಸತ್ಯಸಂಧತೆಯನ್ನು ವಾಸ್ತವಿಕವಾಗಿಯೂ ಪಾಲಿಸುವುದಾದರೆ, ಈ ದೇಶಗಳಲ್ಲಿ ಪರಸ್ಪರ ಲಾಭವನ್ನು ನ್ಯಾಯಬದ್ಧವಾದ ರೀತಿಯಲ್ಲಿ, ಕೈಗಾರಿಕೆ ಮತ್ತು ಆರ್ಥಿಕ ಸಂಬಂಧಗಳನ್ನು ಸರಿಯಾದ ರೀತಿಯಲ್ಲಿ ಸ್ಥಾಪಿಸಿ ಗಳಿಸಬಹುದು. ಒಬ್ಬರಿನ್ನೊಬ್ಬರ ಸಂಪನ್ಮೂಲಗಳಿಂದ ನ್ಯಾಯಬಾಹಿರವಾದ ಲಾಭ ಗಳಿಸಲು ಪ್ರಯತ್ನ ಮಾಡಲಾರರು; ಬದಲಿಗೆ, ಅವರು ಒಗ್ಗೂಡಿ ಪರಸ್ಪರ ಸಹಾಯ ಮಾಡುವವರಾಗುವರು. ಇಂದು ಲೋಕದಲ್ಲಿ ಕಂಡು ಬರುವ ಅವ್ಯವಸ್ಥೆಗೆ ಮುಖ್ಯ ಕಾರಣ ನ್ಯಾಯಪಾಲನೆಯ ಕೊರತೆಯಾಗಿದೆ. ಅದು

ವ್ಯಾಪಕ ಆತಂಕ ಮತ್ತು ಗಾಬರಿಯನ್ನು ಉಂಟುಮಾಡುತ್ತಿದೆ.

ಆದುದರಿಂದ ನಾನು ನಿಮ್ಮನ್ನು ಕೋರುತ್ತೇನೆ. ಇನ್ನೊಂದು ಮಹಾಯುದ್ಧ ಸ್ಫೋಟಿಸುವುದನ್ನು ತಡೆಯಲು ನೀವು ಕಠಿಣ ಪ್ರಯತ್ನ ನಡೆಸಿರಿ. ನಿಮ್ಮ ಎಲ್ಲ ಶಕ್ತಿ, ಸಂಪನ್ಮೂಲ ಮತ್ತು ಪ್ರಭಾವವನ್ನು ನಮ್ಮ ಮುಂದೆ ತೂಗಾಡುತ್ತಿರುವ ಭಯಾನಕ ವಿನಾಶದಿಂದ ಲೋಕವನ್ನು ರಕ್ಷಿಸಲು ಬಳಸಿರಿ. ಅಣು ಆಯುಧಗಳನ್ನು ಹೊಂದಿರುವ ಆಧುನಿಕ ತಂತ್ರಜ್ಞಾನ ಬಳಸಲಾದ ಮೂರು ಸಬ್‌ಮೇರೀನ್ ನೌಕೆಗಳನ್ನು ಜರ್ಮನಿಯು ಇಸ್ರಾಯೇಲ್ ದೇಶಕ್ಕೆ ನೀಡಲಿದೆ ಎಂದು ವರದಿಯಾಗಿದೆ. ಇಸ್ರಾಯೇಲ್ ಮತ್ತು ಇರಾನ್ ಮಧ್ಯೆ ಪ್ರಾರಂಭಗೊಂಡಿರುವ ಬಿಗುವಿನ ಸ್ಥಿತಿಯನ್ನು ಇನ್ನಷ್ಟು ವರ್ಧಿಸಲು ಇದು ಸಹಾಯ ಮಾಡುವುದೆಂದು ಜರ್ಮನಿಯ ಒಬ್ಬ ಪ್ರೊಫೆಸರ್ ಹೇಳಿರುವರು. ಈಗ ಅಣು ಆಯುಧಗಳನ್ನು ವಿಶ್ವದ ಮಹಾಶಕ್ತಿ ರಾಷ್ಟ್ರಗಳು ಮಾತ್ರವಲ್ಲ, ಚಿಕ್ಕ ದೇಶಗಳು ಸಹ ಹೊಂದಿವೆ ಎಂಬುದನ್ನು ನಾವು ನೆನಪಿಡಬೇಕು. ನಮಗೆ ಚಿಂತೆಗೆ ಕಾರಣವಾಗಿರುವುದೇನೆಂದರೆ, ಅಣ್ವಸ್ತ್ರಗಳನ್ನು ಹೊಂದಿದ ಕೆಲವು ಚಿಕ್ಕ ದೇಶಗಳಲ್ಲಿ ಆಡಳಿತೆ ನಡೆಸುವ ನಾಯಕರು ಯುದ್ಧಪ್ರಿಯರೂ ಅಣು ಆಯುಧ ಪ್ರಯೋಗದ ಪರಿಣಾಮವೇನಾದೀತೆಂಬುದರ ಬಗ್ಗೆ ಲಕ್ಷ್ಯ ನೀಡದವರೂ ಆಗಿದ್ದಾರೆ. ಆದುದರಿಂದ ನಾನು ನಿಮ್ಮನ್ನು ಇನ್ನೊಮ್ಮೆ ಕೋರುತ್ತೇನೆ. ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ನೀವು ನಿಮಗೆ ಸಾಧ್ಯವಿರುವಷ್ಟು ಪ್ರಯತ್ನಿಸಿರಿ. ನಾವು ಶಾಂತಿ ಸ್ಥಾಪನೆಯ ಈ ಪ್ರತಿಕ್ರಿಯೆಯಲ್ಲಿ ಸೋತು ಹೋದರೆ ಅಣು ಆಯುಧಗಳನ್ನು ಬಳಸಿ ಮಾಡಬಹುದಾದ ಯುದ್ಧದಿಂದ ಉಂಟಾಗುವ ಘೋರ ವಿನಾಶದೊಂದಿಗೆ ಪೀಳಿಗೆಗಳ ನಂತರ ಪೀಳಿಗೆಗಳ ಮಕ್ಕಳು ವಿಕಲರಾಗಿ ಜನಿಸುವರು. ಜಾಗತಿಕ ವಿಪತ್ತುಗಳಿಗೆ ಲೋಕವನ್ನು ಕೊಂಡೊಯ್ದ ತಮ್ಮ ಹಿರಿಯರನ್ನು ಅವರೆಂದೂ ಕ್ಷಮಿಸಲಾರರು. ನಿಮಗೆ ಮತ್ತು ಲೋಕದ ಎಲ್ಲ ದೇಶಗಳ ನಾಯಕರಿಗೆ ಈ ಸಂದೇಶವನ್ನು ಮನವರಿಕೆ ಮಾಡುವ ಭಾಗ್ಯವನ್ನು ದೇವನು ಕರುಣಿಸಲಿ.

ಶುಭಾಶಯಗಳೊಂದಿಗೆ ಮತ್ತು ಪ್ರಾರ್ಥನೆಯೊಂದಿಗೆ,



**ಮಿರ್ಝಾ ಮಸ್‌ರೂರ್ ಅಹ್ಮದ್**

ಪಂಚಮ ಖಲೀಫ

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ

ಸರ್ವೋಚ್ಚ ನಾಯಕ

# ಫ್ರಾನ್ಸಿನ ಅಧ್ಯಕ್ಷ
# ಫ್ರಾಂಕೋಇಯಿಸ್‌ರಿಗೆ ಪತ್ರ

MIRZA MASROOR AHMAD
HEAD OF THE AHMADIYYA COMMUNITY
IN ISLAM

بسم الله الرحمن الرحيم
نحمده و نصلي على رسوله الكريم
وعلى عبده المسيح الموعود
خدا کے فضل اور رحم کے ساتھ
هو الناصر

16 Gressenhall Road
Southfields, London
SW185QL, UK

16 ಮೇ 2012

ಪ್ರಿಯ ಅಧ್ಯಕ್ಷರೇ,

ನೀವು ಫ್ರಾನ್ಸಿನ ಅಧ್ಯಕ್ಷರಾಗಿ ಚುನಾಯಿತರಾದುದಕ್ಕಾಗಿ ನಾನು ನಿಮಗೆ ಅಭಿನಂದನೆಗಳನ್ನು ಸೂಚಿಸಲು ಬಯಸುತ್ತೇನೆ. ನಿಮಗೆ ನಿಶ್ಚಯವಾಗಿಯೂ ಬೃಹತ್ತಾದೊಂದು ಹೊಣೆಗಾರಿಕೆಯನ್ನು ವಹಿಸಿಕೊಡಲಾಗಿದೆ. ಫ್ರಾನ್ಸಿನ ಜನರು ಮತ್ತು ಲೋಕವು ನಿಮ್ಮ ನಾಯಕತ್ವದಿಂದ ಲಾಭಗಳಿಸಲಿ ಎಂದು ನಾನು ಪ್ರತೀಕ್ಷೆ ಮಾಡುತ್ತೇನೆ ಮತ್ತು ಅದರ ಬಗ್ಗೆ ಪ್ರಾರ್ಥಿಸುತ್ತೇನೆ. ಲೋಕ ಪರಿಸ್ಥಿತಿಯು ವೇಗವಾಗಿ ಅಧಃಪತನಗೊಳ್ಳುತ್ತಾ ಇರುವುದರಿಂದ ನಾನು ಇತ್ತೀಚೆಗೆ ನಿಮಗಿಂತ ಮೊದಲು ಫ್ರಾನ್ಸಿನ ಪ್ರೆಸಿಡೆಂಟರಾಗಿದ್ದ ನಿಕೋಲಸ್ ಸರ್ಕೋಝಿಯವರಿಗೆ ಪತ್ರ ಬರೆದಿದ್ದೆನು. ಆ ಪತ್ರದಲ್ಲಿ ನಾನು ಪ್ರೆಸಿಡೆಂಟ್ ಸರ್ಕೋಝಿಯವರೊಂದಿಗೆ, ಅವರು ಒಬ್ಬ ಜಾಗತಿಕ ನೇತಾರನಾಗಿರುವ ನೆಲೆಯಲ್ಲಿ ನ್ಯಾಯಕ್ಕೆ ಬದ್ಧರಾಗಬೇಕೆಂದೂ ಲೋಕ ಮಹಾಯುದ್ಧ ಸ್ಫೋಟಗೊಳ್ಳುವುದನ್ನು ತಡೆಯಬೇಕೆಂದೂ ಅಪೇಕ್ಷಿಸಿದ್ದೆನು.

ಹೊಸದಾಗಿ ಫ್ರಾನ್ಸಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟ ನಿಮಗೆ ಸಹ ಇದೇ ಸಂದೇಶ ನೀಡಬೇಕೆಂದು ನಾನು ಬಯಸುತ್ತೇನೆ. ನಿಮ್ಮ ದೇಶವನ್ನೂ ಲೋಕವನ್ನೂ ಬಾಧಿಸುವ ತೀರ್ಮಾನಗಳನ್ನು ಕೈಗೊಳ್ಳುವ ಅಧಿಕಾರವನ್ನು ನೀವು ಹೊಂದಿರುವಿರಿ. ಲೋಕದ ಇಂದಿನ ಪರಿಸ್ಥಿತಿಯಲ್ಲಿ ಲೋಕದ ಸರಕಾರಗಳು ಅತ್ಯಂತ ಜಾಗರೂಕರಾಗಿರಬೇಕೆಂದು ನಾನು ನಂಬುತ್ತೇನೆ. ಅನ್ಯಾಯಕರ ವರ್ತನೆಗಳು ಮತ್ತು ಹಗೆತನಗಳು ದೇಶಗಳ ಮಧ್ಯೆ ಇರುವುದರಿಂದ ಜಾಗತಿಕ ಸಂಘರ್ಷಕ್ಕೊಯ್ಯಲ್ಪಡುವ ಬೆದರಿಕೆಗಳು ಇವೆ. ಕಳೆದ ಶತಮಾನದಲ್ಲಿ ಎರಡು ಜಾಗತಿಕ ಮಹಾಯುದ್ಧಗಳು ನಡೆದವು. ಮೊದಲನೆಯ ಮಹಾಯುದ್ಧದ ನಂತರ ಲೀಗ್ ಆಫ್ ನೇಶನ್ಸ್ ಸ್ಥಾಪಿಸಲ್ಪಟ್ಟಿತು. ಆದರೆ ನ್ಯಾಯಪಾಲನೆಯ ಆವಶ್ಯಕತೆಗಳು ಈಡೇರದ ಕಾರಣ ಎರಡನೆಯ ಜಾಗತಿಕ ಮಹಾಯುದ್ಧವು ಪ್ರಾರಂಭವಾಗಿ ಆ ಯುದ್ಧದ ಕೊನೆಯ ಘಟ್ಟದಲ್ಲಿ ಅಣುಬಾಂಬನ್ನು ಬಳಸಲಾಯಿತು. ಅನಂತರ ಯುನೈಟೆಡ್ ನೇಶನ್ಸ್ ಎಂಬ ಸಂಸ್ಥೆ ಮಾನವರ ಮೂಲಭೂತ ಹಕ್ಕುಗಳ ಮತ್ತು ಜಾಗತಿಕ ಶಾಂತಿಯ ಸಂರಕ್ಷಣೆಗೋಸ್ಕರ ಸ್ಥಾಪಿಸಲ್ಪಟ್ಟಿತು. ಹೀಗೆ ಯುದ್ಧಗಳನ್ನು ತಡೆಗಟ್ಟುವ ಪ್ರಯತ್ನ ಮಾಡಲಾಯಿತು. ಆದರೆ ಮೂರನೆಯ ಜಾಗತಿಕ ಮಹಾಯುದ್ಧಕ್ಕೆ ಅಸ್ತಿಭಾರವನ್ನು ಹಾಕಿರುವುದಾಗಿ ನಾವು ಈಗ ಕಾಣುತ್ತಿದ್ದೇವೆ. ಚಿಕ್ಕ ಮತ್ತು ದೊಡ್ಡದಾದ ಅನೇಕ ದೇಶಗಳು

ಈಗಾಗಲೇ ಅಣು ಬಾಂಬುಗಳನ್ನು ಹೊಂದಿವೆ. ಚಿಂತೆಯುಂಟುಮಾಡುವ ವಿಷಯವೇನೆಂದರೆ, ಅಣು ಬಾಂಬು ಹೊಂದಿರುವ ಕೆಲವು ಚಿಕ್ಕ ದೇಶಗಳು ಬೇಜವಾಬ್ದಾರಿಯಿಂದ ವರ್ತಿಸುವವುಗಳೂ ಅಣುಬಾಂಬು ಬಳಸಲಾದ ಯುದ್ಧದಿಂದ ಸಂಭವಿಸಬಹುದಾದ ಘೋರ ನಾಶದ ಬಗ್ಗೆ ಅಜ್ಞಾನಿಗಳೂ ಆಗಿವೆ. ಅಣು ಬಾಂಬುಗಳು ವರ್ಷಿಸಲ್ಪಟ್ಟರೆ ಅದರ ಭೀಕರ ಪರಿಣಾಮವು ಕೂಡಲೇ ಪ್ರಕಟವಾಗುವುದು ಮತ್ತು ಆ ದಿನವು ಪ್ರಳಯ ದಿನದ ಹಾಗೆ ಆಗುವುದು. ಇಂದಿನ ಕಾಲದ ಅಣುಬಾಂಬುಗಳು ಎಷ್ಟು ವಿನಾಶಕರವಾಗಿವೆ ಎಂದರೆ ಪೀಳಿಗೆಗಳ ನಂತರ ಪೀಳಿಗೆಗಳ ಮಕ್ಕಳು ವಂಶವಾಹಿಗೆ ಸಂಬಂಧಿಸಿದ ವಿಕಲತೆಗಳಿಂದಲೂ ಅಂಗವಿಕಲತೆಗಳಿಂದಲೂ ಜನಿಸುವರು. ಅಣು ಬಾಂಬಿನ ದಾಳಿಗೆ ತುತ್ತಾಗಿ ಅದರ ವಿನಾಶಕರ ಪರಿಣಾಮವನ್ನು ಎದುರಿಸಿದ ಏಕಮಾತ್ರ ದೇಶವಾದ ಜಪಾನಿನ ಸ್ಥಿತಿ ಹೇಗಿದೆ ಎಂದರೆ ಅಣು ಬಾಂಬು ದಾಳಿಯ ನಂತರ ಏಳು ದಶಕಗಳು ದಾಟಿ ಹೋಗಿದ್ದರೂ ಅಣು ಬಾಂಬು ಪ್ರಯೋಗದ ದುಷ್ಪರಿಣಾಮಗಳು ಈಗ ಸಹ ನವಜಾತ ಶಿಶುಗಳಲ್ಲಿ ಕಾಣಿಸಿಕೊಳ್ಳುತ್ತಾ ಇವೆ.

ಆದುದರಿಂದ ನಾನು ನಿಮ್ಮನ್ನು ವಿನಂತಿಸುತ್ತೇನೆ. ಮುಸ್ಲಿಮ್ ಮತ್ತು ಮುಸ್ಲಿಮೇತರ ಲೋಕದ ಮಧ್ಯೆ ಇರುವ ದ್ವೇಷ ಮತ್ತು ಅಪನಂಬಿಕೆಯನ್ನು ನಂದಿಸಲು ನೀವು ಶಕ್ತಿಯುತವಾಗಿ ಪ್ರಯತ್ನಿಸಿರಿ. ಕೆಲವು ಯುರೋಪಿಯನ್ ದೇಶಗಳು ಇಸ್ಲಾಮಿನ ಉಪದೇಶಗಳ ಬಗ್ಗೆ ಮತ್ತು ಸಂಪ್ರದಾಯಗಳ ಬಗ್ಗೆ ವಿಶಿಷ್ಟ ಆತಂಕಗಳನ್ನು ಹೊಂದಿ ಅವುಗಳ ಮೇಲೆ ಕೆಲವು ನಿಯಂತ್ರಣಗಳನ್ನು ಹೇರಿವೆ. ಬೇರೆ ಕೆಲವು ದೇಶಗಳು ಅದರ ಬಗ್ಗೆ ಯೋಚಿಸುತ್ತಿವೆ. ಮುಸ್ಲಿಮರೆಂದು ಹೇಳಿಕೊಳ್ಳುವ ಕೆಲವು ತೀವ್ರವಾದಿಗಳು ಪಶ್ಚಿಮ ದೇಶಗಳ ವಿರುದ್ಧ ಹೊಂದಿರುವ ಹಗೆತನ ಅವರನ್ನು ಅನುಚಿತವಾದ ರೀತಿಯಲ್ಲಿ ಪ್ರತಿಕ್ರಿಯಿಸುವಂತೆ ಮಾಡಬಹುದು ಮತ್ತು ಅದರಿಂದ ಧಾರ್ಮಿಕ ಅಸಹನೆ ಮತ್ತು ಕಲಹವು ವರ್ಧಿಸುವುದು. ಆದರೆ ಇಸ್ಲಾಮ್ ಶಾಂತಿಪ್ರಿಯ ಧರ್ಮವಾಗಿದೆ. ಕೆಡುಕನ್ನು ತಡೆಯಲು ಕೆಟ್ಟ ಕೆಲಸಮಾಡಲು ಅದು ಉಪದೇಶಿಸುವುದಿಲ್ಲ. ಅಹ್ಮದಿಯಾ ಮುಸ್ಲಿಮ್ ಸಂಘಟನೆಗೆ ಸೇರಿದ ನಾವು ಈ ತತ್ವವನ್ನು ಅನುಸರಿಸುತ್ತೇವೆ ಮತ್ತು ಎಲ್ಲ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರ ನೀಡುವ ಬಗ್ಗೆ ನಂಬಿಕೆ ಹೊಂದಿದ್ದೇವೆ.

ದುಃಖಕರವಾದ ವಿಷಯವೇನೆಂದರೆ, ಮುಸ್ಲಿಮರ ಒಂದು ಚಿಕ್ಕ ಗುಂಪು ಇಸ್ಲಾಮ್ ಧರ್ಮದ ಸಂಪೂರ್ಣ ವಿಕೃತ ಚಿತ್ರಣವನ್ನು ನೀಡುತ್ತದೆ ಮತ್ತು ತಮ್ಮ ದಾರಿತಪ್ಪಿದ ನಂಬಿಕೆಗಳ ಪ್ರಕಾರ ವರ್ತಿಸುತ್ತದೆ. ಮಾನವರೆಲ್ಲರಿಗೂ ಅನುಗ್ರಹದಾಯಕರಾಗಿದ್ದ ಪುಣ್ಯ ಪ್ರವಾದಿ ಮುಹಮ್ಮದ್‌ರನ್ನು[ಸ] ಪ್ರೀತಿಸುವ ನಾನು ನಿಮ್ಮೊಂದಿಗೆ ಅಪೇಕ್ಷಿಸುತ್ತೇನೆ: ನೀವು ತೀವ್ರವಾದಿಗಳ ಕೃತ್ಯಗಳನ್ನು ನಿಜವಾದ ಇಸ್ಲಾಮ್ ಎಂದು ಗಣಿಸಬಾರದು ಮತ್ತು ಅವರ ಕೃತ್ಯಗಳನ್ನು ಶಾಂತಿಪ್ರಿಯರಾದ ಬಹುಸಂಖ್ಯಾತರಾದ ಮುಸ್ಲಿಮರ ಭಾವನೆಗಳನ್ನು ನೋಯಿಸಲು ಇರುವ ಅನುಮತಿ ಪತ್ರವಾಗಿ ಗಣಿಸಬಾರದು. ಇತ್ತೀಚೆಗೆ ಒಬ್ಬ ನಿರ್ದಯಿ ಕ್ರೂರಿ ಮನುಷ್ಯನು ವಿನಾ ಕಾರಣ ಕೆಲವು ಫ್ರೆಂಚ್ ಸೈನಿಕರನ್ನು ದಕ್ಷಿಣ ಫ್ರಾನ್ಸಿನಲ್ಲಿ ಕೊಂದು ಹಾಕಿದನು. ಕೆಲವು ದಿನಗಳ

ನಂತರ ಅವನು ಒಂದು ಶಾಲೆಯನ್ನು ಪ್ರವೇಶಿಸಿ ನಿಷ್ಕಳಂಕರಾದ ಮೂವರು ಯಹೂದಿ ವಿದ್ಯಾರ್ಥಿಗಳನ್ನೂ ಅವರ ಅಧ್ಯಾಪಕರನ್ನೂ ಕೊಂದನು. ಇಂತಹ ಕ್ರೂರ ಕೃತ್ಯಗಳು ಕೆಲವು ಮುಸ್ಲಿಮ್ ದೇಶಗಳಲ್ಲೂ ಆಗಾಗ ನಡೆಯುತ್ತಿರುವುದಾಗಿ ನಾವು ಕಾಣುತ್ತೇವೆ. ಇವು ಇಸ್ಲಾಮಿನ ವಿರೋಧಿಗಳಿಗೆ ತಮ್ಮ ದ್ವೇಷವನ್ನು ಹೊರಹೊಮ್ಮಿಸಲು ಮತ್ತು ತಮ್ಮ ಉದ್ದೇಶಲಕ್ಷ್ಯಗಳನ್ನು ವರ್ಧಿಸಿದ ರೀತಿಯಲ್ಲಿ ಮುಂದುವರಿಸಲು ಆಧಾರ ನೀಡುತ್ತವೆ. ಮುಸ್ಲಿಮನಾದ ನಾನು ಸಂಪೂರ್ಣವಾಗಿ ಹೀಗೆ ಸ್ಪಷ್ಟಪಡಿಸಲು ಬಯಸುತ್ತೇನೆ: ಇಸ್ಲಾಮ್ ಯಾವುದೇ ರೀತಿಯ ಕ್ರೂರಕೃತ್ಯಗಳನ್ನು ಅನುಮತಿಸುವುದಿಲ್ಲ. ಒಬ್ಬ ನಿರಪರಾಧಿಯನ್ನು ಅನ್ಯಾಯದಿಂದ ಕೊಲ್ಲುವುದು ಮಾನವರೆಲ್ಲರನ್ನೂ ಕೊಂದುದಕ್ಕೆ ಸಮವಾದ ಗುರುತರವಾದ ಅಪರಾಧವೆಂದು ಪವಿತ್ರ ಖುರ್‌ಆನ್ ಗಣಿಸಿದೆ. ಇದು ಯಾವುದೇ ಅಪವಾದವಿಲ್ಲದ ಆಜ್ಞೆಯಾಗಿದೆ. ಪವಿತ್ರ ಖುರ್‌ಆನ್ ಹೀಗೆ ಸಹ ಹೇಳುತ್ತದೆ: **ಯಾವುದಾದರೂ ದೇಶ ಅಥವಾ ಜನತೆ ನಿಮ್ಮ ವಿರುದ್ಧ ಶತ್ರುತ್ವವನ್ನು ಹೊಂದಿದ್ದರೆ ಅವರೊಡನೆ ನ್ಯಾಯಯುತವಾಗಿ ವರ್ತಿಸಲು ಅದು ನಿಮ್ಮನ್ನು ತಡೆಗಟ್ಟಬಾರದು. ದ್ವೇಷ ಮತ್ತು ಸ್ಪರ್ಧೆ ನಿಮ್ಮನ್ನು ಸೇಡು ತೀರಿಸಲು ಅಥವಾ ಅನ್ಯಾಯದಿಂದ ವರ್ತಿಸಲು ಪ್ರೇರೇಪಿಸಬಾರದು. ಉತ್ತಮ ರೀತಿಯಲ್ಲಿ ಸಂಘರ್ಷಗಳನ್ನು ಪರಿಹರಿಸಲು ನೀವು ಬಯಸುವಿರಾದರೆ ಸೌಹಾರ್ದಪೂರ್ಣವಾಗಿ ವರ್ತಿಸಿರಿ.**

ಅನೇಕ ಪಶ್ಚಿಮ ದೇಶಗಳು ಬಡ ಮತ್ತು ಹಿಂದುಳಿದ ದೇಶಗಳ ಜನರು ತಮ್ಮ ದೇಶಗಳಲ್ಲಿ ವಾಸಿಸಲು ಔದಾರ್ಯಪೂರ್ಣವಾಗಿ ಅನುಮತಿಸಿದುದನ್ನು ನಾನು ಮೆಚ್ಚುತ್ತೇನೆ. ಅವರಲ್ಲಿ ಮುಸ್ಲಿಮರೂ ಸೇರಿದ್ದಾರೆ. ಅನೇಕ ಮುಸ್ಲಿಮರು ನಿಮ್ಮ ದೇಶದಲ್ಲಿ ನಿಮ್ಮ ನಾಗರಿಕರಾಗಿ ಜೀವಿಸುತ್ತಿದ್ದಾರೆ. ಅವರಲ್ಲಿ ಬಹುತೇಕ ಜನರು ನ್ಯಾಯವನ್ನು ಉಲ್ಲಂಘಿಸದವರೂ ನಿಷ್ಠಾವಂತರೂ ಆಗಿರುತ್ತಾರೆ. ದೇಶಭಕ್ತಿಯು ಸತ್ಯವಿಶ್ವಾಸದ ಒಂದು ಭಾಗವಾಗಿದೆ ಎಂದು ಇಸ್ಲಾಮ್ ಸ್ಪಷ್ಟವಾಗಿ ಕಲಿಸುತ್ತದೆ. ಅಹ್ಮದಿಯಾ ಮುಸ್ಲಿಮ್ ಸಂಘಟನೆ ಈ ಸಂದೇಶವನ್ನು ಲೋಕದಾದ್ಯಂತ ಪ್ರಚಾರಗೊಳಿಸುತ್ತಾ ಇದೆ. ಇಸ್ಲಾಮಿನ ಈ ಸತ್ಯ ಸಂದೇಶವನ್ನು ಎಲ್ಲ ಕಡೆಗಳಲ್ಲೂ ಪ್ರಚಾರಗೊಳಿಸಿದರೆ ದೇಶದ ಬಗ್ಗೆ ಪ್ರೀತಿ ಮತ್ತು ಶಾಂತಿ ಸ್ಥಾಪನೆಯ ಬಗ್ಗೆ ಆಸಕ್ತಿಯು ಪ್ರತಿಯೊಂದು ದೇಶದ ಜನರಲ್ಲಿ ಮತ್ತು ವಿಶ್ವದ ವಿವಿಧ ದೇಶಗಳ ಮಧ್ಯೆ ಸ್ಥಾಪಿತವಾಗುವುದು.

ನನ್ನ ವಿನೀತ ಅಪೇಕ್ಷೆ ನಿಮ್ಮೊಡನೆ ಮತ್ತು ಜಾಗತಿಕ ನಾಯಕರೊಂದಿಗೆ ಏನೆಂದರೆ, ಇತರ ದೇಶಗಳನ್ನು ಬಗ್ಗುಬಡಿಯಲು ಬಲಪ್ರಯೋಗಿಸುವುದಕ್ಕೆ ಬದಲಾಗಿ ಅನ್ಯದೇಶಗಳೊಂದಿಗೆ ರಾಜಕೀಯ ಮುತ್ಸದ್ಧಿತನದಿಂದಲೂ ಸಂವಾದ ಮೂಲಕವೂ ವಿವೇಕದಿಂದಲೂ ವರ್ತಿಸಬೇಕು. ಫ್ರಾನ್ಸಿನ ಹಾಗಿರುವ ಪ್ರಮುಖ ಶಕ್ತಿರಾಷ್ಟ್ರಗಳು ಜಗತ್ತಿನಲ್ಲಿ ಶಾಂತಿ ಸ್ಥಾಪನೆಗೆ ಕಾರ್ಯೋನ್ಮುಖವಾಗಬೇಕು. ಚಿಕ್ಕ ದೇಶಗಳ ಕೃತ್ಯಗಳನ್ನು ಶಾಂತಿಯನ್ನು ಕೆಡಿಸಲು ಆಧಾರವನ್ನಾಗಿ ಮಾಡಿಕೊಳ್ಳಬಾರದು. ಚಿಕ್ಕ ಮತ್ತು ದೊಡ್ಡ ದೇಶಗಳಿಂದ ತೃತೀಯ ಜಾಗತಿಕ ಮಹಾಯುದ್ಧ ಸ್ಫೋಟಿಸದಂತೆ ಮಾಡಲು ಅತ್ಯಂತ ಹೆಚ್ಚು ಪರಿಶ್ರಮಪಡಬೇಕೆಂದು ನಾನು ನಿಮಗೆ ಇನ್ನೊಮ್ಮೆ ನೆನಪಿಸಿಕೊಡುತ್ತೇನೆ.

ಯುದ್ಧವನ್ನು ತಡೆಗಟ್ಟುವ ನಮ್ಮ ಪ್ರಯತ್ನದಲ್ಲಿ ನಾವು ಸೋತುಹೋದರೆ ಯುದ್ಧದ ಕೆಟ್ಟ ಪರಿಣಾಮಗಳು ಏಶಿಯಾದ ಬಡದೇಶಗಳನ್ನು, ಯುರೋಪು ಮತ್ತು ಅಮೇರಿಕವನ್ನು ಮಾತ್ರವಲ್ಲ, ನಮ್ಮ ಮುಂದಿನ ಪೀಳಿಗೆಗಳನ್ನು ಅದರ ಭಯಾನಕ ಪರಿಣಾಮಗಳು ಬಾಧಿಸುವುವು ಮತ್ತು ವಿಶ್ವದ ಎಲ್ಲ ಕಡೆಗಳಲ್ಲೂ ಮಕ್ಕಳು ಅಂಗವಿಕಲರಾಗಿ ಹುಟ್ಟುವರು. ವಿಶ್ವದ ವಿವಿಧ ದೇಶಗಳ ನೇತಾರರು ವಿವೇಕದಿಂದ ವರ್ತಿಸಬೇಕೆಂದೂ ದೇಶಗಳ ಮತ್ತು ಜನಾಂಗಗಳ ಮಧ್ಯೆ ಚಿಕ್ಕಮಟ್ಟದಲ್ಲಿ ಇರುವ ಹಗೆತನವು ಇನ್ನೊಂದು ಜಾಗತಿಕ ಸಂಘರ್ಷಕ್ಕೆ ನಾಂದಿಯಾಗದಿರಲಿ ಎಂದೂ ಪ್ರಾರ್ಥಿಸುತ್ತೇನೆ. ನೀವು ಮತ್ತು ಲೋಕದ ಎಲ್ಲ ಜಾಗತಿಕ ನೇತಾರರು ನನ್ನ ಸಂದೇಶವನ್ನು ಮನವರಿಕೆ ಮಾಡಿಕೊಳ್ಳುವ ಭಾಗ್ಯವನ್ನು ಸರ್ವೋನ್ನತನಾದ ದೇವನು ಅನುಗ್ರಹಿಸಿಕೊಡಲಿ.

ಶುಭಾಶಯ ಮತು ಪ್ರಾರ್ಥನೆಯೊಂದಿಗೆ,



**ಮಿರ್ಝಾ ಮಸ್‌ರೂರ್ ಅಹ್ಮದ್**
ಪಂಚಮ ಖಲೀಫ
ಜಾಗತಿಕ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ
ಸರ್ವೋಚ್ಚ ನಾಯಕ

# ಬ್ರಿಟಿಷ್ ಮಹಾರಾಣಿ
# ದ್ವಿತೀಯ ಎಲಿಝಬೆತ್‌ರಿಗೆ ಪತ್ರ

MIRZA MASROOR AHMAD
HEAD OF THE AHMADIYYA COMMUNITY
IN ISLAM

بسم الله الرحمن الرحيم
نحمده و نصلي على رسوله الكريم
وعلى عبده المسيح الموعود
خدا کے فضل اور رحم کے ساتھ
هو الناصر

16 Gressenhall Road
Southfields, London
SW185QL, UK

19 ಎಪ್ರಿಲ್ 2012

ಘನವೆತ್ತ ಮಹಾರಾಣಿಯವರೇ,

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಮಿಲಿಯಗಟ್ಟಲೆ ಜನರ ಪರವಾಗಿ ಅವರ ಜಾಗತಿಕ ಸರ್ವೋಚ್ಚ ನಾಯಕನೆಂಬ ನೆಲೆಯಲ್ಲಿ ನಾನು ಮಹಾರಾಣಿಯರ ಪಟ್ಟಾಭಿಷೇಕದ ವಜ್ರ ಜೂಬಿಲಿಯ ಸಂತೋಷದಾಯಕವಾದ ಈ ಸಂದರ್ಭದಲ್ಲಿ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸೂಚಿಸುತ್ತಿದ್ದೇನೆ. ಈ ವೈಭವಶಾಲಿ ಸಮಾರಂಭದಲ್ಲಿ ಭಾಗವಹಿಸಲು ನಮಗೆ ಸರ್ವಶಕ್ತನಾದ ದೇವನು ನೀಡಿದ ಭಾಗ್ಯಕ್ಕೋಸ್ಕರ ನಾವು ಅವನಿಗೆ ವಿಶಿಷ್ಟವಾಗಿ ಕೃತಜ್ಞರಾಗಿದ್ದೇವೆ. ವಿಶೇಷವಾಗಿ ಯುನೈಟೆಡ್ ಕಿಂಗ್‌ಡಮ್ ನಾಗರಿಕರಾದ ಅಹ್ಮದೀ ಮುಸ್ಲಿಮರು ಈ  ವಜ್ರ ಜೂಬಿಲಿ ಸಮಾರಂಭದಲ್ಲಿ ಭಾಗವಹಿಸಿ ಬಹಳ ಅಭಿಮಾನದಿಂದ ಸಂತೋಷಗೊಂಡಿರುವರು. ಆದುದರಿಂದ ಅವರೆಲ್ಲರ ಪರವಾಗಿ ನಾನು ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಘನವೆತ್ತ ಮಹಾರಾಣಿಯರಿಗೆ ತಲಪಿಸುತ್ತೇನೆ. ಮಹೋನ್ನತನಾದ ದೇವನು ಔದಾರ್ಯವಂತೆಯಾದ ನಮ್ಮ ಮಹಾರಾಣಿಯನ್ನು  ಶಾಶ್ವತವಾದ ಸುಖ ಮತ್ತು ಸಮಾಧಾನದಲ್ಲಿ ಕಾಪಾಡಲಿ.

ಭೂಮ್ಯಾಕಾಶಗಳನ್ನು ಸೃಷ್ಟಿಸಿ ನಮ್ಮ ಜೀವಿತಕ್ಕೆ ಸಂಖ್ಯಾತೀತ ಅನುಗ್ರಹಗಳನ್ನು ಒದಗಿಸಿಕೊಟ್ಟ ಸರ್ವಶಕ್ತನಾದ ವೈಭವಶಾಲಿ ದೇವನು, ಅನೇಕ ಪರಮಾಧಿಕಾರ ಹೊಂದಿದ ದೇಶಗಳ ಮತ್ತು ಕಾಮನ್‌ವೆಲ್ತ್ ದೇಶಗಳ ಮುಖ್ಯಸ್ಥೆಯಾದ ಔದಾರ್ಯವಂತೆಯಾದ ನಮ್ಮ ಮಹಾರಾಣಿಗೆ ಶಾಂತಿ, ನೆಮ್ಮದಿ ಮತ್ತು ಸಂರಕ್ಷಣೆಯನ್ನು ದಯಪಾಲಿಸಲಿ. ಘನವೆತ್ತ ಮಹಾರಾಣಿ ಹಿರಿಯರೂ ಕಿರಿಯರೂ ಆಗಿರುವ ಪ್ರಜೆಗಳಿಂದ ಪ್ರೀತಿಸಲ್ಪಟ್ಟು ಗೌರವಿಸಲ್ಪಡುವ ಹಾಗೆ ದೇವದೂತರಿಂದಲೂ ಪ್ರೀತಿಸಲ್ಪಡಲಿ ಎಂದು ನಾವು ಪ್ರಾರ್ಥಿಸುತ್ತೇವೆ. ಸರ್ವಶಕ್ತನೂ ಪ್ರತಾಪಶಾಲಿಯೂ ಆಗಿರುವ ದೇವನು ಘನವೆತ್ತ ಮಹಾರಾಣಿಗೆ ಅಗಣಿತ ಲೌಕಿಕ ಅನುಗ್ರಹಗಳನ್ನು ನೀಡಿದ ಹಾಗೆ ಸಂಖ್ಯಾತೀತ ಆಧ್ಯಾತ್ಮಿಕ ಅನುಗ್ರಹಗಳನ್ನೂ ವರದಾನಗಳನ್ನೂ ನೀಡುವವನಾಗಲಿ. ಈ ವರದಾನಗಳನ್ನು ಪಡೆದು ಈ ಮಹಾನ್ ದೇಶದ ನಾಗರಿಕರು ಸರ್ವೋನ್ನತನಾದ ಒಡೆಯನನ್ನು ಗುರುತಿಸಿ ಪರಸ್ಪರ ಪ್ರೀತಿ ವಾತ್ಸಲ್ಯಗಳನ್ನು ಹೊಂದಿ ಜೀವಿಸುವಂತಾಗಲಿ. ವರ್ಣ, ವಿಶ್ವಾಸ, ಜನಾಂಗ ಮತ್ತು ಧರ್ಮ ಇವುಗಳ ವ್ಯತ್ಯಾಸವನ್ನು  ಪರಿಗಣಿಸದೆ ಯುನೈಟೆಡ್ ಕಿಂಗ್‌ಡಮಿನ ಎಲ್ಲ ನಾಗರಿಕರು ಪರಸ್ಪರ ಗೌರವ ಹೊಂದಿ ಜೀವಿಸುತ್ತಾ ಅವರ ಈ ಮನೋಭಾವದ ಪ್ರಭಾವವು ಈ ದೇಶದ ಹೊರಗೆ ವಿಶ್ವದ ಅನ್ಯ ದೇಶಗಳ ಪ್ರಜೆಗಳ ಮೇಲೆ ಸಹ ಬೀರುವಂತಾಗಲಿ. ಇಂದು ಲೋಕದ ಅನೇಕ ಪ್ರದೇಶಗಳು ಯುದ್ಧಗಳಿಂದಲೂ

ಗಲಭೆಗೊಂದಲಗಳಿಂದಲೂ ದ್ವೇಷಾಸೂಯೆಗಳಿಂದಲೂ ಪೀಡಿತವಾಗಿದ್ದು ಅದಕ್ಕೆದುರಾಗಿ ಆ ಪ್ರದೇಶಗಳು ಶಾಂತಿ, ಭ್ರಾತೃತ್ವ ಮತ್ತು ಪ್ರೀತಿಯ ಧಾಮವಾಗಲಿ ಎಂದು ಆಶಿಸುತ್ತೇವೆ. ಘನವೆತ್ತ ಮಹಾರಾಣಿಯ ದೂರದೃಷ್ಟಿ ಮತ್ತು ಪ್ರಯತ್ನಗಳು ಈ ತುರ್ತು ಆವಶ್ಯಕತೆಯನ್ನು ಈಡೇರಿಸುವ ವಿಷಯದಲ್ಲಿ ಮುಖ್ಯ ಪಾತ್ರ ವಹಿಸಬಲ್ಲದು ಎಂದು ನಾನು ದೃಢವಾಗಿ ನಂಬುತ್ತೇನೆ.

ಕಳೆದ ಶತಮಾನದಲ್ಲಿ ನಡೆದ ಎರಡು ಜಾಗತಿಕ ಮಹಾಯುದ್ಧಗಳಲ್ಲಿ ಮಿಲಿಯಗಟ್ಟಲೆ ಜನರು ಹತರಾದರು. ಈಗ ವಿವಿಧ ದೇಶಗಳ ಮಧ್ಯೆ ಇರುವ ಬೇಗುದಿಗಳು ವರ್ಧಿಸುತ್ತಾ ಹೋದರೆ ಕೊನೆಗೆ ಇನ್ನೊಂದು ಮಹಾಯುದ್ಧಕ್ಕೆ ಅವು ಹೇತುವಾಗಬಲ್ಲವು. ಮುಂದೆ ಸಂಭವಿಸಬಹುದಾದ ಮಹಾಯುದ್ಧದಲ್ಲಿ ಅಣ್ವಸ್ತ್ರಗಳ ಬಳಕೆಯಾಗಬಹುದಾದ ಕಾರಣ ಹಿಂದೆ ಎಂದೂ ಸಂಭವಿಸದಷ್ಟು ದಾರುಣ ವಿನಾಶಗಳು ಸಂಭವಿಸುವುವು. ಸರ್ವೋನ್ನತನಾದ ದೇವನು ಇಂತಹ ಭೀಕರ ವಿನಾಶದಿಂದ ರಕ್ಷಿಸಲಿ ಮತ್ತು ಲೋಕದ ಎಲ್ಲ ಜನರು ಬುದ್ಧಿಯನ್ನೂ ವಿವೇಕವನ್ನೂ ಹೊಂದಲಿ. ನಾನು ವಿನೀತನಾಗಿ ಘನವೆತ್ತ ಮಹಾರಾಣಿಯೊಂದಿಗೆ ಅಪೇಕ್ಷಿಸುತ್ತೇನೆ. ವಜ್ರ ಜೂಬಿಲಿ ಸಮಾರಂಭಗಳ ಸಂದರ್ಭದಲ್ಲಿ ಮಾನವರೆಲ್ಲರ ಹಿತವನ್ನು ಬಯಸಿ ಚಿಕ್ಕ ಮತ್ತು ದೊಡ್ಡದಾದ ಎಲ್ಲ ದೇಶಗಳ ಜನರು ಪರಸ್ಪರ ಪ್ರೀತಿ, ಶಾಂತಿ ಮತ್ತು ಸೌಹಾರ್ದದೊಂದಿಗೆ ಜೀವಿಸುವ ಬಗ್ಗೆ ಅವರಿಗೆ ನೆನಪಿಸಿಕೊಡಬೇಕು.

ಈ ವಜ್ರ ಜೂಬಿಲಿ ಸಂದರ್ಭದಲ್ಲಿ ನಾನು ವಿನೀತನಾಗಿ ಇನ್ನೊಂದು ಅಪೇಕ್ಷೆ ಮಾಡಲು ಬಯಸುತ್ತೇನೆ. ಘನವೆತ್ತ ಮಹಾರಾಣಿಯವರು ಒಂದು ಜಾಗತಿಕ ಸಂದೇಶ ನೀಡಿ ಎಲ್ಲ ಧರ್ಮಗಳಿಗೆ ಸೇರಿದ ಜನರು ಮತ್ತು ದೇವವಿಶ್ವಾಸವಿಲ್ಲದವರು ಕೂಡ ಅನ್ಯ ಧರ್ಮದವರ ಭಾವನೆಗಳನ್ನು ಗೌರವಿಸಬೇಕೆಂದು ಸೂಚಿಸಬೇಕು. ಇಂದಿನ ಕಾಲದಲ್ಲಿ ಇಸ್ಲಾಮ್ ಧರ್ಮದ ಬಗ್ಗೆ ಜಗತ್ತಿನಾದ್ಯಂತ ತಪ್ಪು ಗ್ರಹಿಕೆಗಳು ಜಾರಿಯಲ್ಲಿವೆ. ಈ ಕಾರಣದಿಂದ ಒಂದು ಕಡೆ ಶಾಂತಿ ಪ್ರಿಯರಾದ ಮುಸ್ಲಿಮರ ಭಾವನೆಗಳು ನೋಯಿಸಲ್ಪಡುತ್ತವೆ. ಇನ್ನೊಂದು ಕಡೆ ಮುಸ್ಲಿಮೇತರರ ಹೃದಯಗಳಲ್ಲಿ ಇಸ್ಲಾಮಿನ ಬಗ್ಗೆ ದ್ವೇಷ ಮತ್ತು ಅವಿಶ್ವಾಸ ವರ್ಧಿಸುತ್ತಾ ಇರುತ್ತದೆ. ಆದುದರಿಂದ ಮಹಾರಾಣಿಯವರು ವಿಶ್ವದ ಎಲ್ಲ ಜನರೊಂದಿಗೆ, ಅನ್ಯ ಧರ್ಮಗಳನ್ನು ಮತ್ತು ಅವುಗಳ ಅನುಯಾಯಿಗಳನ್ನು ಗೌರವಿಸಲು ಸಲಹೆ ನೀಡುವುದಾದರೆ ಅದು ಘನವೆತ್ತ ಮಹಾರಾಣಿಯ ಔದಾರ್ಯಭರಿತ ವರ್ತನೆಯಾಗಿ ಅದು ಎಲ್ಲ ಧರ್ಮಗಳ ಜನರಿಗೆ ಹಿತಕರವಾಗುವುದು. ವೈಭವಶಾಲಿ ಒಡೆಯನಾದ ದೇವನು ಈ ಉದ್ದೇಶವನ್ನು ಈಡೇರಿಸಲು ನಮ್ಮ ಮಹಾರಾಣಿಗೆ ಸಹಾಯವನ್ನು ನೀಡಲಿ.

ಈ ಪತ್ರದ ಪ್ರಾರಂಭದಲ್ಲಿ ಸೂಚಿಸಿದ ಹಾಗೆ ನಾನು ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ನೇತಾರನಾಗಿದ್ದೇನೆ. ಆದುದರಿಂದ ನಾನು ನಮ್ಮ ಸಂಘಟನೆಯ ಬಗ್ಗೆ ಸಂಕ್ಷಿಪ್ತ ವಿವರಣೆ ನೀಡಲು ಬಯಸುತ್ತೇನೆ. ಪುಣ್ಯ ಪ್ರವಾದಿ ಮುಹಮ್ಮದ್[ಸ] ಮತ್ತು ಹಿಂದಿನ ಪ್ರವಾದಿಗಳು ಭವಿಷ್ಯ ನುಡಿದ ಪ್ರಕಾರ ಆಗಮಿಸಿದ ವಾಗ್ದತ್ತ ಮಸೀಹ ಮತ್ತು

ಸುಧಾರಕ ಖಾದಿಯಾನಿನ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಹೊರತು ಬೇರೆ ಯಾರೂ ಅಲ್ಲ ಎಂದು ಅಹ್ಮದಿಯಾ ಮುಸ್ಲಿಮ್ ಸಂಘಟನೆ ದೃಢವಾಗಿ ನಂಬುತ್ತದೆ. ಅವರು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಎಂಬ ಪರಿಶುದ್ಧ ಮತ್ತು ಸಾತ್ವಿಕ ಸಂಘಟನೆಯನ್ನು 1889ರಲ್ಲಿ ಸ್ಥಾಪಿಸಿದರು. ಈ ಸಂಘಟನೆಯನ್ನು ಸ್ಥಾಪಿಸಿದುದರ ಉದ್ದೇಶ ಲಕ್ಷ್ಯ, ಮನುಷ್ಯರ ಮತ್ತು ದೇವನ ಮಧ್ಯೆ ಸಂಬಂಧ ಸ್ಥಾಪಿಸಿ ಮನುಷ್ಯರು ಪರಸ್ಪರ ಹಕ್ಕುಗಳನ್ನು ಈಡೇರಿಸಿ ಕೊಡುವಂತೆ ಮಾಡಿ, ಪರಸ್ಪರ ಗೌರವಭಾವ ಹೊಂದಿ, ಪರಸ್ಪರ ಹಿತಕಾಂಕ್ಷಿಗಳಾಗಿ ಜೀವಿಸುವಂತೆ ಮಾಡುವುದಾಗಿದೆ. ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ 1908ರಲ್ಲಿ ನಿಧನ ಹೊಂದುವಾಗ ಅವರ ಅನುಯಾಯಿಗಳ ಸಂಖ್ಯೆ ಅಂದಾಜು ನಾಲ್ಕು ಲಕ್ಷಕ್ಕೆ ತಲಪಿತ್ತು. ಅವರು ನಿಧನ ಹೊಂದಿದ ನಂತರ ದೈವಿಕ ನಿರ್ಧಾರ ಪ್ರಕಾರ ಖಿಲಾಫತ್ ವ್ಯವಸ್ಥೆ ಸ್ಥಾಪಿತವಾಯಿತು. ದೇವನ ಈ ವಿನೀತ ದಾಸನು ವಾಗ್ದತ್ತ ಮಸೀಹರ ಪಂಚಮ ಖಲೀಫ ಆಗಿರುವನು. ಈ ವ್ಯವಸ್ಥೆ ಮೂಲಕ ಅಹ್ಮದಿಯಾ ಮುಸ್ಲಿಮ್ ಸಂಘಟನೆ ತನ್ನ ಸ್ಥಾಪಕರ ಆಗಮನೋದ್ದೇಶಗಳನ್ನು ಈಡೇರಿಸಲು ಲೋಕದಾದ್ಯಂತ ಪರಿಶ್ರಮಪಡುತ್ತಿದೆ. ನಮ್ಮ ಸಂದೇಶ ಪ್ರೀತಿ, ಸೌಹಾರ್ದ ಮತ್ತು ಭ್ರಾತೃತ್ವವಾಗಿದೆ. ನಮ್ಮ ಧ್ಯೇಯವಾಕ್ಯ "ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ" ಎಂದಾಗಿದೆ. ವಾಸ್ತವಿಕವಾಗಿ ಇದರಲ್ಲಿ ಇಸ್ಲಾಮಿನ ಸುಂದರ ಉಪದೇಶ ಸಂಕ್ಷಿಪ್ತವಾಗಿ ಅಡಕವಾಗಿದೆ.

ಸಂತೋಷಕರವಾದ ಒಂದು ಸಹಘಟನೆ ಬಗ್ಗೆ ಇಲ್ಲಿ ಪ್ರಸ್ತಾಪಿಸುವುದು ಸಮಂಜಸವಾಗಿದೆ ಎಂದು ನಾನು ಭಾವಿಸುತ್ತೇನೆ. ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರು ಜೀವಿಸಿದ್ದ ಕಾಲದಲ್ಲಿ ಘನವೆತ್ತ ವಿಕ್ಟೋರಿಯಾ ಮಹಾರಾಣಿಯ ವಜ್ರ ಜೂಬಿಲಿ ಸಮಾರಂಭ ಜರಗಿತು. ಆಗ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರು ತುಹ್‌ಫಯೆ ಖೈಸರಿಯ್ಯ (ಮಹಾರಾಣಿಗೊಂದು ಪಾರಿತೋಷಕ) ಎಂಬ ಪುಸ್ತಕ ಬರೆದು ಅದರಲ್ಲಿ ಸಂದೇಶ ನೀಡಿ ವಿಕ್ಟೋರಿಯಾ ಮಹಾರಾಣಿಯನ್ನು ಅಭಿನಂದಿಸಿದ್ದರು. ಹಝ್ರತ್ ಮಿರ್ಝಾ ಗುಲಾಮ್ ಅಹ್ಮದರು ತನ್ನ ಸಂದೇಶದಲ್ಲಿ ವಿಕ್ಟೋರಿಯಾ ಮಹಾರಾಣಿಯ ಆಡಳಿತೆಗೊಳಪಟ್ಟ ಭಾರತದ ಉಪ ಭೂಖಂಡ ಸಮೇತ ಎಲ್ಲ ದೇಶಗಳ ಪ್ರಜೆಗಳು ಅನುಭವಿಸುತ್ತಿರುವ ನ್ಯಾಯವ್ಯವಸ್ಥೆ ಮತ್ತು ಧಾರ್ಮಿಕ ಸ್ವಾತಂತ್ರ್ಯದಿಂದ ಶಾಂತಮಯ ಜೀವನವನ್ನು ನಡೆಸುವ ಬಗ್ಗೆ ಮಹಾರಾಣಿಯನ್ನು ಅಭಿನಂದಿಸಿದ್ದರು. ಅವರು ಇಸ್ಲಾಮಿನ ಸುಂದರ ಉಪದೇಶಗಳನ್ನು, ತನ್ನ ವಾದ ಮತ್ತು ಆಗಮನೋದ್ದೇಶವನ್ನು ವಿವರಿಸಿದ್ದರು. ಈಗ ಭಾರತದ ಉಪಭೂಖಂಡದ ಜನರಿಗೆ ಸ್ವಾತಂತ್ರ್ಯ ನೀಡಲಾಗಿದೆ. ವಿವಿಧ ಹಿನ್ನೆಲೆಯ ಮತ್ತು ವಿವಿಧ ಧರ್ಮಗಳಿಗೆ ಸೇರಿದ ಜನರಿಗೆ ಬ್ರಿಟಿಷ್ ಸರಕಾರ ಸಮಾನ ಹಕ್ಕುಗಳನ್ನು, ಧಾರ್ಮಿಕ ಸ್ವಾತಂತ್ರ್ಯವನ್ನು, ಧರ್ಮವನ್ನು ಅವಲಂಬಿಸುವ ಮತ್ತು ಪ್ರಚಾರ ಮಾಡುವ ಸ್ವಾತಂತ್ರ್ಯವನ್ನು ನೀಡಿದ್ದು ಬ್ರಿಟನಿನ ಸೌಹಾರ್ದ ಮನೋಭಾವದ ಉನ್ನತ ಮಟ್ಟವನ್ನು

ಚೆನ್ನಾಗಿ ಸಾಬೀತುಗೊಳಿಸುತ್ತದೆ.

ಈಗ ಸಾವಿರಗಳ ಸಂಖ್ಯೆಯಲ್ಲಿ ಅಹ್ಮದೀ ಮುಸ್ಲಿಮರು ಯುನೈಟೆಡ್ ಕಿಂಗ್‌ಡಮ್‌ನಲ್ಲಿ ವಾಸಿಸುತ್ತಿದ್ದಾರೆ. ಅವರಲ್ಲಿ ಅನೇಕರು ತಮ್ಮ ದೇಶಗಳಲ್ಲಿ ಅನುಭವಿಸುತ್ತಿದ್ದ ಹಿಂಸಾಚಾರಗಳಿಂದ ರಕ್ಷಣೆ ಪಡೆಯಲು ವಲಸೆ ಬಂದವರಾಗಿದ್ದಾರೆ. ಘನವೆತ್ತ ಮಹಾರಾಣಿಯರ ಔದಾರ್ಯಪೂರ್ಣವಾದ ಆಡಳಿತೆಯಲ್ಲಿ ನ್ಯಾಯ ಮತ್ತು ಧಾರ್ಮಿಕ ಸ್ವಾತಂತ್ರ್ಯ ಪಡೆದು ಅವರು ಶಾಂತಮಯ ಜೀವನ ಅನುಭವಿಸುತ್ತಿದ್ದಾರೆ. ಈ ಔದಾರ್ಯಕ್ಕೋಸ್ಕರ ನಾನು ನಮ್ಮ ವೈಭವಶಾಲಿ ಮಹಾರಾಣಿಗೆ ನನ್ನ ಕೃತಜ್ಞತೆಯನ್ನು ಇನ್ನೊಮ್ಮೆ ಅರ್ಪಿಸುತ್ತೇನೆ.

ನಾನು ಈ ಪತ್ರವನ್ನು ಈ ಕೆಳಗಿನ ಪ್ರಾರ್ಥನೆಯೊಂದಿಗೆ ಮುಕ್ತಾಯಗೊಳಿಸುತ್ತಿದ್ದೇನೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು ಘನವೆತ್ತ ವಿಕ್ಟೋರಿಯಾ ಮಹಾರಾಣಿಯ ಪರವಾಗಿ ಇವೇ ಶಬ್ದಗಳಲ್ಲಿ ಪ್ರಾರ್ಥಿಸಿದ್ದರು:

"ಶಕ್ತಿಶಾಲಿಯೂ ಪ್ರತಾಪಶಾಲಿಯೂ ಆಗಿರುವ ಪ್ರಭೂ, ನಿನ್ನ ದಯೆ ಮತ್ತು ಅನುಗ್ರಹದಿಂದ ನಮ್ಮ ಬಹುಮಾನ್ಯ ಮಹಾರಾಣಿಯನ್ನು, ನಾವೆಲ್ಲರೂ ಅವರ ಔದಾರ್ಯಭರಿತ ಆಡಳಿತೆಯಲ್ಲಿ ಸುಖವಾಗಿ ಜೀವಿಸುತ್ತಿರುವ ಹಾಗೆ, ಶಾಶ್ವತವಾಗಿ ಸುಖಮಯವಾಗಿ ಜೀವಿಸುವಂತೆ ಮಾಡು. ನಾವು ಮಹಾರಾಣಿಯ ಔದಾರ್ಯ ಮತ್ತು ದಯಾಭರಿತ ಆಡಳಿತೆಯಲ್ಲಿ ಶಾಂತಿ ಮತ್ತು ಸಮೃದ್ಧಿಯಿಂದ ಜೀವಿಸುವ ಹಾಗೆ, ಸರ್ವಶಕ್ತನಾದ ಪ್ರಭೂ, ನೀನು ಮಹಾರಾಣಿಗೆ ದಯೆ ಮತ್ತು ಪ್ರೀತಿಯನ್ನು ಅನುಗ್ರಹಿಸು."

ಸರ್ವೋನ್ನತನಾದ ದೇವನು ನಮ್ಮ ಗೌರವಾನ್ವಿತ ಮಹಾರಾಣಿಗೆ ತಾನಿಚ್ಛಿಸುವ ರೀತಿಯಲ್ಲಿ ಮಾರ್ಗದರ್ಶನ ನೀಡಲಿ ಎಂದೂ ನಾನು ಪ್ರಾರ್ಥಿಸುತ್ತೇನೆ. ಮಹಾರಾಣಿಯ ಸಂತಾನ ಪರಂಪರೆ ಸತ್ಯದ ಮೇಲೆ ನೆಲೆನಿಂತು ಅದರ ಕಡೆಗೆ ಮಾರ್ಗದರ್ಶನ ನೀಡುವಂತಾಗಲಿ. ನ್ಯಾಯಪಾಲನೆ ಮತ್ತು ಸ್ವಾತಂತ್ರ್ಯವು ಬ್ರಿಟಿಷ್ ರಾಜವಂಶದ ಮಾರ್ಗದರ್ಶಕ ಸೂತ್ರಗಳಾಗಿ ಸ್ಥಿರವಾಗಿ ಮುಂದುವರಿಯಲಿ. ಈ ಸಂತೋಷದ ಸಂದರ್ಭದಲ್ಲಿ ನಾನು ಘನವೆತ್ತ ಮಹಾರಾಣಿಯನ್ನು ಇನ್ನೊಮ್ಮೆ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಶುಭಾಶಯಗಳು ಮತ್ತು ಪ್ರಾರ್ಥನೆಗಳೊಂದಿಗೆ,



**ಮಿರ್ಝಾ ಮಸ್‌ರೂರ್ ಅಹ್ಮದ್**

ಪಂಚಮ ಖಲೀಫ

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ

ಸರ್ವೋಚ್ಚ ನಾಯಕ.

# ಇರಾನಿನ ಸರ್ವೋನ್ನತ ನಾಯಕ
# ಆಯತುಲ್ಲಾ ಸಯ್ಯಿದ್ ಅಲಿ
# ಹುಸೈನಿ ಖಾಮನೇಯಿರಿಗೆ ಪತ್ರ

MIRZA MASROOR AHMAD
HEAD OF THE AHMADIYYA COMMUNITY
IN ISLAM

بسم الله الرحمن الرحيم
نحمده و نصلي على رسوله الكريم
وعلى عبده المسيح الموعود
خدا کے فضل اور رحم کے ساتھ
هو الناصر

16 Gressenhall Road
Southfields, London
SW185QL, UK

14 ಮೇ 2012

ಬಹುಮಾನ್ಯರಾದ ಆಯತುಲ್ಲಾಹ್‌ರವರೇ,

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತು ಹೂ.

ಸರ್ವಶಕ್ತನಾದ ಅಲ್ಲಾಹನು ನೀವು ಇರಾನಿನಲ್ಲಿ ಇಸ್ಲಾಮಿನ ಸೇವೆ ಮಾಡುವ ಭಾಗ್ಯ ನೀಡಿರುವನು. ಈಗ ಇರಾನಿನ ಸರಕಾರ ನಿಮ್ಮ ಮೇಲ್ವಿಚಾರಣೆಗೊಳಪಟ್ಟು ಅಧಿಕಾರ ನಡೆಸುತ್ತಿದೆ. ಸರಿಯಾದ ಇಸ್ಲಾಮೀ ತತ್ವಗಳನ್ನು ಲೋಕದ ಮುಂದೆ ಇರಿಸುವುದಕ್ಕೆ ನಾವು ಕಠಿಣ ಪ್ರಯತ್ನ ನಡೆಸಬೇಕು. ಲೋಕದಲ್ಲಿ ಶಾಂತಿ, ಪ್ರೀತಿ ಮತ್ತು ಸೌಹಾರ್ದ ಭಾವನೆಯೊಂದಿಗೆ ಜೀವಿಸಬೇಕೆಂದು ಲೋಕದ ಜನರಿಗೆ ಮುಸ್ಲಿಮರಾದ ನಾವು ಕಲಿಸಬೇಕು. ವಿಶಿಷ್ಟವಾಗಿ ಮುಸ್ಲಿಮರ ನಾಯಕರು ತ್ವರಿತವಾಗಿ ಇದರ ಬಗ್ಗೆ ಗಮನ ನೀಡಬೇಕು. ಲೋಕದಲ್ಲಿ ಶಾಂತಿ ಸ್ಥಾಪಿಸುವ ಬಗ್ಗೆ ನಿಮ್ಮ ಸರಕಾರ ಹೊಂದಿರುವ ಜವಾಬ್ದಾರಿ ಕುರಿತು ನೀವು ನಿಮ್ಮ ಸರಕಾರದ ಗಮನಹರಿಸಬೇಕೆಂದು ನಾನು ನಿಮ್ಮನ್ನು ಅಪೇಕ್ಷಿಸುತ್ತೇನೆ. ಇರಾನ್ ದೇಶವು ಆಕ್ರಮಣಕ್ಕೆ ಗುರಿಯಾದರೆ ಪ್ರತಿರೋಧಾತ್ಮಕ ಪ್ರಕ್ರಿಯೆಗಳನ್ನು ಕೈಗೊಳ್ಳಲು ಮತ್ತು ದೇಶವನ್ನು ರಕ್ಷಿಸಲು ಸರಕಾರಕ್ಕೆ ಅಧಿಕಾರವಿದೆ. ಆದರೆ ಅದು ಆಕ್ರಮಣವನ್ನು ಉತ್ತೇಜಿಸಬಾರದು ಮತ್ತು ಸಂಘರ್ಷವನ್ನು ಪ್ರಾರಂಭಿಸಲು ಮುಂದಾಗಬಾರದು. ಧಾರ್ಮಿಕ ಅಭಿಪ್ರಾಯ ವ್ಯತ್ಯಾಸಗಳನ್ನು ಕಡೆಗಣಿಸಿ ಸಮಾನ ಹಿತಾಸಕ್ತಿಗೆ ಸಂಬಂಧಿಸಿ ಒಗ್ಗೂಡುವುದು ಆವಶ್ಯಕವಾಗಿದೆ. ಇಸ್ಲಾಮಿನ ಆದ್ಯ ಕಾಲದಲ್ಲಿ ಇಂತಹ ನಿಲುವನ್ನು ಕೈಗೊಂಡುದರ ಬಗ್ಗೆ ಚಾರಿತ್ರಿಕವಾಗಿ ತಿಳಿದು ಬಂದಿದೆ.

ನಾನು ಈ ಪತ್ರವನ್ನು ಬರೆಯುತ್ತಿರುವುದು ನಾನು ವಾಗ್ದತ್ತ ಮಸೀಹ್ ಮತ್ತು ಇಮಾಮ್ ಮಹ್‌ದಿಯ(ಅ) ಅನುಯಾಯಿಯೂ ಅವರ ಖಲೀಫ ಸಹ ಆಗಿರುವುದರಿಂದಾಗಿದೆ. ಅವರ ಆಗಮನದ ಬಗ್ಗೆ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಭವಿಷ್ಯ ನುಡಿದಿದ್ದರು. ಅವರು ಅಹ್ಮದಿಯಾ ಮುಸ್ಲಿಮ್ ಜಮಾಅತನ್ನು ಸ್ಥಾಪಿಸಿದರು. ಅಲ್ಲಾಹನ ಅನುಗ್ರಹದಿಂದ 200 ದೇಶಗಳಲ್ಲಿ ಈ ಜಮಾಅತ್ ಸ್ಥಾಪಿಸಲ್ಪಟ್ಟಿದೆ ಮತ್ತು ಮಿಲಿಯಗಟ್ಟಲೆ ಜನರು ನಿಷ್ಠಾವಂತ ಅನುಯಾಯಿಗಳಾಗಿ ಇದಕ್ಕೆ ಲೋಕದಾದ್ಯಂತ ಸೇರಿದ್ದಾರೆ. ಪರಸ್ಪರ ಪ್ರೀತಿ ಮತ್ತು ಶಾಂತಿಯಿಂದ ಜೀವಿಸಲು ಲೋಕಕ್ಕೆ ಮಾರ್ಗದರ್ಶನ ನೀಡಲು ನಾವು ಅತ್ಯಂತ ಹೆಚ್ಚು

ಆಶೆಯನ್ನು ಹೊಂದಿದ್ದೇವೆ. ಈ ಉದ್ದೇಶವನ್ನು ಸಾಧಿಸಲು ನಾನು ವಿವಿಧ ಶ್ರೇಣಿಗಳಲ್ಲಿರುವ ಜನರನ್ನು ಈ ವಿಷಯದ ಬಗ್ಗೆ ಗಮನಹರಿಸಲು ನಿರಂತರವಾಗಿ ಪ್ರಯತ್ನಿಸುತ್ತಾ ಇದ್ದೇನೆ. ನಾನು ಇತ್ತೀಚೆಗೆ ಇಸ್ರಾಯೇಲ್ ದೇಶದ ಪ್ರಧಾನ ಮಂತ್ರಿಯವರಿಗೂ ಅಮೇರಿಕದ ಅಧ್ಯಕ್ಷರಿಗೂ ಇತರ ದೇಶಗಳ ನಾಯಕರಿಗೂ ಪತ್ರಗಳನ್ನು ಬರೆದಿರುವೆನು. ನಾನು ಈ ಬಗ್ಗೆ ಪೋಪ್ ಬೆನೆಡಿಕ್ಟ್ XVIರಿಗೂ ಪತ್ರ ಬರೆದಿದ್ದೆನು.

ದೊಡ್ಡದಾದೊಂದು ಇಸ್ಲಾಮೀ ದೇಶದ ಆಧ್ಯಾತ್ಮಿಕ ನೇತಾರರಾದ ನೀವು ಒಂದು ವಿಷಯದ ಬಗ್ಗೆ ಒಮ್ಮತ ಹೊಂದುವಿರೆಂದು ನಾನು ಪ್ರತೀಕ್ಷಿಸುತ್ತೇನೆ: ಮುಸ್ಲಿಮ್ ಸಮುದಾಯದ ಎಲ್ಲರೂ ಒಗ್ಗೂಡಿ ಕಾರ್ಯನಿರತರಾದರೆ ಲೋಕದಲ್ಲಿ ಶಾಂತಿಯು ಸ್ಥಾಪಿಸಲ್ಪಡುವುದು. ದ್ವೇಷ ವರ್ಧನೆಗೆ ನಾವು ಇಂಧನ ಹಾಕಬಾರದು. ಶಾಂತಿ ಮತ್ತು ಸಮಾಧಾನ ಸ್ಥಾಪಿಸಲು ಸಂದರ್ಭಗಳಿಗೋಸ್ಕರ ಅನ್ವೇಷಿಸಬೇಕು. ಅನ್ಯರ ವಿರುದ್ಧ ಹಗೆತನ ಅಥವಾ ವಿರೋಧವು ನಮ್ಮನ್ನು ಅನ್ಯಾಯದಿಂದ ವರ್ತಿಸುವಂತೆ ಮಾಡಬಾರದು. ಪವಿತ್ರ ಖುರ್‌ಆನ್‌ನಲ್ಲಿ ನಮಗೆ ಹೀಗೆ ಉಪದೇಶಿಸಲಾಗಿದೆ:

**"ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ." (ಪವಿತ್ರ ಖುರ್‌ಆನ್ *5:9*)**

ಮುಸ್ಲಿಮ್ ಸಮುದಾಯದ ಎಲ್ಲರೂ ಮುಸ್ಲಿಮ್ ಸರಕಾರಗಳೂ ನನ್ನ ಸಂದೇಶವನ್ನು ಮನವರಿಕೆ ಮಾಡಿಕೊಳ್ಳಲು ಅಲ್ಲಾಹನು ಅನುಗ್ರಹಿಸಲಿ ಮತ್ತು ಅವರು ಲೋಕದಲ್ಲಿ ಶಾಂತಿ ಸ್ಥಾಪಿಸಲು ತಂತಮ್ಮ ಪಾತ್ರಗಳನ್ನು ವಹಿಸಲು ಸಿದ್ಧತೆಗಳನ್ನು ನಡೆಸುವವರಾಗಲಿ.

ಮುಸ್ಲಿಮ್ ಸಮುದಾಯದ ಎಲ್ಲರ ಬಗ್ಗೆ ಇರುವ ನನ್ನ ಪ್ರೀತಿಯು ಮಾನವರೆಲ್ಲರನ್ನು ಪ್ರೀತಿಸುವುದಕ್ಕೆ ನನ್ನನ್ನು ಬೆಳೆಸಿದುದರಿಂದಲೂ "ಮಾನವರೆಲ್ಲರಿಗೆ ಅನುಗ್ರಹದಾಯಕರಾದ" ಹಝ್ರತ್ ಪೈಗಂಬರರ(ಸ) ಅನುಯಾಯಿಯಾಗಿರುವುದರಿಂದಲೂ ನಾನು ಈ ಪತ್ರವನ್ನು ಬರೆಯುತ್ತಿದ್ದೇನೆ. ಲೋಕದ ರಾಷ್ಟ್ರ ನಾಯಕರು ನನ್ನ ಸಂದೇಶವನ್ನು ಅರ್ಥಮಾಡಿಕೊಂಡು ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ಕೃತಿಶೀಲರಾಗುವ ಭಾಗ್ಯವನ್ನು ಅಲ್ಲಾಹನು ನೀಡಲಿ. ಇಲ್ಲದಿದ್ದರೆ ಒಂದು ದೇಶವು ಆತುರದಿಂದಲೂ ನಿರ್ಲಕ್ಷ್ಯದಿಂದಲೂ ಇನ್ನೊಂದು ದೇಶದ ವಿರುದ್ಧ ಕೈಗೊಳ್ಳುವ ಕ್ರಮಗಳು ಎರಡು ದೇಶಗಳ ಮಧ್ಯೆ ಘೋರ ಹೋರಾಟಕ್ಕೆ ನಾಂದಿಯಾದರೆ ಅಂತಹ ಯುದ್ಧವು ಆ ಎರಡು ದೇಶಗಳಿಗೆ ಸೀಮಿತವಾಗದು. ಯುದ್ಧದ ಜ್ವಾಲೆಗಳು

ಲೋಕದಾದ್ಯಂತ ವ್ಯಾಪಿಸುವುವು. ಒಂದು ಮಹಾಯುದ್ಧವು ಪ್ರಾರಂಭವಾಗುವುದು ಸಂಭವನೀಯವಾಗಿದೆ. ಆದರೆ ಆ ಯುದ್ಧದಲ್ಲಿ ಸಾಂಪ್ರದಾಯಿಕ ಆಯುಧಗಳಿಗೆ ಬದಲಾಗಿ ಅಣ್ವಸ್ತ್ರಗಳು ಬಳಸಲ್ಪಡುವುವು. ಅಣ್ವಸ್ತ್ರ ಯುದ್ಧವು ಭಯಾನಕ ವಿನಾಶಕರವಾಗುವುದು. ಅದರ ಪರಿಣಾಮವು ಆಗ ಜೀವಿಸಿರುವ ಜನರನ್ನು ಮಾತ್ರವಲ್ಲ, ಆ ಯುದ್ಧವು ಭೀಕರ 'ಕೊಡುಗೆ'ಗಳನ್ನು ಮುಂದಿನ ಪೀಳಿಗೆಗಳಿಗೆ ನೀಡುವುದು. ಮಕ್ಕಳು ಅಂಗವಿಕಲರಾಗಿ ಜನಿಸುವರು. ಆದುದರಿಂದ ಯಾವುದೇ ದೇಶವು ತಲೆಯ ಮೇಲೆ ತೂಗುತ್ತಿರುವ ವಿನಾಶಗಳಿಂದ ಸುರಕ್ಷಿತವಾಗಿರುವುದೆಂದು ಯೋಚಿಸಬಾರದು.

ಆದುದರಿಂದ, ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಹೆಸರಿನಲ್ಲಿ ಮತ್ತು ಮಾನವರ ಬಗ್ಗೆ ಅನುಕಂಪವನ್ನು ಹೊಂದಿ ನಾನು ಇನ್ನೊಮ್ಮೆ ನಿಮ್ಮೊಂದಿಗೆ ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ನಿಮ್ಮ ಪಾತ್ರವನ್ನು ನಿರ್ವಹಿಸಬೇಕೆಂದು ಅಪೇಕ್ಷಿಸುತ್ತೇನೆ.

ಶುಭಾಶಯಗಳೊಂದಿಗೆ ಮತ್ತು ಪ್ರಾರ್ಥನೆಯೊಂದಿಗೆ,
ವಸ್ಸಲಾಮ್,



**ಮಿರ್ಝಾ ಮಸ್‌ರೂರ್ ಅಹ್ಮದ್**
ಪಂಚಮ ಖಲೀಫ
ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ
ಸರ್ವೋಚ್ಚ ನಾಯಕ

# ರಶ್ಯದ ಪ್ರೆಸಿಡೆಂಟ್
# ವ್ಲಾದಿಮಿರ್ ಪುಟಿನ್‌ರಿಗೆ ಪತ್ರ

MIRZA MASROOR AHMAD
HEAD OF THE AHMADIYYA COMMUNITY
IN ISLAM

بسم الله الرحمن الرحيم
نحمده و نصلي على رسوله الكريم
وعلى عبده المسيح الموعود
خدا کے فضل اور رحم کے ساتھ
هو الناصر

16 Gressenhall Road
Southfields, London
SW185QL, UK

18 ಸೆಪ್ಟಂಬರ್ 2013.

ಪ್ರಿಯ ಅಧ್ಯಕ್ಷರೇ,

ನಾನು ಈ ಪತ್ರವನ್ನು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ನಾಯಕನೆಂಬ ನೆಲೆಯಲ್ಲಿ ಬರೆಯುತ್ತಿದ್ದೇನೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಶಾಂತಿಯನ್ನು ಪ್ರೀತಿಸುವ ಮತ್ತು ಪ್ರೋತ್ಸಾಹಿಸುವ ಸಂಘಟನೆಯಾಗಿದ್ದು 204 ದೇಶಗಳಲ್ಲಿ ಅದು ಕಾರ್ಯನಿರತವಾಗಿದೆ.

ಇಂದಿನ ಜಾಗತಿಕ ಪ್ರಚಲಿತ ಪರಿಸ್ಥಿತಿಯಲ್ಲಿ ನಾನು ಲೋಕದ ಜನರಿಗೆ, ದೇವನಿಗೆ ಸಂಬಂಧಿಸಿದ ಅವರ ಹೊಣೆಗಾರಿಕೆಗಳ ಬಗ್ಗೆ ಮತ್ತು ಸಹಜೀವಿಗಳಿಗೆ ಸಂಬಂಧಿಸಿದ ಹೊಣೆಗಾರಿಕೆಗಳ ಬಗ್ಗೆ ನನ್ನ ಭಾಷಣಗಳಲ್ಲಿ ನೆನಪಿಸುತ್ತಾ ಇರುತ್ತೇನೆ. ನಿಮ್ಮೊಂದಿಗೆ ನೇರವಾಗಿ ಮಾತನಾಡಲು ಸಾಧ್ಯವಾಗದ ಬಗ್ಗೆ ನಾನು ವಿಷಾದಿಸುತ್ತೇನೆ. ಸಿರಿಯಾದಲ್ಲಿ ತಲೆದೋರಿರುವ ಗಂಭೀರ ಪರಿಸ್ಥಿತಿಯ ಕಾರಣ ಮತ್ತು ಜಾಗತಿಕ ನಾಯಕರನ್ನು ಯುದ್ಧ ಕ್ಷೇತ್ರಕ್ಕೆ ತೆರಳದೆ ಸಮಾಲೋಚನೆಗೆ ಕರೆಯುವ ನೀವು ಮಾಡಿದ ಪ್ರಯತ್ನಗಳನ್ನು ಪ್ರಶಂಸಿಸಲು ಈ ಪತ್ರ ಬರೆಯುತ್ತಿದ್ದೇನೆ. ಸಿರಿಯಾವನ್ನು ಆಕ್ರಮಿಸುತ್ತಿದ್ದರೆ. ಆ ಪ್ರದೇಶದಲ್ಲಿ ಮಾತ್ರವಲ್ಲ ಜಾಗತಿಕವಾಗಿ ಯುದ್ಧವು ಸ್ಫೋಟಿಸಬಹುದಾಗಿತ್ತು. ನೀವು ಇತ್ತೀಚೆಗೆ ಒಂದು ಹಿರಿಯ ಪಾಶ್ಚಿಮಾತ್ಯ ವೃತ್ತ ಪತ್ರಿಕೆಯಲ್ಲಿ ಬರೆದ ಲೇಖನವನ್ನು ಓದಿ ನನಗೆ ಸಂತೋಷವಾಯಿತು. ನೀವು ಲೇಖನದಲ್ಲಿ ಸಿರಿಯಾದ ಮೇಲೆ ಆಕ್ರಮಣ ಮಾಡುವುದು ಅಪಾಯಕರವೆಂದೂ ಅದರಿಂದ ಯುದ್ಧವು ವ್ಯಾಪಿಸುವುದೆಂದೂ ಬರೆದಿರುವಿರಿ. ನಿಮ್ಮ ದೃಢ ನಿಲುವಿನ ಕಾರಣದಿಂದ ಮಹಾಶಕ್ತಿ ರಾಷ್ಟ್ರಗಳು ಆಕ್ರಮಣ ಮನೋಭಾವವನ್ನು ತ್ಯಜಿಸಿ ರಾಜಿಸಂಧಾನಗಳಿಗೆ ಮುಂದಾಗಿವೆ ಮತ್ತು ರಾಜತಾಂತ್ರಿಕ ವಿಧಾನಗಳಿಂದ ಸಮಸ್ಯೆಗಳನ್ನು ಬಗೆಹರಿಸಲು ಸಮ್ಮತಿಸಿವೆ. ನಿಶ್ಚಯವಾಗಿಯೂ ಲೋಕವು ಬೃಹತ್ತಾದ ವಿನಾಶದಿಂದ ಈ ಮೂಲಕ ರಕ್ಷಿಸಲ್ಪಟ್ಟಿದೆ ಎಂದು ನಾನು ನಂಬುತ್ತೇನೆ. ದೇಶಗಳು ಸ್ವತಂತ್ರವಾಗಿ ಮತ್ತು ಏಕ ಪಕ್ಷೀಯವಾಗಿ ತೀರ್ಮಾನಗಳನ್ನು ಕೈಗೊಂಡು ಸ್ವಂತ ಇಷ್ಟ ಪ್ರಕಾರ ಕ್ರಮಗಳನ್ನು ಕೈಗೊಂಡರೆ ಸಂಯುಕ್ತ ರಾಷ್ಟ್ರ ಸಂಘವು ಲೀಗ್ ಆಫ್ ನೇಶನ್ಸ್ ಹಾಗೆಯೇ ನಿಷ್ಕ್ರಿಯವಾಗುವುದೆಂಬ ನಿಮ್ಮ ಅಭಿಪ್ರಾಯವನ್ನು ನಾನು ಅಂಗೀಕರಿಸುತ್ತೇನೆ. ಇತ್ತೀಚೆಗೆ ಜ್ವಲಿಸಲಾದ ಯುದ್ಧದ ಕಿಡಿಗಳು ತಕ್ಕ ಮಟ್ಟಿಗೆ ತಗ್ಗಿ ಹೋದುದರಿಂದ ನಾವು ಕೃತಜ್ಞರಾಗಿದ್ದೇವೆ. ಜಾಗತಿಕ ನಾಯಕರು ಕೈಗೊಂಡ ಗುಣಾತ್ಮಕ ಕ್ರಮಗಳ ಕಾರಣ ದೇವನು ಯುದ್ಧದ ಅಪಾಯವನ್ನು ಸಂಪೂರ್ಣವಾಗಿ ನಿವಾರಿಸಲಿ. ಮಹಾಶಕ್ತಿ ರಾಷ್ಟ್ರಗಳು ಚಿಕ್ಕ ದೇಶಗಳನ್ನು ಗೌರವಿಸಿ ಅವುಗಳಿಗೆ ಸಲ್ಲಬೇಕಾದ ಹಕ್ಕುಗಳನ್ನು

ನೀಡಲಿ. ಈ ಶಕ್ತಿ ರಾಷ್ಟ್ರಗಳು ಕೇವಲ ತಮ್ಮ ವೀಟೋ ಅಧಿಕಾರ ಬಳಸುವುದಕ್ಕೆ ಮಾತ್ರ ಗಮನ ಕೊಡುವವರಾಗದಿರಲಿ.

ನೀವು ಜಾಗತಿಕ ಶಾಂತಿ ಸ್ಥಾಪನೆಗೆ ಮಾಡಿದ ಪ್ರಯತ್ನಗಳ ಕಾರಣ ನಾನು ನಿಮಗೆ ಈ ಪತ್ರ ಬರೆಯಲು ಆಸಕ್ತನಾದೆನು. ನಿಮ್ಮ ಈ ಪ್ರಯತ್ನ ಕೇವಲ ತಾತ್ಕಾಲಿಕವಾಗದಿರಲಿ ಎಂದೂ ನೀವು ಶಾಂತಿ ಸ್ಥಾಪನೆಗೋಸ್ಕರ ಯಾವಾಗಲೂ ಪ್ರಯತ್ನಿಸುವವರಾಗಲಿ ಎಂದೂ ನಾನು ದೇವನನ್ನು ಬೇಡಿಕೊಳ್ಳುತ್ತೇನೆ. ನೀವು ಇದನ್ನು ಈಡೇರಿಸುವಂತೆ ಅಲ್ಲಾಹನು ಮಾಡಲಿ ಎಂದು ಪ್ರಾರ್ಥಿಸುತ್ತೇನೆ.

ಜಾಗತಿಕ ಶಾಂತಿ ಸ್ಥಾಪನೆಯ ಬಗ್ಗೆ ನನಗೆ ಸಂದರ್ಭ ದೊರೆತಾಗಲೆಲ್ಲ ನಾನು ಜನರ ಗಮನ ಸೆಳೆಯುತ್ತಾ ಇರುತ್ತೇನೆ. ನನ್ನ ಕೆಲವು ಭಾಷಣಗಳು ಮತ್ತು ಪತ್ರಗಳು ಪುಸ್ತಕ ರೂಪದಲ್ಲಿ "WORLD CRISIS AND PATHWAY TO PEACE" ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿದೆ. ಅದರ ಒಂದು ಪ್ರತಿಯನ್ನು ಪಾರಿತೋಷಿಕವಾಗಿ ನಿಮಗೆ ಕಳುಹಿಸುತ್ತಿದ್ದೇನೆ.

ಶುಭಾಶಯಗಳು ಮತ್ತು ಪ್ರಾರ್ಥನೆಗಳೊಂದಿಗೆ,



**ಮಿರ್ಝಾ಼ ಮಸ್‌ರೂರ್ ಅಹ್ಮದ್**
ಪಂಚಮ ಖಲೀಫ
ಜಾಗತಿಕ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ
ಸರ್ವೋಚ್ಚ ನಾಯಕ.